ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಈಗ ತಾವು ರೇಕಾರ್ಡ್ಸ್ ತೆಗೆಸಿ. ಮಾನ್ಯ ಸಿಂಧ್ಯಾರವರು ಹೋದ ಸದನದಲ್ಲಿ ಎಷ್ಟು ಗಂಟೆಗಳ ಕಾಲ ಮಾತನಾಡಿದ್ದಾರೆ ಆಮೇಲೆ ಚರ್ಚೆ ಮಾಡೋಣ.

ಅಧ್ಯಕ್ಷರು : ಆಯಿತು ಬಿಡಿ. ಅದರ ಬಗ್ಗೆ ಏಕೆ?

ಶ್ರೀ ಜೆ.ಸಿ. ಮಾಧುಸ್ವಾಮಿ : ಈ ತರಹದ ರಾಜಕಾರಣ ಬೇಡ. ದಾಖಲೆಗಳನ್ನು ತರಿಸಿ ಈ ಅಸೆಂಬ್ಲಿಯಲ್ಲಿ ಎಷ್ಟು ಮಾತನಾಡಿದ್ದಾರೆ ಗೊತ್ತಾಗುತ್ತದೆ.

ಅಧ್ಯಕ್ಷರು : ಅದರ ಬಗ್ಗೆ ಚರ್ಚೆ ಅನಗತ್ಯ,

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ಆಡಳಿತ ಪಕ್ಷದ ಸದಸ್ಯರು ಹೆಚ್ಚು ಹೊತ್ತು ಮಾತನಾಡುತ್ತಿರಲಿಲ್ಲ. ಇದು ಸಂಪ್ರದಾಯವಲ್ಲ, ನಿನ್ನೆ ದಿವಸ ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಹೇಳಿದರು. ಎಲ್ಲಾ ಒಟ್ಟು ಮಾಡಿ ಸಮಗ್ರವಾಗಿ ಸರ್ಕಾರ ಅವರ ಭಾವನೆಗಳನ್ನು ಇಲ್ಲಿ ವ್ಯಕ್ತ ಮಾಡುತ್ತಿದೆ. ಅದು ತಪ್ಪಿದೆಯೋ ಸರಿ ಇದೆಯೋ ಎಂಬ ಬಗ್ಗೆ ವಿಮರ್ಶೆ ಮಾಡುವಂತಹದ್ದು ವಿರೋಧಪಕ್ಷದಲ್ಲಿ ಕುಳಿತುಕೊಂಡು ಹೇಳುವುದು ನಮ್ಮ ಕರ್ತವ್ಯವಾಗಿದೆ. ನಾವು ಹೆಚ್ಚು ಮಾತನಾಡುವುದಕ್ಕೆ ತಾವು ಅವಕಾಶ ಕೊಡಬೇಕಾಗಿತ್ತು. ನಮ್ಮ ಹಣೆಬರಹಕ್ಕೆ 79 ಜನ ಶಾಸಕರುಗಳು ಕುಳಿತುಕೊಂಡರೂ ಕೂಡ..

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ..........

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಎಸ್.ಎಸ್. ಪಾಟೀಲರವರು ಇಲ್ಲಿ ಇದ್ದಾಗಲೂ ಅಷ್ಟೇ ಮಾತನಾಡುತ್ತಿದ್ದರು. ಅಲ್ಲಿ ಹೋದರೂ ಕೂಡ ಅವರು ಅಷ್ಟೇ ಮಾತನಾಡುತ್ತಿದ್ದಾರೆ. ಮಾನ್ಯ ಡಿ.ಆರ್. ಪಾಟೀಲ್‌ರವರದು ಹಾಗೆಯೇ. ನಮ್ಮ ಪರಿಸ್ಥಿತಿ ಹೇಗೇ ; ನಾವು 79 ಜನ ಶಾಸಕರನ್ನು ಇಟ್ಟುಕೊಂಡು ಕುಳಿತಿದ್ದೇವೆ. ಮಾನ್ಯ ಯಡಿಯೂರಪ್ಪನವರು ಒಬ್ಬರು ಮಾತನಾಡಿದ್ದು ಬಿಟ್ಟರೆ...

ಅಧ್ಯಕ್ಷರು : ನಿಮ್ಮವರು ಈಗಾಗಲೇ ಮೂರೂವರೆ ಗಂಟೆಗಳ ಕಾಲ ಮಾತನಾಡಿದ್ದಾರೆ.

ಗೊಂದಲ

ಅಧ್ಯಕ್ಷರು : ಈಗ ಅದರ ಬಗ್ಗೆ ವೃಥಾ ಚರ್ಚೆ ಏಕೇ? ಮಾನ್ಯ ಡಿ.ಆರ್. ಪಾಟೀಲ್‌ರವರೇ ತಾವು 5–10 ನಿಮಿಷದಲ್ಲಿ ತಾವು ಮುಗಿಸಬೇಕು. ಬಹಳ ಜನರು ಮಾತನಾಡಲು ತಾವು ಅವಕಾಶವನ್ನು ಮಾಡಿಕೊಡಬೇಕು.

ಶ್ರೀ ಡಿ.ಆರ್. ಪಾಟೀಲ್ : ಬೇಗನೆ ಮುಗಿಸುತ್ತೇನೆ ಸ್ವಾಮಿ.

10.40 ಎ.ಎಂ

4. ವಿತ್ತೀಯ ಕಾರ್ಯಕಲಾಪ

ಅ. 2004–05ನೇ ಸಾಲಿನ ಆಯವ್ಯಯದ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ

ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಅಧ್ಯಕ್ಷರೆ, ಎ.ಪಿ.ಎಂ.ಸಿ. ಯಲ್ಲಿ ಈ ಆಡಳಿತಾಧಿಕಾರಿಗಳು ಇದ್ದಾರೆ. ಆ ಶೋಷಣೆ ರಹಿತ ಮಾರುಕಟ್ಟೆ ಮಾಡಲಿಕ್ಕೆ ಕಾನೂನು ಏನ ಮಾಡಿದೆ ಈ ಸದನ. ಆ ಕಾನೂನು ಅನುಷ್ಠಾನಗೊಳಿಸುವಂಥ ಜವಾಬ್ದಾರಿ ಅವರದ್ದು. ದೊ ದೊಡ್ಡ ಮಾರುಕಟ್ಟೆಗಳಿಗಂತೂ ಡೆಪ್ಯೂಟಿ ಕಮೀಷನರುಗಳೇ ಚೇರ್ಮನ್. ದಯವಿಟ್ಟು ಅದ ಅನುಷ್ಠಾನಗೊಳಿಸುವುದಕ್ಕೆ ಕ್ರಮ ಕೈಗೊಳ್ಳಬೇಕು. ಹೋದಸಾರಿ ಹಿಂದಿನ ಜನತಾ ದಳ ಸರ್ಕಾ

ಇದ್ದಾಗ ಒಂದು ಕಾನೂನು ಮಾಡಿದೆ. ಆ ಕಾನೂನು ನೋಟಿಫೈ ಮಾಡಲಿಕ್ಕೆ ಕಳೆದ ಐದು ವರ್ಷಗಳಿಂದ ಆಗಿಲ್ಲ. 'The Act comes into effect from the date of notification.' ಎಂದು ನಾವು ಆ ಬಿಲ್ಲಿನೊಳಗೆ ಮಾಡಿದ್ದರಿಂದ, ಅದು ನೋಟಿಫೈ ಮಾಡದೇ ಇದ್ದುಬಿಟ್ಟರೆ ಈ ಸದನದ ಉದ್ದೇಶ ಹೇಗೆ ಈಡೇರಿತು? Should we move a privilege motion for that? The Cabinet sleeps over the matter like that for the last 5 years. ಅದಕ್ಕಾಗಿ ಇಮ್ಮೀಡಿಯಟ್ ಅದನ್ನು ನೋಟಿಫೈ ಮಾಡಲಿಕ್ಕೆ ಕ್ರಮ ಕೈಗೊಳ್ಳಬೇಕು. ಆ ಕಾನೂನನ್ನು ಅನುಷ್ಠಾನಗೊಳಿಸಬೇಕು. ನಮಗೆ ಆ ವೇಮೆಂಟ್‌ನೊಳಗೆ ಶೋಷಣೆ. ಆ ವೇಮೆಂಟಿನೊಳಗಿನ ಶೋಷಣೆಯನ್ನು ಬಗೆಹರಿಸಲಿಕ್ಕೆ ಆ ಕಾನೂನು ಮಾಡಿದ್ದು, ಅದನ್ನು ನೋಟಿಫೈ ಮಾಡಬೇಕು. ನಮಗೆ ವೇಮೆಂಟಿನೊಳಗೂ ಶೋಷಣೆಯಾಗುತ್ತೆ. ಈ ಮ್ಯಾನ್ಯುಯಲ್ ವೇಮೆಂಟ್ ಏನಿದೆ ಅದನ್ನು ಬಿಟ್ಟು, ಈಗೆಲ್ಲಾ ಎಲೆಕ್ಟ್ರಾನಿಕ್ ವೇಯಿಂಗ್ ಮಿಷನ್ಸ್ ಬಂದಿವೆ. ಎಲೆಕ್ಟ್ರಾನಿಕ್ ವೇಮೆಂಟ್ ಆದರೆ ಮೋಸ ಆಗುವುದಿಲ್ಲ. ಅದು ಒಂದು ಆಗಬೇಕು. ಆಮೇಲೆ ಟೆಂಡರ್ ಏನಿದೆ, ಈ ಟೆಂಡರ್ ಪ್ರೋಸೆಸ್‌ಗಳೂ ಸಹಿತ ಕಂಪ್ಯೂಟರೈಸೇಷನ್ ಮಾಡಿದರೆ, ಆಫೀಸಿನಲ್ಲಿದ್ದವರಿಗೆ ಮ್ಯಾನಿಪ್ಯುಲೇಷನ್ ಮಾಡಲಿಕ್ಕೆ ಅವಕಾಶ ಇರುವುದಿಲ್ಲ. ಇವು ಮೂರು ಅವರು ಎನ್‌ಷೂರ್ ಮಾಡಿದರೆ, ಸ್ವಲ್ಪ ಶೋಷಣೆ ರಹಿತ ಮಾರುಕಟ್ಟೆಯನ್ನು ನಾವು ರೈತರಿಗೆ ಕೊಟ್ಟಹಾಗೆ ಆಗುತ್ತೆ. ಆ ವ್ಯವಸ್ಥೆಯನ್ನು ಈ ಎಲ್ಲಾ ಆಡಳಿತಾಧಿಕಾರಿಗಳು ರಾಜ್ಯಾದ್ಯಂತ ತಮ್ಮ ಅಧಿಕಾರಾವಧಿಯಲ್ಲಿ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇವತ್ತು ರೈತರಿಗೆ ಸಾವಯವ ಕೃಷಿಯಿಂದ ಎಷ್ಟು ಲಾಭ ಇದೆ ಎಂಬುದನ್ನು ಬೆಂಗಳೂರು ಯೂನಿವರ್ಸಿಟಿಯೊಳಗೆ ಕಳೆದ ಮೂವತ್ತುವರ್ಷಗಳಿಂದ ಒಂದು ಪ್ರಯೋಗ ನಡೆಸಿದ್ದಾರೆ. ಆ ಪ್ರಯೋಗದ ಮುಖಾಂತರ ಅವರು ಒಂದು ಕನ್‌ಕ್ಲೂಷನ್‌ಗೆ ಬಂದಿದ್ದಾರೆ. ಸಾವಯವ ಕೃಷಿಯಿಂದ ಉತ್ಪಾದಕತೆ ಹೆಚ್ಚಾಗುತ್ತದೆ. ಮಣ್ಣಿನ ಫಲವತ್ತತೆ ಹೆಚ್ಚಾಗುತ್ತದೆ. ನಮ್ಮ ಇನ್‌ಪುಟ್ ಕಾಸ್ಟ್ ಕಡಿಮೆಯಾಗುತ್ತದೆ. ರೈತರಿಗೆ ಸರ್‌ಪ್ಲಸ್ ಹೆಚ್ಚು ಜನರೇಟ್ ಆಗುತ್ತದೆಂದು ಅವರೊಂದು ಕನ್‌ಕ್ಲೂಷನ್‌ಗೆ ಬಂದಿದ್ದಾರೆ. ಆದರೂ ಸಹಿತ ಪ್ಯಾಕೇಜ್ ಆಫ್ ಪ್ರಾಕ್ಟೀಸಸ್‌ನ ಹಳೆಯ ಪದ್ಧತಿಯನ್ನೇ ಇಟ್ಟಿದ್ದಾರೆ. ಕೆಮಿಕಲ್ ಫರ್ಟಿಲೈಸರೇ ಉಪಯೋಗ ಮಾಡುವುದು, ಪೆಸ್ಟಿಸೈಡ್ಸ್‌ನ್ನೇ ಉಪಯೋಗ ಮಾಡುವುದು, ಅವುಗಳನ್ನೇ ಪ್ರಾಪಗೇಟ್ ಮಾಡುವುದು, ಇದು ಏಕೆ? ರೈತರಿಗೆ ಏನು ತೊಂದರೆಯಾಗುತ್ತೆ ಎಂಬುದು ನಮಗೆ ಗೊತ್ತಿದ್ದೂ, ಅದನ್ನೇ ಪ್ರಾಪಗೇಟ್ ಮಾಡುವುದು ಏಕೆ? ಪೂರ್ತಿ ನಾವು ಈ ಸಾವಯವ ಕೃಷಿಗೆ, ಸಂಪೂರ್ಣ ಒತ್ತನ್ನು ಕೊಡಲಿಕ್ಕೆ ಏಕೆ ಆಗುವುದಿಲ್ಲ? ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನಿಂದಾಗಲೇ, ಸರ್ಕಾರದಿಂದಾಗಲೀ, ಯೂನಿವರ್ಸಿಟಿಯಿಂದಾಗಲೀ ಪ್ರಾಪಗೇಷನ್‌ನಲ್ಲಿ ಇನ್‌ವಾಲ್ವ್ ಆಗುವಂಥ ಯಾವುದೇ ಪ್ರೈವೇಟ್‌ನವರಾಗಲೀ, ಯಾರೇ ಆಗಲಿ ಏನು ತೊಂದರೆ; ಏಕೆ ರೈತರಿಗೆ ಹಾನಿಯಾಗುವಂಥ, ನಮ್ಮ ಮಣ್ಣಿಗೆ ಹಾನಿಯಾಗುವಂಥ ಒಂದು ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋಗುವಂಥ ಕೆಲಸ ನಡೆಯುತ್ತಾ ಇದೆ? ಇದಕ್ಕೆ ಸಂಬಂಧಿಸಿದವರೆಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಬೇಕು. ರೈತರನ್ನು ಹಿಡಿದುಕೊಂಡೇ ಆ ಬದಲಾವಣೆಯನ್ನು ತೀವ್ರ ತರುವುದಕ್ಕೆ ಪ್ರಯತ್ನ ಮಾಡಬೇಕು. ನಾವು ಆವರ್ತ ನಿಧಿಯನ್ನು ಮಾಡಿದ್ದೇವೆ. ಹೋದ ಸರ್ಕಾರ ಇದ್ದಾಗ ಸುಮಾರು 400 ಕೋಟಿ ರೂಪಾಯಿ ಆವರ್ತ ನಿಧಿ ಮಾಡಿದ್ದರು. ಈ ಸರ್ಕಾರದವರೂ ಅದಕ್ಕೆ ಮತ್ತೊಂದು ನೂರು ಕೋಟಿ ರೂಪಾಯಿ ಕೊಡುತ್ತೇವೆಂದು

ಹಣಕಾಸಿನ ಸಚಿವರು ಹೇಳಿದ್ದಾರೆ. ಇದು ಸುಮಾರು ಒಟ್ಟು ಐದುನೂರು ಕೋಟಿ ರೂಪಾಯಿ. ಇನ್ನು ಮಾರ್ಕೆಟ್ ಇಂಟರ್‌ವೆನ್‌ಷನ್ ಫಂಡ್ ಏನಿದೆ, ಇದು ರೈತ ತನ್ನ ಮಾಲನ್ನು ಮಾರುಕಟ್ಟೆಗೆ ತಂದಾಗ ಯೋಗ್ಯ ಬೆಲೆ ಸಿಗಲಿಲ್ಲ. ಮಿನಿಮಮ್ ಪ್ರೈಸ್ ಸಿಗಲಿಲ್ಲ. They must immediately intervene and ensure minimum price. ಎನ್ನುವುದು ಉದ್ದೇಶ. ದುರ್ದೈವ ಏನಾಗುತ್ತಿದೆಯೆಂದರೆ, They only have become a procurement agency. ಪ್ರೊಕ್ಯೂರ್‌ಮೆಂಟ್ ಏಜೆನ್ಸಿ ಅಷ್ಟೇ ಆಗಿಬಿಟ್ಟರೆ ಅದರಿಂದ ಸರ್ಕಾರಕ್ಕೆ ನುಕ್ಸಾನು ಆಗುವುದೇ. Instead of procurement agency, they must become marketing agency. ಪ್ರೊಕ್ಯೂರ್‌ಮೆಂಟೂ ಮಾಡಬೇಕು, ಅದನ್ನು ಅವರು ಮಾರಾಟವನ್ನೂ ಮಾಡಬೇಕು. ಅಂದರೆ, ಲಾಸ್ ಕಡಿಮೆಯಾಗುತ್ತದೆ. ಇವರು ಪ್ರೊಕ್ಯೂರ್‌ಮೆಂಟ್ ಮಾಡಿಕೊಂಡು ಇಟ್ಟುಕೊಂಡು ಬಿಡುತ್ತಾರೆ. ಇದನ್ನು ಮಾರಾಟ ಮಾಡಿ ಎಂದು ಮುಂದೆ ಸರ್ಕಾರ ಅವರಿಗೆ ಆಜ್ಞೆ ಮಾಡಬೇಕು. ಆಗ ಸಾಕಷ್ಟು ದಾಸ್ತಾನು ಹಾಳಾಗುತ್ತದೆ.

ಶ್ರೀ ಹಂಪನಗೌಡ ಬಾದರ್ಲಿ : ಪ್ರೊಕ್ಯೂರ್‌ಮೆಂಟ್ ಮಾಡುವ ಹೊತ್ತಿನಲ್ಲಿ ರೈತರು ಬೆಳೆದಂಥ ಬೆಳೆಗೆ ಬೆಲೆ ಕಟ್ಟುವಂಥ ಒಂದು ನೀತಿ ಕೂಡ ಅದರಲ್ಲಿ ಬರಬೇಕು. ಮೊನ್ನೆ ಬಳ್ಳಾರಿಯಲ್ಲಿ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಯಲ್ಲಿ ರೈತರು ಬೆಳೆದಂಥ ಮುಸುಕಿನ ಜೋಳಕ್ಕೆ ಹದಿನೇಳು ನೂರು ಕ್ವಿಂಟಾಲ್ ಕೊಟ್ಟಿದ್ದಕ್ಕೆ ಹನ್ನೊಂದುನೂರು ಕ್ವಿಂಟಾಲ್ ಪ್ರೊಕ್ಯೂರ್ ಮಾಡಿದ್ದಾರೆ. ಇದನ್ನು ಯಾವ ಆಧಾರದ ಮೇಲೆ ಮಾಡುತ್ತಾರೆ? ಇದರ ಬಗ್ಗೆ ಆ ನೀತಿಯನ್ನೂ ಕೂಡ ರೂಪಿಸಬೇಕು.

ಶ್ರೀ ಡಿ.ಆರ್. ಪಾಟೀಲ್ : ಸ್ಯಾರ್, fair average quality ಇದ್ದುದ್ದಕ್ಕೆ ಒಂದು ಮಿನಿಮಮ್ ಪ್ರೈಸ್ ಸರ್ಕಾರ ಫಿಕ್ಸ್ ಮಾಡುತ್ತದೆ. ಆ ಮಿನಿಮಮ್ ಪ್ರೈಸ್‌ನೊಳಗೆ ಅವರು ಪ್ರೊಕ್ಯೂರ್‌ಮೆಂಟ್ ಮಾಡಬೇಕೆನ್ನುವುದು ಆದೇಶ. ಪ್ರೊಕ್ಯೂರ್‌ಮೆಂಟ್ ಮಾಡುವುದರ ಜೊತೆಗೆ, ಅವರು ಅದನ್ನು ಡಿಸ್‌ಪೋಸ್ ಮಾಡುವುದನ್ನೂ ಮಾಡಬೇಕು; selling activity also. ಈಗ ರೇಟ್ ಗುಜರಾತ್‌ನೊಳಗೆ ಸರಿ ಬರುತ್ತೋ, ಉತ್ತರ ಪ್ರದೇಶದೊಳಗೆ ಸರಿ ಬರುತ್ತೋ ಪರದೇಶದೊಳಗೆ ಸರಿ ಇರುತ್ತೋ. ಅವರು ಅದನ್ನು ಮಾರ್ಕೆಟ್ಟೂ ಮಾಡಿಕೊಳ್ಳುತ್ತಾ ಇದ್ದರೆ ಪ್ರೊಕ್ಯೂರ್‌ಮೆಂಟ್ ಲೋಡ್ ಕಡಿಮೆಯಾಗುತ್ತೆ. ನಮಗೆ ನೆಟ್ ಲಾಸ್ ಆಗುವುದು ಕಡಿಮೆಯಾಗುತ್ತದೆ. ಈಗ ಆವರ್ತ ನಿಧಿ ಏನಿದೆ it goes on revolving. ಇಲ್ಲವೆಂದರೆ ಆವರ್ತ ನಿಧಿ ಕೊರತೆಯಾಗುತ್ತಾ ಹೋಗುತ್ತದೆ. ಪ್ರತಿ ವರ್ಷ ಒಂದು ನೂರು ಕೋಟಿ ರೂಪಾಯಿಗಳನ್ನು ಕೊಡುವುದೇ, ಈ ದಂದೆಯಾಗುತ್ತದೆ. ಆದ್ದರಿಂದ, ಇದು ಆಗಬಾರದು. ಅದಕ್ಕೆ ದಯವಿಟ್ಟು, They should not become only a procurement agency. They should become a marketing agency. They must procure and sell it. ಆ ಅಧಿಕಾರವನ್ನೂ ಅವರಿಗೆ ಕೊಡಿ. ಆ ಎಕ್ಸ್‌ಪರ್ಟೈಸೂ ಅವರಿಗೆ ಕೊಡಿ. ಮತ್ತೆ ಎಲ್ಲೆಲ್ಲಿ ಎಕ್ಸ್‌ಪರ್ಟೈಸ್ ಇರುತ್ತೆ, ಅದನ್ನು ಉಪಯೋಗ ಮಾಡಿಕೊಂಡು, ಮಾರ್ಕೆಟ್ ಇಂಟರ್‌ವೆನ್‌ಷನ್ ಬಹಳ ಎಫ್‌ಕ್ಟೀವ್ ಆಗುವ ಹಾಗೆ ಮತ್ತು ಕಡಿಮೆ ಲಾಸ್‌ನೊಳಗೆ ನಮಗೆ ಅನುಕೂಲವಾಗುವ ಹಾಗೆ, ತಾವು ಆ ವ್ಯವಸ್ಥೆಯನ್ನು ರೀ ಲುಕ್ ಮಾಡಬೇಕು. ಮತ್ತು ಅದನ್ನು ಹೊಂದಿಸಬೇಕೆಂಬ ಮಾತನ್ನು ತಮಗೆ ಹೇಳುತ್ತೇನೆ. ಇನ್ನು ಬೆಳೆ ವಿಮೆ ಬಗ್ಗೆ ಎಸ್.ಎಸ್. ಪಾಟೀಲರೂ ಮತ್ತು ಮಾನ್ಯ ಉದಾಸಿಯವರೂ ಸಾಕಷ್ಟು ಹೇಳಿದ್ದಾರೆ. ನಮಗೆ

ಉತ್ಪಾದನೆಯ ಮೇಲೆ ಬೆಳೆ ವಿಮೆ ಕೊಡುವ ಬದಲು, ನಮಗೆ ಇನ್‌ಕಮ್ ಮೇಲೆ Income must be ensured. Average ಒಂದು ಎಕರೆ ಹೊಲಕ್ಕೆ ಸರಾಸರಿ ಇಷ್ಟು ಜೋಳ ಬರಬೇಕು, ಇಷ್ಟು ರಾಗಿ ಬರಬೇಕೆಂದು ಇದೆ. ಅದರಿಂದ ಎಷ್ಟು ಇನ್‌ಕಮ್ ಬರುತ್ತೆ. You ensure our income, not our yield. ಅದಕ್ಕೆ ದಯವಿಟ್ಟು, ಇದನ್ನು ಎನ್‌ಷೂರ್ ಮಾಡಿದರೆ ಅನುಕೂಲವಾಗುತ್ತದೆ. ಕೇಂದ್ರ ಸರ್ಕಾರದವರ ಜೊತೆಗೆ ಮಾತನಾಡುವಂಥ ಅವಶ್ಯಕತೆ ಇದ್ದರೂ ಸಹಿತ ತಾವು ಮಾತನಾಡಿ ಇನ್‌ಕಮ್ ಎನ್‌ಷೂರ್ ಮಾಡುವಂಥ ಒಂದು ಬದಲಾವಣೆಯನ್ನು ತರಬೇಕು. ಈಗೇನು ಹೋಬಳಿ ಮಟ್ಟದೊಳಗೆ ನಿರ್ಣಯವಾಗುತ್ತಾ ಇದೆ, ಅದು ಗ್ರಾಮ ಮಟ್ಟಕ್ಕೆ ಬರಬೇಕು. ಕನಿಷ್ಟ ಗ್ರಾಮ ಪಂಚಾಯ್ತಿ ಮಟ್ಟಕ್ಕಾದರೂ ಅದು ಬರಬೇಕು. ಕ್ರಾಪ್ ಕಟಿಂಗ್ ಎಕ್ಸ್‌ಪೆರಿಮೆಂಟ್ ಇತ್ಯಾದಿ ಎಲ್ಲಾ ಗ್ರಾಮ ಪಂಚಾಯ್ತಿಮಟ್ಟಕ್ಕೆ ಬಂತೆಂದರೆ ಬಹಳಷ್ಟು ಅನುಕೂಲವಾಗುತ್ತೆ. ರೈತರಿಗೆ ಅನುಕೂಲವಾಗುತ್ತೆ, ದಯವಿಟ್ಟು ತಾವು ಇದನ್ನು ಮಾಡಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ : ಟೋಟಲ್ ಆ ಎಕ್ಸ್‌ಪೆರಿಮೆಂಟೇ ಕೈಬಿಡಬೇಕೆಂದು ಹೇಳಿ. ಯಾವನು ಸಾರ್ 60 ಪರ್ಸೆಂಟ್ ಕೇಳುವವನು? What is 100%? ಎಂದು ಗೊತ್ತಿಲ್ಲದೆ, ನೀವು ಎಂಟು ಆಣೆ, ಹನ್ನೆರಡಾಣೆ, ಹದಿನಾಲ್ಕಾಣೆ ಇಡುವುದಕ್ಕೆ, ಇವರ ಹತ್ತಿರ ಹದಿನಾರಾಣೆ ಬೆಳೆ ಎಂಬ ಸ್ಟಾಂಡರ್ಡ್ ಎಲ್ಲಿದೆ? ದಯವಿಟ್ಟು ಅದನ್ನು ಕೈಬಿಟ್ಟುಬಿಡಿ ಎಂದು ಹೇಳಿ.

ಶ್ರೀ ಎಸ್.ಎಸ್. ಪಾಟೀಲ್ : ಇಂಡಿವಿಜುಯಲ್ ರೈತರು ಮಾಡಲಿಕ್ಕೆ ಆಗುವುದೇ ಇಲ್ಲ, ಅದು ಪ್ರಾಕ್ಟಿಕಲಿ ಸಾಧ್ಯವಿಲ್ಲವೆಂಬ ಮಾತು ಹೇಳಿದ್ದಕ್ಕೆ, ಅವರು ಈಗ ಹೇಳುತ್ತಾ ಇರುವುದು. ಕಡೆಗೆ ಒಂದು ಗ್ರಾಮ ಮಟ್ಟ ಅಥವಾ ಪಂಚಾಯ್ತಿ ಮಟ್ಟವಾದರೂ ಇಡಿ ಎಂದು ಹೇಳುತ್ತಿದ್ದಾರೆ. ಮೊದಲು ಅಲ್ಲಿ ಪಂಚಾಯ್ತಿಗೆ ಬರಲಿ. ನಿಜ ಹೇಳಬೇಕೆಂದರೆ, ಅದನ್ನು ಇಂಡಿವಿಜುಯಲ್ ಆಗಿ ಮಾಡಬೇಕು. ಈ ಹೊಲ ಬೆಳೆದಿರುತ್ತದೆ, ಈ ಹೊಲ ಬೆಳೆದಿರುವುದಿಲ್ಲ. ಹಾಗೆ ನೋಡಿದರೆ ಇದು ನಮ್ಮ ರೈತರ ಪರಿಸ್ಥಿತಿ. ಮಳೆ ಒಂದು ಹೊಲದಲ್ಲಿ ಅರ್ಧ ಹೊಲಕ್ಕೆ ಆಗಿರುತ್ತದೆ. ಇನ್ನರ್ಧ ಹೊಲಕ್ಕೆ ಆಗಿರುವುದೇ ಇಲ್ಲ.

ಶ್ರೀ ಡಿ.ಆರ್. ಪಾಟೀಲ್ : ಒಂದು ರೋಡಿನ ಆಚೆಗೆ ಮಳೆ ಬಿದ್ದಿರುತ್ತದೆ, ಆ ರೋಡಿನ ಈಚೆಗೆ ಮಳೆಯೇ ಬಿದ್ದಿರುವುದಿಲ್ಲ. ನಮ್ಮ ಒಂದು ಹೊಲಕ್ಕೆ ಮಳೆಯಾಗಿರುತ್ತದೆ, ಇನ್ನೊಂದು ಹೊಲಕ್ಕೆ ಮಳೆಯೇ ಆಗಿರುವುದಿಲ್ಲ. ಇದು ಈಗಿರುವ ಪರಿಸ್ಥಿತಿ. ಅದು ಎಸ್.ಎಸ್. ಪಾಟೀಲರು ಹೇಳಿದಹಾಗೆ, ಅವುಗಳನ್ನೆಲ್ಲಾ ನೋಡಿಕೊಳ್ಳುತ್ತಾ ಹೋದರೆ ಬಹಳ ತಾಪತ್ರಯದಲ್ಲೇ ಇದೆ. ಆದರೂ ಗ್ರಾಮ ಪಂಚಾಯ್ತಿ ಮಟ್ಟಕ್ಕಾದರೂ ಬಂತೆಂದರೆ ಎಷ್ಟೋ ಸಮಾಧಾನ ನಮಗಾಗುತ್ತದೆ. ಹೋದಸರ್ಕಾರ ಪ್ರಾದೇಶಿಕ ಅಸಮಾನತೆ ಇದೆ, ಅದನ್ನು ನಾವು ಸರಿಪಡಿಸುತ್ತೇವೆಂಬ ಭರವಸೆಯಿಂದ ಅಧಿಕಾರಕ್ಕೆ ಬಂತು. ಅಧಿಕಾರಕ್ಕೆ ಬಂದ ಹಿನ್ನೆಲೆಯಲ್ಲಿ ಡಾ. ನಂಜುಂಡಪ್ಪನವರ ನೇತೃತ್ವದೊಳಗೆ ಒಂದು ಸಮಿತಿಯನ್ನು ನೇಮಿಸಿ ಅವರಿಗೆ ರಿಪೋರ್ಟ್ ಕೊಡಬೇಕೆಂದು ಹೇಳಿದರು. ಅವರು ರಿಪೋರ್ಟೂ ಕೊಟ್ಟಿದ್ದಾರೆ. ಆ ರಿಪೋರ್ಟ್ ಪ್ರಕಾರ ಅತಿ ಹಿಂದುಳಿದ ತಾಲ್ಲೂಕು, ಹಿಂದುಳಿದ ತಾಲ್ಲೂಕು ಮತ್ತು ಮುಂದುವರಿದ ತಾಲ್ಲೂಕು ಈ ರೀತಿ ಮೂರು ಭಾಗ ಮಾಡಿದ್ದಾರೆ. ಅತಿ ಹಿಂದುಳಿದ ತಾಲ್ಲೂಕುಗಳು ಒಟ್ಟು 39 ಇವೆ. ಅದರೊಳಗೆ ಉತ್ತರ ಕರ್ನಾಟಕದಲ್ಲಿ 26 ಇವೆ, ದಕ್ಷಿಣ ಕರ್ನಾಟಕದಲ್ಲಿ 13 ಇವೆ. ಮತ್ತೆ ಇವುಗಳನ್ನು ಏನೇನು ಮಾಡಬೇಕೆಂಬುದನ್ನೂ ಅವರು ತಿಳಿಸಿದ್ದಾರೆ.

ಸುಮಾರು 31 ಸಾವಿರ ಕೋಟಿ ರೂಪಾಯಿಗಳನ್ನು ಮುಂದಿನ ಎಂಟು ವರ್ಷದೊಳಗೆ ಇನ್‌ವೆಸ್ಟ್‌ಮೆಂಟ್ ಮಾಡಬೇಕು. ಅದರೊಳಗೆ ಹದಿನೈದು ಸಾವಿರ ಕೋಟಿ ನಿಮ್ಮ ಪ್ಲಾನ್ ಫಂಡಿನೊಳಗೆ ಬಂದಿರುತ್ತದೆ. ಹದಿನಾರು ಸಾವಿರ ಕೋಟಿ ರೂಪಾಯಿ ನಾವು ವ್ಯವಸ್ಥೆ ಮಾಡಬೇಕಾಗುತ್ತದೆ. ಅಂದರೆ ಪ್ರತಿ ವರ್ಷ 2 ಸಾವಿರ ಕೋಟಿ ಹೊಂದಿಸಿಕೊಳ್ಳಬೇಕಾಗಿದೆ. ನಾನು ಒಂದು ಮಾನ್ಯ ಸಿದ್ಧರಾಮಯ್ಯನವರ ಕಡೆಯಿಂದ ಅಪೇಕ್ಷೆಪಟ್ಟಿದ್ದೇನೆ. ಈಗಲಾದರೂ ಅವರು ಅದನ್ನು ವಿಚಾರ ಮಾಡಬೇಕು, ಮರುಪರಿಶೀಲನೆ ಮಾಡಬೇಕು. ಕೇಂದ್ರಸರ್ಕಾರದವರು ಎಜುಕೇಷನ್ ಸೆಸ್ ಎಂದು across the board 2% cess levy ಮಾಡಿದ್ದಾರೆ. ಹಾಗೆ ಬ್ಯಾಕ್‌ವರ್ಡ್ ಏರಿಯಾಸ್ ಡೆವಲಪ್‌ಮೆಂಟ್ ಸೆಸ್ ಎಂದು, ಒಂದು ಪರ್ಸೆಂಟ್ ಅಥವಾ ಎರಡು ಪರ್ಸೆಂಟ್, across the board on all commodities ಪ್ರತಿಯೊಬ್ಬರೂ ಕೊಡುವಹಾಗೆ ವ್ಯವಸ್ಥೆಯನ್ನು ಮಾಡಿ, ನೀವು ಆ ಫಂಡನ್ನು ಪ್ರಾಪರ್ ಯುಟಿಲೈಸೇಷನ್ ಮಾಡಲಿಕ್ಕೆ ಅವಕಾಶ ಕೊಟ್ಟರಿ ಎಂದರೆ ನಿಮ್ಮ ಅಧಿಕಾರಾವಧಿಯಲ್ಲೇ ಬಹಳಷ್ಟು ಬದಲಾವಣೆಯನ್ನು ಆ ಹಿಂದುಳಿದ ಪ್ರದೇಶಗಳಲ್ಲಿ ತರಲು ಸಾಧ್ಯವಾಗುತ್ತದೆ. ದಯವಿಟ್ಟು ಇದನ್ನು ನೋಡಿ. ಈ ಬಜೆಟ್‌ನಲ್ಲಿ ಮಾಡಲಿಕ್ಕಾಗಲಿಲ್ಲವೆಂದರೂ ಸಹಿತ ಮುಂದಿನ ಬಜೆಟ್‌ನಲ್ಲಿ ಈ ಬದಲಾವಣೆಯನ್ನು ತರಲೇಬೇಕು. ನಾಲ್ಕು ವರ್ಷದೊಳಗೆ ದೊಡ್ಡ ಸಾಧನೆಯಾಗುತ್ತದೆ. ನೀವು ಇತಿಹಾಸದ ಪುಟಗಳಲ್ಲಿ ಉಳಿಯುತ್ತೀರಿ, ಅಂತಹ ಕೆಲಸ ತಮ್ಮಿಂದಾಗಬೇಕು ಎಂದು ನಾನು ಅಪೇಕ್ಷೆಯಡುತ್ತೇನೆ. ಒಂದುಸಾರಿ ಪಂಚಾಯತ್‌ರಾಜ್ ವ್ಯವಸ್ಥೆಯೊಳಗೆ ನಾವು ಮೀಸಲಾತಿಯನ್ನು ತಂದೆವು. ಯಾರು ಯಾರು ಕನಸು ಮನಸ್ಸಿನೊಳಗೆ ಅಧಿಕಾರ ಅಪೇಕ್ಷೆಪಟ್ಟಿರಲಿಲ್ಲ, ಅವರಿಗೆಲ್ಲಾ ಅಧಿಕಾರ ಸ್ಥಾನಮಾನ ಸಿಕ್ಕಿತ್ತು. ಬರೀ ಅಧಿಕಾರ ಕೊಟ್ಟಿರಿ. ಅವರಿಗೆ. ಬರೀ ಸ್ಥಾನಮಾನ ಕೊಟ್ಟಿರಿ. ಅವರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವಂಥ ಫೈನಾನ್ಷಿಯಲ್ ಬ್ಯಾಕ್ ಅಪ್ ಇಲ್ಲ. ನಾವು, ನಮ್ಮ ಕಾನೂನಿನಲ್ಲಿ ಎಲ್ಲಾ 29 ವಿಷಯಗಳನ್ನೂ ನಾವು ಟ್ರಾನ್ಸ್‌ಫರ್ ಮಾಡಿದ್ದೇವೆ ಪಂಚಾಯತ್‌ರಾಜ್ ವ್ಯವಸ್ಥೆಗೆ ಎಂದು ಹೇಳುತ್ತೇವೆ. ಆದರೆ, ಇವತ್ತಿಗೂ ಬಹುತೇಕ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಯಾವೂ ಟ್ರಾನ್ಸ್‌ಫರ್ ಆಗಿಲ್ಲ. ಸೆಕ್ಷನ್ 184 ನ್ನು ಉಪಯೋಗ ಮಾಡಿಕೊಂಡು ಆ ಚುಂಗನ್ನು ಮತ್ತೆ ನಾವು ರಾಜ್ಯಸರ್ಕಾರದಲ್ಲೇ ಇಟ್ಟುಕೊಂಡಿರುತ್ತೇವೆ. ಈಗ ನೋಡಿ, ಗದಗ ತಾಲ್ಲೂಕಿನಲ್ಲಿ ಒಂದು ಹೈಸ್ಕೂಲ್ ಬೇಕು ಎಂದರೆ ನಾನು ಇಲ್ಲಿ ಶಿಕ್ಷಣ ಮಂತ್ರಿಗಳ ಹತ್ತಿರ ಬರುತ್ತೇನೆ. ನಾನು ಜಿಲ್ಲಾ ಪಂಚಾಯತಿಗೆ ಹೋಗುವುದಿಲ್ಲ. Establishment of schools and high schools is the responsibility of the Zilla Panchayat as per the Constitution and as per our own Act. But, we never go to Zilla Panchayat. We come and approach the Hon'ble Minister concerned. He sanctions. If the High School has to be given in Hulkoti or Gadag, he sanctions. It is not his prerogative. It is the prerogative of the Zilla Panchayat. ನೀವು ಪ್ರತಿ ಜಿಲ್ಲೆಗೆ ಎಷ್ಟು ಕೊಡಬೇಕು ನಿರ್ಣಯ ಮಾಡಿರಿ. ಜಿಲ್ಲೆಯೊಳಗೆ ಯಾರಿಗೆ ಕೊಡಬೇಕು ಎಂದು ಅವರು ನಿರ್ಣಯ ಮಾಡಲಿ. ತಾವು ದಯಮಾಡಿ ಆ ಅಧಿಕಾರ ವಿಕೇಂದ್ರೀಕರಣ ಮಾಡಿದರೆ ಆ ಅಧಿಕಾರ ನಮಗೆ ಕಡಿಮೆಯಾಗುತ್ತದೆ. ಅದೇ ಉದ್ದೇಶ. The essence of democracy is to see that there is people

participation in decision making. ನೀವು ತಮಗೆ ಇದ್ದಂಥ ಅಧಿಕಾರ ಕೊಡುತ್ತೇವೆ ಅಂತ ಹೇಳಿ ಏನು ಮಾಡಿದಿರಿ ಅದನ್ನು ಟ್ರಾನ್ಸ್‌ಫರ್ ಮಾಡಿರಿ. ಏನಾಗುತ್ತದೆ ಎಂದರೆ ನೀವು ಜಿಲ್ಲಾ ಮಟ್ಟಕ್ಕೆ ತಾಲ್ಲೂಕು ಮಟ್ಟಕ್ಕೆ, ಏನೇನು ಟ್ರಾನ್ಸ್‌ಫರ್ ಮಾಡುವುದಕ್ಕೆ ಆಗುತ್ತದೆಯೋ ಅದನ್ನು ಮಾಡಿ. ಗ್ರಾಮ ಪಂಚಾಯತಿಗೆ ನೀವು ಬಹಳಷ್ಟು ಟ್ರಾನ್ಸ್‌ಫರ್ ಮಾಡಬೇಕು. ಸುದೈವದಿಂದ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳು ಇಬ್ಬರೂ ಈ ವರ್ಗದಿಂದ ಬಂದವರು ಆಗಿದ್ದಾರೆ. ಈಗ ಅವರಿಗೆ ಬರೇ ಸ್ಥಾನಮಾನ ಕೊಟ್ಟು ಅವರಿಗೆ ಅಧಿಕಾರ ಇಲ್ಲ, ಜವಾಬ್ದಾರಿ ಇಲ್ಲ, ಅವರಿಗೆ ಹಣಕಾಸಿನ ಬ್ಯಾಕ್‌ಅಪ್ ಇಲ್ಲದೆ, ಅಧಿಕಾರಿಗಳು ಅವರ ಮಾತು ಕೇಳುವುದಿಲ್ಲ ಎನ್ನುವಂಥ ಒಂದು ವ್ಯವಸ್ಥೆಯನ್ನು ಇಟ್ಟರೆ ಅವರು ಬರೇ ಕುರ್ಚಿಯನ್ನು ತೆಗೆದುಕೊಂಡು ಏನು ಮಾಡಬೇಕು? ಅವನಿಗೂ ತನ್ನ ಅಧಿಕಾರದ ಅವಧಿಯೊಳಗೆ ಏನಾದರೂ ಮಾಡುವ ಹಾಗೆ ಇರಬೇಕು. ಹಿಂದೆ ಏನು ಗೌಡರು, ಶ್ಯಾನುಭೋಗರು 'ಹೇ ಈ ಶಾಲೆಯನ್ನು ನಾವು ಕಟ್ಟಿಸಿದ್ದು, ಈ ದವಾಖಾನೆಯನ್ನು ನಾವು ಕಟ್ಟಿಸಿದ್ದು, ಈ ಧರ್ಮಶಾಲೆಯನ್ನು ನಾವು ಕಟ್ಟಿಸಿದ್ದೇವೆ' ಎಂದು ಹೇಳಿಕೊಂಡು ಅಡ್ಡಾಡುತ್ತಿದ್ದರು ಮತ್ತು ಅವರ ಮಕ್ಕಳು, ಮೊಮ್ಮಕ್ಕಳೂ ಕೂಡ ಹಾಗೆ ಅಡ್ಡಾಡುತ್ತಾರೆ. ಹಾಗೆ ಈ ವರ್ಗದ ಜನರೂ ಕೂಡ ನಮ್ಮ ಅಪ್ಪ ಛೇರ್ಮನ್ ಇದ್ದಾಗ ಈ ಶಾಲೆಯನ್ನು ಕಟ್ಟಿಸಿದ್ದರು, ನಮ್ಮ ಅಪ್ಪ ಛೇರ್ಮನ್ ಇದ್ದಾಗ ಈ ಧರ್ಮಶಾಲೆಯನ್ನು ಕಟ್ಟಿಸಿದ್ದಾರೆ, ನಮ್ಮ ಅಪ್ಪ ಛೇರ್ಮನ್ ಇದ್ದಾಗ ಈ ಆಸ್ಪತ್ರೆಯನ್ನು ಕಟ್ಟಿಸಿದ್ದಾರೆ ಎಂದು ಹೇಳುವ ಅವಕಾಶ ಅವರಿಗೂ ಬೇಕಲ್ಲಾ ಅದನ್ನು ನೀವು ಕೊಟ್ರಲ್ಲ?

ಶ್ರೀ ಎಸ್.ಎಸ್. ಪಾಟೀಲ್ : ಹಿಂದೆ ಗೌಡರು, ಶಾನುಭೋಗರು ಏನು ಕಟ್ಟಿಸುತ್ತಿದ್ದರಲ್ಲಾ ಅವರು ತಮ್ಮ ರೊಕ್ಕ ಹಾಕಿ ಕಟ್ಟಿಸುತ್ತಿದ್ದರು. ಇವತ್ತು ಏನಾಗಿದೆ ಎಂದರೆ ಸರ್ಕಾರದ ರೊಕ್ಕ ಮೇಲೆ ಕಟ್ಟಿಸುವುದು ನಡೆದಿದೆ. ಹಿಂದೆ ಸ್ವತಃ ದೇಣಿಗೆ, ದಾನ ಕೊಟ್ಟು ಅವರ ಹೆಸರು ಹಾಕಿ ಕಟ್ಟಿಸಿಕೊಳ್ಳುತ್ತಿದ್ದರು. ಈಗ ಹಾಗೆ ಇಲ್ಲ.

ಶ್ರೀ ಡಿ.ಆರ್. ಪಾಟೀಲ್ : ಸಾಹೇಬರೇ, ಈ ದೇಶದೊಳಗೆ ಯಾರೂ ಬೆವರು ಸುರಿಸಿ ದುಡ್ಡನ್ನು ಕೊಡುವುದಿಲ್ಲ. ಒಂದು ವ್ಯವಸ್ಥೆಯೊಳಗೆ ಸಮಾಜವನ್ನು ಶೋಷಣೆ ಮಾಡಿ ಅದನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಶೋಷಣೆ ಮಾಡಿ ನಾವೇನು ಬಲಿಷ್ಟರಾಗಿರುತ್ತೇವಲ್ಲಾ, ಆ ಬಲಿಷ್ಟತನದಿಂದ ಅದನ್ನು ಟ್ರಾನ್ಸ್‌ಫರ್ ಮಾಡುತ್ತಾ ಇರುತ್ತೇವೆ. ನಾವೇನು ನಾವೇ ಹೊಲಕ್ಕೆ ಹೋಗಿ ದುಡಿದು ಕೊಟ್ಟಿದ್ದೇವೇನು? ಅವರಿಂದ ದುಡಿಸಿ ಅವರಿಗೆ ನಾವು ಕೊಡುತ್ತೇವೆ. ಅದರ ಮೇಲೆ ಬಹಳ ವಿಚಾರ ಮಾಡುವುದಕ್ಕೆ ಹೋದರೆ ಹೇಗೆ ಏನು ಎಂದೆಲ್ಲಾ ಗೊತ್ತಾಗುತ್ತದೆ. ಅದು ಹೋಗಲಿ, ಅವರಿಗೆ ಈ ರಿಸರ್ವೇಶನ್ ಮೇಲೆ ಎಲ್ಲಾ ಅಧಿಕಾರ ಕೊಡಬೇಕು ಅಂತ ಅನ್ನಿಸುತ್ತದೆಯೋ ಇಲ್ಲವೋ? ನಿಮಗೆ ಈಗ ಸಿದ್ಧರಾಮಯ್ಯನವರ ಕಾಲದಲ್ಲಿ ಇಂತಹ ಕೆಲಸ ಮಾಡಿದರ ಅಂತ ಹೇಳಿ ನಿಮಗೆ ನಿಮ್ಮ ಅಭಿಮಾನಿಗಳು ಹೆಮ್ಮೆಯಿಂದ ಹೇಗೆ ಅಡ್ಡಾಡುತ್ತಿದ್ದಾರೋ ಹಾಗೆ ಅವರ ಅಭಿಮಾನಿಗಳು ಹೇಳಿಕೊಂಡು ಅಡ್ಡಾಡಬೇಕಲ್ಲಾ? ಬೆಂಗಳೂರಿನೊಳಗೆ ಸಿದ್ಧರಾಮಯ್ಯ ಅವರಿಗೆ ಗೌರವ ಸಿಗುವುದು ಬೇರೆ, ಜಿಲ್ಲೆಯೊಳಗೆ ಮತ್ತು ತಾಲ್ಲೂಕಿನಲ್ಲಿ ಅವರಿಗೆ ಗೌರವ ಸಿಗುವುದು ಬೇರೆ. ಆದರೆ ಗ್ರಾಮ ಮಟ್ಟದಲ್ಲಿ ಅವರಿಗೆ ಸ್ಥಾನಮಾನ ಇದ್ದರೂ ಸಹಿತ ಆ ಗೌರವ ಇಲ್ಲ. ಇದನ್ನು ನಾವು ಒಪ್ಪಲೇಬೇಕಾಗುತ್ತದೆ. ಆ ತಾರತಮ್ಯ ಇನ್ನೂ ಸಮಾಜದೊಳಗೆ ಇದೆ. ಅದನ್ನು ಹೋಗಲಾಡಿಸಬೇಕಾದರೆ ಎಲ್ಲಾ ಅಧಿಕಾರವೂ

ಅವರಿಗೆ ಕೊಡಬೇಕು. ಅವರಿಗೆ ಫಂಡಿಂಗ್ ಕೊಡಬೇಕು. ಅಂದಾಗ ಅವರಿಗೆ 'ನಾವು ಯಾವರೀತಿಯಿಂದಲೂ ಅಸಮಾನರಲ್ಲ' ಎನ್ನುವ ಭಾವನೆ ಅವರಲ್ಲಿ ಬರುತ್ತದೆ. ಅವರಲ್ಲಿ ಇದರಿಂದ ಒಂದು ಆತ್ಮವಿಶ್ವಾಸ ಬೆಳೆಯುತ್ತದೆ. ಅವರೂ ಸರಿಸಮಾನರಾಗಿ ಆ ಗ್ರಾಮದ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಹಾಗೆ ಅವರು ಪಾಲ್ಗೊಳ್ಳುವ ವ್ಯವಸ್ಥೆಯನ್ನು ತಾವು ಸರ್ಕಾರ ಮಾಡಲೇಬೇಕು. ನಾವು ಕರ್ನಾಟಕ ಸರ್ಕಾರದವರು ಯಾವಾಗಲೂ ಮುಂಚೂಣಿಯಲ್ಲಿದ್ದವರು. ಈ ಅಧಿಕಾರ ವಿಕೇಂದ್ರೀಕರಣದೊಳಗೆ, ಪಂಚಾಯತ್‌ರಾಜ್ ವ್ಯವಸ್ಥೆಯೊಳಗೆ ಇಡೀ ದೇಶಕ್ಕೆ ಮುಂಚೂಣಿಯಲ್ಲಿದ್ದವರು ನಾವು. ಈಗ ಈ ಪವರ್ ಅನ್ನು ಪೂರ್ತಿಯಾಗಿ ಅವರಿಗೆ ಟ್ರಾನ್ಸಫರ್ ಮಾಡುವುದರೊಳಗೆ ನಾವು ಮುಂಚೂಣಿಯಲ್ಲಿರೋಣ. ಈಗ ಕೇರಳದವರು ನಮಗಿಂತ ಮುಂದಕ್ಕೆ ಹೋಗಿದ್ದಾರೆಂದು ಜನ ಮಾತನಾಡುತ್ತಿದ್ದಾರೆ. ಅದಕ್ಕೆ ಏಕೆ ಅವಕಾಶ ಕೊಡಬೇಕು ಸ್ವಾಮಿ? ದಯವಿಟ್ಟು ಈ ಕಡೆಗೆ ತಾವು ವಿಶೇಷ ಲಕ್ಷ್ಯವನ್ನು ವಹಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಬರೇ ನೀವು 32 ಸಾವಿರ ಕೋಟಿ ರೂಪಾಯಿ ಟ್ರಾನ್ಸ್‌ಫರ್ ಮಾಡಿದರೆ ಉಪಯೋಗ ಇಲ್ಲ. 32 ಸಾವಿರ ಕೋಟಿ ರೂ. ಯೊಳಗೆ ಒಂದರ್ಧ ಹಣವನ್ನಾದರೂ ಕಲ್ಲಪ್ಪ, ಮಲ್ಲಪ್ಪ, ದುರ್ಗಪ್ಪ, ಮಲ್ಲವ್ವ, ಅಂತ ಅವರೂ ಖರ್ಚು ಮಾಡುವಂಥ ವ್ಯವಸ್ಥೆಯನ್ನು ರೂಪಿಸಿದಾಗ ಮಾನ್ಯ ಸಿದ್ಧರಾಮಯ್ಯನವರು ಆರ್ಥಿಕ ಮಂತ್ರಿಗಳು ಆಗಿದ್ದಕ್ಕೆ ಅಡ್ಡಿ ಇಲ್ಲಪ್ಪ ಎನ್ನುವಂಥ ಸ್ವಾಭಿಮಾನ ಅವರಲ್ಲಿ ಬರುತ್ತದೆ. ದಯವಿಟ್ಟು ಈ ಬದಲಾವಣೆಯ ಬಗ್ಗೆ ತಾವು ವಿಶೇಷ ಲಕ್ಷ್ಯವನ್ನು ವಹಿಸಬೇಕು.

ಅಧ್ಯಕ್ಷರು : ಬಹಳ ಸಮಯವಾಯಿತು, ಬೇಗ ಮುಗಿಸಿ.

ಶ್ರೀ ಡಿ.ಆರ್. ಪಾಟೀಲ್ : ಮಾತನಾಡುವುದು ಬೇಡವೆಂದರೆ ನಾನು ಬಿಟ್ಟುಬಿಡುತ್ತೇನೆ.

ಅಧ್ಯಕ್ಷರು : ತಾವು ಆತರಹ ಹೇಳಿದರೆ ಹೇಗೆ? ತಾವು ಹಿರಿಯ ಸದಸ್ಯರು ಇದ್ದೀರಿ. ಎಲ್ಲರಿಗೂ ಅವಕಾಶ ಕೊಡಬೇಕಾಗುತ್ತದೆ.

ಶ್ರೀ ಡಿ.ಆರ್. ಪಾಟೀಲ್ : ನಾನು ಬೇರೆ ಏನಾದರೂ ಮಾತನಾಡಿದ್ದೇನಾ?

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಆಡಳಿತ ಪಕ್ಷದವರೇ ಈ ತರಹ ಮಾತನಾಡಿಕೊಂಡು ಕುಳಿತರೆ ಬೇರೆಯವರಿಗೆ ಅವಕಾಶ ಸಿಗುವುದು ಹೇಗೆ?

ಶ್ರೀ ಡಿ.ಆರ್. ಪಾಟೀಲ್ : ಇನ್ನು ಐದು ನಿಮಿಷದಲ್ಲಿ ಮುಗಿಸುತ್ತೇನೆ. ಈ ನೇಕಾರರ ಹಿತರಕ್ಷಣೆ ಬಗ್ಗೆ ಮತ್ತೊಂದು ಸಂದರ್ಭದಲ್ಲಿ ತಮಗೆ ನಾನು ಹೇಳಿದ್ದೇನೆ. ಕೆ.ಹೆಚ್.ಡಿ.ಸಿ.ಯನ್ನು ತಾವು ಹೆಚ್ಚು ಬಲಪಡಿಸಬೇಕು. ನಮ್ಮ ಸರ್ಕಾರಕ್ಕೆ ಬೇಕಾದಂಥ ಎಲ್ಲಾ ಬಟ್ಟೆಬರೆ, ಸರ್ಕಾರದ ಅಧೀನದಲ್ಲಿರುವಂತಹ ನಿಗಮಗಳಿಗೆ ಬೇಕಾಗಿರತಕ್ಕಂಥ ಎಲ್ಲಾ ಬಟ್ಟೆಬರೆಗಳನ್ನು ಖರೀದಿ ಮಾಡುವಾಗ ಕೆ.ಹೆಚ್.ಡಿ.ಸಿ.ಯಲ್ಲಿ ತಯಾರಾದ ಉತ್ಪನ್ನಗಳನ್ನೇ ಖರೀದಿ ಮಾಡುವಹಾಗೆ ಆಗಬೇಕು. ಅದು ಹಣಕಾಸು ದೃಷ್ಟಿಯಿಂದ ಬಹಳಷ್ಟು ದುರ್ಬಲವಾಗಿರುವುದರಿಂದ ಅವರಿಗೆ ಅಡ್ವಾನ್ಸ್ ಹಣ ಸಿಗುವಂಥ ವ್ಯವಸ್ಥೆಯನ್ನು ತಾವು ಮಾಡಬೇಕು. ಇದರ ಬಗ್ಗೆ ತಾವು ವೈಯಕ್ತಿಕವಾಗಿ ನಿಗಾವಹಿಸಬೇಕೆಂಬ ಮಾತನ್ನು ತಮಗೆ ಹೇಳುತ್ತೇನೆ. ನಾನು ಪಾಂಡೆಯವರಿಗೆ ಮತ್ತು ಗುರುಚರಣ್ ಅವರುಗಳಿಗೆ ರಿಕ್ವೆಸ್ಟ್ ಮಾಡಿಕೊಂಡಾಗ ಅವರು ಮೊದಲ ವಾರದಲ್ಲಿ ದುಡ್ಡು ರಿಲೀಸ್ ಮಾಡುತ್ತೇವೆ ಎಂದು ಹೇಳಿದ್ದಾರೆ. ಅವರು ಹಣ ರಿಲೀಸ್ ಮಾಡುವ ಹಾಗೆ ತಾವು ಕ್ರಮ ತೆಗೆದುಕೊಳ್ಳಬೇಕು. ಇದರ ಜತೆಗೆ ಪವರ್‌ಲೂಮ್ಸ್ ಸಲುವಾಗಿ ತಾವು ತಮ್ಮ ಬಜೆಟ್‌ನಲ್ಲಿ ಪ್ರಸ್ತಾಪಿಸಿದ್ದೀರಿ. ನಾಲ್ಕು ಲೂಮ್ಸ್‌ಗೆ

ನಾನು ಎನರ್ಜಿ ಕನ್ಸೆಶನ್ ಕೊಡುತ್ತೇನೆಂದು ಭರವಸೆಯನ್ನು ಕೊಟ್ಟಿದ್ದೀರಿ, ಅದನ್ನು ಲೂಮ್ಸ್‌ಗೆ ಬೇಸ್ ಮಾಡಬೇಡಿ. ಏಕೆಂದರೆ ಪವರ್ ಲೂಮ್ಸ್ ಏನಿದೆ ಅದನ್ನು ಬೇರೆ ಬೇರೆ ಕೆಪ್ಯಾಸಿಟಿಯವರು ಹಾಕಿಕೊಳ್ಳಬಹುದು. ದಯವಿಟ್ಟು ಅದನ್ನು ಪವರ್ ಕನ್‌ಸಮಶನ್ ಬೇಸ್ ಮಾಡಿ. ಈಗ ನಾನು ಒಂದು ಐದು ಹೆಚ್.ಪಿ. ಪವರ್‌ಲೂಮ್ಸ್‌ನ್ನು ಹಾಕಿಕೊಳ್ಳಬಹುದು. Don't base it on loom. You base it on HP. ಹತ್ತು ಹೆಚ್.ಪಿ. ವರೆಗೆ ವಿನಾಯ್ತಿಯನ್ನು ಕೊಡಿ. ಈಗ ನೆರೆ ರಾಜ್ಯಗಳಾದ ಆಂಧ್ರ, ಮಹಾರಾಷ್ಟ್ರ, ಗುಜರಾತ್, ತಮಿಳುನಾಡು ಇಲ್ಲೆಲ್ಲಾ ಪೂರ್ತಿಯಾಗಿ ಪವರ್‌ಲೂಮ್ ಸೆಕ್ಟರ್‌ನ್ನು ಎಕ್ಸಂಫ್ಟ್ ಮಾಡಿದ್ದಾರೆ. ನಮಗೆ ಹಾಗೆ ಬೇಕಾಗಿಲ್ಲ. ಹತ್ತು ಹೆಚ್.ಪಿ. ಒಳಗೆ ಇರುವಂತೆ ಅಂದರೆ ಒಂದು ಸಣ್ಣ ಪವರ್‌ಲೂಮ್ ಮಾಲೀಕನಿಗೆ ಅನುಕೂಲವಾಗುವ ದೃಷ್ಟಿಯಿಂದ, ಮ್ಯಾಕ್ಸಿಮಮ್ ಹತ್ತು ಹೆಚ್.ಪಿ.ವರೆಗೆ ತಾವು ಎನರ್ಜಿ ಕನ್ಸೆಶನ್‌ನ್ನು ಕೊಡಬೇಕು. ಈಗ ನಮ್ಮ ನೆರೆರಾಜ್ಯಗಳಲ್ಲಿ, ಗುಜರಾತ್‌ನಲ್ಲಿ ಒಂದು ರೂಪಾಯಿ ಮೂವತ್ತು ಪೈಸೆ ಇದೆ. ಆಂಧ್ರ ಹಾಗೂ ಮಹಾರಾಷ್ಟ್ರದಲ್ಲಿ ಅದಕ್ಕಿಂತ ಕಡಿಮೆ ಇದೆ. ಗುಜರಾತ್ ರೇಟ್‌ನಲ್ಲಿ ಕರ್ನಾಟಕದ ನೇಕಾರರಿಗೆ ಸಿಕ್ಕರೆ It is a competative market. They cannot compete with Maharastra producers, Andhra producers and Gujarat producers. The will be at a disadvantage. ದಯವಿಟ್ಟು ಇದು ಆಗದಹಾಗೆ ಅವರನ್ನೂ ಲೆವಲ್ ಪ್ಲೇಯಿಂಗ್ ಫೀಲ್ಡ್ ಒಳಗೆ ಆಟ ಆಡಲಿಕ್ಕೆ ಅವಕಾಶ ಕೊಡಬೇಕೆಂದು ನಾನು ಒತ್ತಾಯಿಸುತ್ತೇನೆ. ಈಗಾಗಲೇ ಆ ಪ್ರತಿನಿಧಿಗಳು ಬಂದು ತಮ್ಮನ್ನು ಭೇಟಿಯಾಗಿದ್ದಾರೆ. ತಾವು 'ನೋಡೋಣ' ಎಂದು ಭರವಸೆಯನ್ನು ಅವರಿಗೆ ಕೊಟ್ಟಿರುವುದರಿಂದ ಅದನ್ನು ದಯವಿಟ್ಟು ತಾವು ಮಾಡಬೇಕು. ಕಳಸ-ಬಂಡೂರು ಬಗ್ಗೆ ಬಹಳಷ್ಟು ನಮ್ಮ ಸ್ನೇಹಿತರು ರೆಫರ್ ಮಾಡುತ್ತಿದ್ದಾರೆ. ಹೋದ ಸರ್ಕಾರದಲ್ಲಿ ಕೇಂದ್ರಸರ್ಕಾರದವರು ಈ ಕಳಸ-ಬಂಡೂರು ಯೋಜನೆಯನ್ನು ಅನುಷ್ಠಾನ ಗೊಳಿಸುವುದಕ್ಕೆ ಅನುಮತಿಯನ್ನು ಕೊಟ್ಟರು. ಕಳಸ ಮತ್ತು ಬಂಡೂರಿ ನಾಲಾವನ್ನು ನಾವು ಹಾರ್ವೆಸ್ಟ್ ಮಾಡುವುದರಿಂದ ನಮಗೆ 7.5 ಟಿ.ಎಂ.ಸಿ.ಯಷ್ಟು ನೀರು ಸಿಗುತ್ತದೆ. ಇದರಿಂದ ಹುಬ್ಬಳ್ಳಿ-ಧಾರವಾಡದ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯುತ್ತದೆ ಮತ್ತು ರೋಣ-ಬದಾಮಿ ತಾಲ್ಲೂಕಿನ ನೀರಾವರಿ ಸಮಸ್ಯೆ ಬಗೆಹರಿಯುತ್ತದೆ. ಒಂದಕ್ಕೆ 45 ಕೋಟಿ ರೂ. ಮತ್ತು ಇನ್ನೊಂದಕ್ಕೆ 49 ಕೋಟಿ ರೂ. ಯೋಜನಾ ವೆಚ್ಚ ಇರುವಂಥಾದ್ದು. ಅದನ್ನು ಕೆ.ಎನ್.ಎನ್. ನವರು ಇಂಪ್ಲಿಮೆಂಟ್ ಮಾಡಬೇಕೆಂದು ಹಿಂದಿನ ಸರ್ಕಾರದವರು ಡೈರೆಕ್ಷನ್ ಕೊಟ್ಟಿದ್ದಾರೆ. K.N.N. has started implementing that. Meanwhile, ಕೇಂದ್ರ ಸರ್ಕಾರದವರು ಮೊದಲು ಏನು ಪರ್ಮಿಶನ್‌ನ್ನು ಕೊಟ್ಟಿದ್ದರು ಅದನ್ನು ಗೋವಾ ರಾಜ್ಯದ ಒತ್ತಾಯಕ್ಕೆ ಮಣಿದು ಸ್ಟೇಆರ್ಡರ್ ಕೊಟ್ಟಿದ್ದಾರೆ. ಗೋವಾದಲ್ಲಿ ಅವರ ಸರ್ಕಾರ ಇದ್ದು ಮೇಲೆ ಕೂಡ ಅವರೇ ಇದ್ದರು. ಅನಿವಾರ್ಯವಾಗಿ ರಾಜಕೀಯ ಕಂಪನ್‌ಷನ್ ಇತ್ತು ಎಂದು ಕಾಣುತ್ತದೆ. ಡೆಲ್ಲಿಯೊಳಗೆ ಕೂತವರಿಗೆ ಕರ್ನಾಟಕದ ಬಗ್ಗೆ ಅಷ್ಟು ಕಾಳಜಿ ಇರುವುದಿಲ್ಲ. ಗೋವಾ ರಾಜ್ಯದ ಬಗ್ಗೆ ಅವರಿಗೆ ಬಹಳ ಕಾಳಜಿ ಇರಬಹುದು...

ಶ್ರೀ ಆರಗ ಜ್ಞಾನೇಂದ್ರ : ಈಗ ಮಾಡಿ. ಎರಡೂ ಕಡೆ ನೀವೇ ಇದ್ದೀರಲ್ಲಾ?

ಶ್ರೀ ಡಿ.ಆರ್. ಪಾಟೀಲ್ : ನಾನು ಮಾತನಾಡಿದ ಮೇಲೆ ನೀವು ಮಾತನಾಡಿ. ಉತ್ತರ ಕೊಡುವಾಗ ತಮಗೆ ಅವಕಾಶ ಇದ್ದೇ ಇದೆ. It is a fact. It cannot be denied.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಇಷ್ಟು ದಿವಸ ನೀವೇ ಮಾತನಾಡಿದ ಮೇಲೆ ನಮಗೆ ಎಲ್ಲಿ ಅವಕಾಶ ಸಿಗುತ್ತದೆ?

ಶ್ರೀ ಡಿ.ಆರ್. ಪಾಟೀಲ್ : ಅದಕ್ಕೆ ಕಳಸಬಂಡೂರಿ ಯೋಜನೆಗೆ ಕೇಂದ್ರ ಸರ್ಕಾರವೇನು ಸ್ಟೇ ಆರ್ಡರ್ ಕೊಟ್ಟಿದೆ ಅದನ್ನು ವೆಕೇಟ್ ಮಾಡಿಸಲು ನಮ್ಮ ರಾಜ್ಯ ಸರ್ಕಾರದವರು ವಿಶೇಷ ಕ್ರಮ ವಹಿಸಬೇಕು. ಅಗತ್ಯ ಬಂದರೆ all party delegation ತೆಗೆದುಕೊಂಡು ಹೋದರೂ ಪರವಾಗಿಲ್ಲ, ಆದರೆ ಅದನ್ನು ವೆಕೇಟ್ ಮಾಡಿಸಬೇಕು. ನಮಗೆ water allocation ಆಯಿತು ಎಂದರೆ ಅದರಲ್ಲಿ ಸಾಕಷ್ಟು ನೀರು ನಮಗೆ ಬರುತ್ತದೆ. 7.5 ಟಿಎಂಸಿ ಗೆ ಆ ಗೋವಾದವರೂ ವಿರೋಧ ಮಾಡಬಾರದು. ಪ್ರತಿ ದಿವಸ ಬೆಳಿಗ್ಗೆ ಗೋವಾದವರು ಕಾಯಿಪಲ್ಯೆ ತಿನ್ನುವುದೇ ಕರ್ನಾಟಕದ್ದು. ನಾವು ಹೋಗಿ ಕಾಯಿ ಪಲ್ಯೆಯನ್ನು ಮಾರಿದರೆ ಅವರು ತಿನ್ನುತ್ತಾರೆ, ನಮ್ಮ ಜೊತೆ ಅವರು ಬಹಳ ಸೌಹಾರ್ದಯುತವಾದ ಸಂಬಂಧವನ್ನು ಇಟ್ಟುಕೊಂಡು ಹೋಗಬೇಕು. ಏಕೋ ಗೊತ್ತಾಗುತ್ತಿಲ್ಲ. ಅವರು ಕರ್ನಾಟಕದ ಬಗ್ಗೆ ವಿರೋಧ ಭಾವನೆಯನ್ನು ತಾಳಿದ್ದಾರೆ. ಆ ರೀತಿ ವಿರೋಧ ಭಾವನೆಯನ್ನು ತಾಳಲಾರದಂತೆ ಅವರಿಗೂ ಸ್ವಲ್ಪ ಬುದ್ಧಿ ಬರಲಿ, ನಮ್ಮ ಸರ್ಕಾರದವರು ಸಹ ವಿಶೇಷ ಪ್ರಯತ್ನವನ್ನು ವಹಿಸಿ ಆ ಸ್ಟೇ ಯನ್ನು ವೆಕೇಟ್ ಮಾಡಿಸಿ ಕಳಸಬಂಡೂರಿ ಯೋಜನೆಯನ್ನು implement ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕು. ಅದಕ್ಕೆ ಬಜೆಟ್‌ನಲ್ಲಿ ವಿಶೇಷವಾಗಿ ಹಣವನ್ನು ಇಡುವ ಅವಶ್ಯಕತೆ ಇಲ್ಲ. ನಮ್ಮ ಬಿಜೆಪಿ ಸ್ನೇಹಿತರೆಲ್ಲಾ ನೀವು ಇದಕ್ಕೆ ರೊಕ್ಕವನ್ನೇನೂ ಇಟ್ಟಿಲ್ಲ ಎಂದು ಹೇಳುತ್ತಾರೆ, ಇದಕ್ಕೆ ಹಣದ ಅವಶ್ಯಕತೆ ಏನೂ ಇಲ್ಲ. ಕೆ.ಎನ್.ಎನ್. ನಲ್ಲಿ ಫಂಡ್ಸ್ ಸಾಕಷ್ಟ ಇದೆ, ಅವರು ಮಾರುಕಟ್ಟೆಯಿಂದ ಫಂಡ್ಸ್‌ನ್ನು ಬಾರೋ ಮಾಡಿಕೊಳ್ಳಬಹುದು. ಅದಕ್ಕೆ ಬಜೆಟ್ ಪ್ರಾವಿಜನ್ ಬೇಕಾಗಿಲ್ಲ. ಆದ್ದರಿಂದ ಮಾನ್ಯ ಸಿದ್ಧರಾಮಯ್ಯನವರು ಅದಕ್ಕೆ ವಿಶೇಷ ಬಜೆಟ್ ಪ್ರಾವಿಜನ್ ಮಾಡಲು ಹೋಗಿಲ್ಲ. ಮಾಡುವ ಅವಶ್ಯಕತೆ ಇಲ್ಲ. ದುಡ್ಡಿನ ತೊಂದರೆ ಇಲ್ಲ. ನಿಮ್ಮ ಸರ್ಕಾರ ಸ್ಟೇ ಆರ್ಡರ್ ಏನು ಕೊಟ್ಟಿತ್ತು, ಅದು ವೆಕೇಟ್ ಆಗಿ ಬಿಟ್ಟರೆ ಸಾಕು, ಕಳಸಬಂಡೂರು ಯೋಜನೆ ಬರುತ್ತದೆ, ಅದನ್ನು ತಾವು ಮಾಡಿಸಬೇಕಾಗಿತ್ತು, ಆದರೆ ತಾವು ಅದನ್ನು ಮಾಡಿಸಲಿಲ್ಲ, ನೀವು ಬುದ್ಧಿವಂತರು, ಜನರು ಮರೆತಿರುತ್ತಾರೆ ಎಂದು ತಿಳಿದುಕೊಂಡು ಅದನ್ನೇ ಒಂದು ದೊಡ್ಡ ಇಶ್ಯೂ ಮಾಡಲು ನೀವು ಹೊರಟಿದ್ದೀರಿ. ಆದರೆ ಜನರಿಗೂ ಏನೇನು ನಾಟಕ ಆಡುತ್ತಾರೆ, ಏನೇನಾಗುತ್ತದೋ ಎಲ್ಲವೂ ಗೊತ್ತಿರುತ್ತದೆ.

ಬಿಜಾಪುರ-ಗದಗ್ ಬ್ರಾಡ್‌ಗೇಜ್ ಕನ್‌ವರ್ಷನ್ ಬಗ್ಗೆ ಹೇಳುವುದಾದರೆ ಇದಕ್ಕೆ ಕೇಂದ್ರ ಸರ್ಕಾರದವರು 20 ಕೋಟಿ ರೂ. ಇಟ್ಟಿದ್ದಾರೆ. ನಮ್ಮಲ್ಲಿ ಏನೂ ಪ್ರಾವಿಜನ್ ಆಗಲಿಲ್ಲ. ಅದಕ್ಕೆ ತಾವು ಬಜೆಟ್ ಪ್ರಾವಿಜನ್ ಮಾಡಬೇಕಾಗುತ್ತದೆ. ತಾವು ಅದಕ್ಕೆ ಪ್ರಾವಿಜನ್ ಮಾಡಿ ಆ ಕೆರಾಯ್ಡ್ ಮೂಲಕ ಅದು ಇಂಪ್ಲಿಮೆಂಟ್ ಆಗುತ್ತಿದೆ, ಅದು ಈ ವರ್ಷದಲ್ಲಿ ಪೂರ್ತಿಯಾಗಿ ಇಂಪ್ಲಿಮೆಂಟ್ ಆಗುವಂತೆ, ತಮ್ಮದು ಹೇಗೂ ಸರ್‌ಪ್ಲಸ್ ಬಜೆಟ್ ಇದೆ, ಆದ್ದರಿಂದ ಇದಕ್ಕೆ 20 ಕೋಟಿ ರೂಪಾಯನ್ನು ನೀವೂ ಪ್ರಾವಿಜನ್ ಮಾಡಿದಿರಿ ಎಂದರೆ ಈ ವರ್ಷದೊಳಗೆ ಈ ಕೆಲಸ ಮುಗಿಯಲು ಬಹಳಷ್ಟು ಅನುಕೂಲವಾಗುತ್ತದೆ. ಈ ಕೆಲಸ ಮುಗಿಯಿತು ಎಂದರೆ ಬಿಜಾಪುರ್ ಬಾಗಲ್‌ಕೋಟೆ ಮತ್ತು ಗದಗ್ ಮೂರೂ ಜಿಲ್ಲಾ ಕೇಂದ್ರಗಳ ಬೆಳವಣಿಗೆಗೆ ತಾವು ಬಹಳಷ್ಟು ಅನುಕೂಲ ಮಾಡಿದ ಹಾಗೆ

ಆಗುತ್ತದೆ. ಇದನ್ನು ಡಾ॥ ನಂಜುಂಡಪ್ಪನವರ ವರದಿಯಲ್ಲೂ ಹೇಳಿದ್ದಾರೆ. ಆ ಡಾ॥ ನಂಜುಂಡಪ್ಪನವರ ವರದಿಯನ್ನೂ ಇಂಪ್ಲಿಮೆಂಟ್ ಮಾಡಿದ ಹಾಗೆ ಆಗುತ್ತದೆ. ಇದನ್ನೂ ಇಂಪ್ಲಿಮೆಂಟ್ ಮಾಡದಂತಾಗುತ್ತದೆ, ಆದ್ದರಿಂದ ದಯವಿಟ್ಟು ತಾವು ಆ ಬ್ಲಾಕ್ ವರ್ಡ್ ಏರಿಯಾ ಡೆವಲಪ್‌ಮೆಂಟ್ ಸೆಸ್‌ನ್ನು ಲೆವಿ ಮಾಡಿಬಿಟ್ಟರೆ ಇಂಥ ಎಲ್ಲಾ ಅಲೋಕೇಷನ್‌ಗೆ ತಮಗೆ ಬಹಳಷ್ಟು ಸುಲಭವಾಗುತ್ತದೆ ಎಂಬ ಮಾತನ್ನು ಹೇಳುತ್ತೇನೆ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೆ, ಅವರಿಗೆ ಒಂದು ಸಹಾಯ ಮಾಡುವ ಸಲುವಾಗಿ, 7170 ಕೋಟಿ ರೂಪಾಯಿ ಉತ್ತರ ಕರ್ನಾಟಕಕ್ಕೆ ಇದೆಯೆಂದು ಹೇಳಿದರೆ, ಯೋಜನೆ ಗಾತ್ರದ ಶೇಕಡ 54 ರಷ್ಟು ಇಟ್ಟಿದ್ದೇವೆಂದು ಹೇಳಿದ್ದಾರೆ. ಶೇಕಡ 1 ಪರ್‌ಸೆಂಟ್ ಎಂದರೂ 133 ಕೋಟಿ ರೂಪಾಯಾಗುತ್ತದೆ. ನಮಗೆ 8 ಪರ್‌ಸೆಂಟ್ ಅಷ್ಟೇ ವ್ಯತ್ಯಾಸವೆಂದರೂ 1064 ಕೋಟಿ ರೂಪಾಯಿಯಾಗುತ್ತದೆ. 1064 ಕೋಟಿ ರೂಪಾಯಿಗಳನ್ನು ಪ್ರತಿ ವರ್ಷ ಕೊಡುವುದಾದರೆ ಎಷ್ಟು ವರ್ಷಕ್ಕೆ ಇದು 35 ಸಾವಿರ ಕೋಟಿ ರೂಪಾಯಿ ಮಾಡಲು ಆಗುತ್ತದೆ, ಮತ್ತು ಇನ್‌ಫ್ಲೇಷನ್ ರೇಟ್‌ನ ಪ್ರಕಾರ ಈಗ ಆಗಿರುವಂಥದ್ದರಲ್ಲಿ ನಮಗೇನು ಉಪಯೋಗ ಆಗುತ್ತದೆ ಎಂಬ ಬಗ್ಗೆ ತಾವು ದಯವಿಟ್ಟು ಅವರ ಗಮನಕ್ಕೆ ತನ್ನಿ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಯವರು) : ಈಗ ಮಾನ್ಯ ಡಿ.ಆರ್. ಪಾಟೀಲರು ಹೇಳಿದ್ದನ್ನು ಮಾಡೋಣ.

ಶ್ರೀ ಡಿ.ಆರ್. ಪಾಟೀಲ್ : ಡೆವಲಪ್‌ಮೆಂಟ್ ಸೆಸ್‌ನ್ನು ಮಾನ್ಯ ಉಪ ಮುಖ್ಯ-ಮಂತ್ರಿಯವರು ಸ್ವೀಕಾರ ಮಾಡುವುದಾಗಿ ಹೇಳಿದರು, ಬಹಳ ಸಂತೋಷ. ಹಿಂದಿನ ಸರ್ಕಾರವಿದ್ದಾಗ 21 ದೊಡ್ಡ ನಗರಗಳ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಸಲುವಾಗಿ ಏಶಿಯನ್ ಡೆವಲಪ್‌ಮೆಂಟ್ ಬ್ಯಾಂಕ್‌ಗೆ ಒಂದು ಪ್ರಾಜೆಕ್ಟ್‌ನ್ನು ಪ್ರಪೋಸ್ ಮಾಡಿದ್ದಾರೆ. ಆ ಬ್ಯಾಂಕಿನವರು ಪ್ರಿನ್ಸಿಪಲಿ ಅಗ್ರಿಯಾಗಿದ್ದಾರೆ. ಗೌರ್ನ್‌ಮೆಂಟ್ ಆಫ್ ಇಂಡಿಯಾದವರೂ ಪ್ರಿನ್ಸಿಪಲಿ ಅಗ್ರಿಯಾಗಿದ್ದಾರೆ ನಮ್ಮ ರಾಜ್ಯ ಸರ್ಕಾರದವರೂ ಅಗ್ರಿಯಾಗಿದ್ದಾರೆ, ಆದರೆ ಇಂಪ್ಲಿಮೆಂಟೇಷನ್ ಸ್ವಲ್ಪ quick ಆಗುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಾವು ಆದೇಶ ನೀಡಬೇಕು ಮತ್ತು ಇದರ ಮಾನಿಟರ್ ಕೂಡ ಮಾಡಬೇಕು. 21 ನಗರ ಪ್ರದೇಶದ ಬೆಳವಣಿಗೆಗೆ ಇದರಿಂದ ಸಾಕಷ್ಟು ಅನುಕೂಲವಾಗುತ್ತದೆ. ಮೊನ್ನೆ ನನ್ನ ಪ್ರಶ್ನೆಗೆ ಉತ್ತರವನ್ನು ಕೊಡುವಾಗ ತಾವು ಕೊಳಚೆ ಪ್ರದೇಶದ ಬೆಳವಣಿಗೆಯ ಸಲುವಾಗಿ ನಿರ್ಮಲ ಜ್ಯೋತಿ ಕಾರ್ಯಕ್ರಮವೇನಿದೆ ಅದನ್ನು ಅನುಷ್ಠಾನ ಮಾಡುತ್ತೇವೆ ಎಂಬ ಭರವಸೆಯನ್ನು ಸರ್ಕಾರ ಕೊಟ್ಟಿರುವುದರಿಂದ ಅದರ ಬಗ್ಗೆ ಹೇಳುವ ಅವಶ್ಯಕತೆ ಇಲ್ಲ. ತಾವು ಅದನ್ನು ಮಾಡಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಮ್ಯಾಂಗನೀಸ್ ಮೈನ್ಸ್ ಮತ್ತು ಐರನ್ ಓರ್ ಮೈನ್ಸ್ ರೇಟು ಬಹಳಷ್ಟು ಏರಿ ಆ ಓರ್‌ನ ಓನರ್ಸ್‌ಗೆಲ್ಲಾ ಸಾಕಷ್ಟು ಲಾಭವಾಗುತ್ತದೆ ಎನ್ನುವುದು ತಮ್ಮ ಗಮನಕ್ಕೆ ಬಂದಿರಬೇಕು. ಆ ಲಾಭದಲ್ಲಿ ನೀವೂ ಸ್ವಲ್ಪ ಪಾಲನ್ನು ಕೇಳಿ. ಪೂರ್ತಿ ಅವರಿಗೇ ಏಕೆ ಬಿಡುತ್ತೀರಿ? ಆ ಪಾಲನ್ನು ತೆಗೆದುಕೊಂಡು ತಾವು ನಮ್ಮ ಪ್ರದೇಶದ ಬೆಳವಣಿಗೆಗೆ ಉಪಯೋಗ ಮಾಡಿಕೊಳ್ಳಬೇಕು ಎಂಬುದು ಒಂದು, ಇದರ ಜೊತೆಗೆ ಎಲ್ಲೆಲ್ಲಿ ಇಂಡಸ್ಟ್ರೀಸ್ ಬರುತ್ತದೊ ಅಲ್ಲಿ, ನೀವು ಸೇಲ್ಸ್ ಟ್ಯಾಕ್ಸ್‌ನ್ನು ಹಾಕಬಹುದು.

ಶ್ರೀ ಬಸವರಾಜ್ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಡಿ.ಆರ್. ಪಾಟೀಲರು ಹೇಳಿದ್ದಕ್ಕೆ ನನ್ನದೊಂದು ಸಲಹೆ, ನಮ್ಮದು ಅವರದ್ದು ಪಕ್ಕಪಕ್ಕದ ಕ್ಷೇತ್ರವಾಗಿದ್ದರಿಂದ ನಮ್ಮಲ್ಲಿ ಪ್ರತಿ

ದಿವಸ ಸುಮಾರು 40 ರಿಂದ 50 ಟನ್ ಮ್ಯಾಂಗನೀಸ್ ಐರನ್ ಓರ್, ಅಂದರೆ ಸುಮಾರು ಮೂರು ಸಾವಿರ ಲಾರಿಗಳು ಹೊಸಪೇಟೆಯಿಂದ ಕೊಪ್ಪಳ ಗದಗ್‌ನ ಮೂಲಕ ಕಾರವಾರಕ್ಕೆ ಹೋಗುತ್ತಿವೆ. ಅವರು ಹೇಳಿದಂತೆ ಮ್ಯಾಂಗನೀಸ್‌ಗೆ ಸೇಲ್ಸ್ ಟ್ಯಾಕ್ಸ್ ಬರುವುದಿಲ್ಲ. ಅದು ಕೇಂದ್ರಕ್ಕೆ ಹೋಗುತ್ತದೆ. ಆದ್ದರಿಂದ ರೋಡ್ ಟ್ಯಾಕ್ಸ್‌ನ್ನು ಆ ಲಾರಿಗಳಿಗೆ ಹಾಕಲು ಸಾಧ್ಯತೆಗಳು ಇದೆ. ದಯಮಾಡಿ ಮಾನ್ಯ ಉಪಮುಖ್ಯಮಂತ್ರಿಯವರು ಇದರ ಬಗ್ಗೆ ಸ್ವಲ್ಪ ಟ್ಯಾಕ್ಸ್ ಹಾಕಿ ರೆವಿನ್ಯೂ ಕಲೆಕ್ಟ್ ಮಾಡಿದರೆ ರಾಜ್ಯ ಸರ್ಕಾರಕ್ಕೆ ಹಣಕಾಸಿನ ಅನುಕೂಲವಾಗುತ್ತದೆ. ದಯಮಾಡಿ ತಾವು ಇದರ ಬಗ್ಗೆ ಕ್ರಮ ಕೈಗೊಳ್ಳಬೇಕು. ಅದರಲ್ಲಿ ರಸ್ತೆಯ ನಿಧಿಯನ್ನಾದರೂ ಮಾಡಿ ಇಲ್ಲದಿದ್ದರೆ ಬೇರೆಯದಕ್ಕಾದರೂ ಬಳಸಿ. ರಸ್ತೆಯ ನಿಧಿಗೆ ಬಳಸಿದರಂತೂ ಬಹಳ ಉತ್ತಮ.

ಶ್ರೀ ಜಗದೀಶ್ ಶೆಟ್ಟರ್ : ಸರ್ಕಾರದವರು ಟ್ಯಾಕ್ಸ್ ಹಾಕದಿದ್ದರೆ ಅಲ್ಲಿ ಅನ್‌ಅಫೀಶಿಯಲಿ ಬೇರೆಯವರು ಟ್ಯಾಕ್ಸ್ ವಸೂಲಿ ಮಾಡಲು ಪ್ರಾರಂಭ ಮಾಡಿದ್ದಾರೆ. ಅದೂ ಇದೆ. ಅದೂ ಆಗುತ್ತಿದೆ. ಆದ್ದರಿಂದ ಸರ್ಕಾರದವರಾದರೂ ವಸೂಲಿ ಮಾಡಲು ಕ್ರಮ ತೆಗೆದುಕೊಳ್ಳಿ.

ಶ್ರೀ ಬಸವರಾಜ್ ರಾಯರೆಡ್ಡಿ : ಅವರು ಕೊಟ್ಟಿದ್ದು ಉತ್ತಮ ಸಲಹೆ. ಏಕೆಂದರೆ, ಪ್ರತಿ ದಿವಸ ಸುಮಾರು ಮೂರು ಸಾವಿರ ಲಾರಿ ಆ ರಸ್ತೆಯಲ್ಲಿ ಹೋಗುತ್ತದೆ. ಒಳ್ಳೆಯ ತೆರಿಗೆ ಬರುತ್ತದೆ.

ಶ್ರೀ ಪಿ.ಟಿ. ಪರಮೇಶ್ವರನಾಯಕ್ : ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟಂತೆ ನನ್ನ ಹರಪ್ಪನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲೂ ಮಾನ್ಯ ಡಿ.ಆರ್. ಪಾಟೀಲರು ಮತ್ತು ರಾಯರೆಡ್ಡಿಯವರೇನು ಪ್ರಸ್ತಾಪ ಮಾಡಿದರು.

ಶ್ರೀ ಬಸವರಾಜ ರಾಯರೆಡ್ಡಿ : ಪ್ರತಿ ದಿವಸ ಪೋಲೀಸಿನವರು ಎಷ್ಟು ಹಣವನ್ನು ವಸೂಲಿ ಮಾಡುತ್ತಿದ್ದಾರೆಂದರೆ ಹೊಸಪೇಟೆ ದಾಟಿದ ತಕ್ಷಣ ಕೊಪ್ಪಳದಲ್ಲಿ ವಸೂಲಿ, ಅನಂತರ ಯಲಬುರ್ಗ ತಾಲ್ಲೂಕಿನಲ್ಲಿ ವಸೂಲಿ, ಅನಂತರ ಗದಗ್ ತಾಲ್ಲೂಕಿನಲ್ಲಿ ವಸೂಲಿ, ನನ್ನ ಅಂದಾಜಿನ ಪ್ರಕಾರ ಪ್ರತಿ ದಿವಸ 50 ರಿಂದ 1 ಲಕ್ಷ ರೂಪಾಯಿಯನ್ನು ಪೋಲೀಸರು ವಸೂಲಿ ಮಾಡುತ್ತಿದ್ದಾರೆ. ಬೇಕಾದರೆ ಇವತ್ತು ರಾತ್ರಿ ಚೆಕ್ ಮಾಡಿಸಿನೋಡಿ.

ಶ್ರೀ ಪಿ.ಟಿ. ಪರಮೇಶ್ವರನಾಯಕ್ : ಹರಪನಹಳ್ಳಿ ತಾಲ್ಲೂಕಿನಲ್ಲೂ ಕಳೆದ ಎರಡು ಮೂರು ವರ್ಷದೊಳಗೆ ಬಳ್ಳಾರಿ ವಿಶೇಷ ಪ್ಯಾಕೇಜ್ ಯೋಜನೆಯ ಅಡಿಯಲ್ಲಿ ಸಾಕಷ್ಟು ಒಳ್ಳೆಯ ರಸ್ತೆಗಳನ್ನು ಅಭಿವೃದ್ಧಿ ಮಾಡಿದ್ದರು. ಆದರೆ ಮ್ಯಾಂಗನೀಸ್ ಓರ್‌ನ ಲಾರಿಯ ಹಾವಳಿಯಿಂದ, ಒಂದು ಲಾರಿಗೆ ಎಂದರೆ ಕನಿಷ್ಟವೆಂದರೂ 30 ರಿಂದ 40 ಟನ್‌ಷ್ಟು ಮ್ಯಾಂಗನೀಸ್ ಓರನ್ನು ಹೇರುತ್ತಾರೆ, ಅದರಿಂದ ನಮ್ಮ ರಸ್ತೆಯೆಲ್ಲಾ ಹಾಳಾಗಿಹೋಗಿದೆ, ಸಂಚಾರ ಮಾಡಲು ಯೋಗ್ಯವಾಗಿಲ್ಲ, ಒಂದು ದಿವಸಕ್ಕೆ ನೂರಾರು ಲಾರಿಗಳು ಹೋಗತಕ್ಕದ್ದು; ನನ್ನ ಹರಪನಹಳ್ಳಿ ತಾಲ್ಲೂಕಿಗೂ ಸಂಬಂಧಪಡುತ್ತದೆ. ಅಲ್ಲಿಯೂ ಲಾರಿಗಳಿಗೆ ಏನಾದರೂ ರೋಡ್ ಟ್ಯಾಕ್ಸ್‌ನ್ನು ಹಾಕತಕ್ಕ ವ್ಯವಸ್ಥೆಯನ್ನು ಮಾನ್ಯ ಉಪ ಮುಖ್ಯಮಂತ್ರಿಯವರು ಮಾಡಬೇಕೆಂದು ತಮ್ಮ ಮೂಲಕ ಮನವಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ : ಸಾಕಷ್ಟು ಉದ್ಯಮಗಳು ಬೆಳೆಯುವುದಕ್ಕೆ ನಮ್ಮ ರಾಜ್ಯದ ರಾಮೆಟೀರಿಯಲ್ ಇನ್‌ಫ್ರಾಸ್ಟ್ರಕ್ಚರ್ ಉಪಯೋಗವಾಗುತ್ತದೆ. ಆದರೆ ಅವರು ಬೆಳೆಸಿರುವಂಥ ಏರಿಯಾದಲ್ಲಿ ಏರಿಯಾ ಡೆವಲಪ್‌ಮೆಂಟ್ ಸಲುವಾಗಿ ವಿಶೇಷ ಕಳಕಳಿ ಅವರಲ್ಲಿರುವುದು ಬಹಳ

ಕಡಿಮೆ ನಾವು ನೋಡಿದ ಹಾಗೆ; ಅವರ ಪ್ರಾಫಿಟ್‌ನಲ್ಲಿ ಏರಿಯಾ ಡೆವಲಪ್‌ಮೆಂಟ್‌ಗೆ ಅವರೂ ಕಾಂಟ್ರಿಬ್ಯೂಟ್ ಮಾಡುವಂತೆ, ಏಕೆಂದರೆ ಅಲ್ಲಿ living cost ಜಾಸ್ತಿಯಾಗಿ ಬಿಟ್ಟಿರುತ್ತದೆ. ಅಲ್ಲಿಯ ಎಜ್ಯುಕೇಷನ್, ರೋಡ್ಸ್, ಉಳಿದ ಇನ್‌ಫ್ರಾಸ್ಟ್ರಕ್ಚರ್‌ಗಳಾಗಲಿ ಇದರ ಡೆವಲಪ್‌ಮೆಂಟ್‌ಗೆ ಅವರು ಕಾಂಟ್ರಿಬ್ಯೂಟ್ ಮಾಡಲೇಬೇಕು ಎಂಬಂತೆ ಏನಾದರೂ ವ್ಯವಸ್ಥೆಯನ್ನು ಮಾಡಿದಿರೆಂದರೆ ಯಾವುದಾದರೂ ಇಂಡಸ್ಟ್ರೀಸ್ ಬಂದರೆ ಪರವಾಗಿಲ್ಲ ನಮಗೆ ಅನುಕೂಲವಾಗುತ್ತದೆ ಎಂಬ ಭಾವನೆ ಆ ಪರಿಸರದಲ್ಲಿ ಬರುತ್ತದೆ. ದಯವಿಟ್ಟು ಅದನ್ನು ಮಾಡಬೇಕು ಎಂಬ ಮಾತನ್ನು ಹೇಳುತ್ತೇನೆ. ಹೋದ ಚುನಾವಣೆಯನ್ನು ನಾವೆಲ್ಲರೂ ಮಾಡಿದ್ದೇವೆ. ಈ ಸಾರಿಯ ಚುನಾವಣೆಯಲ್ಲಿ ಹಣದ ಮತ್ತು ಹೆಂಡದ ಪ್ರಭಾವ ಬಹಳಷ್ಟಾಗಿದೆ. ಜಾತಿಯ ಪ್ರಭಾವವೂ ಆಗಿದೆ. ಇದನ್ನು ಎಲ್ಲರೂ ಪ್ರಾಮಾಣಿಕವಾಗಿ ಒಪ್ಪಬೇಕು. ಆದ್ದರಿಂದ ದಯವಿಟ್ಟು ಎಲ್ಲಾ ಪಕ್ಷದ ನಾಯಕರು ಕೂಡಿ ಹಣ, ಹೆಂಡ ಮತ್ತು ಜಾತಿಯ ಪ್ರಭಾವ ಮುಂದೆ ನಡೆಯುವಂಥ ಚುನಾವಣೆಯಲ್ಲಿ ಆಗಲಾರದಂತೆ ಏನಾದರೂ ವ್ಯವಸ್ಥೆಯನ್ನು ಎಲ್ಲರೂ ಕೂಡಿ ಒಪ್ಪಿಕೊಳ್ಳಿ. ಎಲ್ಲರೂ ಕೂಡಿಯೇ ಒಂದು ಕೋಡ್ ಆಫ್ ಕಾಂಡಕ್ಟ್‌ನ್ನು ಇವಾಲ್ವ್ ಮಾಡಿಕೊಳ್ಳೋಣ. ಇಲ್ಲದಿದ್ದರೆ ನಮ್ಮಂಥವರ್‍ಯಾರೂ ಚುನಾವಣೆಯಲ್ಲಿ ಸ್ಪರ್ಧೆ ಮಾಡುವುದೇ ಕಷ್ಟವೇನೋ ಎಂಬ ಪರಿಸ್ಥಿತಿ ನಿರ್ಮಾಣವಾಗುತ್ತದೆ.

11.10 ಎ.ಎಂ

ಗೊಂದಲ

ಮಾನ್ಯ ಸದಸ್ಯರು : ರಾಯರೆಡ್ಡಿಯವರೆ, ತಾವು ಹೇಳಿದ್ದಕ್ಕೆ ನಮ್ಮ ವಿರೋಧವಿಲ್ಲ, ಅದಕ್ಕೆ ಒಂದು ಕಾನೂನನ್ನು ಮಾಡಿಬಿಡಿ.

ಶ್ರೀ ಬಸವರಾಜರಾಯರೆಡ್ಡಿ : ಅವರು ಹೇಳಿದ್ದು ಸತ್ಯವಿದೆ, ಸ್ವಲ್ಪ ಕಹಿಯಾಗಿರುತ್ತದೆ, ಆ ಕಹಿಯನ್ನು ದಯಮಾಡಿ ಅರಗಿಸಿಕೊಳ್ಳಿ.

ಶ್ರೀ ಡಿ.ಆರ್. ಪಾಟೀಲ್ : ಈ ಬಗ್ಗೆ ಒಂದು ಇನಿಷಿಯೇಷನ್ ಅನ್ನು ಮಾನ್ಯ ಧರಮ್‌ಸಿಂಗ್ ಮತ್ತು ಮಾನ್ಯ ಸಿದ್ಧರಾಮಯ್ಯನವರು ಕೂಡಿ ತೆಗೆದುಕೊಳ್ಳಬೇಕು, ಮಾನ್ಯ ಯಡಿಯೂರಪ್ಪನವರು ಅದಕ್ಕೆ ಸಹಕಾರ ಮಾಡಬೇಕು, ಮಾನ್ಯ ಮಾಧುಸ್ವಾಮಿಯವರು, ಮಾನ್ಯ ಶ್ರೀರಾಮರೆಡ್ಡಿಯವರು, ಮಾನ್ಯ ವಾಟಾಳ್‌ನಾಗರಾಜ್‌ರವರು, ಎಲ್ಲಾ ಫ್ಲೋರ್ ಲಿಡರ್ಸ್ ಕೂಡಿ, ಚುನಾವಣೆ ಇನ್ನು ಮುಂದೆ ಹೇಗೆ ಮಾಡಬೇಕು ಎನ್ನುವುದರ ಬಗ್ಗೆ ಒಂದು ಚಿಂತನೆ ಮಾಡಬೇಕು. ಜನರ ಪ್ರೀತಿ ವಿಶ್ವಾಸದ ಮೇಲೆ ಅಧಿಕಾರ ತೆಗೆದುಕೊಳ್ಳುವುದು. ಆದರೆ ಉಳಿದ ದೃಷ್ಟಿಯಿಂದ ಅಧಿಕಾರ ಬದಲಾವಣೆಯಾಗದ ಹಾಗೆ ಒಂದು ಕಟ್ಟುನಿಟ್ಟಿನ ಕೋಡ್ ಆಫ್ ಕಾಂಡಕ್ಟ್‌ನ್ನು ದಯವಿಟ್ಟು ಜಾರಿಗೆ ತರಬೇಕು, ಇಡೀ ರಾಷ್ಟ್ರಕ್ಕೆ ಒಂದು ಮಾದರಿಯನ್ನು ಮಾನ್ಯ ಸಿದ್ಧರಾಮಯ್ಯನವರು ಹಾಕಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮೊನ್ನೆಯ ಚುನಾವಣೆಯ ಮುಖಾಂತರ ಶೋಷಿತ ಸಮಾಜ ಎಚ್ಚರಿಕೆಯ ಗಂಟೆಯನ್ನು ಭಾರಿಸಿದೆ. ಯಾರು ನಿರಂತರವಾಗಿ ಈ ಶೋಷಣೆಗೆ ಒಳಪಟ್ಟಿದ್ದಾರೋ ಅವರ ಕಾಳಜಿ ಮಾಡಲಿಲ್ಲವೆಂದರೆ, ಅಂತಹ ಸರ್ಕಾರಗಳನ್ನು ನಾವು ಮನೆಗೆ ಕಳುಹಿಸುತ್ತೇವೆ ಎನ್ನುವ ಎಚ್ಚರಿಕೆಯ ಗಂಟೆಯನ್ನು ಅವರು ಬಾರಿಸಿದ್ದಾರೆ. ಈ ಎಚ್ಚರಿಕೆಯ ಗಂಟೆ ಪ್ರತಿನಿತ್ಯ ನಮ್ಮ ತಲೆಯೊಳಗೆ ಬಾರಿಸುತ್ತಿರಬೇಕು. ನಾವೆಲ್ಲರೂ ಅಧಿಕಾರದಲ್ಲಿರುವವರು, ಅದನ್ನು ಗಮನದಲ್ಲಿಟ್ಟುಕೊಳ್ಳಬೇಕು, ಅವಕಾಶ ಸಿಕ್ಕಾಗ ನಾವೇನು ಆ ನೋವನ್ನು ಸಮೀಪದಿಂದ

ನೋಡಿರುತ್ತೇವೆ, ಆ ನೋವನ್ನು ಕಡಿಮೆ ಮಾಡುವಲ್ಲಿ ವ್ಯವಸ್ಥೆ ರೂಪಿಸುವಲ್ಲಿ ನಮ್ಮ ಅಧಿಕಾರದ ಸದುಪಯೋಗವಾಗಬೇಕು, ಆ ಕೆಲಸವನ್ನು ಮಾನ್ಯ ಧರಮ್‌ಸಿಂಗ್, ಮಾನ್ಯ ಸಿದ್ಧರಾಮಯ್ಯನವರು ಮತ್ತು ಅವರ ಮಂತ್ರಿಮಂಡಲ ಮಾಡುತ್ತದೆನ್ನುವ ಭರವಸೆ ನಮಗೆ ಸಂಪೂರ್ಣವಾಗಿದೆ, ಆ ಭರವಸೆಯನ್ನು ಈಡೇರಿಸುವಂತಹ ಸಹಕಾರವನ್ನು ಅವರಿಗೆ ನಮ್ಮ ವಿರೋಧಪಕ್ಷದ ನಾಯಕರೆಲ್ಲರೂ ಕೈಗೂಡಿಸಬೇಕು, ಇದನ್ನು ಕೈಗೂಡಿಸಬೇಕಾದರೆ ಸಮಾಜದೊಳಗೆ ಸೌಹಾರ್ದತೆ ಇರಬೇಕು, ಸೌಹಾರ್ದತೆಯನ್ನು ಕೆಡಿಸುವಂಥ ಕೆಲಸ, ಯಾವ ಶಕ್ತಿಗಳಿಂದಲೂ ಆಗದ ಹಾಗೆ ನೋಡಿಕೊಳ್ಳುವಂಥ ವ್ಯವಸ್ಥೆಯನ್ನು ನಾವೆಲ್ಲಾ ಶಾಸಕರು ನಮ್ಮ ನಮ್ಮ ಕ್ಷೇತ್ರಗಳಲ್ಲಿ ಜವಾಬ್ದಾರಿಯಿಂದ ಮಾಡಿದ್ದೇ ಆದರೆ ಈ ರಾಜ್ಯದ ಬೆಳವಣಿಗೆಯಲ್ಲಿ ನಮ್ಮ ಪಾಲನ್ನು ಕೊಟ್ಟಂತಾಗುತ್ತದೆ, ಅಂತಹ ಸಮೃದ್ಧಿ ನಮ್ಮ ಎಲ್ಲಾ ಶಾಸಕ ಮಿತ್ರರಿಗೆ ಬರಲಿ, ನಮ್ಮ ನಾಯಕರು ತಮ್ಮ ಅವಕಾಶವನ್ನು ಸದುಪಯೋಗ ಮಾಡಿಕೊಂಡು ಈ ಬದಲಾವಣೆಯನ್ನು ಬೇಗ ತರಲಿ, ಮತ್ತೆ ಈ ರಾಜ್ಯದ ಜನತೆ ಈ ನಾಯಕರಿಗೆ ಆಶೀರ್ವಾದ ಮಾಡಲಿ, ನಮ್ಮ ಬಿಜೆಪಿ ಸ್ನೇಹಿತರು ಮತ್ತು ಮಾನ್ಯ ಯಡಿಯೂರಪ್ಪನವರು ಮತ್ತೆ ವಿರೋಧಪಕ್ಷದಲ್ಲಿ ಕುಳಿತುಕೊಳ್ಳುವಂತಹ ವ್ಯವಸ್ಥೆಯಾಗಲಿ ಎಂದು ಹಾರೈಸಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ : ಈಗ 65ಕ್ಕೆ ಇಳಿದಿದ್ದೀರಿ, ನೀವು ಎಲ್ಲಿಗೆ ಹೋಗುತ್ತೀರಿ?

ಮಾನ್ಯ ಸದಸ್ಯರು : ಮಾನ್ಯ ಸದಸ್ಯರು ಮದ್ಯಪಾನದ ಬಗ್ಗೆ ಹೇಳಿದರು. ಅದು ಅಧಿಕೃತ ಪಾನದ ಬಗ್ಗೆಯೋ ಅಥವಾ ಅನಧಿಕೃತ ಪಾನದ ಬಗ್ಗೆಯೋ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು.

ಅಧ್ಯಕ್ಷರು : ಈಗ ಮಾನ್ಯ ಶ್ರೀರಾಮರೆಡ್ಡಿಯವರು ಮಾತನಾಡುವುದು.

† **ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ)** : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಿದ್ಧರಾಮಯ್ಯನವರು ಬಹುಶಃ ಕರ್ನಾಟಕ ರಾಜ್ಯದ ಮೊಟ್ಟ ಮೊದಲನೆಯ ಹಣಕಾಸು ಮಂತ್ರಿಯಾಗಿ ಐದು ವರ್ಷಗಳ ಕಾಲ ಈ ಆಯವ್ಯಯವನ್ನು ಮಂಡಿಸಿ ಮತ್ತೆ 6ನೇ ಸಲ ಆಯವ್ಯಯವನ್ನು ಮಂಡಿಸುತ್ತಿರತಕ್ಕಂಥದ್ದು ಬಹುಶಃ ಅವರು ಎಡರನೇಯವರೆಂದು ನನ್ನ ಪ್ರಕಾರ ಕಾಣುತ್ತದೆ. ಅದಕ್ಕೆ ಅವರನ್ನು ನಾನು ಅಭಿನಂದಿಸಬೇಕಾಗುತ್ತದೆ. ಮತ್ತೆ ಆಯವ್ಯಯದಲ್ಲಿ ಕೆಲವೊಂದು ಸ್ವಾಗತಾರ್ಹವಾದ ಕ್ರಮಗಳನ್ನು ಹೇಳಿದ್ದಾರೆ. ಪ್ರತ್ಯೇಕವಾಗಿ ರೈತರಿಗೆ, ಕೃಷಿರಂಗಕ್ಕೆ ಸಂಬಂಧಪಟ್ಟಂತೆ ಅವರು ಕೆಲವು ವಿಚಾರಗಳನ್ನು ಹೇಳಿರುವುದು ಸ್ವಾಗತಾರ್ಹ. ಆಯವ್ಯಯದಲ್ಲಿ ಕೃಷಿರಂಗಕ್ಕೆ ಸುಮಾರು ನೂರರಷ್ಟು ಹೆಚ್ಚಿನ ಅನುದಾನವನ್ನು ಕೊಟ್ಟಿದ್ದಾರೆ, ಅವೆಲ್ಲವೂ ಕೂಡ ಸ್ವಾಗತಾರ್ಹಮಾಡುವ ವಿಚಾರಗಳು. ಇನ್ನು ಕೆಲವು ಸ್ವಾಗತಾರ್ಹ ಮಾಡುವ ವಿಚಾರಗಳಿವೆ. ಆದರೆ ಆಯವ್ಯಯವೆಂದರೆ ಅದರ ಕಾನ್ಸೆಪ್ಟ್ ಸರಿಯಾದ ರೀತಿಯಲ್ಲಿ ಪ್ರೊಜೆಕ್ಟ್ ಆಗುತ್ತಿಲ್ಲ. ನಮ್ಮ ಸದನದಲ್ಲಿ ಬಹುಸಂಖ್ಯಾತ ಸದಸ್ಯರುಗಳ ಅಭಿಪ್ರಾಯ ಹೇಗಿದೆ ಎಂದರೆ, ಇದೊಂದು ಅನ್ಯುವಲ್ ಫೈನಾನ್ಸಿಯಲ್ ಸ್ಟೇಟ್‌ಮೆಂಟ್ ರೀತಿ ಹಬ್ಬಗಳು ಬಂದಂತೆ ಆಯವ್ಯಯಗಳು ಬರುತ್ತವೆ. ಆದರೆ ಇದು it is very unfortunate. ದುರ್ದೈವದ ಸಂಗತಿ, ಆಯವ್ಯಯವೆಂದರೇನು? What is meant by Budget? Budget is a political economy of a State which is running. ಇದು ರಾಜಕೀಯ ಅರ್ಥಶಾಸ್ತ್ರ ಆದರೆ ಈ ರಾಜಕೀಯ ಅರ್ಥಶಾಸ್ತ್ರವನ್ನು ಬರೀ ಅಂಕಿಅಂಶಗಳ ಜಗ್ಗಾಟ, It is nothing but a statistical juggling. ಆ ರೀತಿಯಾಗಿ ಇದನ್ನು ಪ್ರೊಜೆಕ್ಟ್ ಮಾಡುತ್ತಿರುವುದು ದುರ್ದೈವದ

ಸಂಗತಿ. Number Two. A budget is a political and economic philosophy of the Ruling Party. ಅದನ್ನು ಬಿಟ್ಟು ಆಯವ್ಯಯವನ್ನು ಸಂಪೂರ್ಣವಾಗಿ, ಬೇರೆ ರೀತಿಯಲ್ಲಿ ಅರ್ಥೈಸತಕ್ಕಂಥ ಅಂಶವನ್ನು ನಾವು ಇಲ್ಲಿ ಕಾಣುತ್ತಿದ್ದೇವೆ. ಆಯವ್ಯಯವೆಂದರೆ, Is it simply either statistical juggling or is it an intellectual juggling? ಭೌತಿಕ ಸರತ್ತು ಎರಡೂ ಅಲ್ಲ. It is a political economy of the ±Àtate which has to represent its heart and core of the people. ಅದರ ಬಗ್ಗೆ ಎಲ್ಲೂ ಪ್ರಸ್ತಾಪವಾದುದ್ದನ್ನು ನಾನು ಕಾಣಲಿಲ್ಲ. ನಾನು ಮಾನ್ಯ ಸಿದ್ಧರಾಮಯ್ಯನವರ ರೀತಿಯಲ್ಲೇ 6ನೇ ಆಯವ್ಯಯದ ಮೇಲೆ ಮಾತನಾಡುತ್ತಿದ್ದೇನೆ, ನಾನು ಪ್ರತಿಸಾರಿ ಆಯವ್ಯಯದ ಮೇಲೆ ಮಾತನಾಡುವಾಗ ಸ್ವಲ್ಪ ಸ್ಥೂಲವಾಗಿ ನಾನು ಹೇಳಿದ್ದೇನೆ, ಆದರೆ ದುರ್ದೈವ ಅದು ಆಗುತ್ತಿಲ್ಲ. ಮತ್ತೆ ಆಯವ್ಯಯದ ಮೇಲೆ ಚರ್ಚೆಗೂ ಬೇಡಿಕೆಯ ಮೇಲೆ ಚರ್ಚೆಗೂ ಇಲ್ಲಿ ವ್ಯತ್ಯಾಸ ಕಾಣುತ್ತಿಲ್ಲ. ನಾನು ಯಾರನ್ನೂ ಉದ್ದೇಶಿಸಿ ಮಾತನಾಡುತ್ತಿಲ್ಲ. If at all you want to talk about any department, for example APMC; ಅದರ ಹಣಕಾಸಿನ ಸ್ಥಿತಿಯೇನು? ಅದಕ್ಕೆ ಸರ್ಕಾರ ಕೊಡುತ್ತಿರುವ ಒತ್ತೇನು? ಆ financial implications ನಿಂದ ಆಗುವ ಫಲಿತಾಂಶವೇನು ಎಂಬುದರ ಬಗ್ಗೆ ಮಾತನಾಡುವುದರ ಬದಲು, ಅಧಿಕಾರಿಗಳನ್ನು ಏಕೆ ವರ್ಗಾವಣೆ ಮಾಡಲಿಲ್ಲ? ಏತಕ್ಕೆ ಹಾಕಲಿಲ್ಲವೆಂದು ಹೇಳುವುದು it is completely deviation from the budget approach ಹಾಗಾಗಿ ಆ ರೀತಿಯಾಗಿ ಪ್ರೊಜೆಕ್ಟ್ ಆಗುತ್ತಿರುವುದು ಸರಿಯಲ್ಲ ಎಂಬುದು ನನ್ನ ಅಭಿಪ್ರಾಯ. ಇಲ್ಲಿ ಮಾನ್ಯ ಸಿದ್ಧರಾಮಯ್ಯನವರು ಆಯವ್ಯಯವನ್ನು ಮಂಡಿಸಿದ್ದಾರೆ, ಆದರೆ ಈ ಆಯವ್ಯಯವನ್ನು ಮಂಡಿಸುವಾಗ, Siddaramaiah is not completely free and independent from him own ideology and thinking. He has been constrained rather he has been tied up by other forces. *No. 1 force is world Bank and IMF. No.2. force is coalition policy ಈ ಎರಡು ಶಕ್ತಿಗಳು ಅವರ ಸಂಪೂರ್ಣವಾದ ಆತ್ಮವನ್ನು ಹಿಂಡಿದೆ. ಅದು ಆಯವ್ಯಯದಲ್ಲಿ ಸ್ಪಷ್ಟವಾಗಿ ರಿಫ್ಲೆಕ್ಟ್ ಆಗಿದೆ, ಆ ಬಗ್ಗೆ ಮಾನ್ಯ ಸಿದ್ಧರಾಮಯ್ಯನವರು ಏನು ಹೇಳಿದರೂ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ, ಅದಕ್ಕೆ ಉದಾಹರಣೆಯನ್ನು ಆಮೇಲೆ ವಿವರಿಸುತ್ತೇನೆ. You are not talking anything about privatisation process of the power sector because it has been directed and it has been guided by the World Bank and IMF. ಮತ್ತೆ ಒಂದು most important budgetary proposal ನಲ್ಲಿರತಕ್ಕಂಥ ಅನಗತ್ಯ ವೆಚ್ಚಗಳನ್ನು ಕಡಿತ ಮ್ಾಡತಕ್ಕಂತಹ ಪ್ರಶ್ನೆ ಬಂದಾಗ your proposal is to reduce the government expenditure, particulary administrative expenditure, more particularly employees ಜಾಸ್ತಿಯಾಗಿದ್ದಾರೆ ಎಂದು ಹೇಳುತ್ತಾರೆ. It is nothing but World Bank guidelines. ಮತ್ತೆ ಹೇಗೆ ಅಂತ ನಾನು ವಿವರಿಸುತ್ತೇನೆ, you may be convinced. But at the same time, ನೀವು ಕೃಷಿ ಗ್ರಾಮೀಣ ಭಾಗದ ಜನರ ಬಗ್ಗೆ ಏನೂ ಆಲೋಚನೆ ಮಾಡಲಿಲ್ಲ. ನೀವು ನೂರು ಪರ್ಸೆಂಟ್ ಗ್ರಾಂಟ್ ಇಟ್ಟಿದ್ದೀರಿ, ಅದು ಸ್ವಾಗತಾರ್ಹ. ಆದರೆ you must understand and we must also understand

70% of the total population living in the State is under the agricultural sector and what percentage of amount you are, ನಾವು ಅದಕ್ಕೆ ತೆಗೆದಿಟ್ಟಿರುವಂತಹದು including irrigation ನೀವು ತೆಗೆದಿಟ್ಟಿರುವುದು total 6%. If that includes 7% of irrigation, 6+7 it is nothing but 13%. 13% income of our State, we are spared for 70% population. Whereas, the 70% of income is going for 2.5% population. I am not blaming Siddaramaiah ನಾನು ಸಿದ್ಧರಾಮಯ್ಯನವರನ್ನು blame ಮಾಡುತ್ತಾ ಇಲ್ಲ, because you are constrained. Your ideas have been hold up by some other forces ನಾನು ಪ್ರಾಮಾಣಿಕವಾಗಿ ಹೇಳುತ್ತಾ ಇದ್ದೇನೆ 70% populationಗೆ ನೀವು spare ಮಾಡಿರುವುದು including irrigation, it is only 13%. ಬೆರೆಯದಕ್ಕೆ ಏನು ಮಾಡಿದಿದ್ದೀರಿ ನೀವು? ಇತರೇ ಸಾಮಾನ್ಯ ಸೇವೆಗಳಿಗೆ 31%, I cannot say, it is your own statement. It is not my statement. This 31% is spared for general services, whereas for this 70% population got only the 13% including irrigation. How you are going to justify this? How you are going to defend it? So, this is the nature of the budget, where you placed it. ಮತ್ತೆ ಸ್ವಾಮ್ಯ ಅಧ್ಯಕ್ಷರೇ, most important striking factor is, that I am presenting surplus budget, ಎಂದು ಹೇಳಿದ್ದೀರಿ. It is a strange when you are borrowing, What is your borrowing? ಎಷ್ಟು ಸಾಲ ಆಗಿದೆ ನಿಮ್ಮದು? ಇವತ್ತು 30,118 ಕೋಟಿ ರೂ. ಸಾಲ ತಲೆ ಮೇಲಿಟ್ಟುಕೊಂಡು ನಾನು surplus budget present ಮಾಡಿದ್ದೇನೆ ಅಂದರೆ how you are going to convince? What is the philosophy behind this surplus budget? What is the nature? Please convince, tell us 30,118 ಕೋಟಿ ರೂ. ಸಾಲ ತಲೆ ಮೇಲೆ ಹಾಕಿ ನಾನು surplus budget ಮಂಡಿಸುತ್ತಿದ್ದೇನೆ ಅಂದರೆ either you have to abandon your credit ನೀವು ಅದನ್ನು defer ಮಾಡಬೇಕು, ಇಲ್ಲ ಅಂದರೆ ನಾವು ಕೊಡುವುದಿಲ್ಲ ಅಂತ ಹೇಳಬೇಕು. ಇಲ್ಲದಿದ್ದರೆ surplus budget, what is meant by surplus budget? Surplus budget means, the income and expenditure ಎರಡೂ ಹೋಗಿ ನಮಗಿಷ್ಟು ಉಳಿದಿದೆ, ನಿಮ್ಮ budget proposal ನಲ್ಲಿ ನೀವು ಏನು ಹೇಳಿದ್ದೀರಿ, how you are going to fill up your income? ಸಾಲಗಳಿಂದ ಎಷ್ಟು ನೀವು ಪಡೆಯುತ್ತಿದ್ದೀರಿ? ಎಷ್ಟು ಪರ್ಸೆಂಟ್ ಮಾಡುತ್ತಿದ್ದೀರಿ ಸಾಲಗಳಿಂದ? 13 ಪೈಸೆ, ಕೇಂದ್ರ ಸರ್ಕಾರದಿಂದ 7 ಪೈಸೆ, ಕೇಂದ್ರದ ಪಾಲಿನಿಂದ 11 ಪೈಸೆ, ರಾಜ್ಯ ತೆರಿಗೆ 45 ಪೈಸೆ, ಸಾಲದಿಂದ 24 ಪೈಸೆ, 24% of your income is borrowing. How you are going to justify? ನೀವು ಹೇಗೆ ಇದನ್ನು justify ಮಾಡುತ್ತೀರಿ ಎಂಬುದನ್ನು ಹೇಳಬೇಕು. ಆ ರೀತಿಯಲ್ಲಿರುವ ಈ self-contradictory budget ಏನಿದ, it is going to help nobody, either to State or to the people. ಮತ್ತೆ ನಿಮ್ಮ ಸೇವೆಗಳ resource mobilize ಮಾಡಲಿಕ್ಕೆ ನೀವು 7 ಆರ್ಥಿಕ ಮಂತ್ರಗಳನ್ನು ಹೇಳಿದ್ದೀರಿ. 7 points ನೀವು propose ಮಾಡಿದ್ದೀರಿ. Please go through it. ಅದರಲ್ಲಿ

knowing important is resource mobilization. Resource mobilization ಗೆ ಸಿದ್ಧರಾಮಯ್ಯನವರೇ don't mistake me. ನನ್ನನ್ನು ತಪ್ಪು ತಿಳಿಯಬೇಡಿ, ನನಗೆ ವೈಯುಕ್ತಿಕವಾಗಿ ನಿಮ್ಮ ಬಗ್ಗೆ ಭಾರಿ ಗೌರವ ಇದೆ. ನಿಮ್ಮ ಆತ್ಮೀಯ ಗೆಳೆಯ ನಾನು. What is the proposals you have made? You are taxing the people. Direct Tax. Forget about indirect tax. ನೀವು resource mobilization ಅನ್ನು ಮಾಡಲಿಕ್ಕೆ ಯಾವ method ಉಪಯೋಗಿಸಿದ್ದೀರಿ ಅದರಿಂದ ನೀವು resource mobilization ಮಾಡಲಿಕ್ಕೆ ಸಾಧ್ಯವಿಲ್ಲ, ಯಾಕೆಂದರೆ you have not gone beyond 1% of the traditional taxation. Traditional ಆಗಿ ನೀವು ಯಾರ ಮೇಲೆ tax ಹಾಕುತ್ತಿದ್ದೀರೋ ಅವರಿಂದ ಒಂದಿಂಚೂ ಆಚೆ ಕಡೆ ಹೋಗಿಲ್ಲ. You are not expanded the tax area, rather you are cut down the tax area. ಅದು ಬಿಟ್ಟು resource mobilizationಗೆ ಬರೀ expenditureನ್ನು, ಅನಗತ್ಯ ವೆಚ್ಚಗಳನ್ನು ಅಥವಾ ಸರ್ಕಾರದ ವೆಚ್ಚಗಳನ್ನು ಕಡಿಮೆ ಮಾಡುವುದರ ಮುಖಾಂತರ ಮಾತ್ರವೇ ನಾವು resource mobilization ಗೆ ಹೆಚ್ಚು ಒತ್ತು ಬರುತ್ತದೆ ಅನ್ನುವುದಾದರೆ ಖಂಡಿತ it is not an economy. The basic economic philosophy tells us to increase our resources and we have to expand our (1) Tax Area. Tax base widen ಆಗಬೇಕು. (2) The most striking and important thing is, we have to see that purchasing power of a common man has to be increased. Purchasing capacity of a common man must be increased. ಈ ಎರಡು ಮೂಲಭೂತ ಅಂಶಗಳ ಬಗ್ಗೆ ಬಜೆಟ್‌ನಲ್ಲಿ ನಿಮಗೆ ಎಲ್ಲೂ ಕೂಡ ಪ್ರಸ್ತಾಪ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ನೀವೇ ಒಂದು ಕಡೆ ಹೇಳಿದ್ದೀರಿ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ 6 ನೇ ಸ್ಥಾನದಲ್ಲಿದ್ದ 7 ನೇ ಸ್ಥಾನಕ್ಕೆ ಬಂದಿದೆ, it is your own proposition. But what is that? What indicates it? The purchasing power of a common man is going down everyday in and out. How can you mobilize the resources? Another most important thing is, ನೀವು ಬಜೆಟ್‌ನಲ್ಲಿ ಪ್ರಪೋಸ್ ಮಾಡಬೇಕಾಗಿರುವುದು ಎಂತಹ ಅಂಶಗಳು? Human Resources Development ಗೆ ನೀವು ಏನು ಆದ್ಯತೆ ಕೊಟ್ಟಿದ್ದೀರಿ? Natural Resource Mobilization ಗೆ ಏನು ಆದ್ಯತೆ ಕೊಟ್ಟಿದ್ದೀರಿ? Minus human resource and minus natural resource, no state can survive. Natural Resource Development ಗೆ ಹೆಚ್ಚು ಮಾಡಲು ಬೇಕಾಗಿರುವುದರಲ್ಲಿ most important thing is unemployment problem, and poverty. What is your programme for eradication the unemployment problem? What is the programme for eradication of poverty? Please tell me. ನಾನು ಹೇಳುತ್ತೇನೆ resource mobilization ಗೆ ಸಿದ್ಧರಮಯ್ಯನವರೇ, ದಯವಿಟ್ಟು ಗಮನ ಕೊಡಬೇಕು. ಇನ್ನೊಂದು ಅಂಶ ಹೇಳಿದ್ದೀರಿ, ಭ್ರಷ್ಟಚಾರಃನ್ನು ತಡೆಯುವುದು. administrative expenditure ಇದೆಲ್ಲಾ ಹೇಳಿದ್ದೀರಿ I am very happy that atleast you talked about the corruption. ನಾನು ಹೇಳುತ್ತೇನೆ

ಹಿಂದಿನ ಸರ್ಕಾರ ಇಡೀ ಕರ್ನಾಟಕ ರಾಜ್ಯದಲ್ಲಿ ಯಾವುದಾದರೂ ಒಂದು ನಿರ್ಲಜ್ಜ ಸರ್ಕಾರ ಬಂದಿತ್ತು ಅಂದರೆ ಅದು ಹಿಂದಿನ ಸರ್ಕಾರ. ನಿರ್ಲಜ್ಜ ಸರ್ಕಾರಗಳಲ್ಲಿ ಅದು ನಂಬರ್ ಒನ್. ಯಾಕೆಂದರೆ when hundreds and thousands of peoples are...

ಗೊಂದಲ

ನಾನು ಹೇಳುತ್ತೇನೆ ಸ್ವಲ್ಪ ತಡೆಯಿರಿ. ನೋಡ್ರೀ ನಾನು ಹೇಳುತ್ತೇನೆ. I have not yielded for you. ನಾನು ಹೇಳುವುದನ್ನು ಕೇಳಿ ಆಮೇಲೆ ಮಾತನಾಡಿ, too much ಏನೆಲ್ಲ it is my opinion. I am free to hold my opinion. I will tell you ಹೇಗೆ ನಿರ್ಲಜ್ಜ ಸರ್ಕಾರ ಅಂತ ಹೇಳಿದರೆ ನೂರಾರು ರೈತರು ಆತ್ಮಹತ್ಯೆ ಮಾಡಿಕೊಂಡು ಸಾಯುತ್ತಿದ್ದರೆ ನೀವಿಲ್ಲಿ ವಿಕಾಸಸೌಧ ಕಟ್ಟಿಸುತ್ತಿದ್ದೀರಿ, ಇದು ನಿರ್ಲಜ್ಜತನ ಅಲ್ಲವೇ?

ಅಧ್ಯಕ್ಷರು : ಶ್ರೀರಾಮರೆಡ್ಡಿಯವರೇ, ಬಜೆಟ್ ಮೇಲೆ ಮಾತನಾಡಿ. ಅಡ್ಡ ಮಾತು ವ್ಯಾಖ್ಯಾನಗಳಿಗೆ ಹೋದರೆ ಬಜೆಟ್ ಮುಗಿಸಲು ಸಾಧ್ಯವಾಗುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಬಜೆಟ್ ಬಿಟ್ಟು ಒಂದಕ್ಷರ ಆಚೆ ಹೋಗುತ್ತಾ ಇಲ್ಲ, natural resource mobilize ಮಾಡುವುದರಲ್ಲಿ ನೀವು ಎಡವಿರುವುದು ಇಲ್ಲಿ? ಭ್ರಷ್ಟಚಾರವನ್ನು ತಡೆಗಟ್ಟುತ್ತೇವೆ ಅಂತ ಹೇಳುತ್ತೀರಿ. Unusual expenditure ಅನ್ನು ಅನಗತ್ಯ ವೆಚ್ಚಗಳನ್ನು ಕಡಿಮೆ ಮಾಡುತ್ತೇನೆಂದು ಹೇಳಿ ನಾನು ಮೊಬಿಲೈಸ್ ಮಾಡುತ್ತೇನೆ ಎಂದು ಹೇಳುತ್ತಿದ್ದೀರಿ ನೀವು. ಅನಗತ್ಯ ವೆಚ್ಚಗಳನ್ನು ಕಡಿಮೆ ಮಾಡುತ್ತೇನೆಂದು ಹೇಳಿದ ಸರ್ಕಾರಗಳು ನೂರಾರು ಜನ ರೈತರು ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಿದ್ದರು. ಮೂರು ವರ್ಷ ಸತತವಾಗಿ ಬರಗಾಲ ಬಂದು ಜನರು ಗುಳೆ ಹೋಗುತ್ತಿದ್ದರೆ ನೀವು 125 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಇಲ್ಲಿ ನೀವು ವಿಕಾಸಭವನ ಕಟ್ಟಿಸುವ ಕೆಲಸ ಅದು ನಿರ್ಲಜ್ಜತನ ಅಲ್ಲವೆಂದು ಯಾರಾದರೂ ಹೇಳಿಬಿಡಲಿ ನೋಡೋಣ.

ಗೊಂದಲ

ಶ್ರೀ ಜೆ.ಸಿ ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಅದಕ್ಕಿಂತ ನಿರ್ಲಜ್ಜತನ ಅಂದರೆ ಅದು ಓಪನ್ ಆಗುವುದಕ್ಕೇ ಮೊದಲೇ ಓಪನ್ ಮಾಡಿ ಅದನ್ನು inaguration ಮಾಡಿ ಹೋಗಿರುವುದು. ಅದು ನಿರ್ಲಜ್ಜತನವಲ್ಲವೇ ಎನ್ನುವುದನ್ನು ಮಾನ್ಯ ಬಿ.ಆರ್. ಪಾಟೀಲರು ಹೇಳಬೇಕು. Is it complete?

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೇ, ವಿಕಾಸ ಭವನವನ್ನು ಕಟ್ಟಿಸುವುದರಿಂದ ಸರ್ಕಾರಕ್ಕೆ ಎಷ್ಟು ಬಾಡಿಗೆ ಉಳಿತಾಯ ಆಗುತ್ತದೆ ಎನ್ನವುದನ್ನೂ ಕೂಡ ಮಾನ್ಯ ಸದಸ್ಯರಿಗೆ ಮನವರಿಕೆ-ಯಾಗಬೇಕು.

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೇ, ನೀವು ಬಜೆಟ್‌ಗೆ restrict ಆಗಿ ಮಾತನಾಡಿ ದಯವಿಟ್ಟು.

Sri G.V. Sriramreddy : Sir, I am talking about only budget.

ಅಧ್ಯಕ್ಷರು : ಆಯಿತು, ಅದನ್ನೇ ನಾನು ಹೇಳುತ್ತಿರುವುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ನೀವು ನಿಮ್ಮ ಪ್ರಸ್ತಾವನೆಯಲ್ಲಿ ಏನು ಹೇಳಿದ್ದೀರಿ, ಸರ್ಕಾರದ ಅನಗತ್ಯ ವೆಚ್ಚಗಳನ್ನು ಕಡಿಮೆ ಮಾಡುವುದಕ್ಕೆ, ದುಂದು ವೆಚ್ಚಗಳನ್ನು ಕಡಿಮೆ

ಮಾಡುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆಂದು ನೀವೇ ಹೇಳಿದ್ದೀರಿ. ನಾನು ಏನು ಹೇಳುತ್ತಿದ್ದೇನೆ,I am telling comparative example. ನೂರಾರು ಜನ ರೈತರು ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಿದ್ದರು, ಬರಗಾಲ ಬಂದಿತ್ತು, ಅದಕ್ಕೆ ಆದ್ಯತೆಯನ್ನು ಕೊಡಬೇಕು. What is your priority? ಏನು ನಿಮ್ಮ priorities ಹೇಳಿ. ಆ ಪ್ರೈಯಾರಿಟಿಗೆ ನೀವು ಎಲ್ಲಿ ಗಮನವನ್ನು ಕೊಟ್ಟಿದ್ದೀರಿ? ಅದಕ್ಕಾಗಿ ನಾನು ಹೇಳುತ್ತಿರುವಂಥದ್ದು. ಬೇರೆ ಯಾವುದಕ್ಕೋಸ್ಕರವೂ ನಾನು ಹೇಳುತ್ತಿಲ್ಲ. ಅದೇ ಸಂದರ್ಭದಲ್ಲಿ ನೀವು ಮಾನವ ಸಂಪನ್ಮೂಲದ ಅಭಿವೃದ್ಧಿಯಲ್ಲಿ 7ನೇ ಸ್ಥಾನಕ್ಕೆ ಬಂದಿದೆ ಎಂದು ಹೇಳುತ್ತೀರಿ. ಇನ್ನೊಂದು ಕಡೆ ಹಿಂದಿನ ಸರ್ಕಾರ ವಿದೇಶದಿಂದ ಬಂಡವಾಳ ಹರಿದು ಓ ಎಂದು ಕರ್ನಾಟಕಕ್ಕೆ ಬರುತ್ತದೆ ಎಂದು ಹೇಳಿಬಿಟ್ಟು ಅಥವಾ ಬರಬೇಕೆಂದು ಹೇಳಿ ಮಂತ್ರಿಗಳು, ಮುಖ್ಯಮಂತ್ರಿಗಳು ಎಲ್ಲಾ ಸೇರಿ ವಿದೇಶಗಳಿಗೆ ಓಡಿ ಇಲ್ಲೆಲ್ಲಾ ಇನ್‌ವೆಸ್ಟರ್ಸ್ ಸಮ್ಮೇಳನಗಳನ್ನು ಮಾಡಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ ನೀವು. ಎಷ್ಟು ಸಾವಿರ ಕೋಟಿ ರೂಪಾಯಿಗಳು ವಿದೇಶಿ ಬಂಡವಾಳ ಕರ್ನಾಟಕಕ್ಕೆ ಹರಿದು ಬಂದಿದೆ ಎಂಬ ಲೆಕ್ಕವನ್ನು ಹೇಳಿ ದಯವಿಟ್ಟು, ಇದು ನಂಬರ್ ಒಂದು ಎರಡನೆಯದು, ಆ ರೀತಿ ಬಂದಿರುವ ಬಂಡವಾಳವನ್ನು ಕರ್ನಾಟಕ ರಾಜ್ಯದಲ್ಲಿ ಹಾಕಿ ಉತ್ಪಾದನೆಯನ್ನು ಹೆಚ್ಚುಮಾಡಿ ಉದ್ಯೋಗಾವಕಾಶಗಳನ್ನು ಸೃಷ್ಟಿಮಾಡಿರತಕ್ಕದ್ದು ಎಷ್ಟು ಎಂದು ಹೇಳಿ. ಲೆಕ್ಕ ಕೊಡಿ. For that, how much of amount you have spent? How much of foreign trips you have taken? ಇಲ್ಲಿಗೆ ಎಷ್ಟು ಸಾವಿರ ಕೋಟಿ ರೂಪಾಯಿಗಳು ಬಂದಿದೆ? ಎಷ್ಟು ಸಾವಿರ ಕೋಟಿ ರೂಪಾಯಿಗಳು ಬಂದು ಇಲ್ಲಿ infrastructure ಅನ್ನು ಡೆವಲಪ್ ಮಾಡುವುದಕ್ಕೆ, ಪ್ರೊಡಕ್ಷನ್ ಓರಿಯೆಂಟೆಟ್ ಮಾಡುವುದಕ್ಕೆ, ಎಂಪ್ಲಾಯ್‌ಮೆಂಟ್ ಓರಿಯೆಂಟೇಷನ್ ಮಾಡುವುದಕ್ಕೆ ಎಷ್ಟು ಸಾವಿರ ಕೋಟಿ ರೂಪಾಯಿಗಳು ವಿದೇಶದಿಂದ ಹರಿದು ಬಂದಿದೆ ಎನ್ನತಕ್ಕ ಲೆಕ್ಕವನ್ನು ಕೊಡಿ, ಆ ರೀತಿ ಬಂದಿದ್ದರೆ ನೀವ್ಯಾಕೆ ಬಜೆಟ್‌ನಲ್ಲಿ ಅದರ ಬಗ್ಗೆ ಹೇಳಲಿಲ್ಲ? ಹಾಗಾದರೆ ನಿಮ್ಮ ಬಜೆಟ್‌ನಲ್ಲಿ ಪ್ರಸ್ತಾವ ಇರುವ ಪ್ರಕಾರವೇ ಇವತ್ತು ಶಿಕ್ಷಣಕ್ಕೆ ಕೊಟ್ಟಿರತಕ್ಕದ್ದು ಎಷ್ಟು? ಆರೋಗ್ಯಕ್ಕೆ ಕೊಟ್ಟಿರುವುದು ಎಷ್ಟು? ನೀವು ಬಡವರ ಬಗ್ಗೆ ಬಾರಿ ಕಾಳಜಿ ಇರತಕ್ಕವರು. ಆರೋಗ್ಯಕ್ಕೆ ಕೊಟ್ಟಿರುವುದು ಎಷ್ಟು ಪರ್‌ಸೆಂಟ್ ಎಂದರೆ ಕೇವಲ ಮೂರು ಪರ್‌ಸೆಂಟ್, ಶಿಕ್ಷಣಕ್ಕೆ ಕೊಟ್ಟಿರುವುದು 13 ಪರ್‌ಸೆಂಟ್ ಸಮಾಜ ಕಲ್ಯಾಣಕ್ಕೆ ಮೂರು ಪರ್‌ಸೆಂಟ್, ಸಾಮಾಜಿಕ ನ್ಯಾಯದ ಬಗ್ಗೆ .....

ಶ್ರೀ ಎಸ್.ಎಸ್. ಪಾಟೀಲ್ : ಮಾನ್ ಅಧ್ಯಕ್ಷರೇ, ತಾವು ಏನು ಮಾಡಬೇಕೆಂದು ಸಲಹೆಯನ್ನು ಕೊಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಯೀಲ್ಡ್ ಆಗುವುದಿಲ್ಲ. ದಯವಿಟ್ಟು ನನ್ನ ಟೈಮನ್ನು ವೇಸ್ಟ್ ಮಾಡಬೇಡಿ. ನಿಮಗೆ ಅಧಿಕಾರವನ್ನು ಕೊಟ್ಟಿರುವುದು ನೀವು ಮಾಡಲಿಕ್ಕೆ ನಾವು ಹೇಳುವುದಕ್ಕಲ್ಲ. ಜನರು ನಿಮಗೆ ಅಧಿಕಾರವನ್ನು ಕೊಟ್ಟುರುವುದು ನೀವು ಮಾಡುವುದಕ್ಕೆ. ನಮ್ಮ ಸಲಹೆ ತೆಗೆದುಕೊಳ್ಳುವುದಕ್ಕಲ್ಲ. ನಮ್ಮ ಸಲಹೆ ತೆಗೆದುಕೊಳ್ಳುವುದಿದ್ದರೆ ಬನ್ನಿ ಈ ಕಡೆಗೆ. ವಾಪಸ್ ಬನ್ನಿ. ಇಲ್ಲಿ ಬಂದು ನೀವು ಕುಳಿತುಕೊಳ್ಳಿ. ನಾನು ಯೀಲ್ಡ್ ಆಗಿಲ್ಲ.

ಅಧ್ಯಕ್ಷರು : ಮಾನ್ಯ ಪಾಟೀಲರೇ, ಏಕೆ ಇಂಟರ್‌ಫಿಯರ್ ಆಗುತ್ತೀರಿ, ಏನೋ ಮಾತನಾಡಲಿ ಬಿಡಿ, ಮಾತನಾಡಿ ಶ್ರೀರಾಮರೆಡ್ಡಿಯವರೇ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹೌದು It is our duty. Your duty is to implement.

ಶ್ರೀ ಎಸ್.ಎಸ್. ಪಾಟೀಲ್ : ಸಲಹೆ ಮಾಡುವುದೂ ಕೂಡ ವಿರೋಧ ಪಕ್ಷದ ಕರ್ತವ್ಯ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ನಮ್ಮ ಕರ್ತವ್ಯವನ್ನು ನಾವು ಮಾಡುತ್ತಿದ್ದೇವೆ. ನಿಮ್ಮ ಕರ್ತವ್ಯವನ್ನು ನೀವು ಮಾಡಲಿಲ್ಲವೆಂದು ಹೇಳುತ್ತಿದ್ದೇನೆ. ಕುಳಿತುಕೊಳ್ಳಿ. ನೀವು ಹಿರಿಯ ಸದಸ್ಯರು, ನಮ್ಮ ಹತ್ತಿರ ಹೇಳಿಸಿಕೊಳ್ಳಬಾರದು. ನಾನು ಹೇಳಿದೆ, ಟ್ಯಾಕ್ಸ್ ಬೇಸ್ ವೈಡನ್ ಮಾಡಲಿಲ್ಲ ಎಂದು ನಾನು ಹೇಳಿದ್ದು ನಿಮ್ಮ ತಲೆಗೆ ಹೋಗಲಿಲ್ಲ. ನಾನು ಹೇಳಿದ್ದೇನೆ, ನಿಮ್ಮ ತಲೆಗೆ ಹತ್ತಲಿಲ್ಲವೆಂದರೆ ನಾನೇನು ಮಾಡುವುದು? ಹಾಗಾಗಿ ಆರೋಗ್ಯಕ್ಕೆ ಕೊಟ್ಟಿರುವುದು ಮೂರು ಪರ್‌ಸೆಂಟ್, ಸಮಾಜ ಕಲ್ಯಾಣಕ್ಕೆ ಕೊಟ್ಟಿರುವುದು ಮೂರು ಪರ್‌ಸೆಂಟ್. So, we are talking much about social justice. ಅದೇ ಮಂತ್ರ, ಎಲ್ಲಾ ರಾಜಕೀಯ ಪಕ್ಷಗಳ ಮಂತ್ರ ಏನೆಂದರೆ social justice, ಸಾಮಾಜಿಕ ನ್ಯಾಯ. ನನ್ನ ಬೇಸಿಕ್ ಪ್ರಶ್ನೆ ಏನೆಂದರೆ ಮಾನ್ಯ ಸಿದ್ಧರಾಮಯ್ಯನವರೇ, ಮೂರು ಪರ್‌ಸೆಂಟ್ ನಿಮ್ಮ ಬಜೆಟ್‌ನಲ್ಲಿ ತೆಗೆದು ಸಾಮಾಜಿಕ ನ್ಯಾಯವನ್ನು ಸಾಧನೆ ಮಾಡುವುದಕ್ಕೆ ಸಾಧ್ಯ ಇದೆ ಎಂದು ಹೇಳಿ ಯಾವ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳೂ ಕೂಡ ಒಪ್ಪುವುದಕ್ಕೆ ಸಾಧ್ಯವಿಲ್ಲ. ಸಾಮಾಜಿಕ ನ್ಯಾಯ ಎಂದರೆ ಬರೀ ಪಂಚಾಯಿತಿಗಳಿಗೆ ರಿಸರ್ವೇಷನ್ ಮಾಡಿಸುವುದಲ್ಲ, ಆರ್ಥಿಕವಾಗಿ, ಸದೃಢವಾಗಿ ಅವರ ಕಾಲಮೇಲೆ ಅವರು ನಿಂತುಕೊಂಡು ಸ್ವಾಭಿಮಾನದಿಂದ ಬದುಕತಕ್ಕಂಥ ಶಕ್ತಿಯನ್ನು ನೀವು ಮೊದಲು ಅವರಿಗೆ ಕೊಡಬೇಕು. ಅದು ನಿಜವಾದ ಸಮಾನತೆ ಬರತಕ್ಕದ್ದು. ಅದರ ಮೇಲೆ ಸೂಪರ್ ಸ್ಟ್ರಕ್ಚರ್ ಇದು. ಸೂಪರ್ ಫೀಚರ್ ಯಾವುದು? Social Justice-Unless you give an economic independence to a common man. ತುಳಿತಕ್ಕೆ ಒಳಗಾದವನಿಗೆ ನೀವು ಸ್ವಂತ ಕಾಲಮೇಲೆ ಸ್ವಾಭಿಮಾನದಿಂದ ಬದುಕತಕ್ಕ ಜೀವನದ ವ್ಯವಸ್ಥೆಯನ್ನು ಮಾಡಿಕೊಡದೆ ನೀವು periphery ಯಾಗಿ ಮೇಲುನೋಟಕ್ಕೆ ನಾನು ಅವರಿಗೆ ಸ್ಥಾನ ಕೊಟ್ಟೆ ಇವರಿಗೆ ಮೀಸಲಾತಿ ಕೊಟ್ಟೆ ಎಂದರೆ ಅದು ಸೋಷಿಯಲ್ ಜಸ್ಟೀಸ್ ಅಲ್ಲ. ಮೂರು ಪರ್‌ಸೆಂಟನ್ನು ನೀವು ಬಜೆಟ್‌ನಲ್ಲಿ ತೆಗೆದು ಸಾಮಾಜಿಕ ನ್ಯಾಯವನ್ನು ಕೊಡುತ್ತೇವೆಂದರೆ ಸಿದ್ಧರಾಮಯ್ಯನವರೇ, ಹೇಗೆ ಸಾಧ್ಯ ಎಂದು ನೀವು ನಾವು ಆಲೋಚನೆಯನ್ನು ಮಾಡೋಣ.

ಗೊಂದಲ

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೇ, ನೀವ್ಯಾಕೆ ಆ ಕಡೆ ತಿರುಗಿ ಮಾತನಾಡುತ್ತೀರಿ? ಈ ಕಡೆ ತಿರುಗಿಕೊಂಡು ಮಾತನಾಡಿ. ನೀವು ಮಾತನಾಡಿ. ನೀವ್ಯಾಕೆ ಅವರಿಗೆ ಉತ್ತರವನ್ನು ಕೊಡಬೇಕು. ಅವರು ಸಲಹೆಯನ್ನು ಕೊಡುತ್ತಿದ್ದಾರೆ. ನೀವು ಮಾತನಾಡುವಾಗ ಹೇಳಿ. ದಯಮಾಡಿ ತಿಳಿದುಕೊಳ್ಳಬೇಕು. ನೀವೆಲ್ಲಾ ಆಳುವ ಪಕ್ಷದ ಸದಸ್ಯರುಗಳು. ನಿಮಗೆ ಹೆಚ್ಚಿಗೆ ಸಮಾಧಾನ ಇರಬೇಕು. ದಯಮಾಡಿ ಕುಳಿತುಕೊಳ್ಳಿ, ನಿಮಗೆ ಸಮಾಧಾನ ಇರಬೇಕು. ನಿಮ್ಮ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಗ್ರಾಮೀಣಾಭಿವೃದ್ಧಿಗೆ ಎರಡು ಪರ್‌ಸೆಂಟ್. ನಮ್ಮ ಮಿತ್ರರಾದ ಡಿ.ಆರ್. ಪಾಟೀಲರು ಹೇಳಿದರು, ಏ೭೨, ವಿಕೇಂದ್ರೀಕರಣದಲ್ಲಿ ಇಡೀ ರಾಜ್ಯದಲ್ಲಿ

ನಾವು ಮುಂದಿದ್ದೇವೆ ಎಂದು. ಏನು ಸ್ವಾಮಿ ಮುಂಚೂಣಿಯಲ್ಲಿ? ಎರಡು ಪರ್‌ಸೆಂಟ್ ಕೋಟಾ. ದಯವಿಟ್ಟು ಹೇಳಿ. ಟೋಟಲ್ ಬಜೆಟ್‌ನಲ್ಲಿ...

ಗೊಂದಲ

ಅಧ್ಯಕ್ಷರು : ದಯಮಾಡಿ ಈ ಕಡೆ ಸದಸ್ಯರಲ್ಲಿ (ಆಳುವ ಪಕ್ಷದವರನ್ನು ಉದ್ದೇಶಿಸಿ) ಕೇಳಿಕೊಳ್ಳುವುದು ಏನೆಂದರೆ ಅವರು ಮಾತನಾಡಲಿ. ದಯಮಾಡಿ ಈ ಕಡೆಯ ಸದಸ್ಯರುಗಳಲ್ಲಿ ಒಂದು ನನ್ನ ಮನವಿ. ಈಗ ಅವರೇನು ಸಲಹೆಯನ್ನು ಕೊಡುತ್ತಿದ್ದಾರೆ, ಅವರೇನು ಹೇಳುತ್ತಿದ್ದಾರೆ, ಅದಕ್ಕೆ ನಿಮ್ಮ ಮಂತ್ರಿಗಳು ಬಜೆಟ್ ಮೇಲೆ ಉತ್ತರವನ್ನು ಕೊಡುತ್ತಾರೆ. ನೀವು ಈ ರೀತಿ ಇಂಟರ್‌ಫಿಯರ್ ಆದರೆ ಹೇಗೆ? ಇನ್ನೂ ಅನೇಕ ಜನ ಸದಸ್ಯರುಗಳು ಮಾತನಾಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಗ್ರಾಮೀಣಾಭಿವೃದ್ಧಿ ಆಗಬೇಕೆಂದು ಹೇಳತಕ್ಕ ಪ್ರಾಮಾಣಿಕ ಕಾಳಜಿ ಯಾವುದೇ ಸರ್ಕಾರಕ್ಕೆ ಇದ್ದರೆ ನಿಜವಾದ decentralization ಆಗಬೇಕೆಂದು ಇದ್ದರೆ ನಿಮ್ಮ ಸ್ಟೇಟ್ ಬಜೆಟ್‌ನಲ್ಲಿ ಟೋಟಲ್ ಅದರಲ್ಲಿ 50 ಪರ್‌ಸೆಂಟನ್ನು ಗ್ರಾಮೀಣಾಭಿವೃದ್ಧಿಗೆ ಕೊಡಬೇಕು. ರೂರಲ್ ಡೀಸೆಂಟ್ರಲೈಜೇಷನ್. ಆಗ ನಿಜವಾದ ಅರ್ಥ ಬರುತ್ತದೆ. ಅದನ್ನು ಮಾಡಿ. ಅದು ಇಲ್ಲದಿದ್ದರೆ ಎರಡು ಪರ್‌ಸೆಂಟ್ ಗ್ರಾಮಾಣಾಭಿವೃದ್ಧಿಯನ್ನು ಸಾಧಿಸುತ್ತೇನೆಂದು ಹೇಳಿದರೆ ಅದು ಖಂಡಿತವಾಗಿಯೂ ಕೂಡ ಸಾಧ್ಯವಿಲ್ಲ. ಇನ್ನೊಂದು ಬಹಳ ಗಹನವಾದ ವಿಚಾರ. ನೈರ್ಮಲ್ಯ ಎರಡು ಪರ್‌ಸೆಂಟ್. ಗ್ರಾಮೀಣ ನೈರ್ಮಲ್ಯ ನಿನ್ನೆ ಒಂದು ಸ್ವಾರಸ್ಯಕರವಾದ ಚರ್ಚೆ ನಡೆಯಿತು. ದೇಶಕ್ಕೆ ಸ್ವಾತಂತ್ರ್ಯ ಬಂದು 56 ವರ್ಷಗಳಾದರೂ ನಮ್ಮ ಹೆಣ್ಣುಮಕ್ಕಳು ಸಂಜೆವರೆಗೂ ಕಾಯಬೇಕು ಆಚೆ ಹೋಗಬೇಕೆಂದರೆ. ಯಾವುದೇ ನಾಗರೀಕ ಸಮಾಜ ತಲೆ ತಗ್ಗಿಸಬೇಕಾಗಿರತಕ್ಕಂಥ ವಿಚಾರ ಇದು. ಇದರ ಬಗ್ಗೆ ಭಾಷಣ ಮಾಡಬೇಕಾದ ಅವಶ್ಯಕತೆಯೇನೂ ಇಲ್ಲ. ಭಾಷಣಗಳು ಮಾಡಿ ಮಾಡಿ ಸಾಕಾಗಿದೆ. 56 ವರ್ಷ ಆಯಿತು. ಆದರೆ ಕಾಂಕ್ರೀಟ್ ಆಗಿ ನೀವು ಅದಕ್ಕೆ ಬೇಕಾಗಿರತಕ್ಕ ಹಣಕಾಸನ್ನು ಒದಗಿಸಿ. ಹಿಂದೆ ಮಾನ್ಯ ಎಂ.ಪಿ. ಪ್ರಕಾಶ್‌ರವರು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದಾಗ ಒಂದು ಕಾನೂನನ್ನು ತಂದರು. ಏನು? ಲೆಟ್ರಿನ್ ಇಲ್ಲದೇ ಇರತಕ್ಕವರಿಗೆ ಪಂಚಾಯಿತಿಯಲ್ಲಿ ಸ್ಪರ್ಧೆ ಮಾಡುವುದಕ್ಕೆ ಅನರ್ಹರಾಗುತ್ತಾರೆ ಎಂದು ಹೇಳತಕ್ಕಂಥದ್ದನ್ನು ತಂದಾಗ ನಾನು ಸ್ಪಷ್ಟವಾಗಿ ಹೇಳಿದೆ, ರೆಕಾರ್ಡ್ ತೆಗೆಸಿ ನೋಡಿ. ಇದು unrealistic.

11.40 ಎ.ಎಂ

ಸಾವಿರಾರು ಜನರಿಗೆ, ಲಕ್ಷಾಂತರ ಜನರಿಗೆ ಇವತ್ತು ದೇಶದಲ್ಲಿ ಮನೆ ಇಲ್ಲ. ಮನೆ ಕಟ್ಟಿಕೊಳ್ಳುವುದಕ್ಕೆ ಸೈಟು ಇಲ್ಲ. ಅಂತಹವರಿಗೆ ನೀವು ಲೆಟ್ರಿನ್ ಕಟ್ಟಿಕೊಳ್ಳದಿದ್ದರೆ ಅನರ್ಹರಾಗುತ್ತೀರಿ ಎಂದು ಹೇಳಿದರೆ it is most un-democratic. ಅದನ್ನು ಬಿಟ್ಟು ನಾವು ಇವತ್ತು ಮಾಡಬೇಕಾಗಿರತಕ್ಕದ್ದು ಏನು ಅಂದರೆ ನೀವು ಆ ನೈರ್ಮಲ್ಯವನ್ನೇ ನಿಜವಾಗಿ ಕೂಡ ಬಯಸುವುದಾದರೆ ಮೊದಲನೇ ಕೆಲಸ ಮಾಡಬೇಕಾಗಿರತಕ್ಕದ್ದು ನಿಮ್ಮ ಆಶ್ರಯ ಯೋಜನೆಯ ಕಲ್ಪನೆಯನ್ನೇ ಬದಲಾವಣೆ ಮಾಡಿ. ಅದನ್ನು 50 ಸಾವಿರ ರೂಗಳಿಗೆ ಏರಿಸಿ. ಒಂದು ಮನೆ, ಒಂದು ರೂಮ್, ಒಂದು ಹಾಲ್, ಒಂದು ಟಾಯ್ಲೆಟ್, ಬಾತ್ ರೂಂ ಕಡ್ಡಾಯ ಮಾಡಿ 50 ಸಾವಿರ ರೂ. ಮಾಡಿ. Then you are really going to achieve the thing. 50 ಸಾವಿರ ರೂನಲ್ಲಿ ಬೇಕಾದರೆ ಒಂದು ಐದಾರು ಸಾವಿರ ರೂ. ಕಡಿಮೆ ಮಾಡಿ ಬೇಕಾದರೆ ತೊಂದರೆ ಇಲ್ಲ.

ಆದರೆ ಅದನ್ನು ಮಾಡದೇ ನಾವು ಲಕ್ಷಾಂತರ ಜನಕ್ಕೆ ಮನೆ ಕಟ್ಟುತ್ತಿದ್ದೇವೆ ಎಂದರೆ ಹೇಗೆ? ಈ 20 ಸಾವಿರ ರೂಪಾಯಿ. ಆಗಿದ್ದೂ ಕೂಡ 1994ರಲ್ಲಿ, ಅದಕ್ಕೆ ಮೊದಲು 15 ಸಾವಿರ ರೂಪಾಯಿ ಇತ್ತು. ಮಾನ್ಯ ದೇವೇಗೌಡರ ಸರ್ಕಾರ ಬಂದಾಗ 20 ಸಾವಿರ ರೂಪಾಯಿ ಮಾಡಿದರು. ಆ 20 ಸಾವಿರ ರೂಪಾಯಿ ಮಾಡಿ ಎಂಟು ವರ್ಷವಾಯಿತು. ಈ ಫೈನಾನ್ಸಿಯಲ್ ಇನ್‌ಫ್ಲೇಷನ್ ರೇಟಿನಲ್ಲಿ 20 ಸಾವಿರ ರೂಪಾಯಿಗೆ ಯಾವ ರೀತಿ ಮನೆ ಕಟ್ಟುವುದಕ್ಕೆ ಆಗುತ್ತದೆ ಎಂಬುದನ್ನು ನಾವು ಇವತ್ತು ಆಲೋಚನೆ ಮಾಡಬೇಕು. ಹಾಗಾಗಿ ಇದು ಬರೇ ಕಣ್ಣೊರೆಸತಕ್ಕದ್ದಕ್ಕೆ ಬಜೆಟನ್ನು ಮಂಡಿಸುವುದು ಬೇಡ. ಈಗ ಏನಾಗಿದ್ದೆ ಅಂದರೆ ಹಿಂದಿನ ಸರ್ಕಾರದವರು ಗ್ರಾಮೀಣಾಭಿವೃದ್ಧಿಗೆ ಒಂದೊಂದು ಪಂಚಾಯಿತಿಗೆ 150 ಸಾವಿರ ರೂಪಾಯಿ ಕೊಡುತ್ತಿದ್ದರು. ನಾವು 175 ಸಾವಿರ ರೂಪಾಯಿ ಮಾಡಿದ್ದೇವೆ ಎಂದು ಇನ್ನೊಂದು ಸರ್ಕಾರ ಹೇಳುವುದು. ಇನ್ನೊಂದು ಸರ್ಕಾರ ಬಂದು ಅವರು 175 ಸಾವಿರ ರೂಪಾಯಿ ಮಾಡಿದ್ದರು, ನಾವು 200 ಸಾವಿರ ರೂಪಾಯಿ ಮಾಡುತ್ತಿದ್ದೇವೆಂದು ಹೇಳುವುದು. ಇಷ್ಟೇ ಸಾಧನೆ. ಇದರಿಂದ ಖಂಡಿತ ಸಾಧನೆ ಆಗುವುದಕ್ಕೆ ಸಾಧ್ಯತೆ ಇಲ್ಲ. ಆದರೆ ಒಂದು ಸತ್ಯ. ಎಲ್ಲವನ್ನೂ ಸರ್ಕಾರ ಒಂದೇ ಸಲ ಮಾಡಿಕೊಳ್ಳುವುದಕ್ಕೆ ಸಾಧ್ಯ ಇಲ್ಲ. ಹಾಗಾಗಿ ನೀವೇನು ಮಾಡಬೇಕು. ಪ್ರಾಯಾರಿಟಿ ತೆಗೆದುಕೊಳ್ಳಬೇಕು. Which is the priority? ಆ ಪ್ರಾಯಾರಿಟಿಯ ತೆಗೆದುಕೊಂಡು ನೀವು ಅಭಿವೃದ್ಧಿ ಮಾಡಬೇಕೇ ಹೊರತು ನಾವು ಎಲ್ಲರನ್ನೂ ಸ್ಯಾಟಿಸ್‌ಫೈ ಮಾಡಲಿಕ್ಕೆ ಎಲ್ಲರಿಗೂ ಒಂದಷ್ಟು ಹಂಚಿಕೊಂಡು ಹೋದರೆ ನೀವು ಕಡೆಗೆ finally, nowhere you will land. ಆ ರೀತಿಯಾದಂತಹ ಒಂದು ಪರಿಸ್ಥಿತಿ ನಿರ್ಮಾಣ ಆಗತಕ್ಕದ್ದನ್ನು ನಾವು ಇಲ್ಲಿ ನೋಡುತ್ತಿರತಕ್ಕದ್ದು. ಮತ್ತೆ ಕೃಷಿ ಬೆಳವಣಿಗೆ ಮತ್ತು ಕೈಗಾರಿಕೆ ಬೆಳವಣಿಗೆ ವಿಚಾರ. ಕೃಷಿ ಬೆಳವಣಿಗೆಗೆ ಇವತ್ತು ಮಾನ್ಯ ಸಿದ್ಧರಾಮಯ್ಯನವರ ಬಜೆಟ್‌ನಲ್ಲಿ 840 ಕೋಟಿ ರೂಪಾಯಿ ಕೊಟ್ಟಿದ್ದಾರೆ. ನಾನು ಆಗಲೇ ಹೇಳಿದೆ.

ಅಧ್ಯಕ್ಷರು : 30 ನಿಮಿಷ ಆಯಿತು, ಬೇಗ ಮುಗಿಸಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಆಗಲೇ ಹೇಳಿದೆ. 70 ಪರ್ಸೆಂಟ್ ಪಾಪ್ಯುಲೇಷನ್ ಪ್ರಶ್ನೆ ಇದೆ. ಇನ್ನು ಕೈಗಾರಿಕೆಗಳ ಪ್ರಶ್ನೆ ಬಂದಾಗ ಇಲ್ಲಿ ಬಜೆಟ್‌ನಲ್ಲಿ ಪ್ರಪೋಸಲ್ ಮಾಡಿರತಕ್ಕದ್ದು ಬರೇ ಸಣ್ಣ ಕೈಗಾರಿಕೆಗಳ ಬಗ್ಗೆ ಮಾತ್ರ. ಮೀಡಿಯಂ ಇಂಡಸ್ಟ್ರೀಸ್ ಬಗ್ಗೆ ಇಲ್ಲ, ಮೇಜರ್ ಇಂಡಸ್ಟ್ರೀಸ್ ಬಗ್ಗೆ ಇಲ್ಲ. ಮೇಜರ್ ಇಂಡಸ್ಟ್ರೀಸ್‌ಗೆ ಎಷ್ಟು ಬಂಡವಾಳ ಹಾಕಿದ್ದೀರಿ ಎಂದು ಇಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಶ್ರೀರಾಮರೆಡ್ಡಿಯವರು ಒಂದು ಪ್ರಮುಖ ರಾಜಕೀಯ ಪಕ್ಷವನ್ನು ಪ್ರತಿನಿಧಿಸುತ್ತಾರೆ. ಒಬ್ಬರೂ ಟ್ರೆಜರಿ ಬೆಂಚ್‌ನಲ್ಲಿ ಮಂತ್ರಿ ಇಲ್ಲದೇನೇ ಬಜೆಟ್ ಭಾಷಣ ಕೇಳುವಷ್ಟು ಹೀನ ಮಟ್ಟಕ್ಕೆ ಈ ಸರ್ಕಾರ ತೆಗೆದುಕೊಂಡು ಹೋದರೆ....

ಶ್ರೀ ಪಿ.ಟಿ. ಪರಮೇಶ್ವರ್ ನಾಯಕ್ : ಮಾನ್ಯ ಪ್ರಕಾಶ್ ಹುಕ್ಕೇರಿಯವರು ಕುಳಿತಿದ್ದಾರೆ.

ಗೊಂದಲ

ಅಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರೆ, ಮಂತ್ರಿಗಳು ಇದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಎಲ್ಲರನ್ನೂ ನಾನು ಕೇಳಿಲ್ಲ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಏನು ಎಲ್ಲದಕ್ಕೂ ಅಡ್ಡ ಹಾಕುತ್ತೀರಾ; ನೀವೇ ಗಂಡಸರಾ, ನಮಗೇನೂ ಇಲ್ಲ ಎಂತಲಾ?

ಮಾನ್ಯ ಸದಸ್ಯರು : ಮಾನ್ಯ ಪ್ರಕಾಶ್ ಹುಕ್ಕೇರಿ ಅವರು ಮಂತ್ರಿ ಅಲ್ಲವೇನು?

ಗೊಂದಲ

ಅಧ್ಯಕ್ಷರು : ನಾನು ಮುಂದಿನವರನ್ನು ಕರೆಯುತ್ತೇನೆ ಅಷ್ಟೇ. ಈ ತರಹ ನಡೆದುಕೊಂಡರೆ ಶ್ರೀರಾಮರೆಡ್ಡಿಯವರೇ, ನಾನು ಮುಂದಿನವರನ್ನು ಕರೆಯುತ್ತೇನೆ. ಯೀಲ್ಡ್ ಆಗಬೇಡಿ. ನೀವು ಯೀಲ್ಡ್ ಆಗಕೂಡದು.

ಶ್ರೀ ಜೆ.ಸಿ. ಮಾಧುಸ್ವಾಮಿ : ಎಲ್ಲದಕ್ಕೂ ಏಳುತ್ತಿದ್ದಾರೆ, ನಾವು ನಿಮ್ಮ ಹತ್ತಿರ ಮಾತನಾಡಕೂಡದಾ?

ಗೊಂದಲ

ಅಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರೇ, ದಯಮಾಡಿ ಕುಳಿತುಕೊಳ್ಳಿ. ಅವರು ಮಾತನಾಡಲಿ. ಇನ್ನೂ ಬಹಳ ಜನ ಇದ್ದಾರೆ.

ಗೊಂದಲ

ಅಧ್ಯಕ್ಷರು : ಅವರು ಹೊರಗಡೆ ಹೋಗಿದ್ದಾರೆ,–ನೇಚರ್ ಕಾಲ್‌ಗ ಅದಕ್ಕೂ ಬೇಡ ಎನ್ನುತ್ತೀರಾ? ದಯಮಾಡಿ ಕುಳಿತುಕೊಳ್ಳಿ. 30 ನಿಮಿಷ ಆಯಿತು, ಇನ್ನು ಹತ್ತು ನಿಮಿಷದೊಳಗೆ ಮುಗಿಸಬೇಕು.

ಮಾನ್ಯ ಸದಸ್ಯರು : ಮಂತ್ರಿಗಳು ಇಲ್ಲಾ ಎಂದು ಹೇಳುತ್ತೀರಲ್ಲಾ. ಸರ್ಕಾರದ ರೆಪ್ರೆಸೆಂಟಿಟೀವ್ಸ್ ಅನ್ನು ಕೂರಿಸಿಕೊಂಡು ಇಲ್ಲ ಎನ್ನುತ್ತೀರಾ; ನೀವು ಮಾತನಾಡತಕ್ಕದ್ದು ಎಷ್ಟು ಸಮಂಜಸ ಹೇಳಿ? ನಿಮ್ಮ ಎದುರಿಗೇ ಕೂರಿಸಿಕೊಂಡಿದ್ದೀರಿ.

ಅಧ್ಯಕ್ಷರು : ತಾವು ಮಾತನಾಡಿ. ದಯಮಾಡಿ ಬೇಗ ಮುಗಿಸಬೇಕು. ಬಹಳ ಜನ ಇದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಈಗ ರೀಸೋರ್ಸ್ ಮೊಬಿಲೈಸೇಷನ್ ಪ್ರಶ್ನೆಯಲ್ಲಿ ಇಂಡಸ್ಟ್ರಿಯಲ್ ಸೆಕ್ಟಾರ್‌ಗೆ, ಇಂಡಸ್ಟ್ರೀಯಲ್ ಸೆಕ್ಟಾರ್‌ನಲ್ಲಿ ಆಗುತ್ತಿರತಕ್ಕ ಬದಲಾವಣೆ ಬಗ್ಗೆ ರಾಜ್ಯ ಸರ್ಕಾರ ಕಣ್ಣು ತೆರೆದು ನೋಡಿಲ್ಲ. ಇವತ್ತು ಒಂದು ಕಡೆ ನೀವು ಬೆಂಗಳೂರನ್ನು it is the Silicon valley of Asia, ಎಂದು ಕರೆಯುತ್ತೀರಿ. ಅಂದರೆ ನೀವು ಕೈಗಾರಿಕೆಯಲ್ಲಿ ಅಷ್ಟು ಮುಂದುವರಿದಿದ್ದೀರಿ, ತಂತ್ರಜ್ಞಾನದಲ್ಲಿ ಅಷ್ಟು ಮುಂದುವರಿದಿದ್ದೀರಿ ಎಂದು ಹೇಳತಕ್ಕ ಟೈಟಲ್ ಅನ್ನು ತೆಗೆದುಕೊಂಡಿರತಕ್ಕ ನೀವು ಆ ಇಂಡಸ್ಟ್ರಿಯಲ್ ಗ್ರೋತ್ ಕರ್ನಾಟಕ ರಾಜ್ಯದಲ್ಲಿ ಎಷ್ಟು ಆಗಿದೆ? ಕೈಗಾರಿಕಾ ಬೆಳವಣಿಗೆ ಎಷ್ಟು ಆಗಿದೆ? ಆ ಕೈಗಾರಿಕಾ ಬೆಳವಣಿಗೆಯ ಮುಖಾಂತರ ಯಾವ ರೀತಿಯಾದಂತಹ ಸಂಪತ್ತು ಉತ್ಪತ್ತಿ ಆಗುತ್ತಿದೆ? ಯಾವ ರೀತಿಯಾದಂತಹ ಉದ್ಯೋಗಾವಕಾಶಗಳು ಸೃಷ್ಟಿ ಆಗುತ್ತಿದೆ ಎನ್ನತಕ್ಕ ಅಂಶವನ್ನು ಎಲ್ಲೂ ಕೂಡ ಪ್ರಸ್ತಾಪ ಮಾಡದೇ ನೀವು ಇವತ್ತು ಕೈಗಾರಿಕೆಗಳಲ್ಲಿ ಬೆಳವಣಿಗೆ ಆಗುತ್ತಿದೆ ಎನ್ನತಕ್ಕ ರೀತಿಯಲ್ಲಿ ಮಾತನಾಡುತ್ತಿದ್ದೀರಿ. ಈಗ ಐ.ಟಿ. ವಿಚಾರ ಉದಾಹರಣೆಗೆ ಹೇಳುವುದಾದರೆ it is Silicon valley of Asia. ನೀವು ಕಳೆದ ಐದು ವರ್ಷಗಳಲ್ಲಿ ಇನ್‌ಫರ್ಮೇಷನ್ ಟೆಕ್ನಾಲಜಿ ಇಂಜಿನಿಯರ್ಸ್‌ನ್ನು ಎಷ್ಟು ಜನರನ್ನು ಪ್ರೊಡ್ಯೂಸ್ ಮಾಡಿದಿರಿ? ಅದರಲ್ಲಿ ಇಂಡಿಯಾದಲ್ಲಿ ಎಷ್ಟು ಜನ ಇದ್ದಾರೆ? ಎಷ್ಟು ಜನ ಬೇರೆ ದೇಶಕ್ಕೆ ಹೋಗಿ ಬಿಟ್ಟಿದ್ದಾರೆ? ಇದಕ್ಕೆ ಯಾರು ಜವಾಬ್ದಾರರು? ಸರ್ಕಾರ ಬಜೆಟ್‌ನಲ್ಲಿ ಆಗಲೀ

ಯಾವುದೇ ಸಂದರ್ಭದಲ್ಲೂ ಕೂಡ ಆ ಪ್ರಶ್ನೆಯನ್ನು ಇಲ್ಲಿ ಪ್ರಸ್ತಾಪ ಮಾಡಿಲ್ಲ. ಉದ್ಯೋಗಗಳ ಬೆಳವಣಿಗೆ ಎಂದರೆ ಬರೇ ಐ.ಟಿ. ಸೆಕ್ಟಾರ್‌ನಲ್ಲಿ ಮಾತ್ರ ವೇನಾ ಉದ್ಯೋಗಾವಕಾಶ ಸೃಷ್ಟಿ ಆಗುವುದು? ನಿಮ್ಮ ಐ.ಟಿ. ಸೆಕ್ಟಾರ್‌ನಲ್ಲಿ ಉದ್ಯೋಗಾವಕಾಶಗಳನ್ನು 0.1 ಪರ್ಸೆಂಟ್ ಜನಕ್ಕೂ ಕೊಡುವುದಕ್ಕೆ ಆಗುವುದಿಲ್ಲ. ಮೇಜರ್ ಎಂಪ್ಲಾಯ್‌ಮೆಂಟ್ ಡಿಪೆಂಡ್ ಆಗಿರತಕ್ಕದ್ದು ಅಗ್ರಿಕಲ್ಚರಲ್ ಸೆಕ್ಟಾರ್‌ನಲ್ಲಿ. ಅಗ್ರಿಕಲ್ಚರಲ್ ಸೆಕ್ಟಾರ್‌ನಲ್ಲಿ ನಿರುದ್ಯೋಗಿಗಳು ಆಗಿರತಕ್ಕಂಥ ಅನಕ್ಷರಸ್ಥ ಬಡವರಿಗೆ ತಮ್ಮ ಕಾಲ ಮೇಲೆ ತಾವು ನಿಂತು ಜೀವನ ಮಾಡಲಿಕ್ಕೆ ಬೇಕಾಗಿರತಕ್ಕಂಥ ಉದ್ಯೋಗಾವಕಾಶಗಳನ್ನು ಸೃಷ್ಟಿ ಮಾಡುವುದಕ್ಕೆ ಯಾವುದೇ ರೀತಿಯಾದ ಕಾರ್ಯಕ್ರಮ ಇಲ್ಲ. ಹೋಗಲಿ ಇಂಡಸ್ಟ್ರೀಯಲ್ ಸೆಕ್ಟಾರ್ ಡೆವಲಪ್ ಆಗಿದೆ. ಓದಿದವರಿಗೆಲ್ಲಾ ಕೆಲಸ ಸಿಕ್ಕಿದೆ. ಓದುತ್ತಿರುವವರಿಗೆಲ್ಲಾ ಕೆಲಸ ಸಿಗುತ್ತದೆ ಎನ್ನತಕ್ಕ ಭರವಸೆ ಏನಾದರೂ ಇದೆಯಾ ಎಂದರೆ ಆ ಇಂಡಸ್ಟ್ರೀಸ್‌ನಲ್ಲೂ ಡೆವಲಪ್‌ಮೆಂಟ್ ಆಗಿಲ್ಲ. ಇವತ್ತು ಕರ್ನಾಟಕದಲ್ಲಿ ನಿರುದ್ಯೋಗದ ಪರ್ಸೆಂಟೇಜ್ ಪ್ರತಿ ವರ್ಷ 2.6 ಪರ್ಸೆಂಟ್ ಇನ್‌ಕ್ರೀಸ್ ಆಗುತ್ತಿದೆ. Unemployment problem, according to your own Government sources ಪ್ರತಿ ವರ್ಷ 2.6 ಪರ್ಸೆಂಟ್ ನಿರುದ್ಯೋಗಿಗಳ ಸಂಖ್ಯೆ ಕರ್ನಾಟಕದಲ್ಲಿ ಹೆಚ್ಚು ಆಗುತ್ತಿದೆ. ಅವರಿಗೆ ಉದ್ಯೋಗಾವಕಾಶಗಳನ್ನು ಕೊಡತಕ್ಕಂಥ ಯಾವುದೇ ಕಾರ್ಯಕ್ರಮವನ್ನು ಹಾಕದೇ ಕೈಗಾರಿಕಾ ಬೆಳವಣಿಗೆಗಳನ್ನು ಮಾಡಲಿಕ್ಕೆ ಹೊರಟಿದ್ದೀರಿ. ಮತ್ತೆ ಪಬ್ಲಿಕ್ ಸೆಕ್ಟಾರ್‌ನಲ್ಲಿ ಈ ವೂತ್ತು ಮೋಸ್ಟ್ ಪ್ರಾಫಿಟೆಡ್ ಕಾರ್ಖಾನೆಗಳು ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿ ಇದೆ. ಕೆಲವು ನಷ್ಟದಲ್ಲಿವೆ. ನಷ್ಟದಲ್ಲಿರತಕ್ಕದ್ದಕ್ಕೆ ಕಾರಣ ಯಾರು, ಅದನ್ನೆಲ್ಲಾ ನಾನು ಚರ್ಚೆ ಮಾಡಲಿಕ್ಕೆ ಹೋಗುವುದಿಲ್ಲ. ಕೆಲವು ಭರಿಸಲಾರದ ನಷ್ಟ ಆದಂತಹ ಕಾರ್ಖಾನೆಗಳನ್ನು ಬೇಕಾದರೆ ಇವರು ಮುಚ್ಚಲಿ. ಲಾಭದಲ್ಲಿ ಇರತಕ್ಕಂಥ ಕಾರ್ಖಾನೆಗಳನ್ನೂ ಮುಚ್ಚಿದಿರಿ. ಲಾಭದಲ್ಲಿರತಕ್ಕಂಥ ಕಾರ್ಖಾನೆಗಳನ್ನು ನೀವು ಮಾರಾಟ ಮಾಡಲಿಕ್ಕೆ ಹೊರಟಿದ್ದೀರಿ. ಅದಕ್ಕೇನು ಹೇಳುತ್ತೀರಿ? ಅದಕ್ಕೆ ಹಣ ಇಲ್ಲ ಎಂದು ಹೇಳುತ್ತೀರಿ. ಮೊನ್ನೆ ಸಿದ್ಧರಾಮಯ್ಯನವರು ಇಲ್ಲೇ ಸದನದಲ್ಲಿ ಒಂದು ಸ್ಟೇಟ್‌ಮೆಂಟನ್ನು ಕೊಟ್ಟಿದ್ದಾರೆ. ನಮ್ಮ ಎಕ್ಸೈಜ್ ಲಾಬಿಯಿಂದ 630 ಕೋಟಿ ರೂಪಾಯಿ ಸಾಲಬಾಕಿ ಇದೆ ಎಂದು ಹೇಳಿದ್ದಾರೆ. ಇದನ್ನು ವಸೂಲಿ ಮಾಡತಕ್ಕ ರಾಜಕೀಯ ಇಚ್ಛಾ ಶಕ್ತಿ ಏತಕ್ಕೆ ತೋರಿಸುವುದಿಲ್ಲ? ಎರಡನೆಯದಾಗಿ, ಸರ್ಕಾರದಲ್ಲಿ ಸೋರಿಕೆ ಆಗುತ್ತಿರುವುದನ್ನು ತಡೆಗಟ್ಟಲಿಕ್ಕೆ ಪ್ರಾಮಾಣಿಕವಾದಂತಹ ಪ್ರಯತ್ನ ಮಾಡಬೇಕು ಎಂದು ಹೇಳುತ್ತಿದ್ದೀರಿ. ಹಾಗಾದರೆ ಮೊನ್ನೆ ನಾನು ಹಾಗೂ ಮಾನ್ಯ ಮಾಧುಸ್ವಾಮಿಯವರು ಭೂ ಹಗರಣದ ವಿಚಾರದಲ್ಲಿ ಪ್ರಸ್ತಾಪ ಮಾಡಿದಾಗ ನಾನೊಂದು ವಿಷಯ ಪ್ರಸ್ತಾಪ ಮಾಡಿದೆ. ಯಾರೋ ಭೂ ಗಳ್ಳರಿಗೆ ಭೂಮಿ ಕೊಂಡು ಕೊಳ್ಳಲಿಕ್ಕೆ 585 ಕೋಟಿ ರೂಪಾಯಿ ಸ್ಟ್ಯಾಂಪ್ ಡ್ಯೂಟಿಯನ್ನು ನೀವು ಎಕ್ಸಂಪ್ಷನ್ ಮಾಡಿದ್ದೀರಿ. ಆ ದುಡ್ಡು ಸೋರಿಕೆ ಅಲ್ಲವಾ? ಆ ಸೋರಿಕೆಯನ್ನು ತಡೆಗಟ್ಟುವುದಕ್ಕೆ ನೀವೇನು ಕ್ರಮ ತೆಗೆದುಕೊಂಡಿದ್ದೀರಿ? ರಿಜಿಸ್ಟ್ರೇಷನ್ ಫೀಸ್ 150 ಕೋಟಿ ರೂಪಾಯಿಗಳನ್ನು ಅವರಿಗೆ ಮನ್ನಾ ಮಾಡಿದಿರಿ. 583 ಕೋಟಿ ರೂಪಾಯಿ ಸ್ಟ್ಯಾಂಪ್ ಡ್ಯೂಟಿ ಮನ್ನಾ ಮಾಡಿದಿರಿ, 630 ಕೋಟಿ ರೂಪಾಯಿ ಎಕ್ಸೈಜ್‌ನವರಿಗೆ ಬಾಕಿ ಕಟ್ಟದ ಹಾಗೆ ನೀವು ಮಾಡಿದಿರಿ. ಹೇಗೆ ಸೋರಿಕೆಯನ್ನು ತಡೆಗಟ್ಟುತೀರಿ? ಹೇಗೆ ಸರ್ಕಾರದ ಸೋರ್ಸ್‌ನ್ನು ನೀವು ಮೊಬಿಲೈಸ್ ಮಾಡುತ್ತೀರಿ? ಹೇಗೆ ಎಂಪ್ಲಾಯ್‌ಮೆಂಟ್ ಅಪರ್ಚುನಿಟೀಸ್ ಅನ್ನು ಕ್ರಿಯೇಟ್ ಮಾಡುತ್ತೀರಿ? ಹೇಗೆ ಇಂಡಸ್ಟ್ರಿಯಲ್ ಇನ್‌ಫ್ರಾಸ್ಟ್ರಕ್ಚರ್ ಅನ್ನು ಡೆವಲಪ್ ಮಾಡುತ್ತೀರಿ? Infrastructure development means it is not only

widening the roads, not only constructing the fly overs, ದಯವಿಟ್ಟು ಅರ್ಥ ಶಾಸ್ತ್ರ ಗೊತ್ತಿರತಕ್ಕವರು ಅರ್ಥ ಮಾಡಿಕೊಳ್ಳಬೇಕು. ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಅಂದರೆ ಬರೇ ಫ್ಲೈಓವರ್‌ಗಳನ್ನು ಕಟ್ಟುವುದು ಅಲ್ಲ. ಬರೇ ರೋಡುಗಳನ್ನು ವಿಸ್ತಾರ ಮಾಡತಕ್ಕದ್ದು ಅಲ್ಲ. ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಅಂದರೆ ನ್ಯಾಚುರಲ್ ರಿಸೋರ್ಸ್‌ಸನ್ನು ಡೆವಲಪ್ ಮಾಡುವುದಕ್ಕೆ ಹ್ಯೂಮನ್ ರಿಸೋರ್ಸನ್ನು ಡೆವಲಪ್ ಮಾಡಲಿಕ್ಕೆ ಬೇಕಾಗಿರತಕ್ಕಂಥ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಆಗಬೇಕು. ಇದು ನಂಬರ್ ಒನ್. ಹ್ಯೂಮನ್ ರಿಸೋರ್ಸಸ್‌ನ್ನು ಡೆವಲಪ್ ಮಾಡಲಿಕ್ಕೆ ಇನ್‌ಫ್ರಾಸ್ಟ್ರಕ್ಚರ್ ಏನು ಬೇಕು? ನಂಬರ್ ಒನ್ ಎಜ್ಯುಕೇಷನ್. ಕಂಪಲ್ಸರಿ ಎಜ್ಯುಕೇಷನ್ ಬೇಕು. ಪ್ರತಿಯೊಬ್ಬರಿಗೂ ಕೆಲಸ ಮತ್ತು ಉದ್ಯೋಗಾವಕಾಶವನ್ನು ಸೃಷ್ಟಿ ಮಾಡಬೇಕು. ಇದು ಹ್ಯೂಮನ್ ರಿಸೋರ್ಸ್‌ನ್ನು ಡೆವಲಪ್ ಮಾಡಲಿಕ್ಕೆ ಬೇಕಾಗಿರತಕ್ಕದ್ದು. ಆ ಕೆಲಸವನ್ನು ನಾವು ಮಾಡಿದ್ದೇವಾ? ಬಜೆಟ್‌ನಲ್ಲಿ ಯಾವುದಾದರೂ ಪ್ರಪೋಸಲ್ ಇದೆಯಾ? ಹೇಳಿ. ಇಲ್ಲ. ನಂಬರ್ (2) ನ್ಯಾಚುರಲ್ ರಿಸೋರ್ಸ್ ಡೆವಲಪ್‌ಮೆಂಟ್. ನಮ್ಮ ನೆಲ, ಜಲ, ನಮ್ಮ ಖನಿಜ ಸಂಪತ್ತು, ಭೂ ಸಂಪತ್ತು ಏನೇನು ಇದ್ದಾವೆ, ಅದನ್ನೆಲ್ಲಾ ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳತಕ್ಕಂಥ ಆ ನ್ಯಾಚುರಲ್ ರಿಸೋರ್ಸಸನ್ನು ಡೆವಲಪ್ ಮಾಡತಕ್ಕಂಥ ಕಾರ್ಯಕ್ರಮವನ್ನು ಬಜೆಟ್‌ನಲ್ಲಿ ಏನಾದರೂ ಹೇಳಿದ್ದೀರಾ? ಅನಗತ್ಯ ವೆಚ್ಚಗಳು ಮತ್ತು ವಿಳಂಬ. ಕಾಮಗಾರಿಗಳಿಂದ ವಿಳಂಬ ಆಗುತ್ತಿರತಕ್ಕಂಥ ವೆಚ್ಚ ಹೆಚ್ಚಾಗುತ್ತಿದೆ ಎಂದು ನೀವು ಹೇಳುತ್ತಿದ್ದೀರಿ. ಒಂದು ಕಡೆ ಹೇಳಿದ್ದೀರಿ, ಅದರಿಂದ ಕೂಡ ನಮ್ಮ ರಾಜ್ಯದಲ್ಲಿ ನಷ್ಟ ಆಗಿದೆ. ನಿಜ. ಉದಾಹರಣೆಗೆ ಆಲ್ಮಟ್ಟಿ ಡ್ಯಾಂ ವಿಚಾರ. ಎಷ್ಟನೇ ವರ್ಷದಲ್ಲಿ ಶಂಕು ಸ್ಥಾಪನೆ ಆಯಿತು? ಎಷ್ಟನೇ ವರ್ಷದಲ್ಲಿ ಪೂರ್ತಿ ಆಗುತ್ತಿದೆ? ಇಷ್ಟು ವರ್ಷಗಳ ಕಾಲ ಹೆಚ್ಚು ಆಗುತ್ತಾ ಹೋಗುತ್ತಿರುವುದರಿಂದ, ಹಣಕಾಸಿನ ವೆಚ್ಚ ಎಷ್ಟು ಜಾಸ್ತಿ ಆಗುತ್ತಾ ಹೋಗುತ್ತಿದೆ? ಈ ಹಿಂದೆ ಈ ರೀತಿ ನಿಧಾನವಾಗಿರುವುದಕ್ಕೆ ಕಾರಣವೇನು? ಸರ್ಕಾರ ಕಾರಣವೇ ಅಥವಾ ವಿರೋಧಪಕ್ಷಗಳು ಕಾರಣವೇ ಅಥವಾ ಜನರು ಕಾರಣರೇ? ಯಾರು ಕಾರಣ? ಎಷ್ಟು ಸಾವಿರ ಕೋಟಿ ರೂಪಾಯಿಗಳು ನಷ್ಟವಾಗಿದೆ? ಸಾವಿರ ಕೋಟಿ ರೂಪಾಯಿಗಳಂತಹ ಯೋಜನೆಗಳನ್ನು ರೂಪಿಸಿ ಅದನ್ನು time-boundನಲ್ಲಿ complete ಮಾಡದಿರುವುದರಿಂದ financial burden increase ಆಗುತ್ತಾ ಹೋಗುತ್ತಿರುವುದನ್ನು ಬಜೆಟ್‌ನಲ್ಲಿ ತಾವು ಪ್ರಸ್ತಾಪಿಸಿದ್ದೀರಿ. ನೀವು ಎಷ್ಟು ಬಡ್ಡಿ ಕೊಡಬೇಕೆಂಬುದು ಗೊತ್ತಿದೆಯೇ? 2004–05ನೇ ಸಾಲಿನಲ್ಲಿ 3,291 ಕೋಟಿ ರೂಪಾಯಿಗಳಷ್ಟು ಬಡ್ಡಿ ಕೊಟ್ಟಿದ್ದೀರಿ. ಇದನ್ನು ನೀವು ತಂದಿರುವ ಸಾಲಕ್ಕೆ ಬಡ್ಡಿ ಕೊಟ್ಟಿದ್ದೀರಿ. ಅದೇ ರೀತಿ 2003–04ನೇ ಸಾಲಿಗೆ 3,694.25 ಕೋಟಿ, 2004–05ನೇ ಸಾಲಿಗೆ ಅಂದಾಜು ಕೊಡಬಹುದಾದ, ಕೊಡಬೇಕಾಗಿ ಬರಬಹುದಾದ ಬಡ್ಡಿ ಹಣ 3,919.64 ಕೋಟಿ ರೂ.ಗಳು. It is only interest, Interest you have to pay. ಬಜೆಟ್‌ನಲ್ಲಿ 18 ಪರ್ಸೆಂಟ್ ಸಾಲ, ಇಂಟ್ರೆಸ್ಟ್ ಇಷ್ಟನ್ನೆಲ್ಲಾ ಇಟ್ಟುಕೊಂಡು surplus budget ಮಂಡಿಸಿದ್ದೀರಿ. ನಾವು financial stability ತರುತ್ತೇವೆಂದರೆ, ನಾವು ಯಾರನ್ನು ಮೋಸಗೊಳಿಸಲು ಹೋಗುತ್ತಿದ್ದೇವೆ? ಯಾರನ್ನು ಮೋಸ ಮಾಡಲು ಪ್ರಯತ್ನ ಮಾಡುತ್ತಿದ್ದೇವೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಆದರೆ, ಇನ್ನೊಂದು ಸ್ಟೇಜ್‌ನಲ್ಲಿ inter contradictory object ಇದರಲ್ಲಿ ಏನಿದೆಯೆಂದರೆ, ಒಂದು ಕಡೆ ಬಡ್ಡಿಗೆ ನಾವು ಇಷ್ಟೊಂದು ಪ್ರಮಾಣದಲ್ಲಿ ಹಣ ಜಮಾ ಮಾಡುತ್ತಿದ್ದೇವೆ. ಅಸಲಿಗೆ ಪ್ರತಿ ವರ್ಷ ಎಷ್ಟು ಜಮಾ ಮಾಡುತ್ತಿದ್ದೇವೆಂಬುದು ಗೊತ್ತೇ? ಅಸಲಿಗೆ ಪ್ರತಿ ವರ್ಷ ಎಷ್ಟು

ಜಮಾ ಮಾಡುತ್ತಿದ್ದೇವೆಂದರೆ, 2002–03ರಲ್ಲಿ 1,695.95 ಕೋಟಿ ರೂ, 2003–04ರಲ್ಲಿ 3,325.41 ಕೋಟಿ ರೂ. 2004–05ರಲ್ಲಿ ಅಸಲಿಗೆ ಅಂದಾಜು ನಾವು ಕೊಡುವುದು 1,987.5 ಕೋಟಿ ರೂಪಾಯಿಗಳು. ಅಂದರೆ, ಅಸಲಿಗಿಂತಲೂ ಬಡ್ಡಿ ಜಾಸ್ತಿ ಬರುತ್ತಿದೆ. Where to get it? ಬಡ್ಡಿ ಹೇಗೆ ತೀರಿಸುವುದು? ಬಡ್ಡಿ ತೀರಿಸಲು ಮತ್ತೆ ಸಾಲ ತೆಗೆದುಕೊಳ್ಳುವಂತಾದ್ದು! Your own budget says; ಸಾಲ ತೀರಿಸುವುದಕ್ಕಲ್ಲ, ಬಡ್ಡಿ ಕಟ್ಟುವುದಕ್ಕೆ ಸಂಬಳ, ಪಿಂಚಣಿ ಕೊಡುವುದಕ್ಕೆ ಸಾಲ ತರುತ್ತಿರುವ ಸರ್ಕಾರ surplus budget ಮಂಡಿಸುತ್ತದೆಂದರೆ ಹೇಗೆ ಸಾಧ್ಯವಾಗುತ್ತದೆ ಎಂಬುದನ್ನು ನಾವು ಆಲೋಚನೆ ಮಾಡಬೇಕಾಗಿದೆ. ಅದರ ಜೊತೆಗೆ ಇವೊತ್ತು ಸಾಲದ ಪ್ರಮಾಣ ಎಷ್ಟಿದೆ ಎಂಬುದನ್ನು ನೀವೇ ಹೇಳಿ ಒಪ್ಪಿಕೊಂಡಿದ್ದೀರಿ.

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೆ, ಈಗಾಗಲೇ 45 ನಿಮಿಷವಾಯಿತು. ಇನ್ನು ಐದು ನಿಮಿಷದೊಳಗೆ ನಿಮ್ಮ ಮಾತುಗಳನ್ನು ಮುಗಿಸಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇನ್ನು ಆರೋಗ್ಯದ ಪ್ರಶ್ನೆ. Health is most important. ಶಿಕ್ಷಣದ ನಂತರ human resources developmentಗೆ ಬೇಕಾಗಿರುವುದು primary health. ರಾಜ್ಯದಲ್ಲಿ ಹೊಸ ಆಸ್ಪತ್ರೆಗಳನ್ನು ಸ್ಥಾಪಿಸುತ್ತೇವೆಂದು ಬಜೆಟ್‌ನಲ್ಲಿ ಎಲ್ಲಾದರೂ ಒಂದು ಕಡೆ ಪ್ರಸ್ತಾಪವಿದೆಯೇ? ಇಲ್ಲ. ಎರಡನೆಯದಾಗಿ, ಹಲವಾರು ವರ್ಷಗಳ ಹಿಂದೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಸೇರಿ ಒಂದು ನಿಯಮ ರೂಪಿಸಿವೆ. ಏನೆಂದರೆ, ಹತ್ತು ಸಾವಿರ ಜನಸಂಖ್ಯೆಗೆ ಒಂದು primary health centre ಕೊಡಬೇಕು, ಇದು ನಾಗರಿಕ ಸರ್ಕಾರದ ಜವಾಬ್ದಾರಿ ಎಂದು ತಿಳಿಸಲಾಗಿದೆ. ಆ proportion ನಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲಿ 5 ಕೋಟಿ ಚಿಲ್ಲರೆ ಜನಸಂಖ್ಯೆ ಇದ್ದರೂ ನಮ್ಮಲ್ಲಿರುವ primary health centres ಎಷ್ಟಿವೆ? ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳು, ಕಾಂಪೌಂಡರ್‌ಗಳು ಮತ್ತು ಔಷಧಿಗಳಿಲ್ಲ. ಅದು ಬೇರೆ ಪ್ರಶ್ನೆ ಇದರ ಬಗ್ಗೆ demands ಮೇಲೆ ಚರ್ಚಿಸುವ ಸಂದರ್ಭದಲ್ಲಿ ಪ್ರಸ್ತಾಪಿಸೋಣ. ಎಷ್ಟು ಆಸ್ಪತ್ರೆಗಳಿವೆ? ಹೋಗಲಿ, ಬಜೆಟ್‌ನಲ್ಲಿ ಏನಾದರೂ ಹೊಸ ಆಸ್ಪತ್ರೆಗಳನ್ನು ಮಂಜೂರು ಮಾಡುವುದಕ್ಕೆ ನಾವು ಕ್ರಮ ಕೈಗೊಳ್ಳುತ್ತೇವೆ, ಗ್ರಾಮೀಣ ನೈರ್ಮಲ್ಯದ ಬಗ್ಗೆ ಬಹಳಷ್ಟು ಮಾತನಾಡುತ್ತಿದ್ದೇವೆಂದು ಹೇಳುವವರು ಬಜೆಟ್‌ನಲ್ಲಿ ಹೊಸ ಆಸ್ಪತ್ರೆಗಳನ್ನು ತೆರೆಯುತ್ತೇವೆ ಎನ್ನುವ ಪ್ರಸ್ತಾವನೆ ಎಲ್ಲೂ ಕೂಡ ಇಲ್ಲ. ಹಾಗಾದರೆ, ಸಾಮಾನ್ಯ ಜನರ ಆರೋಗ್ಯದ ಬಗ್ಗೆ ನಮಗೆ ಕಾಳಜಿ ಇದೆಯೇ? priority ಇದೆಯೇ? ಶ್ರೀಮಂತರಿಗೆ heart attack ಆದಾಗ ಚಿಕಿತ್ಸೆಗೆ ಅಪೋಲೊ ಆಸ್ಪತ್ರೆ ಇದೆ, ವೊಕಾರ್ಟ್ ಆಸ್ಪತ್ರೆ ಇದೆ. ಆದರೆ, ಇವೊತ್ತು ಬಡ ಕೃಷಿ ಕಾರ್ಮಿಕನಿಗೆ, ಮಧ್ಯಮ ವರ್ಗದ ರೈತನಿಗೇನಾದರೂ heart attack ಆದರೆ ಆತನನ್ನು ಯಾವ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು? ಹೃದಯ ಶಸ್ತ್ರಚಿಕಿತ್ಸೆಗೆ ಮೂರು ಲಕ್ಷ ರೂಪಾಯಿಗಳನ್ನು ತುಂಬಬೇಕು. ಜಯದೇವ ಹೃದ್ರೋಗ ಸಂಸ್ಥೆಗೆ ಹೋದರೆ 1 ಲಕ್ಷ 80 ಸಾವಿರ ಕೇಳುತ್ತಾರೆ. ಸರ್ಕಾರಿ ಆಸ್ಪತ್ರೆಯಲ್ಲಿ 1 ಲಕ್ಷ 80 ಸಾವಿರ ರೂ ಕೇಳಿದರೆ, ಇನ್ನು ಪ್ರೈವೇಟ್‌ನವರು ಹೆಚ್ಚು ಹಣ ಕೇಳದೆ ಇರುತ್ತಾರೆಯೇ? ಹಾಗಾದರೆ, ಜಯದೇವ ಹೃದ್ರೋಗ ಸಂಸ್ಥೆ ಯಾರಿಗೋಸ್ಕರ ಇದೆ? ಹೇಳಿ. ಹಣವಿರುವವರಿಗೆ ಅಪೋಲೊ, ಇನ್ನಿತರ ಎಲ್ಲಾ ಆಸ್ಪತ್ರೆಗಳೂ ಇವೆ. ಬಡವರಿಗೆ ಹೃದಯ ರೋಗ ಬಂದರೆ ಅವರು ಎಲ್ಲಿಗೆ ಹೋಗಬೇಕು? ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಯಾಗಬೇಕೆಂಬ ಬಗ್ಗೆ

ನಮ್ಮ ಅಭ್ಯಂತರವೇನೂ ಇಲ್ಲ. ನನ್ನ ಲೆಕ್ಕದಲ್ಲಿ ಅದಕ್ಕಿಂತಲೂ most important ಎಂದರೆ, ಸರ್ಕಾರಿ ಸ್ವಾಮ್ಯದಲ್ಲಿ ನಾಲ್ಕು ಹೃದ್ರೋಗ ಆಸ್ಪತ್ರೆಗಳು ಸ್ಥಾಪನೆಯಾಗಬೇಕಾಗುತ್ತದೆ. ಏಕೆಂದರೆ, ಉತ್ತರ ಕರ್ನಾಟಕದಲ್ಲಿರುವವರಿಗೆ ಹೃದ್ರೋಗ ಬಂದರೆ ಬೆಂಗಳೂರಿಗೆ flightನಲ್ಲಿ ಬರಲು ಆ ಜನರಿಗೆ ವ್ಯವಸ್ಥೆ ಇಲ್ಲ. ಗುಲ್ಬರ್ಗ, ಬೀದರ್, ಬಿಜಾಪುರದ ಆ ಭಾಗದಲ್ಲಿರುವವರಿಗೆ heart attack ಆದಾಗ ಯಾವ ಆಸ್ಪತ್ರೆಗೆ ಕರೆದುಕೊಂಡು ಬರುತ್ತಾರೆ? ಹುಬ್ಬಳ್ಳಿಯಲ್ಲಿರುವ KIMSಗೆ ಕರೆದುಕೊಂಡು ಬರಬೇಕು, ಇಲ್ಲದಿದ್ದರೆ ಹೈದರಾಬಾದ್‌ಗೆ ಹೋಗಬೇಕಾಗುತ್ತದೆ. ಇದು ಯಾವ ಕೃಷಿ ಕಾರ್ಮಿಕರಿಗೆ ಸಾಧ್ಯವಾಗುತ್ತದೆ? Heart attack ಎಂದರೆ ಆತ ಸಾಯಬಹುದು. ಆತನ ಬಗ್ಗೆ ನಮಗ್ಯಾರಿಗೂ ಕಾಳಜಿ, ಜವಾಬ್ದಾರಿ ಇಲ್ಲ. ಜಯದೇವ ಹೃದ್ರೋಗ ಸಂಸ್ಥೆಯನ್ನೂ ಕೂಡ ನಾವು ಆ ಸ್ಥಿತಿಗೆ ತಂದಿಟ್ಟಿದ್ದೇವೆ. ಇವೊತ್ತು ಅದನ್ನು commercialise ಮಾಡಿದ್ದೇವೆ. ಹಾಗಾದರೆ, ಬಡವರಿಗೆ ಕಡಿಮೆ ದರದಲ್ಲಿ ಆರೋಗ್ಯ ಸುಧಾರಿಸಲು ನಾವು ಇವೊತ್ತು ಏನು ವ್ಯವಸ್ಥೆ ಮಾಡಿದ್ದೇವೆ?

ಇನ್ನು ಶಿಕ್ಷಣದ ಕುರಿತು ಮಾತನಾಡುವುದೇ ಬೇಡ! ಈಗಾಗಲೇ ಇದರ ಬಗ್ಗೆ ಸಾಕಷ್ಟು ಪ್ರಸ್ತಾಪಿಸಲಾಗಿದೆ. ಈ ಸದನದಲ್ಲಿ ನಾನು ಸಾಕಷ್ಟು ಸಲ ಮಾತನಾಡಿದ್ದೇನೆ. ಇವೊತ್ತು ಹಣವಿರುವವರಿಗೆ ಮಾತ್ರವಷ್ಟೆ ವಿದ್ಯಾಭ್ಯಾಸ. ಹಣವಿಲ್ಲದಿರುವವರಿಗೆ ವಿದ್ಯಾಭ್ಯಾಸವಿಲ್ಲ. Fees ಕಟ್ಟಲು ಶಕ್ತಿ ಇಲ್ಲದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಜನರನ್ನು ಇಂದು ನಾವು ನೋಡುತ್ತಿದ್ದೇವೆ. ಈ ಸದನ ಪ್ರಾರಂಭವಾದ ಬಳಿಕ ಒಂದು ಘಟನೆ ಜರುಗಿತು. ಪ್ರಾಮಾಣಿಕವಾಗಿರುವ ಸರ್ಕಾರಿ ನೌಕರರೂ ಕೂಡ ಉತ್ತಮವಾದ ಶಾಲೆಗೆ ತಮ್ಮ ಮಕ್ಕಳನ್ನು ಸೇರಿಸಿ ವಿದ್ಯಾಭ್ಯಾಸ ಕೊಡಲು ಸಾಧ್ಯವಾಗುತ್ತಿಲ್ಲ. ಆ ಸ್ಥಿತಿಗೆ ನಾವು ಶಿಕ್ಷಣವನ್ನು ತಂದಿಟ್ಟಿದ್ದೇವೆ. ನೀವು ಯಾರಿಗೆ ಶಿಕ್ಷಣ ಕೊಡುತ್ತಿದ್ದೀರಿ? ಯಾರಿಗೆ ಆರೋಗ್ಯದ ವ್ಯವಸ್ಥೆ ಕಲ್ಪಿಸಿಕೊಡುತ್ತಿದ್ದೀರಿ? ಬಜೆಟ್‌ನಲ್ಲಿ ಇದಕ್ಕೆ ಸಂಬಂಧಿಸಿದಂತೆ ಯಾವ ಪ್ರಪೋಸಲ್ ಇದೆ? ಅಕ್ಷರ ದಾಸೋಹದ ಮಧ್ಯಾಹ್ನದ ಊಟದ ಯೋಜನೆಯನ್ನು ಹತ್ತನೇ ತರಗತಿವರೆಗೆ ವಿಸ್ತರಿಸಲಾಗುವುದೆಂದು ಹೇಳಿದ್ದೀರಿ. ಅದಕ್ಕಿಂತಲೂ most important ಉಚಿತವಾಗಿ ಶಿಕ್ಷಣವನ್ನು ಎಲ್ಲಾ ವಿಭಾಗಗಳವರು ಪಡೆಯುವಂಥ ವ್ಯವಸ್ಥೆಯನ್ನು ಏನಾದರೂ ನೀವು ಕಲ್ಪಿಸಿದ್ದೀರಾ? CET Fee structure ಬಗ್ಗೆ ಏನು ವಿದ್ಯಮಾನ ಜರುಗುತ್ತಿದೆ ಎಂಬುದು ನಿಮಗೆ ಗೊತ್ತಿದೆ. ಹಾಗಾಗಿ, ಇವೊತ್ತು ಮಾನವ ಸಂಪನ್ಮೂಲವನ್ನು ಅಭಿವೃದ್ಧಿಗೊಳಿಸುವ, ಪ್ರಕೃತಿ ಸಂಪತ್ತನ್ನು ಅಭಿವೃದ್ಧಿಗೊಳಿಸುವ ಕೆಲಸದಲ್ಲಿ ನಾವು ಎಲ್ಲಿ ನಿಂತಿದ್ದೇವೆ? ಉದಾಹರಣೆಗೆ, ಇನ್ನೊಂದು contrast ಎಂದರೆ, 3200 ಟಿಎಂಸಿಯಷ್ಟು ನೀರು ಅರಬ್ಬಿ ಸಮುದ್ರಕ್ಕೆ ವೇಸ್ಟ್ ಆಗಿ ಹರಿದು ಹೋಗುತ್ತಿದೆ. ಇದಕ್ಕೆ ಯಾವುದೇ ರಾಜ್ಯಗಳ ತಕರಾರಿಲ್ಲ. ತಕರಾರು ಮಾಡುವ ಅವಶ್ಯಕತೆಯೂ ಇಲ್ಲ. Almost 3200 ಟಿಎಂಸಿ ನೀರು ವೇಸ್ಟ್ ಆಗಿ ಅರಬ್ಬಿ ಸಮುದ್ರಕ್ಕೆ ಹರಿದು ಹೋಗುತ್ತಿದೆ. ಹೀಗೆ ವೇಸ್ಟ್ ಆಗಿ ಹರಿದು ಹೋಗುತ್ತಿರುವ ನೀರನ್ನು ಉಪಯೋಗಿಸಿಕೊಳ್ಳುವ ಕೆಲಸಕ್ಕೆ ನಾವೇನಾದರೂ ಕೈ ಹಾಕಿದ್ದೇವೆಯೇ? ಆ ನೀರನ್ನು ಉಪಯೋಗಿಸಿಕೊಳ್ಳುವ ಮೂಲಕ ಈ ರಾಜ್ಯವನ್ನು ಅಭಿವೃದ್ಧಿಪಡಿಸುವುದಕ್ಕೆ ನಾವೇನಾದರೂ ಪ್ರಯತ್ನ ಮಾಡಿದ್ದೇವೆಯೇ? ಅದರ ಬದಲು ಕಾವೇರಿ, ಕೃಷ್ಣ, ಆಂಧ್ರಪ್ರದೇಶ, ತಮಿಳುನಾಡು, ತಕರಾರು, ಗಲಾಟೆಗಳ ಬಗ್ಗೆ ರಾಜಕೀಯ ಬೆಳೆಸುವಂಥಾದ್ದು ನಡೆದಿದೆ. ಕೃಷ್ಣಾದಲ್ಲಿರುವ 184 ಟಿಎಂಸಿ ಮತ್ತು ಕಾವೇರಿಯಲ್ಲಿರುವ 3200 ಟಿಎಂಸಿಯಷ್ಟು ನೀರು ವೇಸ್ಟ್ ಆಗಿ ಪಶ್ಚಿಮ ಘಟ್ಟಗಳ ಮೂಲಕ ಹರಿದು ಅರಬ್ಬಿ ಸಮುದ್ರ ಸೇರುತ್ತಿದೆ! ಈ ರೀತಿ ವೇಸ್ಟ್ ಆಗಿ ಸಮುದ್ರಕ್ಕೆ ಹರಿದು ಹೋಗುತ್ತಿರುವ

ನೀರನ್ನು ಉಪಯೋಗಿಸಿಕೊಳ್ಳುವುಸಕ್ಕೆ ನಮ್ಮಲ್ಲಿ ಯಾವುದೇ ಯೋಜನೆ ಇಲ್ಲ. ಯಾವುದೇ ಪ್ರಯತ್ನ ಮಾಡಲಿಲ್ಲ. ಹೇಗೆ ನೀವು natural resources ಅನ್ನು develop ಮಾಡುತ್ತೀರಿ? ಹೇಗೆ ಕೃಷಿ ಅಭಿವೃದ್ಧಿ ಮಾಡುತ್ತೀರಿ? ಇವೊತ್ತು ಕೃಷ್ಣಾ ನದಿಯಿಂದ ನಮ್ಮ ಪಾಲಿನ 734 ಟಿಎಂಸಿಯಷ್ಟು ನೀರೇನಿದೆ, ಅದನ್ನು ಪೂರ್ತಿಯಾಗಿ ಉಪಯೋಗಿಸಿಕೊಳ್ಳುವುದಕ್ಕೆ ಇವೊತ್ತಿನವರೆಗೆ ನಮಗೆ ಸಾಧ್ಯವಾಗಲಿಲ್ಲ. 'ಎ' ಸ್ಕೀಮ್ ಮುಗಿದು ಹೋಯಿತು. ಈಗ 'ಬಿ' ಸ್ಕೀಮ್ ಪ್ರಾರಂಭವಾಗಬೇಕಿದೆ. Cauvery basin ನಲ್ಲಿ ನಮಗೆ ಹಿಂದೆ ಕೊಟ್ಟಂಥ ಕೃಷಿ ಭೂಮಿಯನ್ನು extend ಮಾಡುವುದಕ್ಕೆ ಇವೊತ್ತಿನವರೆಗೆ ನಮಗೆ ಸಾಧ್ಯವಾಗಲಿಲ್ಲ. ಅದಕ್ಕೋಸ್ಕರ, ತಮಿಳುನಾಡಿನವರಿಗೂ ನಮಗೂ ಯಾವಾಗಲೂ ತಕರಾರು ಏಕೆ ಬರುತ್ತದೆಂದರೆ, ಹಿಂದೆ ಆದ ಅಗ್ರಿಮೆಂಟ್ ರೀತ್ಯ ಇಷ್ಟೇ ಮಾಡಬೇಕೆಂದು ತಿಳಿಸಲಾಗಿದೆ. ಅದಕ್ಕೋಸ್ಕರವೇ ನಮಗೆ ಇವೊತ್ತಿನವರೆಗೂ ಕೃಷಿ ಭೂಮಿಯನ್ನು ವಿಸ್ತರಿಸಲು ಸಾಧ್ಯವಾಗಿರುವುದಿಲ್ಲ. ಮತ್ತೆ ಹೇಗೆ natural resources ಅನ್ನು develop ಮಾಡುತ್ತೀರಿ? ಕೃಷಿ ಭೂಮಿಯನ್ನು ಅಭಿವೃದ್ಧಿಪಡಿಸುತ್ತೀರಿ? ಇದರ ಬಗ್ಗೆ ಬಜೆಟ್‌ನಲ್ಲಿ ಏನಾದರೂ ಪ್ರಸ್ತಾಪವಿದೆಯೇ? ನೀರಾವರಿಗೆ ಏಳು ಪರ್ಸೆಂಟ್ ಕೊಟ್ಟಿದ್ದೀರಿ. ಇದರಲ್ಲಿ ಏನು ಮಾಡುವುದಕ್ಕಾಗುತ್ತದೆ? ಅದಕ್ಕಿಂತಲೂ most important, minor irrigation. ಈಗ major irrigationನಲ್ಲಿ irrigate ಆಗುತ್ತಿರುವ ಭೂಮಿ ಕೇವಲ 28 ಪರ್ಸೆಂಟ್. ಮೈನರ್ ಇರಿಗೇಶನ್‌ನಲ್ಲಿ 68 ಪರ್ಸೆಂಟ್. ಇವೊತ್ತು ಮೈನರ್ ಇರಿಗೇಶನ್‌ಗೆ ಎಷ್ಟು ಪ್ರಾಧಾನ್ಯತೆ ಸಿಗುತ್ತಿದೆ? ಡಾ॥ ಡಿ.ಎಂ. ನಂಜುಂಡಪ್ಪನವರ ವರದಿ ಕುರಿತು ಎಲ್ಲರೂ ಮಾತನಾಡುತ್ತಾರೆ, ನಿಜ. ಅವರು ಹಿಂದುಳಿದ ಪ್ರದೇಶಗಳ ಕುರಿತು ವರದಿ ಕೊಟ್ಟಿದ್ದಾರೆ. ಅದರಲ್ಲಿ ಕೇವಲ ಉತ್ತರ ಕರ್ನಾಟಕದ ಬಗ್ಗೆ ಮಾತ್ರ ಪ್ರಸ್ತಾಪವಿಲ್ಲ. ವರದಿಯಲ್ಲಿ ನಮ್ಮ ಕೋಲಾರ ಜಿಲ್ಲೆಯೂ ಸೇರಿದೆ. ಆದರೆ, ಕೋಲಾರ ಜಿಲ್ಲೆಗೆ ಏನಾದರೂ special package ಮಾಡಬೇಕೆಂಬ ಪ್ರಸ್ತಾವ ಸರ್ಕಾರದ ಮುಂದಿಲ್ಲ. ಕೋಲಾರವೂ ಸಹ ಒಂದು ಹಿಂದುಳಿದ ಪ್ರದೇಶವೆಂದು ಡಾ: ನಂಜುಂಡಪ್ಪನವರು ವರದಿ ಸಲ್ಲಿಸಿದ್ದಾರೆ. ಉತ್ತರ ಕರ್ನಾಟಕಕ್ಕೆ ಕೊಡಬಾರದೆಂದು ನಾವು ಹೇಳುತ್ತಿಲ್ಲ. ಉತ್ತರ ಕರ್ನಾಟಕ ಹೇಗೆ ಹಿಂದುಳಿದಿದೆಯೋ ಅದೇ ರೀತಿ ಬೇರೆ ಜಿಲ್ಲೆಗಳೂ ಹಿಂದುಳಿದಿವೆ. ಈಗ ಚಾಮರಾಜನಗರಕ್ಕೆ ಕೊಟ್ಟಿದ್ದಾರೆ. ಆ ಎಲ್ಲಾ ಪ್ರದೇಶಗಳ ಅಭಿವೃದ್ಧಿಯ ಬಗ್ಗೆ ಸಮಾನವಾದ ಒಂದು ದೃಷ್ಟಿ ಸರ್ಕಾರಕ್ಕೆ ಇಲ್ಲದೇ ಯಾವುದೋ ಒಂದು ಕಡೆ ಮಾತ್ರ ನಾವು ಗಮನ ಕೊಡುವುದಾದರೆ ಕರ್ನಾಟಕ ರಾಜ್ಯವನ್ನು ಸಮಗ್ರವಾಗಿ ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಿದೆಯೇ ಎನ್ನುವ ಅಂಶವನ್ನು ನಾವು ಇವತ್ತು ನೋಡಬೇಕಾಗುತ್ತದೆ.

ಅಧ್ಯಕ್ಷರು : ಮಾನ್ಯ ರೆಡ್ಡಿಯವರೇ, ಬೇಗ ಮುಗಿಸಿ. ನಿಮಗೆ 30 ನಿಮಿಷ ಇದೆ. ಇಂಡಿಪೆಂಡೆಂಟ್ಸ್‌ಗೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಇಂಡಿಪೆಂಡೆಂಟ್ ಅಲ್ಲ.

ಅಧ್ಯಕ್ಷರು : ಇಂಡಿಪೆಂಡೆಂಟ್ ಅಂದರೆ.....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಹಾಗಾಗಿ ಇವತ್ತು ನಂಬರ್ ಒನ್, ಸ್ಟೇಟ್ ರೆವಿನ್ಯೂವನ್ನು ಇನ್‌ಕ್ರೀಸ್ ಮಾಡತಕ್ಕಂಥ ಪ್ರಯತ್ನವನ್ನು ಸರ್ಕಾರ ಮಾಡಬೇಕು. ಏಕೆಂದರೆ ಕಂಟಿನ್ಯೂಯಸ್ ಆಗಿ ರೆವಿನ್ಯೂ ಡೆಫಿಸಿಟ್ ಆಗುತ್ತಿದೆ. ರೆವಿನ್ಯೂ ಡೆಫಿಸಿಟ್ ಮೋಸ್ಟ್ ಡೇಂಜರಸ್ ಫಾರ್ ಎನಿ ಸ್ಟೇಟ್. ಅದರಷ್ಟು ಅಪಾಯ ಬೇರೆ ಯಾವುದೂ ಇಲ್ಲ. ರೆವಿನ್ಯೂ ಡೆಫಿಸಿಟ್

ಆಗುವಂಥಾದ್ದು, ಆ ರೆವಿನ್ಯೂ ಡೆಫಿಸಿಟನ್ನು ತಪ್ಪಿಸಲಿಕ್ಕೆ ಬೇಕಾಗಿರತಕ್ಕಂಥ ಕ್ರಮವನ್ನು ಯಾವ ಸರ್ಕಾರವೂ ಕೂಡ ಇದುವರೆಗೂ ಪರಿಣಾಮಕಾರಿಯಾಗಿ ತೆಗೆದುಕೊಂಡಿಲ್ಲ. ಯಾವ ಸರ್ಕಾರ ರೆವಿನ್ಯೂ ಡೆಫಿಸಿಟ್‌ನ್ನು ಫೇಸ್ ಮಾಡುತ್ತೋ ಆ ಸರ್ಕಾರ ಖಂಡಿತವಾಗಿ ದಿವಾಳಿಯಾಗದೆ ಬೇರೆ ಏನೂ ಆಗುವುದಕ್ಕೆ ಸಾಧ್ಯವಿಲ್ಲ. ಆ ರೆವಿನ್ಯೂ ಡೆಫಿಸಿಟ್‌ನ್ನು ಕಡಿಮೆ ಮಾಡಬೇಕು ಅಂತ ಆದರೆ ನ್ಯಾಚುರಲ್ ರಿಸೋರ್ಸ್ ಮತ್ತು ಹ್ಯೂಮನ್ ರಿಸೋರ್ಸ್ ಡೆವಲಪ್ ಮಾಡಬೇಕು. ಟ್ಯಾಕ್ಸ್ ಬೇಸ್ ವೈಡನ್ ಮಾಡಬೇಕು ಪ್ರರ್ಚೇಜಿಂಗ್ ಕೆಪ್ಯಾಸಿಟಿ ಆಫ್ ಕಾಮನ್ ಮ್ಯಾನ್ ಮಸ್ಟ್ ಬಿ ಇನ್‌ಕ್ರೀಸ್ಡ್, ಇಲ್ಲದಿದ್ದರೆ ನಿಮ್ಮ ರೆವಿನ್ಯೂ ಕೊರತೆಯನ್ನು ತುಂಬಿಸಲಿಕ್ಕೆ ಸಾಧ್ಯವೇ ಇಲ್ಲ. ನಾವು ಬರೀ ಅಂಕಿಅಂಶ ಕೊಡುತ್ತಿದ್ದೇವೆ. ಆ ರೀತಿಯಲ್ಲಿ ಮಾನ್ಯ ಅಧ್ಯಕ್ಷರೇ, ಇವತ್ತು ರಾಜ್ಯದಲ್ಲಿ ಯಾವುದೇ ಸರ್ಕಾರವಿರಲಿ ಆ ಸರ್ಕಾರ ಬಜೆಟ್ ಅನ್ನು ಪ್ಲೇಸ್ ಮಾಡಬೇಕಾದಂತಹ ವಿಧಾನ. ಆದರೆ ಇವತ್ತು ನಾವು ಸಾಲಗಳ ಮೇಲೆ ಆಧಾರಬಿದ್ದಿರತಕ್ಕಂಥಾದ್ದು, ಇನ್ನೊಂದು ಕೇಂದ್ರ ಸರ್ಕಾರದ ಟ್ಯಾಕ್ಸೇಶನ್ ಮೇಲೆ, ಆದರೆ ಹಿಂದೆ ಮಾನ್ಯ ಸಿದ್ಧರಾಮಯ್ಯನವರು ಹಣಕಾಸಿನ ಮಂತ್ರಿಯಾಗಿದ್ದಾಗಲೇ ಹೇಳಿದೆವು ನಮಗೆ ಮಿನಿಮಮ್ 33 ಪರ್ಸೆಂಟ್ ಟ್ಯಾಕ್ಸೇಶನ್‌ನಲ್ಲಿ ಷೇರು ಸೇರಬೇಕು ಎಂದು ನೀವು ಒತ್ತಾಯ ಮಾಡಬೇಕು ಕೇಂದ್ರ ಸರ್ಕಾರದ ಮೇಲೆ ಹೋರಾಟ ಮಾಡಬೇಕು ಅಂತ. ಆದರೆ ನಾವು ಬರೀ ಮಾತಿನಲ್ಲಿ ಹೇಳುತ್ತೇವೆಯೇ ಹೊರತು ನಮಗೆ ಸೆಂಟ್ರಲ್ ಗೌರ್ನಮೆಂಟ್‌ನಿಂದ ಬರಬೇಕಾದ ಟ್ಯಾಕ್ಸ್ ಜಾಸ್ತಿ ಬರಬೇಕೆಂದು ಬರೀ ಮಾತಿನಲ್ಲಿ ಹೇಳುತ್ತೇವೆಯೇ ಹೊರತು ಕಾರ್ಯಗತ ಮಾಡಲಿಕ್ಕೆ ಏನೂ ಕ್ರಮ ತೆಗೆದುಕೊಂಡಿಲ್ಲ. ಹಾಗಾಗಿ ಟ್ಯಾಕ್ಸ್ ಕೊಡತಕ್ಕಂಥಾದ್ದನ್ನು ಸೆಂಟ್ರಲ್ ಗೌರ್ನಮೆಂಟ್‌ನವರು ತೆಗೆದುಕೊಂಡು ಹೋಗುತ್ತಾರೆ. ನಮಗೆ ಇಲ್ಲಿ ಏನೂ ಉಳಿಯುತ್ತಿಲ್ಲ. ನಾವು ಬೇಕಾದರೆ ಬೀದಿಗೆ ಇಳಿಯುವುದಕ್ಕೆ ತಯಾರಾಗಿದ್ದೇವೆ. ನಮಗೆ ನಮ್ಮ ಶೇರು ಇನ್‌ಕ್ರೀಜ್ ಆಗಬೇಕು. ಪ್ಲಾನ್ ಎಕ್ಸ್‌ಪೆಂಡೇಚರ್ ಹೆಚ್ಚು ಮಾಡಬೇಕು. ನಿಮ್ಮ ಟ್ಯಾಕ್ಸೇಶನ್ ಶೇರ್‌ನಲ್ಲಿ ನಮಗೆ ಬರಬೇಕು. ನಮ್ಮ ಭಾಗ ನಮಗೆ ಕೊಡಿ. ಸೆಂಟ್ರಲ್ ಟ್ಯಾಕ್ಸೇಶನ್‌ನಲ್ಲಿ ನಮ್ಮ ಭಾಗ 33 ಪರ್ಸೆಂಟ್ ಕೊಡಿ. ನೀವು ಏಕೆ ಎಲ್ಲಾ ತೆಗೆದುಕೊಂಡು ಹೋಗುತ್ತೀರಿ ಎಂದು ಕೇಳತಕ್ಕಂಥ ರಾಜಕೀಯ ಇಚ್ಛಾಶಕ್ತಿ ಬೇಕು, ಧೈರ್ಯ ಬೇಕು. ಆ ರೀತಿಯಾದಂತಹ ಕಾರ್ಯಕ್ರಮವನ್ನು ಯಾವ ಸರ್ಕಾರ ರೂಪಿಸಿಲ್ಲ. ಅದನ್ನು ನಾವು ಮಾಡದೇ ಬರೀ ಸಾಲಗಳಿಂದ, ಹಾಕಿದವರಿಗೆ ಟ್ಯಾಕ್ಸ್ ಹಾಕುವುದು, ಹಾಕಿದವರಿಗೆ ಟ್ಯಾಕ್ಸ್ ಹಾಕುವುದು ಹಾಕದೇ ಇರುವವರಿಗೆ ಟ್ಯಾಕ್ಸ್ ಇಲ್ಲ. ಅವರನ್ನು ಹಾಗೆಯೇ ಬಿಟ್ಟುಬಿಡುವುದು. ರಿಯಾಯಿತಿ ಯಾವುದಕ್ಕೆ ಅಂತ ಹೇಳುತ್ತಿದ್ದರು. ವಿಭೂತಿಗೆ ರಿಯಾಯಿತಿ ಕೊಡುವುದು. ಡೀಸೆಲ್‌ಗೆ ಟ್ಯಾಕ್ಸ್ ಹಾಕುವುದು. ಹೇಗಿದೆ ನೋಡಿ? ವಿಭೂತಿಗೆ ರಿಯಾಯಿತಿ! ಡೀಸೆಲ್‌ಗೆ ಟ್ಯಾಕ್ಸ್! ಡೀಸೆಲ್‌ಗೆ ಟ್ಯಾಕ್ಸ್ ಹಾಕಿದರೆ ಬಸ್ ಚಾರ್ಜ್ ಜಾಸ್ತಿಯಾಗುತ್ತದೆ, ಬಡವ ಸತ್ತ. ಹೇಗೆ ಇದು ಜನ ವಿರೋಧಿ ಬಜೆಟ್ ಆಗುತ್ತದೆ ಎಂದು ಹೇಳುವುದಕ್ಕೆ ನಾನು ಉದಾಹರಣೆಯನ್ನು ಕೊಡುತ್ತಿದ್ದೇನೆ. ಸಾಮಾನ್ಯ ಜನರಿಗೆ ಬೇಕಾಗಿರತಕ್ಕಂಥಾದ್ದು ಇಲ್ಲ. ಆದ್ದರಿಂದ ಮಾನ್ಯ ಅಧ್ಯಕ್ಷರೇ, ಈ ಬಜೆಟ್‌ನಲ್ಲಿ ಕೆಲವು ಸ್ವಾಗತಾರ್ಹವಾದ ಅಂಶಗಳು ಇದ್ದರೂ ಕೂಡ ಒಟ್ಟಾರೆ ರಾಜ್ಯದ ಬೆಳವಣಿಗೆಗೆ ಅವಶ್ಯಕತೆ ಇರತಕ್ಕಂಥ ಯಾವುದೇ ಕಣ್ಣೋಟ ಈ ಬಜೆಟ್‌ನಲ್ಲಿ ಇಲ್ಲ. ನಂಬರ್ ಒನ್. ನ್ಯಾಚುರಲ್ ರೀಸೋರ್ಸ್ ಡೆವಲಪ್ ಮಾಡತಕ್ಕಂಥಾದ್ದಕ್ಕೆ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಮಾಡಲಿಕ್ಕೆ ಇರತಕ್ಕಂಥ ಕಣ್ಣೋಟ ಇದರಲ್ಲಿ ಇಲ್ಲ.

ಮಾನವ ಸಂಪನ್ಮೂಲ ಅಭಿವೃದ್ಧಿ ಮಾಡತಕ್ಕಂಥ ಕಣ್ಣೋಟ ಇದರಲ್ಲಿ ಇಲ್ಲ. ಕೃಷಿ ರಂಗವನ್ನು ಅಭಿವೃದ್ಧಿ ಮಾಡಲಿಕ್ಕೆ ಬೇಕಾಗಿರತಕ್ಕಂಥ ಕಣ್ಣೋಟ ಇದರಲ್ಲಿ ಇಲ್ಲ. ಕೈಗಾರಿಕಾ ರಂಗವನ್ನು ಅಭಿವೃದ್ಧಿ ಮಾಡಿ ಉದ್ಯೋಗಾವಕಾಶವನ್ನು ಸೃಷ್ಟಿಸತಕ್ಕಂಥ ಕಣ್ಣೋಟ ಇದರಲ್ಲಿ ಇಲ್ಲ. ಹಾಗಾಗಿ ಇದೊಂದು ಅಂಕಿಸಂಖ್ಯೆಗಳ ಕಸರತ್ತು ಬಿಟ್ಟರೆ ಇದು ನಿಜವಾದಂತಹ ರಾಜ್ಯದ ಅಭಿವೃದ್ಧಿಗೆ ಪೂರಕವಾದಂತಹ ಬಜೆಟ್ ಅಲ್ಲ, ಇದರಲ್ಲಿ ಮಾರ್ಪಾಡುಗಳನ್ನು ಮಾಡಬೇಕೆಂದು ಹೇಳಿ ನಾನು ವಿನಂತಿಸಿಕೊಂಡು ಸನ್ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†**ಶ್ರೀ ಬಿ.ಕೆ. ಗೋಪಾಲಕೃಷ್ಣ ಬೇಲೂರು (ಸಾಗರ)** : ಮಾನ್ಯ ಅಧ್ಯಕ್ಷರೇ, ಅಬ್ಕಾರಿ ವಿಚಾರದಲ್ಲಿ ಈಗಾಗಲೇ ಸಚಿವರು ಬಜೆಟ್ ಮಂಡನೆ ಮಾಡಿರುವುದರಲ್ಲಿ ಕೆಲವು ಧೋರಣೆಗಳು ಇವೆ. ಏನೆಂದರೆ, ಶುಲ್ಕ ನಿಗದಿಯ ವಿಚಾರದಲ್ಲಿ ಕಾರ್ಪೋರೇಷನ್ ಮತ್ತು ಟಿಎಂಸಿ ಎರಡು ಭಾಗದಲ್ಲಿದೆ. ಅಂದರೆ ಕಾರ್ಪೋರೇಷನ್ ನಲ್ಲಿ ಒಂದು ಲೈಸೆನ್ಸ್ ಫೀ ಯನ್ನು 3 ಲಕ್ಷದ 40 ಸಾವಿರ ರೂಗೆ ಮಾಡಿದ್ದಾರೆ ಮತ್ತು ಟಿಎಂಸಿ ಯಲ್ಲಿ ಅಲ್ಲಿಗೂ ಇಲ್ಲಿಗೂ ವ್ಯತ್ಯಾಸ 1 ಲಕ್ಷದ 35 ಸಾವಿರ ರೂಪಾಯಿ ಬರುತ್ತದೆ. ಅದನ್ನು ಕಾರ್ಪೋರೇಷನ್ ಲೆವೆಲ್‌ಗೆ ತಂದರೆ ಸರ್ಕಾರಕ್ಕೆ ಹತ್ತು ಕೋಟಿ ರೂ. ಲಾಭ ಬರುವ ಸಾಧ್ಯತೆಗಳು ಇದೆ. ಒಂದು ರೋಡಿನಿಂದ ಒಂದು ರೋಡಿನ ಪಕ್ಕದಲ್ಲಿರುವುದರಿಂದ ಸ್ವಲ್ಪ ಎಲ್ಲಾ ಮಧ್ಯದ ರೇಟು ಒಂದೇ ಇರುವುದರಿಂದ, ಸ್ವಲ್ಪ ಪಕ್ಕದ ರೋಡಿನಲ್ಲಿ ಒಂದು ರೇಟು, ಎದುರುಗಡೆ ಒಂದು ರೇಟು ಇರುವುದರಿಂದ ಸರ್ಕಾರಕ್ಕೆ ತುಂಬಾ ಆದಾಯ ಬರುವುದರಿಂದ ಇದರ ಬಗ್ಗೆ ಪರಿಶಿಲನೆ ಮಾಡಬೇಕೆಂದು ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

† **ಶ್ರೀ ಬಿ. ನಾಗರಾಜಶೆಟ್ಟಿ (ಬಂಟ್ವಾಳ)** : ಮಾನ್ಯ ಅಧ್ಯಕ್ಷರೇ, ಬಜೆಟ್ ಮೇಲಿನ ಚರ್ಚೆಯಲ್ಲಿ ನಮ್ಮ ಜೀವನದ ಪ್ರಥಮ ಬಾರಿಗೆ ಇಲ್ಲಿ ವಿಧಾನಸಭೆಯಲ್ಲಿ ಮಾತನಾಡುತ್ತಿದ್ದೇನೆ, ನನ್ನ ಪುಣ್ಯ ಪ್ರಾಮುಖ್ಯವಾಗಿ ನಮ್ಮ ಕರಾವಳಿ ಜಿಲ್ಲೆಗಳಲ್ಲಿ ಪ್ರಮುಖ ಉದ್ಯೋಗಾವಕಾಶದ ಕೈಗಾರಿಕೆಗಳಾದ ಬೀಡಿ, ಹಂಚು ಮತ್ತು ಗೇರು ಬೀಜ ಕಾರ್ಖಾನೆಗಳು ಸಂಪೂರ್ಣವಾಗಿ ಜೀರ್ಣಾವಸ್ಥೆಯಲ್ಲಿರುವ ಈ ಸಂದರ್ಭದಲ್ಲಿ ಈ ಬಾರಿಯ ರಾಜ್ಯದ ಬಜೆಟ್ ಗೇರು ಬೀಜ ಮತ್ತು ತೆಂಗಿನ ಎಣ್ಣೆಯ ಉದ್ಯಮಕ್ಕೆ ಮಾರಕ ಹೊಡೆತವನ್ನು ನೀಡಿದೆ. ಗೇರು ಬೀಜದ ಮಾರಾಟ ತೆರಿಗೆಯನ್ನು ಶೇಕಡ 5 ರಿಂದ 8 ಕ್ಕೆ ಹಾಗೂ ತೆಂಗಿನ ಎಣ್ಣೆಯ ಮಾರಾಟದ ತೆರಿಗೆಯನ್ನು ಶೇಕಡ 4 ರಿಂದ 20ಕ್ಕೆ ಏರಿಸುವುದರಿಂದ... ಅಷ್ಟೇ ಇಲ್ಲದೆ ಗೋಧಿ ಉತ್ಪನ್ನಗಳಾದ ಮೈದಾ, ಅಟ್ಟಾ ರವೆ ಹಾಗೂ ಗೋಧಿಯ ಮೇಲಿನ ಮಾರಾಟ ಶುಲ್ಕ ವನಸ್ಪತಿಯ ಜೊತೆಗೆ ಮೇಲಕ್ಕೆ ಏರಿರುವುದರಿಂದ ಶೇಖರಣೆ ಮತ್ತು ಖಾದ್ಯಸಂಸ್ಕರಣ ಘಟಕಗಳು ಸಹ ಹಿನ್ನೆಡೆಗೆ ಮೂಲ ಕಾರಣಗಳಾಗಿದೆ, ಆ ದೃಷ್ಟಿಯಿಂದ ಈ ಏರಿಸಿದ ತೆರಿಗೆಯನ್ನು ಕಡಿಮೆ ಮಾಡಬೇಕಾಗಿ ನನ್ನ ವಿನಂತಿ. ಇನ್ನೊಂದು ವಿಚಾರ ನಮ್ಮ ಕರ್ನಾಟಕದ ಹಾಗೂ ವಿಶೇಷವಾಗಿ ಕರಾವಳಿ ಪ್ರದೇಶದಲ್ಲಿ ಬೀಡಿ ಕಾರ್ಮಿಕರು ಇವತ್ತು ಕೆಲಸವಿಲ್ಲದೆ ಕಷ್ಟದಲ್ಲಿದ್ದಾರೆ. ಈಗಾಗಲೇ ಬಹಳಷ್ಟು ಬೀಡಿ ಕಂಪನಿಗಳು ಬಂದ್ ಆಗುವಂಥ ಪರಿಸ್ಥಿತಿಯಲ್ಲಿದೆ. ವಿಶೇಷವಾಗಿ ಅದರಲ್ಲಿ ರಾಮೆಟೀರಿಯಲ್ ಆದ ಬೀಡಿಯ ಎಲೆ ರಾಜ್ಯಕ್ಕೆ ಬರುವಾಗ ಎಂಟ್ರಿ ಟ್ಯಾಕ್ಸ್ ಒಂದು ಪರ್‌ಸೆಂಟ್ ಹಾಗೂ finished goods ಏನು ಬೀಡಿಯನ್ನು ಮಾರುವಾಗ ಒಂದು ಪರ್‌ಸೆಂಟ್ ಎಂಟ್ರಿ ಟ್ಯಾಕ್ಸ್ ತೆಗೆದುಕೊಳ್ಳುತ್ತಿದ್ದಾರೆ ಅದನ್ನು ಕೂಡ ಕೂಡಲೆ ರದ್ದು ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ನಮ್ಮ ರಾಜ್ಯಕ್ಕೆ ಮುಖ್ಯವಾಗಿ ನವಮಂಗಳೂರು ಮತ್ತು ಕಾರವಾರದ ಬಂದರು

ಇರುವುದರಿಂದ ಈ ಬಂದರುಗಳ ವ್ಯವಹಾರದಲ್ಲಿ ಬಹಳಷ್ಟು ಕಡಿಮೆಯಾಗುತ್ತಿದೆ. ಅಕ್ಕ ಪಕ್ಕ ರಾಜ್ಯದ ಬಂದರುಗಳಲ್ಲಿ ಬಹಳಷ್ಟು ವ್ಯವಹಾರಗಳು ಜಾಸ್ತಿಯಾಗುತ್ತಿದೆ. ಪ್ರಾಮುಖ್ಯವಾದ ವಿಚಾರ 1986ನೇ ಇಸವಿಯಿಂದ ಮರದ ದಿಮ್ಮಿಗಳನ್ನು ಮುಕ್ತವಾಗಿ ನಮ್ಮ ದೇಶಕ್ಕೆ ಬರಬಹುದು ಎಂದು ಕೇಂದ್ರ ಸರ್ಕಾರ ಮಾಡಿದ ನಂತರ ನಮ್ಮ ರಾಜ್ಯದ ನವಮಂಗಳೂರು ಮತ್ತು ಕಾರವಾರದಲ್ಲಿ ಬಹಳಷ್ಟು ಮರದ ದಿಮ್ಮಿಗಳು ಆಮದಾಗುತ್ತಿದೆ. ಅದರ ಮೇಲೆ ಸೇಲ್ಸ್ ಟ್ಯಾಕ್ಸ್ 16 ಪರ್‌ಸೆಂಟ್ ಇದೆ, ಇತ್ತೀಚೆಗೆ ಅದನ್ನು 15 ಪರ್‌ಸೆಂಟ್ ಮಾಡಿದ್ದಾರೆ. ಆದರೆ ಪಕ್ಕದ ರಾಜ್ಯಗಳಾದ ತಮಿಳುನಾಡು, ಆಂಧ್ರ, ಗುಜರಾತ್ ಆಗಲಿ 6 ರಿಂದ 8 ಪರ್‌ಸೆಂಟ್ ಇದೆ. ಈ ದೃಷ್ಟಿಯಿಂದ ನಮ್ಮ ರಾಜ್ಯದ ಬಹಳಷ್ಟು ಉದ್ದಿಮೆಗಳು ಮುಚ್ಚಿಹೋಗುತ್ತಿವೆ. ಈ ದೃಷ್ಟಿಯಿಂದ ಎಲ್ಲಾ ವ್ಯಾಪಾರಿಗಳು ಮತ್ತು ಯಾರು ಮರದ ವ್ಯವಹಾರ ಮಾಡುತ್ತಾರೆ ಅವರೆಲ್ಲ ಪಕ್ಕದ ರಾಜ್ಯಗಳಿಗೆ ಹೋಗಿ ನಮ್ಮ ರಾಜ್ಯದಲ್ಲಿ ಸಾಕಷ್ಟು ರೆವಿನ್ಯೂ ಅಂದರೆ ಸೇಲ್ಸ್ ಟ್ಯಾಕ್ಸ್ ವಸೂಲಾತಿ ಕಡಿಮೆಯಾಗುತ್ತಿದೆ. ಇನ್ನೊಂದು ಮಾರಕವಾದಂಥ ವಿಚಾರವೇನೆಂದರೆ 19.5.2004 ರಂದು ಮರದ ಮೇಲೆ ಟ್ರಾನ್ಸ್‌ಪೋರ್ಟ್ ಫೀ ಎಂದು ಸುಮಾರು 200 ರೂ. ಪ್ರತೀ ಘನ ಮೀಟರ್ ಮೇಲೆ ಹಾಕಿದ್ದಾರೆ, ಇದು ಯಾವ ರಾಜ್ಯದಲ್ಲೂ ಇಲ್ಲ. ಇದರಿಂದ ನಮ್ಮ ರಾಜ್ಯಕ್ಕೆ ಬರುವ ಆಮದು ಮರ ಸಂಪೂರ್ಣವಾಗಿ ನಿಂತುಹೋಗಿದೆ ಅದನ್ನು ಕೂಡಲೇ ಟ್ರಾನ್ಸ್‌ಪೋರ್ಟ್ ಫೀ ರದ್ದು ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಸಾಮಾನ್ಯವಾಗಿ ಒಂದು ಲಾರಿ ಲೋಡಿನ ಮೇಲೆ ಸುಮಾರು ಎರಡು ಸಾವಿರದಿಂದ ಮೂರು ಸಾವಿರ ರೂಪಾಯಿ ಆಗುತ್ತದೆ. ಈ ದೃಷ್ಟಿಯಿಂದ ಪಕ್ಕದ ರಾಜ್ಯಗಳಲ್ಲಿ ಇದು ಇಲ್ಲದಿರುವುದರಿಂದ ಹಾಗೂ ವಿಶೇಷವಾಗಿ ತಮಿಳುನಾಡಿನ Tuticorin ಮತ್ತು ಚೆನ್ನೈ ಪೋರ್ಟ್‌ನಲ್ಲಿ ಎಲ್ಲಾ ಆಮದು ಮರಗಳು ಅಲ್ಲಿಗೆ ಹೋಗಿ ನಮ್ಮ ರಾಜ್ಯಕ್ಕೆ ಬರುವಂಥ ರೆವಿನ್ಯೂ ಸೇಲ್ಸ್‌ಟ್ಯಾಕ್ಸ್ ಕಡಿಮೆಯಾಗುತ್ತಿದೆ. ಅಷ್ಟೇ ಅಲ್ಲದೆ ಆಸುಪಾಸಿನ ರಾಜ್ಯಗಳಲ್ಲಿ ನಮ್ಮ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನ ಹಸ್ತಕ್ಷೇಪ ಈ ಆಮದಾಗುವಂಥ ಟಿಂಬರ್ ಮೇಲೆ ಇಲ್ಲ, ಆದರೆ ನಮ್ಮ ರಾಜ್ಯದಲ್ಲಿ ಮಾತ್ರ ಇದೆ.

12.10 ಪಿ.ಎಂ

ಇದಕ್ಕೋಸ್ಕರ ನಮ್ಮ ರಾಜ್ಯದಲ್ಲೂ ಕೂಡ ಅರಣ್ಯ ಇಲಾಖೆಯವರ ಹಸ್ತಕ್ಷೇಪ ಇಲ್ಲದೆ, ಆಮದು ಟಿಂಬರ್‌ನ ಮೇಲೆ ಫಾರೆಸ್ಟ್ ಪರ್ಮಿಟ್ ಅನ್ನು ಏನು ಕೊಡುತ್ತಿದ್ದಾರೋ, ಅದನ್ನು ಇಲ್ಲಿಯೂ ಸಹ ನಾವು ನಿಲ್ಲಿಸಬೇಕು. ಈ ಎಲ್ಲಾ ಕಾರಣದಿಂದ ಇಷ್ಟರವರೆಗೆ ಎಲ್ಲಾ ಡೈರೆಕ್ಟ್ ಅಂಡ್ ಇನ್‌ಡೈರೆಕ್ಟ್ ಸೇರಿ ವರ್ಷಕ್ಕೆ ಸುಮಾರು 200 ಕೋಟಿ ರೂಪಾಯಿಗಳಷ್ಟು ಆದಾಯ ನಮಗೆ ಬರುತ್ತಿತ್ತು. ಈಗ ವರ್ಷದಿಂದ ವರ್ಷಕ್ಕೆ ಅದು ಕಡಿಮೆಯಾಗಿ ಸುಮಾರು 50 ಕೋಟಿ ರೂಪಾಯಿಗಳಿಗೆ ಬಂದು ನಿಂತಿದೆ ಎಂಬ ಮಾತನ್ನು ನಾನು ಬಹಳ ಬೇಸರದಿಂದ ಹೇಳುತ್ತಿದ್ದೇನೆ. ಈ ದೃಷ್ಟಿಯಿಂದ ಸನ್ಮಾನ್ಯ ಅರ್ಥ ಮಂತ್ರಿಗಳು ಈ ಬಗ್ಗೆ ಸೂಕ್ತವಾದಂತಹ ಕ್ರಮಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಇನ್ನು ತಮಗೆ ತಿಳಿದ ಹಾಗೆ, ನಮ್ಮ ರಾಜ್ಯದ ಕೃಷಿಗಳ ಬಗ್ಗೆ ಬಹಳಷ್ಟು ಹಿರಿಯರು ಮಾತನಾಡಿದ್ದಾರೆ. ಅದರಲ್ಲೂ ವಿಶೇಷವಾಗಿ ಕಾಫಿಯ ಬಗ್ಗೆಯೂ ಕೂಡ ಮಾತನಾಡಿದ್ದಾರೆ. ಅಡಿಕೆ ಬೆಳೆಯ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳಲಿಕ್ಕೆ ಇಚ್ಛೆ ಪಡುತ್ತಿದ್ದೇನೆ. ಅಡಿಕೆಗೆ ಬೆಂಬಲ ಬೆಲೆ ನೀಡುವ ಬಗ್ಗೆ ಇತ್ತೀಚೆಗೆ ಹಲವಾರು ಬಾರಿ ಮಾನ್ಯ ಕೃಷಿ ಮಂತ್ರಿಗಳ ಮುಖೇನ ನಾವು ಭೇಟಿ ಮಾಡಿದ್ದೆವು. ಅದಕ್ಕೆ ಬೆಂಬಲ ಬೆಲೆಯನ್ನು ಘೋಷಿಸುತ್ತೇವೆಂದು ಹೇಳಿದ್ದರು. ಆದರೆ ನಮ್ಮ ಬಜೆಟ್‌ನಲ್ಲಿ ಅದರ ಬಗ್ಗೆ

ಯಾವ ಮಾಹಿತಿಯೂ ಕೂಡ ಇಲ್ಲ. ಕಳೆದ ವರ್ಷ 2002–03ರಲ್ಲಿ ಬಿಳಿ ಅಡಿಕೆಗೆ ಬೆಂಬಲ ಬೆಲೆ ರಾಜ್ಯ ಸರ್ಕಾರ ಕೊಟ್ಟಿದ್ದರು. ರಾಜ್ಯದಲ್ಲಿ ಎರಡು ಅಡಿಕೆ ಇದೆ, ಕೆಂಪು ಅಡಿಕೆ ಮತ್ತು ಬಿಳಿ ಅಡಿಕೆ. ಮೂರು ತಿಂಗಳ ಹಿಂದೆ ಕೆಂಪು ಅಡಿಕೆಗೆ Market support price ಎಂದು ಕೊಟ್ಟಿದ್ದರು. (ರೂ. 8500 ಕ್ವಿಂಟಾಲ್‌ಗೆ) ಅದು ಈಗ ನಿಂತು ಹೋಗಿದೆ. ಈ ದೃಷ್ಟಿಯಿಂದ ಮಾರ್ಕೆಟ್‌ನಲ್ಲಿ ಅಡಿಕೆಯ ಬೆಲೆ ಬಹಳಷ್ಟು ಕುಸಿಯುತ್ತಿದೆ. ಆದುದರಿಂದ ಸರ್ಕಾರಕ್ಕೆ ತಮ್ಮ ಮುಖೇನ ಬಿಳಿ ಅಡಿಕೆಗೆ market intervention scheme ಅನ್ನು ಕೂಡಲೇ implement ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾರ್ಕೆಟ್‌ನಲ್ಲಿ stability ಬರಬೇಕಾದರೆ ಈ ಸ್ಕೀಮ್‌ನ ಅವಶ್ಯಕತೆ ಬಹಳಷ್ಟು ಇದೆ. ಇದರಿಂದ ಕರ್ನಾಟಕ ಸರ್ಕಾರಕ್ಕೆ ಏನೂ ದೊಡ್ಡ ನಷ್ಟವಾಗುವುದಿಲ್ಲ. ಆದರೆ ಮಾರ್ಕೆಟ್‌ನಲ್ಲಿ ಅಡಿಕೆಯ ಬೆಲೆಯನ್ನು ಸರಿಯಾಗಿ ಮೇಲಕ್ಕೆ ತೆಗೆದುಕೊಂಡು ಹೋಗಲಿಕ್ಕೆ ಹಿಂದಿನ ಎರಡು ವರ್ಷಗಳಿಂದ ಇದೊಂದು ಒಳ್ಳೆಯ ಕಾರಣವಾಗಿದೆ. ಬಿಳಿ ಅಡಿಕೆಗೆ ಕಳೆದ ಬಾರಿ ಡಾ: ಬಿಸಿಲಯ್ಯ ಕಮಿಟಿಯ ಮುಖೇನ 65 ರೂಪಾಯಿ ಪ್ರತಿ ಕೆ.ಜಿ.ಗೆ ಫಿಕ್ಸ್ ಮಾಡಿದ್ದರು. ಈಗ ಖರ್ಚು ಜಾಸ್ತಿಯಾಗಿರುವುದರಿಂದ ಅದನ್ನು 75 ರೂಪಾಯಿಗಳಿಗೆ ಏರಿಸಬೇಕು. ಪ್ರತಿ ಕೆ.ಜಿ. ಬಿಳಿ ಅಡಿಕೆಗೆ 75 ರೂ.ಗಳಂತೆ market intervention scheme ಅನ್ನು ಅಳವಡಿಸಿ, ಕೂಡಲೇ ಅದನ್ನು ಜಾರಿಗೆ ತರಬೇಕೆಂದು ತಮ್ಮ ಮೂಲಕ ನಾನು ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ. ಇನ್ನು ಸೇಲ್ಸ್ ಟ್ಯಾಕ್ಸ್ ಬಗ್ಗೆ ಹೇಳುವುದಾದರೆ, ಈಗಾಗಲೇ ಸಂಬಂಧಪಟ್ಟ ಅನೇಕ ಬೆಳೆಗಾರರು ಬಂದು ಸನ್ಮಾನ್ಯ ಅರ್ಥ ಮಂತ್ರಿಗಳನ್ನು ಕಂಡಾಗ 4% ಇದ್ದಂತಹ ಸೇಲ್ಸ್ ಟ್ಯಾಕ್ಸ್ ಅನ್ನು 2% ಮಾಡಬೇಕೆಂದು ಕೇಳಿಕೊಂಡಿದ್ದೆವು. ಆದರೆ ಆ ಬದಲಾವಣೆ ಈ ಬಜೆಟ್‌ನಲ್ಲಿ ಬಂದಿಲ್ಲ. ನನ್ನದೊಂದು ವಿನಂತಿ ಇದೆ, ನಾನು ಕ್ಯಾಂಪ್ಕೋದ ಮಾಜಿ ಅಧ್ಯಕ್ಷನಾಗಿ ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಕ್ಯಾಂಪ್ಕೋದ ವ್ಯವಹಾರ ಇರುವುದು total ರಾಜ್ಯದ ಉತ್ಪತ್ತಿಯಲ್ಲಿ ಕೇವಲ 12% ಮಾತ್ರ. ಆದರೆ ನಾವು ಸುಮಾರು 9 ಕೋಟಿ ರೂಪಾಯಿಗಳನ್ನು ಸೇಲ್ಸ್ ಟ್ಯಾಕ್ಸಾಗಿ ಕ್ಯಾಂಪ್ಕೋ ವತಿಯಿಂದ ಕರ್ನಾಟಕ ಸರ್ಕಾರಕ್ಕೆ ಕಟ್ಟುತ್ತಿದ್ದೇವೆ. ಬಾಕಿ ಬರುವಂತಹ 88% ನಲ್ಲಿ ಎಷ್ಟು ಟ್ಯಾಕ್ಸ್ ಆಗಬಹುದು ಎಂಬುದನ್ನು ನೀವೇ ಊಹಿಸಿ. ಅದು ಸುಮಾರು 10–15 ಕೋಟಿ ರೂಪಾಯಿಗಳಾಗುತ್ತದೆ ಎಂದು ನನಗೆ ಸುದ್ದಿ ಬಂದಿದೆ. ಈ ವಿಚಾರದಲ್ಲಿ ಈ ಸೇಲ್ಸ್ ಟ್ಯಾಕ್ಸ್ ಅನ್ನು ವ್ಯವಸ್ಥಿತ ರೀತಿಯಲ್ಲಿ, ಎಲ್ಲರಿಗೂ ಅಳವಡಿಸುವ ರೀತಿಯಲ್ಲಿ ಕ್ರಮ ಕೈಗೊಳ್ಳಬೇಕೆಂದೂ ಕೂಡ ಸರ್ಕಾರವನ್ನು ಕೇಳುತ್ತಿದ್ದೇನೆ. ಇನ್ನು ಬಂದರುಗಳ ಬಗ್ಗೆ ಹೇಳುವುದಾದರೆ, ನಮ್ಮ ಕರ್ನಾಟಕದಲ್ಲಿ ವಿಶೇಷವಾಗಿ ಕಾರವಾರ ಮತ್ತು ಹಳೆ ಮಂಗಳೂರು ಬಂದರು, ಇವುಗಳ ಅಭಿವೃದ್ಧಿಗೋಸ್ಕರ ಹಲವಾರು ವರ್ಷಗಳಲ್ಲಿ ಸಾಕಷ್ಟು ಹಣವನ್ನು ನಾವು ತೊಡಗಿಸುತ್ತಿದ್ದೇವೆ. ಈ ದೃಷ್ಟಿಯಿಂದ ಉತ್ಪತ್ತಿ ಕೂಡ ಜಾಸ್ತಿಯಾಗುತ್ತಿತ್ತು. 1999–2000ರಲ್ಲಿ 405 ಲಕ್ಷ ರೂಪಾಯಿಗಳು ಇದ್ದುದ್ದು 2003–04ರಲ್ಲಿ 709 ಲಕ್ಷ ರೂಪಾಯಿಗಳಾಗಿದೆ. ಈ ವರ್ಷ ಯಾವುದೇ ಪ್ರಾವಿಷನ್ ಅನ್ನು ಈ ಬಂದರು ಅಭಿವೃದ್ಧಿಗಾಗಿ ಬಜೆಟ್‌ನಲ್ಲಿ ಇಟ್ಟಿಲ್ಲ. ಅದನ್ನೂ ಕೂಡ ಸನ್ಮಾನ್ಯ ಮಂತ್ರಿಗಳು ಮನ್ನಿಸಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಇನ್ನು ಶಾಲೆಗಳ ಬಗ್ಗೆ ಹೇಳುವುದಾದರೆ, ನಮ್ಮ ಸರ್ಕಾರಿ ಶಾಲೆಗಳಿಗೆ ಬಹಳಷ್ಟು ಸವಲತ್ತುಗಳನ್ನು ನಾವು ಕೊಡುತ್ತಿದ್ದೇವೆ. ಅಷ್ಟೇ ಅಲ್ಲದೆ ಇತ್ತೀಚೆಗೆ ಮಧ್ಯಾಹ್ನ ಬಿಸಿಯೂಟ ಕಾರ್ಯಕ್ರಮವನ್ನು ಅನುದಾನಿತ ಶಾಲೆಗಳಿಗೂ ಕೂಡ ವಿಸ್ತರಿಸಿದ್ದೇವೆ. ಇದು ಒಳ್ಳೆಯ ವಿಚಾರ. ಆದರೆ ಸರ್ವ ಶಿಕ್ಷ ಅಭಿಯಾನದಲ್ಲಿ ನೀಡುವ ಎಲ್ಲಾ

ಬಗ್ಗೆಯ ಸವಲತ್ತುಗಳನ್ನು ಅನುದಾನಿತ ಶಾಲೆಗಳಿಗೂ ಕೂಡ ವಿಸ್ತರಿಸಬೇಕೆಂದು ನಾನು ಸನ್ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತಿದ್ದೇನೆ. ಈಗಾಗಲೇ ತಮಗೆ ತಿಳಿದ ಹಾಗೆ, ಅನೇಕ ನಿರುದ್ಯೋಗಿಗಳ ಸಂಖ್ಯೆ ದಿನದಿಂದ ದಿನಕ್ಕೆ ಜಾಸ್ತಿಯಾಗುತ್ತಿದೆ. ಶಾಸಕರ ಮನೆಗೆ ದಿನನಿತ್ಯ ನೂರಾರು ವಿದ್ಯಾವಂತ ಹುಡುಗ, ಹುಡುಗಿಯರು ಕೆಲಸಕ್ಕೋಸ್ಕರ ಬರುತ್ತಿದ್ದಾರೆ. ಸನ್ಮಾನ್ಯ ವಿತ್ತ ಮಂತ್ರಿಗಳಲ್ಲಿ ನನ್ನ ವಿನಂತಿ ಏನೆಂದರೆ, ಈಗಾಗಲೇ ತಮ್ಮ ಪ್ರಣಾಳಿಕೆಯಲ್ಲಿ ತಾವು ಹೇಳಿದ್ದೀರಿ, ಗ್ರಾಮೀಣ ವಿದ್ಯಾವಂತ ನಿರುದ್ಯೋಗಿಗಳಿಗೆ ಸರ್ಕಾರಿ ಹುದ್ದೆಗಳಲ್ಲಿ ಮೀಸಲಿರಿಸುವಂತಹ ಒಂದು ವಚನವನ್ನು ಕೊಟ್ಟಿದ್ದೀರಿ. ಈ ನಿಟ್ಟಿನಲ್ಲಿ ಹಳ್ಳಿಯ ಗ್ರಾಮೀಣ ವಿದ್ಯಾವಂತ ನಿರುದ್ಯೋಗಿಗಳಿಗೆ ಸರ್ಕಾರಿ ಹುದ್ದೆಗಳಲ್ಲಿ ಮೀಸಲಿರಿಸುವಂತಹ ಕಾರ್ಯಕ್ರಮವನ್ನು ತಾವು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ನಮ್ಮ ಕಾಂಗ್ರೆಸ್ಸಿನ ಬಂಧುಗಳು ಗ್ರಾಮೀಣ ನಿರುದ್ಯೋಗಿಗಳಿಗೆ ಮಾಸಿಕ 500 ರೂ.ಗಳಂತೆ ನಿರುದ್ಯೋಗಿ ಭತ್ಯೆ ನೀಡುವ ಭರವಸೆಯನ್ನು ಕೂಡ ಕೊಟ್ಟಿದ್ದರು. ನಿರುದ್ಯೋಗ ಭತ್ಯೆ ನೀಡುವ ಕಾರ್ಯಕ್ರಮ ಯಾವಾಗಿನಿಂದ ಪ್ರಾರಂಭವಾಗುತ್ತಿದೆ ಎಂದು ಈಗಾಗಲೇ ಅನೇಕ ಯುವಕರು ಬಂದು ನಮ್ಮನ್ನು ಕೇಳುತ್ತಿದ್ದಾರೆ. ಆ ದಿಸೆಯಲ್ಲಿ ಕೂಡ ಸರ್ಕಾರ ಚಿಂತನೆ ಮಾಡಿ, ಅದನ್ನೂ ಕೂಡ ಕೂಡಲೇ ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತಾ ಮತ್ತೊಮ್ಮೆ ತಾವು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† **ಶ್ರೀ ಒಲೇಕಾರ್ ನೆಹರೂ ಚನ್ನಬಸಪ್ಪ (ಬ್ಯಾಡಗಿ)** : ಮಾನ್ಯ ಅಧ್ಯಕ್ಷರೇ, 2004–05ನೇ ಸಾಲಿನ ಆಯವ್ಯಯವನ್ನು ಮಾನ್ಯ ಉಪ ಮುಖ್ಯಮಂತ್ರಿಗಳು 6ನೇ ಬಾರಿಗೆ ಮಂಡಿಸಿರುವುದಕ್ಕಾಗಿ ನಾನು ಹೆಮ್ಮೆ ಪಡುತ್ತೇನೆ. ಆದರೆ 2004–05ನೇ ಸಾಲಿನ ಈ ಆಯವ್ಯಯದಲ್ಲಿ ರೈತರ ಪರವಾಗಿ ಈ ಬಜೆಟ್‌ನ್ನು ಮಂಡಿಸುತ್ತಿದ್ದೇವೆ, ಹಿಂದುಳಿದವರ ಪರವಾಗಿ ಈ ಆಯವ್ಯಯವನ್ನು ಮಂಡನೆ ಮಾಡುತ್ತಿದ್ದೇವೆ, ಗ್ರಾಮೀಣ ಭಾಗದ ಜನತೆಗೆ ಇದರಲ್ಲಿ ಹೆಚ್ಚಿನ ವಿಶೇಷತೆಯನ್ನು ಕೊಡಲಾಗಿದೆ ಎನ್ನುವಂತಾದ್ದನ್ನು ಮಾನ್ಯ ಉಪ ಮುಖ್ಯಮಂತ್ರಿಗಳು ಪ್ರಾಸ್ತಾವಿಕವಾಗಿ ಹೇಳಿದ್ದಾರೆ. ಇದರಲ್ಲಿ ಗ್ರಾಮೀಣ ಭಾಗದ ಜನತೆಗೆ ಗ್ರಾಮೀಣ ಭಾಗದ ಮೂಲಭೂತವಾದಂತಹ ಕನಿಷ್ಟ ಕಾರ್ಯಕ್ರಮಗಳಿಗೆ ಯಾವುದೇ ಆದ್ಯತೆಯನ್ನು ನೀಡಿರುವುದಿಲ್ಲ. ಸಾಮಾನ್ಯವಾಗಿ ಗ್ರಾಮೀಣ ಭಾಗದಲ್ಲಿರುವಂತಹ ಮೂಲಭೂತವಾದಂತಹ ಸಮಸ್ಯೆಗಳು ಎಂದರೆ, ತಮಗೆಲ್ಲಾ ಗೊತ್ತಿರುವ ಹಾಗೆ, ಗ್ರಾಮೀಣ ಭಾಗದ ಪ್ರಾಥಮಿಕ ಶಾಲೆಗಳು. ಅನೇಕ ವರ್ಷಗಳ ಹಿಂದೆ ಕಟ್ಟಿದಂತಹ ಕಟ್ಟಡಗಳು ಇವತ್ತಿನ ದಿವಸ ಶಿಥಿಲವಾಗಿವೆ. ಹೆಂಚುಗಳು ಒಡೆದು ರೇಕುಗಳು ಮುರಿದು ಸೋರುವಂತಹ ಪರಿಸ್ಥಿತಿ ಎದುರಾಗಿದೆ. ಸರಿಯಾಗಿ ಮಕ್ಕಳು ಅಲ್ಲಿ ಕುಳಿತು ಪಾಠವನ್ನು ಕಲಿಯಲಿಕ್ಕೆ ಬಾರದೇ ಇರತಕ್ಕಂಥ ಪರಿಸ್ಥಿತಿ ಇರುವಾಗ, ಇವತ್ತಿನ ದಿವಸ ಸರ್ಕಾರ ಅದರ ಬಗ್ಗೆ ಯಾವುದೇ ಗಮನವನ್ನು ಹರಿಸದೇ ಇರುವುದಕ್ಕೆ ನಾನು ವಿಷಾದವನ್ನು ವ್ಯಕ್ತಪಡಿಸುತ್ತೇನೆ. ಈ ನಿಟ್ಟಿನಲ್ಲಿ ಇವತ್ತಿನ ದಿವಸ ಸರ್ಕಾರ ಅದರ ಬಗ್ಗೆ ಗಮನವನ್ನು ಹರಿಸಿ, ಸಮಗ್ರವಾಗಿ ಈ ರಾಜ್ಯದಲ್ಲಿರುವಂತಹ ಎಲ್ಲಾ ಶಾಲೆಗಳ ಬಗ್ಗೆ ಗಮನವನ್ನು ಹರಿಸಿ, ಸಮಗ್ರ ರಿಪೇರಿ ಕಾರ್ಯಕ್ರಮವನ್ನು ತೆಗೆದುಕೊಳ್ಳುವಂತಹ ವ್ಯವಸ್ಥೆಯನ್ನು ಇದರಲ್ಲಿ ಸೇರಿಸಬೇಕೆನ್ನುವಂತಹ ವಿಚಾರವನ್ನು ನಾನು ವ್ಯಕ್ತ ಪಡಿಸುತ್ತೇನೆ. ಅಲ್ಲದೆ ಇನ್ನು ಗ್ರಾಮೀಣ ಭಾಗದಲ್ಲಿರುವಂತಹ ಜನತೆಗೆ ಮೂಲಭೂತವಾದಂತಹ ಅತ್ಯಂತ ಅವಶ್ಯಕವಾಗಿರುವಂತಹ ಕಾರ್ಡ್‌ಗಳ ವಿತರಣೆಯಾಗಿಲ್ಲ. ಹಸಿರು ಕಾರ್ಡ್‌ಗಳು ಇರುವಂತಹ ಸಂದರ್ಭದಲ್ಲಿ, ಈ ರಾಜ್ಯದಲ್ಲಿ ಯಾವುದೇ

ತೊಂದರೆ ಇಲ್ಲದ ಹಾಗೆ ಎಲ್ಲಾ ಬಡ ಕುಟುಂಬಗಳಿಗೆ ರೇಷನ್ ಸಿಗುತ್ತಿತ್ತು. ಆದರೆ ಹಿಂದಿನ ಸರ್ಕಾರದ ಅವಧಿಯಲ್ಲಿ ಆ ಕಾರ್ಡಿನ ಬಣ್ಣವನ್ನು ಬದಲಾವಣೆ ಮಾಡಿ, ಅದನ್ನು ಒಂದೇ ಗುಂಪಿನವರಿಗೆ ವಿತರಣೆ ಮಾಡಿರುವಂಥದ್ದು ಎಲ್ಲರ ಗಮನಕ್ಕೂ ಕೂಡ ಬಂದಿದೆ. ಈಗಾಗಲೇ ಎಲ್ಲಾ ರೇಷನ್ ಅಂಗಡಿಗಳ ಎದುರಿನಲ್ಲಿ ಇವತ್ತು ಪ್ರತಿನಿತ್ಯ ಗಲಾಟೆಗಳು ನಡೆಯುತ್ತಿವೆ. ಆ ಗಲಾಟೆಗಳನ್ನು ನಿಲ್ಲಿಸುವುದಕ್ಕೋಸ್ಕರ ಈಗಾಗಲೇ ನಾವು ಆ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದ್ದಾಯಿತು. ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುತ್ತೇವೆ ಎನ್ನುವಂತಹ ಮಾತುಗಳನ್ನು ಇಲ್ಲಿ ಹೇಳುತ್ತಿದ್ದರೂ ಸಹ, ಇದುವರೆಗೂ ಹಳದಿ ಕಾರ್ಡ್‌ಗಳನ್ನು ಸಾಮಾನ್ಯ ಜನತೆಗೆ ವಿತರಿಸುವಂತಹ ಕ್ರಮಬದ್ಧ ರೂಪರೇಷೆ ಇನ್ನೂ ಆಗಿಲ್ಲ. ಆ ನಿಟ್ಟಿನಲ್ಲಿ ಸರ್ಕಾರ ಇದರ ಬಗ್ಗೆ ಗಮನವನ್ನು ಹರಿಸಿ, ಕೂಡಲೇ ಹಳದಿ ಕಾರ್ಡ್‌ಗಳನ್ನು ಎಲ್ಲರಿಗೂ ಮುಟ್ಟಿಸುವಂತಹ ವ್ಯವಸ್ಥೆಯನ್ನು ಮಾಡಬೇಕು ಎಂಬ ವಿಚಾರದ ಬಗ್ಗೆ ಪ್ರಸ್ತಾಪವನ್ನು ನಾನಿಲ್ಲಿ ಮಾಡಬಯಸುತ್ತೇನೆ. ರೈತರ ಪರವಾದಂತಹ ಈ ಬಜೆಟ್ ಅನ್ನು ಮಂಡನೆ ಮಾಡಿದ್ದೇವೆ ಅನ್ನುವಂತಾದ್ದರ ಹಿನ್ನೆಲೆಯಲ್ಲಿ ಅತ್ಯಂತ ಮೂಲಭೂತವಾಗಿ ಇವತ್ತು ರೈತರ ಸಮಸ್ಯೆಯಾದ ಬಿತ್ತನೆ ಬೀಜಗಳ ಕೊರತೆಯನ್ನು ನೀಗಿಸಬೇಕು. ಇವತ್ತು ರೈತರಿಗೆ ಮುಕ್ತಟೆಯಾಗಿ ಬೀಜಗಳನ್ನು ವಿತರಿಸುತ್ತೇವೆ ಎನ್ನುವಂತಹ ಯಾವುದೇ ಪ್ರಸ್ತಾವನೆಯನ್ನು ಈ ಬಜೆಟ್ ಒಳಗೊಂಡಿಲ್ಲ. ಸತತವಾಗಿ ಮೂರು ವರ್ಷಗಳ ಕಾಲ ರಾಜ್ಯದಲ್ಲಿ ಬರ ಬಂದಿದೆ, ನಾಲ್ಕನೇ ವರ್ಷಕ್ಕೂ ಸಹ ಬರಗಾಲ ಕಾಲಿಡುತ್ತಿದೆ. ಇಂತಹ ಸಂದರ್ಭದಲ್ಲೂ ಸಹ ರೈತರಿಗೆ ಮುಕ್ತಟೆಯಾಗಿ ಬೀಜ ಕೊಡುವಂತಹ ಯಾವ ಒಂದು ಸೂಚನೆಯನ್ನೂ ಸಹ ಸರ್ಕಾರ ಈ ವರ್ಷದ ಆಯವ್ಯಯದಲ್ಲಿ ನೀಡಿಲ್ಲ. ರೈತರಿಗೆ ಮುಕ್ತಟೆಯಾಗಿ ಬೀಜವನ್ನು ವಿತರಿಸುವಂತಹ ವ್ಯವಸ್ಥೆಯನ್ನು ಕೂಡಲೇ ಮಾಡುವ ಬಗ್ಗೆ ಸರ್ಕಾರ ಗಮನ ಹರಿಸಬೇಕಾಗಿದೆ. ಉತ್ತಮ ಗುಣಮಟ್ಟದ ಹತ್ತಿ ಇತ್ಯಾದಿ ಬೀಜಗಳನ್ನು ಮುಕ್ತಟೆಯಾಗಿ ರೈತರಿಗೆ ವಿತರಣೆ ಮಾಡಿದಲ್ಲಿ ರೋಗ ಮುಕ್ತ ಬೆಳೆಯನ್ನು ಬೆಳೆಯಲಿಕ್ಕೆ ಸಾಧ್ಯವಾಗುತ್ತದೆ. ಸರ್ಕಾರ ಅದರ ಬಗ್ಗೆ ಗಮನ ಹರಿಸಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಇವತ್ತು ರೈತರು ಬೋರ್‌ವೆಲ್‌ಗೆ ಕರೆಂಟ್ ಕನೆಕ್ಷನ್ ಪಡೆಯಲು ಕಂಗಾಲಾಗುವಂತಹ ಪರಿಸ್ಥಿತಿ ಒದಗಿದೆ. OYT ಯೋಜನೆ ಅಡಿಯಲ್ಲಿ ಒಬ್ಬ ರೈತ ತನ್ನ ಬೋರ್‌ವೆಲ್‌ಗೆ ಕರೆಂಟ್ ಸವಲತ್ತು ಪಡೆಯಬೇಕೆಂದರೆ 50 ಸಾವಿರ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿರುವುದು ನುಂಗಲಾರದ ತುತ್ತಾಗಿ ಪರಿಣಮಿಸಿದೆ. 50 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರೂ ಸಹ ವೇಳೆಗೆ ಸರಿಯಾಗಿ ಕರೆಂಟ್ ಸಿಗದಿರುವಂತಹ ಪರಿಸ್ಥಿತಿ ಇದೆ. ಸತತವಾಗಿ ಮೂರು ವರ್ಷಗಳ ಕಾಲ ಬರಗಾಲ ಇದ್ದುದರಿಂದ 50 ಸಾವಿರ ರೂಪಾಯಿಗಳನ್ನು ಕಟ್ಟಲು ಸಾಧ್ಯವಾಗದಿರುವಂತಹ ದುರ್ಭಲ ಪರಿಸ್ಥಿತಿ ನಿರ್ಮಾಣವಾಗಿದೆ. ಆ ನಿಟ್ಟಿನಲ್ಲಿ ಸರ್ಕಾರ ಕೂಡಲೇ ಒವೈಟಿ ತೆಗೆಯಬೇಕು. ರೈತರಿಗೆ ಸಮಗ್ರವಾಗಿ ವಿದ್ಯುತ್ ಪೂರೈಕೆ ಆಗುವಂತೆ ನೋಡಿಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡುತ್ತಾರೆಂದು ಕರ್ನಾಟಕ ರಾಜ್ಯದ ಜನತೆ ಈ ಆಯವ್ಯಯ ಮಂಡನೆ ಸಂದರ್ಭದಲ್ಲಿ ನಿರೀಕ್ಷೆಯಿಂದ ಕಾಯುತ್ತಿದ್ದರು. ಆದರೆ ಈ ದಿವಸ ಸರ್ಕಾರ ಅದರ ಬಗ್ಗೆ ಏನೂ ಪ್ರಸ್ತಾಪ ಮಾಡಲಿಲ್ಲ. ಆ ಪ್ರಸ್ತಾಪವನ್ನು ಮಾನ್ಯ ಉಪ ಮುಖ್ಯಮಂತ್ರಿಗಳು ಕೂಡಲೇ ಪರಿಗಣಿಸಬೇಕು. ರೈತರು ನೆಮ್ಮದಿಯಿಂದ ಅವರ ಜೀವನ ಮಾಡಬೇಕೆಂದರೆ ಆ ಸಾಲದ ಮೇಲಿನ ಸಂಪೂರ್ಣ ಬಡ್ಡಿಯನ್ನು ಮನ್ನಾ ಮಾಡುವ ಕಾರ್ಯಕ್ರಮವನ್ನು ಇದರಲ್ಲಿ ಅಳವಡಿಸಿಕೊಳ್ಳಬೇಕೆಂಬ

ಪ್ರಸ್ತಾವವನ್ನು ನಾನು ಹೇಳಬಯಸುತ್ತೇನೆ. ಇನ್ನೊಂದು ಬಹಳ ಮುಖ್ಯವಾದ ವಿಷಯವೇನೆಂದರೆ, 2002–03ನೇ ಸಾಲಿನ ಪಂಪ್‌ಸೆಟ್ ಮೇಲಿನ ಬಾಕಿ ಮನ್ನಾ ಮಾಡಿರುವುದು ಬಹಳ ಸ್ವಾಗತಾರ್ಹ. ಅದೇ ರೀತಿಯಾಗಿ 2003–04 ಹಾಗೂ 2004–05ನೇ ಸಾಲಿನ ಪಂಪ್‌ಸೆಟ್ ಮೇಲಿನ ಸಂಪೂರ್ಣ ತೆರಿಗೆಯನ್ನು ಮನ್ನಾ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಬೆಳೆ ವಿಮೆ ಬಗ್ಗೆ ಹೇಳಬೇಕೆಂದರೆ, ಬೆಳೆ ವಿಮೆಗೆ ಸರ್ಕಾರ ಕಟ್ಟುವಾಗ ಅವಧಿಯನ್ನು ನಿಗದಿ ಮಾಡದೆ, ಬೆಳೆ ವಿಮೆಯನ್ನು ಕೊಡುವಾಗ ಸರ್ಕಾರ ಯಾವುದೇ ರೀತಿಯಲ್ಲಿ ವೇಳೆ ನಿಗದಿ ಮಾಡಿಲ್ಲ. ಸರ್ಕಾರ ಇದನ್ನು ಅತ್ಯಂತ ಅವಶ್ಯ ಹಾಗೂ ಜರೂರು ಎಂದು ತಿಳಿದು ಇದನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಬೆಳೆ ವಿಮೆಯನ್ನು ಕಟ್ಟಲಿಕ್ಕೆ ಯಾವ ರೀತಿ ವೇಳೆ ಕೊಟ್ಟಿದ್ದಾರೆ ಅದೇ ರೀತಿ ಬೆಳೆ ವಿಮೆ ಮರುಪಾವತಿ ಮಾಡುವುದಕ್ಕೆ ವೇಳೆಯನ್ನು ನಿದಗಿ ಪಡಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಬೆಳೆ ವಿಮೆ ಕಟ್ಟಲಿಕ್ಕೆ 31ನೇ ದಿನ ಕೊನೆಯ ದಿನಾಂಕ ಎಂದು ನಿಗದಿ ಮಾಡಲಾಗಿದೆ. ಸತತವಾಗಿ ಬರಗಾಲದಲ್ಲಿರುವಂತಹ ರೈತರಿಗೆ ಬೆಳೆ ವಿಮೆ ಕಟ್ಟಲಿಕ್ಕೆ ಸಮಸ್ಯೆಯಾಗಿದೆ. ಬೆಳೆ ವಿಮೆ ಕಟ್ಟಲಿಕ್ಕೆ ಇರುವಂತಹ ವೇಳೆಯನ್ನು ಇನ್ನು 15 ದಿನಗಳವರೆಗೆ ಕಾಲಾವಕಾಶ ಮಾಡಿಕೊಡಬೇಕೆಂದು ಸರ್ಕಾರದಲ್ಲಿ ರೈತರ ಪರವಾಗಿ ಮನವಿ ಮಾಡಿಕೊಳ್ಳುತ್ತೇನೆ. ಹಿಂದಿನ ಸರ್ಕಾರದ ಅವಧಿಯಲ್ಲಿ ರೈತರು ತಮ್ಮ ಹಕ್ಕಿಗಾಗಿ ಹೋರಾಟ ಮಾಡುವಂತಹ ಸಂದರ್ಭದಲ್ಲಿ ಅನೇಕ ಸಮಸ್ಯೆಗಳು ಬೆಳೆ ವಿಮೆ ಕುಡಿಯುವ ನೀರು, ಮೇವು ಮುಂತಾದವು ಉದಾಹರಣೆಗೆ ಬೆಳೆ ವಿಮೆಯನ್ನು ಸರ್ಕಾರದಿಂದ ಪಡೆಯಬೇಕೆಂದು ಹೇಳುವಂಥದ್ದು, ಹಾಗೂ ಮೇವಿನ ತೊಂದರೆ ಇದ್ದಾಗ ತಾವು ಮನವಿ ಸಲ್ಲಿಸಲು ಹೋದಂತಹ ಸಂದರ್ಭದಲ್ಲಿ ಕಾವೇರಿ ನೀರಿನ ಸಲುವಾಗಿ ಹೋರಾಟವನ್ನು ಮಾಡುವಂತಹ ಸಂದರ್ಭದಲ್ಲಿ ಹಾಗೂ ಇನ್ನೂ ಅನೇಕ ಸಂದರ್ಭಗಳಲ್ಲಿ ಅನೇಕ ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನ ಸೆಳೆಯುವುದಕ್ಕೆ ರೈತರು ಪ್ರತಿಭಟನೆ ಮಾಡುವ ಸಂದರ್ಭದಲ್ಲಿ ಈ ರಾಜ್ಯದ ಅನೇಕ ರೈತರ ಮೇಲೆ ಕೇಸ್ ಹಾಕಿರುವುದು ತಮಗೆ ಕಂಡುಬರುತ್ತದೆ. ಆ ಕೇಸ್‌ಗಳನ್ನು ಕೂಡಲೇ ಸರ್ಕಾರ ರೈತರಿಗೆ ಸಹಾಯ ಮಾಡುವ ಮನಸ್ಸು ಇದೆ ಎಂದರೆ, ಸರ್ಕಾರದ ಆಯವ್ಯಯ ಪತ್ರಕ್ಕಿಂತ ರೈತರ ಸಮಸ್ಯೆಯಿಂದ ಹಾಗು ಸಂಕಟದಿಂದ ಪಾರು ಮಾಡಬೇಕೆಂಬ ಮನಸ್ಸು ಇದ್ದರೆ, ಈ ರಾಜ್ಯದ ರೈತರ ಮೇಲೆ ಹಾಕಿರುವಂತಹ ಅನೇಕ ಕೇಸ್‌ಗಳನ್ನು ಸರ್ಕಾರ ಇವತ್ತಿನ ದಿವಸ ವಾಪಸ್ ಪಡೆಯಬೇಕು. ಕೇಸುಗಳನ್ನು ವಾಪಸ್ ಪಡೆಯದೆ ಇದ್ದರೆ ರೈತರಿಗೆ ಸಮಸ್ಯೆಯಾಗುತ್ತದೆ. ಅವರು ಹೊಲದಲ್ಲಿ ಒಕ್ಕಲುತನ ಕೆಲಸವನ್ನು ಮಾಡಲಿಕ್ಕೆ ಸಮಸ್ಯೆಯಾಗುತ್ತದೆ, ಆ ನಿಟ್ಟಿನಲ್ಲಿ ಸರ್ಕಾರ ಗಮನ ಹರಿಸಬೇಕು. ಇಂಥದ್ದೇ ಕೇಸ್ ನನ್ನ ಮೇಲೆ ಕೂಡ ಇದೆ. ಹಿರೇಕೆರೂರಿನಲ್ಲಿ ಬೆಳೆ ವಿಮೆ ಸಮಸ್ಯೆ ಸಲುವಾಗಿ ಹೋರಾಟ ಮಾಡುವಾಗ ನನ್ನ ಮೇಲೆ ಹಾಗೂ ಬಿ.ಸಿ. ಪಾಟೀಲರ ಮೇಲೆ ಕೇಸ್ ಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಅದನ್ನು ಸಹ ಪರಿಶೀಲನೆ ಮಾಡಿ, ಹಾಗೂ ರಾಜ್ಯದಲ್ಲಿ ರೈತರ ಮೇಲೆ ಹಾಕಿರುವಂತಹ ಎಲ್ಲಾ ಕೇಸುಗಳನ್ನು ವಾಪಸ್ ಪಡೆಯುವಂತಹ ಕೆಲಸವನ್ನು ಸರ್ಕಾರ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಇನ್ನು ಪ್ರಾಥಮಿಕ ಶಾಲೆಗಳ ಬಗ್ಗೆ ಹೇಳಬೇಕೆಂದರೆ, ಪ್ರಾಥಮಿಕ ಶಾಲೆ ಹಾಗೂ ಹೈಸ್ಕೂಲ್‌ಗಳು ಕಾಲೇಜುಗಳು 1992ರಲ್ಲಿ ಪ್ರಾರಂಭವಾಗಿ ಅನೇಕ ವರ್ಷಗಳವರೆಗೆ ಸೇವೆ ಸಲ್ಲಿಸಿವೆ. ಅಲ್ಲಿರುವಂತಹ ಶಿಕ್ಷಕರ ಸಮಸ್ಯೆ ಬಹಳ ಜಟಿಲವಾಗಿದೆ. ಆ ಜಟಿಲವಾದ ಸಮಸ್ಯೆ ಬಗ್ಗೆ ಸರ್ಕಾರ ಗಮನಹರಿಸಬೇಕಾಗಿದೆ. ಅವರ ಬಗ್ಗೆ

ಅಂತಿಮ ನಿರ್ಣಯ ಮಾಡಬೇಕಾದ ಪರಿಸ್ಥಿತಿ ಸರ್ಕಾರದ ಎದುರಿಗಿದೆ. ಇಂತಹ ಸಂದರ್ಭದಲ್ಲಿ ಅನುದಾನ ರಹಿತ ಪ್ರಾಥಮಿಕ, ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ಸುಮಾರು 15–20 ವರ್ಷಗಳಿಂದ ನಡೆಸುತ್ತಾ ಬಂದಿದ್ದಾರೆ. ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ. ಅವರಿಗೆ ಸರ್ಕಾರದಿಂದ ಯಾವುದೇ ಅನುದಾನ ದೊರಕಿಲ್ಲ. ಸರ್ಕಾರ ಕೂಡಲೇ ಗಮನ ಹರಿಸಿ ಅನುದಾನರಹಿತ ಶಾಲೆಗಳು ಎಂದು ಈ ರಾಜ್ಯದಲ್ಲಿ ಪ್ರಾರಂಭವಾಗಿವೆ ಆ ಶಾಲೆಗಳಿಗೆ ಕೂಡಲೇ ಅನುದಾನ ಬಿಡುಗಡೆ ಮಾಡುವಂತಹ ವ್ಯವಸ್ಥೆ ಮಾಡಬೇಕೆಂದು ನಾನು ಮನವಿ ಮಾಡುತ್ತಾ, ಹೊಸದಾಗಿ ವೇತನಾನುದಾನಕ್ಕೆ ಒಳಪಡುವಂತಹ 27 ಪಾಲಿಟೆಕ್ನಿಕ್ ಕಾಲೇಜುಗಳು ಈಗಾಗಲೇ ಅನುದಾನಕ್ಕೆ ಒಳಪಟ್ಟಿವೆ. ಅನುದಾನಕ್ಕೆ ಒಳಪಟ್ಟಿರುವಂತಹ ಸಂದರ್ಭದಲ್ಲಿ ಇವತ್ತಿನ ದಿವಸ ಇವತ್ತಿನ ಬಜಟ್‌ನಲ್ಲಿ ಪಾಲಿಟೆಕ್ನಿಕ್ ಕಾಲೇಜುಗಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ ಎಲ್ಲಿಯೂ ತೋರಿಸಿಲ್ಲ. ಸರ್ಕಾರ ಕೂಡಲೇ ಇದರ ಬಗ್ಗೆ ಗಮನ ಹರಿಸಿ, ಆ ಪಾಲಿಟೆಕ್ನಿಕ್ ಕಾಲೇಜುಗಳಿಗೆ ವೇತನ ಬಿಡುಗಡೆ ಮಾಡುವುದಕ್ಕೆ ಕ್ರಮ ಕೈಗೊಳ್ಳಬೇಕು. ಇನ್ನೂ ಅನೇಕ ಸಮಸ್ಯೆಗಳು ಎದುರು ಬಂದಿರುವಂತಹ ಈ ಸಂದರ್ಭದಲ್ಲಿ 2004–05ನೇ ಸಾಲಿನ ಆಯವ್ಯಯದಲ್ಲಿ ಈ ಕಾರ್ಯಕ್ರಮಗಳಿಗೆ ಯಾವುದೇ ಆದ್ಯತೆಯನ್ನು ನೀಡಿರುವುದಿಲ್ಲ. 2004–05ನೇ ಸಾಲಿನ ಆಯವ್ಯಯ ಬಡವರಿಗೆ ಹಾಗೂ ಹಿಂದುಳಿದ ವರ್ಗದವರಿಗೆ ಮತ್ತು ರೈತರಿಗೆ ಇದು ಮೋಸ ಮಾಡಿದೆ. ವಂಚನೆ ಮಾಡಿದೆ. ಆ ನಿಟ್ಟಿನಲ್ಲಿ ಸರ್ಕಾರ ಗಮನ ಹರಿಸಿ ಇದನ್ನು ತಿದ್ದುಪಡಿ ಮಾಡುವ ಕಾರ್ಯಕ್ರಮವನ್ನು ರೂಪಿಸಬೇಕೆಂದು ಮನವಿ ಮಾಡಿಕೊಂಡು, ನನಗೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† **ಶ್ರೀ ಶಿವರಾಜ್ ಸಜ್ಜನರ್ (ಹಾವೇರಿ)** : ಮಾನ್ಯ ಅಧ್ಯಕ್ಷರೇ, 2004–05ನೇ ಸಾಲಿನ ಆಯವ್ಯಯದಲ್ಲಿ ಕೆಲವು ಸ್ವಾಗತಾರ್ಹವಾದ ವಿಷಯಗಳು ಇಲ್ಲಿ ಪ್ರಸ್ತಾಪವಾಗಿವೆ. ಅದರಲ್ಲಿ ಪ್ರಮುಖವಾಗಿ ರೈತರಿಗೆ ಸಹಕಾರಿ ಕ್ಷೇತ್ರದ ದಾಖಲೆಗಳನ್ನು ಪಡೆದುಕೊಂಡಿರುವಂತಹ ಸಾಲದ ಮೇಲೆ ಆರು ಪ್ರತಿಶತ ಬಡ್ಡಿಯನ್ನು ಆಕರಣಿ ಮಾಡುತ್ತೇವೆ ಎಂದು ಹೇಳಿರುವುದು ಸ್ವಾಗತಾರ್ಹವಾದ ವಿಷಯ. ಆದರೆ ಈ ರೈತರ ಸಾಲದ ಮೇಲಿನ ಬಡ್ಡಿಯನ್ನು ಕೇವಲ ಸಹಕಾರಿ ರಂಗದ ಬ್ಯಾಂಕುಗಳಿಂದ ಮಾತ್ರ ಆರು ಪ್ರತಿಶತ ಬಡ್ಡಿ, ಮತ್ತು ನ್ಯಾಷನಲೈಸ್ ಬ್ಯಾಂಕುಗಳಿಂದ 12 ರಿಂದ 13 ಪ್ರತಿಶತ ಬಡ್ಡಿಯನ್ನು ಆಕರಣಿ ಮಾಡುತ್ತಿರುವುದು ದುರ್ದೈವದ ಸಂಗತಿ. ಈ ನಿಟ್ಟಿನಲ್ಲಿ ಸರ್ಕಾರ ಕೇವಲ ಸಹಕಾರಿ ಕ್ಷೇತ್ರದಿಂದ ತೆಗೆದುಕೊಂಡಿರುವಂತಹ ಸಾಲಕ್ಕೆ ಮಾತ್ರ ಆರು ಪರ್ಸೆಂಟ್ ಬಡ್ಡಿಯನ್ನು ನಿಗಧಿ ಮಾಡಿದೆ. ನ್ಯಾಷನಲೈಸ್ ಬ್ಯಾಂಕುಗಳಿಂದ ತೆಗೆದುಕೊಂಡಿರುವಂತಹ ಸಾಲದ ಮೇಲಿನ ಬಡ್ಡಿಯನ್ನು ಕೂಡ ಆರು ಪ್ರತಿಶತ ಮಾಡಬೇಕೆಂದು ನಾನು ಸರ್ಕಾರದ ಗಮನ ಸೆಳೆಯುವುದಕ್ಕೆ ಇಷ್ಟ ಪಡುತ್ತೇನೆ. ಈ ಸಹಕಾರಿ ಕ್ಷೇತ್ರ ಅದರಲ್ಲಿಯೂ ನಮ್ಮ ಹಳೆಯ ಧಾರವಾಡ ಜಿಲ್ಲೆಯಲ್ಲಿ ಕೆಸಿಸಿ ಬ್ಯಾಂಕ್ ಅತ್ಯಂತ ಕೆಟ್ಟದಾದ ಪರಿಸ್ಥಿತಿಯನ್ನು ಅನುಭವಿಸುತ್ತಿದೆ. ಅವಸಾನದ ಅಂಚಿನಲ್ಲಿರುವಂತಹ ಈ ಕೆಸಿಸಿ ಬ್ಯಾಂಕನ್ನು ಪುನಶ್ಚೇತನಗೊಳಿಸಿ, ಸಹಕಾರಿ ಕ್ಷೇತ್ರದ ಅತ್ಯಂತ ಹಳೆಯ ಬ್ಯಾಂಕಾಗಿರುವ ಈ ಕೆಸಿಸಿ ಬ್ಯಾಂಕನ್ನು ಪುನಶ್ಚೇತನಗೊಳಿಸುವಂತಹ ಕಾರ್ಯಕ್ರಮವನ್ನು ಈ ಆಯವ್ಯಯ ಪಟ್ಟಿಯಲ್ಲಿ ಅಳವಡಿಸದೆ ಇರುವುದು ವಿಶಾಧನೀಯವಾದ ಸಂಗತಿ. ಈ ಮಾತನ್ನು ನಾನು ಏಕೆ ಹೇಳುವುದಕ್ಕೆ ಇಚ್ಛೆ ಪಡುತ್ತೇನೆಂದರೆ, ಸಹಕಾರಿ ಕ್ಷೇತ್ರದ ಈ ಕೆಸಿಸಿ ಬ್ಯಾಂಕಿನ ಅವನತಿಯಿಂದಾಗಿ ಅದರ ಹಿಂದೆ ಇರುವಂತಹ ಅನೇಕ ಸಹಕಾರಿ ಕ್ಷೇತ್ರಗಳು. ಇವತ್ತು ಅರ್ಬನ್ ಬ್ಯಾಂಕ್ ಇರಬಹುದು, ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್ ಇರಬಹುದು, ಅಥವಾ ಕ್ರೆಡಿಟ್ ಸೊಸೈಟಿಗಳಿರಬಹುದು. ಈ ಕೆಸಿಸಿ ಬ್ಯಾಂಕಿನ

ಅವನತಿಯಿಂದಾಗಿ ಸಹಕಾರಿ ಕ್ಷೇತ್ರ ಸಂಪೂರ್ಣವಾಗಿ ನಶಿಸಿ ಹೋಗುವಂತಹ ಭಯ ಇವತ್ತಿನ ದಿವಸ ಬಂದಿದೆ. ಅನೇಕ ಜನ ರೈತರು ಸಹಕಾರಿ ಕ್ಷೇತ್ರದಿಂದ ಹಿಂದೆ ಸರಿಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆ ಕಾರಣದಿಂದ ಈ ಸಹಕಾರಿ ಕ್ಷೇತ್ರಕ್ಕೆ ತಾವು ಆರು ಪ್ರತಿಶತ ಬಡ್ಡಿಯನ್ನು ಕೊಡುವುದರ ಜೊತೆಗೆ ನ್ಯಾಷನಲೈಸ್ ಬ್ಯಾಂಕುಗಳಿಂದ ಪಡೆದಿರುವಂತಹ ಸಾಲವನ್ನು ಇದಕ್ಕೆ ವಿಸ್ತರಣೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆ ಪಟ್ಟು, ಈಗಾಗಲೇ ಅನೇಕ ಸಹಕಾರಿ ಕ್ಷೇತ್ರಗಳಲ್ಲಿ ಇವತ್ತು ಕೃಷಿ ಸಾಲವನ್ನು ಡಬಲ್ ಮಾಡುವ ವಿಚಾರದಲ್ಲಿ ಯಾವ ಬ್ಯಾಂಕುಗಳು ಮುಂದೆ ಬರುತ್ತಿಲ್ಲ. ರೈತರ ಪರಿಸ್ಥಿತಿ ಹೇಗಾಗಿದೆ ಎಂದರೆ, ಈ ರಾಜ್ಯದಲ್ಲಿ ಅತ್ಯಂತ ಕಟ್ಟ ಕಡೆಯ ಮನುಷ್ಯ ಎಂದರೆ ರೈತ ಎಂದು ಹೇಳುವ ಭಾವನೆ ಇವತ್ತು ಹುಟ್ಟುತ್ತಿದೆ. ಅನೇಕ ಜನ ಹೆಣ್ಣು ಮಕ್ಕಳನ್ನು ಹಡೆದಿರುವಂತಹ ಜನರು ರೈತನ ಮಕ್ಕಳಿಗೆ ಕನ್ಯೆಯನ್ನು ಕೊಡಲು ಹಿಂದೆ ಮುಂದೆ ನೋಡುತ್ತಿದ್ದಾರೆ. ಅಂತಹ ಕೆಟ್ಟ ಪರಿಸ್ಥಿತಿ ಇವತ್ತು ನಮ್ಮ ರೈತನಿಗೆ ಒದಗಿ ಬಂದಿದೆ. ಮೂರು ವರ್ಷಗಳಿಂದ ಸತತವಾಗಿ ಭೀಕರವಾದ ಬರಗಾಲ ಇದೆ. ಈ ವರ್ಷವೂ ಕೂಡ ನಾವು ಅತ್ಯಂತ ಭೀಕರವಾದ ಬರಗಾಲಕ್ಕೆ ತುತ್ತಾಗುತ್ತಿದ್ದೇವೆ. ಸಾವಿರಾರು ಸಂಖ್ಯೆಯ ರೈತರು ಇವತ್ತು ತಮ್ಮ ಹೊಲ ಮನೆ ಮಾರಿಕೊಂಡು ಗುಳೆ ಹೋಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಸುಮಾರು 600 ಕ್ಕೂ ಹೆಚ್ಚು ಜನ ರೈತರು ಸಾಲದ ಬಾಧೆಗೆ ಹೆದರಿ ಆತ್ಮಹತ್ಯೆ ಮಾಡಿಕೊಳ್ಳುವಂತಹ ಹೀನಾಯ ಪರಿಸ್ಥಿತಿ ರೈತನಿಗೆ ನಿರ್ಮಾಣವಾಗಿದೆ. ಆ ಕಾರಣದಿಂದ ನಾವೆಲ್ಲರೂ ರೈತನೇ ನಮ್ಮ ದೇಶದ ಬೆನ್ನೆಲುಬು ಎಂದು ಹೇಳುತ್ತೇವೆ, ಈ ರಾಜ್ಯದ ಆಂತರಿಕ ಆಯವ್ಯಯದಲ್ಲಿ ಶೇಕಡ 25ಕ್ಕಿಂತಲೂ ಹೆಚ್ಚಿನ ಕೊಡುಗೆಯನ್ನು ಕೊಡುತ್ತಿರುವಂಥ ರೈತ ಸುಮಾರು 70ಕ್ಕಿಂತಲೂ ಹೆಚ್ಚಿನ ಜನರಿಗೆ ಉದ್ಯೋಗವನ್ನು ಕೊಡುತ್ತಿರುವಂತಹ ರೈತನ ಪರಿಸ್ಥಿತಿ ಹೀಗಾಗಿರಬೇಕಾದರೆ, ನಾವು ರೈತನಿಗೆ ಮೂಲಭೂತ ಸೌಲಭ್ಯಗಳನ್ನು ಕೊಡುವುದರಲ್ಲಿ ಸರ್ಕಾರಗಳು ವಿಫಲವಾಗಿವೆ. ರೈತರಿಗೆ ನೀರಾವರಿ ಯೋಜನೆಗಳನ್ನು ಕೊಡುವುದಕ್ಕೆ ಸರ್ಕಾರ ವಿಫಲವಾಗಿದೆ. ರೈತರಿಗೆ ಅತ್ಯಾಧುನಿಕ ತಾಂತ್ರಿಕ ಜ್ಞಾನವನ್ನು, ಉತ್ತಮವಾದ ಮಾರುಕಟ್ಟೆಯನ್ನು ಕೊಡುವುದರಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆಯಾದ ಕಾರಣ ಇಂದು ರೈತರ ಪರಿಸ್ಥಿತಿ ದುಸ್ಥಿತಿ-ಯಾಗುವಂತೆ ನಿರ್ಮಾಣವಾಗಿದೆ. ಆದಕಾರಣ ಸರ್ಕಾರಕ್ಕೆ ನನ್ನ ವಿನಂತಿಯೆಂದರೆ ನೀರಾವರಿ ಯೋಜನೆಗಳಿಗೆ ಮೊದಲು ಆದ್ಯತೆಯನ್ನು ಕೊಟ್ಟು ನಮ್ಮ ಉತ್ತರ ಕರ್ನಾಟಕಕ್ಕೆ ಪ್ರಮುಖವಾಗಿರತಕ್ಕಂಥ ಅಪ್ಪರ್ ತುಂಗಾ ಯೋಜನೆ ಮತ್ತು ಹಾವೇರಿ ಜಿಲ್ಲೆಗೆ ಪ್ರಮುಖವಾಗಿ ಉಪಯೋಗವಾಗುತ್ತಿರುವಂಥ ಬನಾಪುರ್ ಏತ ನೀರಾವರಿ ಯೋಜನೆ, ಅಗಸನಮಟ್ಟಿ ರಾಮಾಪುರ್ ಏತ ನೀರಾವರಿ ಯೋಜನೆ, ತಿಮ್ಮಾಪುರ್ ಏತ ನೀರಾವರಿ ಯೋಜನೆ, ಹೀಗೆ ಇನ್ನೂ ಅನೇಕ ಏತ ನೀರಾವರಿ ಯೋಜನೆಗಳಿಗೆ ನಾವು ಮೊದಲನೆಯ ಆದ್ಯತೆಯನ್ನು ಕೊಟ್ಟು ಇವೊತ್ತು ಹೆಚ್ಚು ಹಣಕಾಸಿನ ನೆರವನ್ನು ನೀರಾವರಿ ಯೋಜನೆಗಳಿಗೆ ಕೊಟ್ಟಿದ್ದೇ ಆದರೆ ನಾವು ಈ ಭೀಕರ ಬರಗಾಲದಿಂದ ಹೊರಗೆ ಬರುವುದಕ್ಕೆ ಸಾಧ್ಯವಾಗುತ್ತದೆ. ಆದಕಾರಣ ಸರ್ಕಾರ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಗಮನವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಬ್ಯಾರೇಜ್‌ಗಳ ಬಗ್ಗೆ ಹೇಳಬೇಕೆಂದರೆ ಹಾವೇರಿ ಜಿಲ್ಲೆಯಲ್ಲಿ ವರದಾ ನದಿಗೆ ಸುಮಾರು 11 ಬ್ಯಾರೇಜ್‌ಗಳನ್ನು ಕಟ್ಟಿದ್ದಾರೆ. ಆ ಭಾಗದ ರೈತರ ದುರ್ದೈವದಿಂದ ಸತತವಾಗಿ ಐದು ವರ್ಷಗಳಿಂದ ಕೇವಲ ಎರಡ್ಮೂರು ಬ್ಯಾರೇಜ್‌ಗಳನ್ನು ಹೊರತುಪಡಿಸಿದರೆ ಇನ್ನುಳಿದಂಥ ಎಂಟು:ಒಂಭತ್ತು ಬ್ಯಾರೇಜ್‌ಗಳಿಗೆ ಒಂದು ಹನಿ ನೀರನ್ನು

ನಿಲ್ಲಿಸುವುದಕ್ಕೂ ಕೂಡ ಸರ್ಕಾರ ವಿಫಲವಾಗಿದೆ. ಏಕೆ ಹೀಗೆ ಎಂದು ಕಾರಣವನ್ನು ಕೇಳಿದರೆ ಸರ್ಕಾರಿ ಅಧಿಕಾರಿಗಳು ಏನು ಹೇಳುತ್ತಾರೆಂದರೆ ಸುಮಾರು ಐದು ವರ್ಷಗಳಿಂದ ಈ ಸಣ್ಣ ನೀರಾವರಿ ಇಲಾಖೆಗೆ ಧಾರವಾಡ ವಲಯಕ್ಕೆ 15 1/2 ಕೋಟಿ ರೂಪಾಯಿಗಳು ಕೊಡಬೇಕಾದ್ದು ಬಾಕಿ ಇದೆ. ಆದಕಾರಣ ಯಾವುದೇ ಕಂಟ್ರ್ಯಾಕ್ಟರ್ ಕೂಡ ಈ ಸಣ್ಣ ನೀರಾವರಿ ಇಲಾಖೆಗೆ ಸಂಬಂಧಪಟ್ಟ ಕೆಲಸ ಕಾರ್ಯಗಳಲ್ಲಿ ಕಾರ್ಯ ನಿರ್ವಹಿಸುವುದಕ್ಕೆ ಮುಂದೆ ಬರುತ್ತಿಲ್ಲವೆಂದು ಹೇಳುತ್ತಾರೆ. ಆ ಕಾರಣಕ್ಕೆ ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ ಇವೊತ್ತೇ ಈ ಬ್ಯಾರೇಜ್‌ಗಳಿಗೆ ಗೇಟ್‌ಗಳನ್ನು ಅಳವಡಿಸುವಂಥ ನಿಟ್ಟಿನಲ್ಲಿ ಸೆಪರೇಟ್ ಆಗಿ ಒಂದು ಪ್ಯಾಕೇಜ್‌ನ್ನು ಇದಕ್ಕಾಗಿ ಸೃಷ್ಟಿ ಮಾಡಿ ಹಣವನ್ನು ಒದಗಿಸಿ ವಿತರಣೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಏಕೆಂದರೆ ವರದಾ ನದಿಯ ದಂಡೆಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ರೈತರು ಈ ಬೇಸಿಗೆ ಕಾಲದಲ್ಲಿ ಬ್ಯಾರೇಜ್‌ಗಳಲ್ಲಿ ನೀರು ನಿಲ್ಲದೇ ಇರುವುದರಿಂದ ಕೋಟ್ಯಾಂತರ ರೂ.ಗಳ ನಷ್ಟವನ್ನು ಅನುಭವಿಸಿದ ಉದಾಹರಣೆ ಮತ್ತು ಅನೇಕ ಗ್ರಾಮಗಳಿಗೆ ಬೇಸಿಗೆಯಲ್ಲಿ ದನಕರುಗಳಿಗೆ ಕುಡಿಯುವುದಕ್ಕೂ ನೀರು ಸಿಗದೇ ಇರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿರುವುದರಿಂದ ಈ ವರ್ಷ ಬ್ಯಾರೇಜ್‌ಗಳ ನಿರ್ವಹಣೆಗೆ ಮತ್ತು ಬ್ಯಾರೇಜ್‌ಗಳ ದುರಸ್ತಿಗೆ ಹೆಚ್ಚಿನ ಹಣಕಾಸಿನ ನೆರವನ್ನು ಅದರಲ್ಲೂ ವಿಶೇಷವಾಗಿ ಈ ಬ್ಯಾರೇಜ್‌ಗಳಿಗಾಗಿಯೇ ವಿಶೇಷವಾದ ಪ್ಯಾಕೇಜ್‌ನ್ನು ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಬೆಳೆ ವಿಮೆ ಬಗ್ಗೆ ಹೇಳಬೇಕೆಂದರೆ 2002 ನೇ ಸಾಲಿನಲ್ಲಿ ಸುಮಾರು 27 ಕೋಟಿ ರೂಪಾಯಿಗಳ ಬೆಳೆ ವಿಮೆ ಪರಿಹಾರವನ್ನು ಇನ್ನೂ ಕೊಡಬೇಕಾಗಿದೆ. 2003–04ನೇ ಸಾಲಿನ ಮುಂಗಾರು ಹಾಗೂ 2003–04ನೇ ಸಾಲಿನ ಹಿಂಗಾರು ಬೆಳೆ ವಿಮೆಯನ್ನು ಇವೊತ್ತಿಗೂ ಇನ್ನೂ ಕೊಡದೇ ಇರುವುದು ದುರ್ದೈವದ ಸಂಗತಿಯಾಗಿದೆ. ರೈತರು ಹೀನಾಯವಾದಂಥ ಬರಗಾಲಕ್ಕೆ ತುತ್ತಾಗಿದ್ದರೂ ಕೂಡ ಈ ಸರ್ಕಾರ ಕೇವಲ ಬೆಳೆ ವಿಮೆ ಕಂತನ್ನು ಕಟ್ಟಿಸಿಕೊಳ್ಳುವುದಕ್ಕೆ ಮಾತ್ರ ಕಾಲವನ್ನು ನಿಗಧಿಪಡಿಸುತ್ತಿದೆಯೇ ಹೊರತು ಬೆಳೆ ವಿಮೆಯ ಪರಿಹಾರವನ್ನು ಕೊಡುವ ನಿಟ್ಟಿನಲ್ಲಿ ಕಾಲದ ನಿಗಧಿ ಮಾಡಿಲ್ಲ, ನಿರ್ಧಿಷ್ಟವಾದಂಥ ರೂಪುರೇಷೆಗಳಿಲ್ಲ, ರೈತರ ಬಗ್ಗೆ ಸಂಪೂರ್ಣವಾದಂಥ ನಿರ್ಲಕ್ಷ್ಯ ಮಾಡಿದ್ದಾರೆ. ಈ ನಿರ್ಲಕ್ಷ್ಯದಿಂದಾಗಿ ರೈತರಿಗೆ ಬಹಳ ತೊಂದರೆಯಾಗಿದೆ. ಈ ಬೆಳೆ ವಿಮೆ ಪರಿಹಾರವನ್ನು ಸಕಾಲಕ್ಕೆ ರೈತರಿಗೆ ಕೊಟ್ಟಿದ್ದರೆ ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿಯೇ ನಿರ್ಮಾಣವಾಗುತ್ತಿರಲಿಲ್ಲ. ಆದಕಾರಣ ಆಗಸ್ಟ್ 15ನೇ ತಾರೀಖಿನೊಳಗೆ ಬೆಳೆ ವಿಮೆ ಪರಿಹಾರವನ್ನು ಕೊಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಈಗಾಗಲೇ ಸರ್ಕಾರ ಈ ನಿಟ್ಟಿನಲ್ಲಿ 241 ಕೋಟಿ ರೂಪಾಯಿಗಳನ್ನು ನಿಗಧಿ ಮಾಡಿದೆ. 2003–04ನೇ ಸಾಲಿನಗೆ ಬೆಳೆ ವಿಮೆ ಪರಿಹಾರಕ್ಕೆ ಕೇವಲ 241 ಕೋಟಿ ರೂಫಾಯಿ ಸಾಕಾಗುವುದಿಲ್ಲ. ಆ ಕಾರಣಕ್ಕಾಗಿ 241 ಕೋಟಿ ರೂಪಾಯಿ–ಗಳಿಗಿಂತಲೂ ಹೆಚ್ಚಿನ ಹಣವನ್ನು ಇದೇ ಆಯವ್ಯಯದಲ್ಲಿ ಇಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇನ್ನು ಬೆಳೆ ವಿಮೆಯ ಕಂತನ್ನು ಈ ವರ್ಷ ಗಣನೀಯವಾಗಿ ಹೆಚ್ಚಳವನ್ನು ಸರ್ಕಾರ ಮಾಡಿದೆ. ಸುಮಾರು ಪ್ರತಿಶತ 50, 60 ಕ್ಕಿಂತಲೂ ಹೆಚ್ಚು ಮಾಡಿರುವುದರಿಂದ ಅನೇಕ ರೈತರಿಗೆ ಬೆಳೆ ವಿಮೆ ಕಂತನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ಸದನದಲ್ಲಿ ಬೆಳೆ ವಿಮೆ ವಿಚಾರದ ಬಗ್ಗೆ ಹೆಚ್ಚಾಗಿ ತಿಳಿದುಕೊಂಡಿರುವಂಥ ಹಿರಿಯ ಸದಸ್ಯರುಗಳು ಇದ್ದಾರೆ. ಮಾನ್ಯ ಎಸ್.ಎಸ್. ಪಾಟೀಲರು, ಸನ್ಮಾನ್ಯ ಉದಾಸಿಯವರು, ಹೀಗೆ ಇಂಥವರೆಲ್ಲರುಗಳ ಸಲಹೆಗಳನ್ನು ಪಡೆದುಕೊಂಡು ಈ ಬೆಳೆ

ವಿಮೆ ವಿಚಾರದಲ್ಲಿ ನಿರ್ದಿಷ್ಟವಾದಂಥ ರೂಪುರೇಷೆಗಳನ್ನು ಸರ್ಕಾರ ನಿಗಧಿಪಡಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇನ್ನು ಪಡಿತರ ಚೀಟಿ ವಿಚಾರದ ಬಗ್ಗೆ ಹೇಳಬೇಕೆಂದರೆ ಕರ್ನಾಟಕ ರಾಜ್ಯದಲ್ಲಿ ಪಡಿತರ ಚೀಟಿ ವಿಚಾರದಲ್ಲಿ ವಿಪರೀತವಾದಂಥ ಭ್ರಷ್ಟಾಚಾರ ನಡೆದಿದೆ. ಅದರಲ್ಲಿ ಕೆಲವು ಉದಾಹರಣೆಗಳನ್ನು ಇಲ್ಲಿ ಕೊಡುವುದಕ್ಕೆ ನಾನು ಇಚ್ಛೆಪಡುತ್ತಿದ್ದೇನೆ. ಒಂದೇ ಕುಟುಂಬಕ್ಕೆ 5 ರಿಂದ 6 ಅನ್ನ, ಅಂತ್ಯೋದಯ ಯೋಜನೆ ಕಾರ್ಡ್‌ಗಳನ್ನು ಕೊಟ್ಟಿರುವಂಥ ಉದಾಹರಣೆಗಳು ಇದೆ. ಇನ್ನೊಂದು ಉದಾಹರಣೆಯಲ್ಲಿ ಒಬ್ಬನಿಗೆ ಇಬ್ಬರು ಹೆಂಡತಿಯರಿದ್ದು ಆ ಹೆಂಡತಿಯರಲ್ಲಿ ಒಬ್ಬಳು ನಿಜವಾದ ಹೆಂಡತಿಯಾದರೆ ಇನ್ನೊಬ್ಬಳು ಉಪ ಪತ್ನಿಯಾಗಿದ್ದಾಳೆ. ಈ ಕುಟುಂಬದಲ್ಲಿರುವ ಮೂವರಿಗೂ ಪಡಿತರ ಚೀಟಿಯನ್ನು ಕೊಟ್ಟಿದ್ದಾರೆ. ಇಂಥ ಉದಾಹರಣೆಗಳು ಅನೇಕ ತಾಲ್ಲೂಕುಗಳಲ್ಲಿ ಇವೊತ್ತು ಬೆಳಕಿಗೆ ಬರುತ್ತಿದೆ. ಆದಕಾರಣ ಈ ಬಗ್ಗೆ ಸಮಗ್ರವಾಗಿ ತನಿಖೆಯನ್ನು ಮಾಡಿ ಈ ಪಡಿತರ ಚೀಟಿ ವ್ಯವಸ್ಥೆಯಲ್ಲಿ ಆಗಿರುವಂಥ ಅನ್ಯಾಯವನ್ನು ಸರಿಪಡಿಸಿ ಆರ್ಥಿಕವಾಗಿ ಹಿಂದುಳಿದಿರುವಂಥ ರೈತ ವರ್ಗಕ್ಕೆ, ಆರ್ಥಿಕವಾಗಿ ಹಿಂದುಳಿದಿರುವಂಥ ಎಲ್ಲಾ ಜನರಿಗೆ ಪಡಿತರ ಚೀಟಿಯ ವ್ಯವಸ್ಥೆಯನ್ನು ಮಾಡಬೇಕೆಂದು ಸರ್ಕಾರಕ್ಕೆ ಹೇಳಬಯಸುತ್ತೇವೆ. ಇನ್ನು ಪ್ರಾಥಮಿಕ ಶಿಕ್ಷಣದ ಬಗ್ಗೆ ಹೇಳಬೇಕೆಂದರೆ ನಮಗೆ ಸ್ವಾತಂತ್ರ್ಯ ಸಿಕ್ಕು 57 ವರ್ಷಗಳಾಗಿದ್ದರೂ ಕೂಡ ಎಲ್ಲಾ ಪ್ರಾಥಮಿಕ ಶಾಲೆಗಳಿಗೆ ಸ್ವಂತ ಕಟ್ಟಡ ಇಲ್ಲದಿರುವುದನ್ನು ನಾವು ನೋಡುತ್ತಿದ್ದೇವೆ. ಇದು ನಮ್ಮ ದುರ್ದೈವ. ಸುಮಾರು 40 ರಿಂದ 50 ವರ್ಷಗಳಿಂದ ನಗರ ಪ್ರದೇಶಗಳಲ್ಲಿ ಬಾಡಿಗೆ ಕಟ್ಟಡಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ನಡೆಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಆ ಕಟ್ಟಡಗಳ ಪರಿಸ್ಥಿತಿ ಹೇಳತೀರದಾಗಿದೆ. ತಮಿಳುನಾಡಿನ ಕುಂಭಕೋಣಂನಲ್ಲಿ ನಡೆದಂಥ ಘಟನೆಯನ್ನು ನಾವು ನೆನಪು ಮಾಡಿಕೊಳ್ಳಬೇಕಾಗಿದೆ. ಕುಂಭಕೋಣಂನಲ್ಲಿ ಶಾಲೊಯೊಂದರಲ್ಲಿ 94 ಅಮಾಯಕ ಮಕ್ಕಳು ಬಲಿಯಾದರು. ಅಂಥದೇ ಪರಿಸ್ಥಿತಿ ಖಾಸಗಿ ಕಟ್ಟಡಗಳಲ್ಲಿ ಶಾಲೆಗಳು ನಡೆಯುತ್ತಿವೆ. ಆ ಶಾಲೆಗಳ ದುಸ್ತಿತಿ ಹೇಗಿದೆಯೆಂದರೆ ಯಾವ ಸಂದರ್ಭದಲ್ಲಿ ಆ ಕಟ್ಟಡಗಳು ಬೀಳುತ್ತವೋ ಗೊತ್ತಿಲ್ಲ. ಅಂಥ ಕೆಟ್ಟ ಪರಿಸ್ಥಿತಿಯ ಕಟ್ಟಡಗಳು ನಗರ ಪ್ರದೇಶಗಳಲ್ಲಿರುವಂತ ಸಂದರ್ಭ ಇರುವುದರಿಂದ ಮಕ್ಕಳಿಗೂ ಬಹಳ ಆತಂಕಕಾರಿಯಾಗಿರುತ್ತದೆ. ಆದಕಾರಣ ಈ ರೀತಿಯ ಎಲ್ಲಾ ಶಾಲೆಗಳನ್ನು ಗುರುತಿಸಿ ಆ ಎಲ್ಲಾ ಶಾಲೆಗಳಿಗೆ ಈ ವರ್ಷದಲ್ಲಿಯೇ ಅನುದಾನವನ್ನು ಬಿಡುಗಡೆ ಮಾಡಿ ಸ್ವಂತ ಕಟ್ಟಡವನ್ನು ಆ ಶಾಲೆಗಳು ಹೊಂದುವಂತೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇನ್ನು ಶಾಲೆಗಳಲ್ಲಿ ಶಿಕ್ಷಕರ ಕೊರತೆ ಬಗ್ಗೆ ಹೇಳಬೇಕೆಂದರೆ ಇವೊತ್ತು ಅನೇಕ ಕಡೆಗಳಲ್ಲಿ ಒಂದನೇ ತರಗತಿಯಿಂದ ಏಳನೇ ತರಗತಿವರೆಗೆ ಶಿಕ್ಷಣದ ವ್ಯವಸ್ಥೆ ಇದ್ದರೂ ಕೂಡ ಅವೆಲ್ಲ ತರಗತಿಯನ್ನು ಒಬ್ಬನೇ ಶಿಕ್ಷಕ ನೋಡಿಕೊಳ್ಳಬೇಕಾದ ಪರಿಸ್ಥಿತಿ ಇದೆ. ಇದಲ್ಲದೇ ಒಂದೇ ಕೊಠಡಿಯಲ್ಲಿ ಸುಮಾರು 100 ರಿಂದ 120 ವಿದ್ಯಾರ್ಥಿಗಳನ್ನು ಕೂರಿಸುವಂಥ ಹೀನಾಯ ಪರಿಸ್ಥಿತಿ ಪ್ರಾಥಮಿಕ ಶಿಕ್ಷಣದಲ್ಲಿ ಒದಗಿ ಬಂದಿಡೆ. ಆ ಕಾರಣಕ್ಕಾಗಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ ಈ ಆಯವ್ಯಯದಲ್ಲಿಯೇ ಹೆಚ್ಚಿನ ಶಿಕ್ಷಕರನ್ನು ನೇಮಕ ಮಾಡಲು ಹಾಗೂ ಬಾಡಿಗೆ ಕಟ್ಟಡ ಹೊಂದಿದ ಶಾಲೆಗಳು ಸ್ವಂತ ಕಟ್ಟಡವನ್ನು ಹೊಂದುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳಬಯಸುತ್ತೇನೆ. ಇನ್ನು ಪ್ರಾಥಮಿಕ ಆರೋಗ್ಯದ ಬಗ್ಗೆ ಹೇಳಬೇಕೆಂದರೆ ಇದರ ಪರಿಸ್ಥಿತಿಯಂತೂ ಯಾವ ಜನರಿಗೂ ಬೇಡವಾಗಿದೆ. ಅಂಥ ಕೆಟ್ಟದಾದಂಥ ಪರಿಸ್ಥಿತಿ ಇವೊತ್ತು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನಿರ್ಮಾಣವಾಗಿದೆ. ಇವೊತ್ತು ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳು ದುಡ್ಡು ಕೊಡದೇ

ಚಿಕಿತ್ಸೆಯನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಿಲ್ಲವಾಗಿದೆ. ಔಷಧಿಗಳ ಕೊರತೆ, ವೈದ್ಯರುಗಳ ಕೊರತೆ ಹೆಚ್ಚಾಗಿದೆ. ಗ್ರಾಮೀಣ ಭಾಗಕ್ಕಂತೂ ವೈದ್ಯರುಗಳು ಬರುವುದೇ ಇಲ್ಲ. ಗ್ರಾಮೀಣ ಭಾಗದಲ್ಲಿ ಇರಬೇಕಾದಂಥ ಎಲ್ಲಾ ವೈದ್ಯರುಗಳು ಇಂದು ನಗರ ಪ್ರದೇಶದಲ್ಲಿ ವಾಸವಾಗಿದ್ದಾರೆ. ಕೇವಲ ನಗರ ಪ್ರದೇಶದಲ್ಲಿ ವೈದ್ಯರುಗಳು ಇರುವುದಕ್ಕೆ ಇಷ್ಟಪಡುತ್ತಿದ್ದಾರೆ. ಆದಕಾರಣ ಗ್ರಾಮೀಣ ಪ್ರದೇಶದಲ್ಲಿರುವ ವೈದ್ಯರುಗಳು ಕಡ್ಡಾಯವಾಗಿ ಇನ್ನು ಮುಂದೆ ಆಯಾಯ ಗ್ರಾಮಗಳಲ್ಲಿಯೇ ವಾಸ ಮಾಡಬೇಕೆಂದು ಸರ್ಕಾರಿ ಆದೇಶವನ್ನು ಹೊರಡಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇನ್ನು ಔಷಧಿ ಸರಬರಾಜಿನಲ್ಲೂ ಕೂಡ ಆಯಾಯಾ ಭಾಗಗಳಿಗೆ ಅಗತ್ಯವಾಗಿ ಬೇಕಾಗಿರುವಂಥ, ಅಂದರೆ ಆಯಾಯ ಭಾಗಗಳಲ್ಲಿ ಯಾವ ರೋಗಗಳು ಹೆಚ್ಚಾಗಿ ಸಾಮಾನ್ಯ ಜನರನ್ನು, ರೈತರನ್ನು ಕಾಡುತ್ತಿವೆಯೋ ಅದನ್ನು ಗಮನದಲ್ಲಿಟ್ಟುಕೊಂಡು ಆ ರೋಗಗಳ ನಿವಾರಣೆಗೆ ಬೇಕಾದಂಥ ಔಷಧಿಗಳನ್ನು ನಾವು ಖರೀದಿ ಮಾಡಬೇಕಾಗುತ್ತದೆ. ಏಕೆಂದರೆ ಕೆಲವೊಂದು ಭಾಗಗಳಲ್ಲಿ ಮಲೇರಿಯಾ ಕಾಯಿಲೆ ಹೆಚ್ಚಾಗಿ ಇರುತ್ತದೆ. ಕೆಲವು ಭಾಗಗಳಲ್ಲಿ ಇನ್ನೂ ಅನೇಕ ವಿಧವಾದ ಬೇರೆ, ಬೇರೆ ಕಾಯಿಲೆಗಳು ಉಲ್ಬಣವಾಗಿರುತ್ತದೆ. ಆದರೆ ಸರ್ಕಾರ ಸರಬರಾಜು ಮಾಡುವ ಔಷಧಿ ಆ ಭಾಗಕ್ಕೆ ಸಂಬಂಧಪಡದೇ ಇರುವುದರಿಂದ ಔಷಧಿ ಹಾನಿಯಾಗಿ ಇವೊತ್ತು ಗಟಾರಕ್ಕೆ ಚೆಲ್ಲುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಆದಕಾರಣ ಇನ್ನು ಮುಂದೆ ಆಯಾಯ ಭಾಗಗಳಲ್ಲಿ ಬರುವಂಥ ರೋಗಗಳ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಅದರ ನಿವಾರಣೆಗೆ ಬೇಕಾದಂಥ ಔಷಧಗಳನ್ನು ಪೂರೈಕೆ ಮಾಡಬೇಕೆಂದು ತಮ್ಮ ಗಮನಕ್ಕೆ ಈ ವಿಚಾರವನ್ನು ತರಬಯಸುತ್ತೇನೆ. ಇನ್ನು ಉತ್ತರ ಕರ್ನಾಟಕ ಭಾಗಕ್ಕೆ 'ಕಿಮ್ಸ್' ಎನ್ನುವಂಥ ಅಟಾನಮಸ್ ಬಾಡಿ ಇದೆ. ಈ ಸಂಸ್ಥೆಯಲ್ಲಿ ಉತ್ತರ ಕರ್ನಾಟಕದ ಜನರು ಹೃದಯ ರೋಗಕ್ಕೆ ಸಂಬಂಧಪಟ್ಟಂತೆ ಚಿಕಿತ್ಸೆಯನ್ನು ಪಡೆದುಕೊಳ್ಳಬೇಕಾದರೆ ಅಲ್ಲಿ ಯಾವುದೇ ರೀತಿಯ ಸೌಲಭ್ಯಗಳನ್ನು ನಾವು ಪಡೆದುಕೊಳ್ಳುವುದಕ್ಕೆ ಸಾಧ್ಯವಿಲ್ಲವಾಗಿದೆ. ಆ ಭಾಗದಲ್ಲಿ ರೈತ ಏನಾದರೂ ಹೃದಯ ರೋಗಕ್ಕೆ ತುತ್ತಾದರೆ ಆತ ಬೆಂಗಳೂರಿಗೇ ಬಂದು ಚಿಕಿತ್ಸೆಯನ್ನು ಪಡೆದುಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಆದಕಾರಣ ಕಿಮ್ಸ್ ಆಸ್ಪತ್ರೆಯಲ್ಲಿ ಹೃದಯ ರೋಗಕ್ಕೆ ಸಂಬಂಧಪಟ್ಟಂಥ ಸಂಪೂರ್ಣವಾದ ಚಿಕಿತ್ಸೆಯನ್ನು ಕೊಡುವ ನಿಟ್ಟಿನಲ್ಲಿ ಸರ್ಕಾರ ಈ ವರ್ಷದ ಆಯವ್ಯಯದಲ್ಲಿ 20 ಕೋಟಿ ರೂಪಾಯಿಗಳನ್ನು ಇಡಲೇಬೇಕೆನ್ನುವ ಒತ್ತಾಯವನ್ನು ನಾನು ಸರ್ಕಾರಕ್ಕೆ ಮಾಡುತ್ತಿದ್ದೇನೆ. ಇನ್ನು ವಿದ್ಯುತ್ ಪೂರೈಕೆ ಬಗ್ಗೆ ಹೇಳಬೇಕೆಂದರೆ ರೈತರ ಪಂಪ್‌ಸೆಟ್‌ಗಳಿಗೆ ಇದುವರೆಗೆ ದಿನಕ್ಕೆ ಆರರಿಂದ ಎಂಟು ಗಂಟೆಗಳ ಕಾಲ ಮಾತ್ರ ವಿದ್ಯುತ್ ಸರಬರಾಜನ್ನು ಮಾಡುತ್ತಿದ್ದಾರೆ. ರೈತರೇ ಈ ದೇಶದ ಬೆನ್ನೆಲುಬು ಎಂದು ನಾವು ಹೇಳುತ್ತೇವೆ. ರೈತರೇ ಈ ದೇಶಕ್ಕೆ ಬೇಕಾದ ಎಲ್ಲಾ ರೀತಿಯ ಆಹಾರ ಧಾನ್ಯಗಳನ್ನು ಪೂರೈಕೆ ಮಾಡುವ ಮೂಲ ವ್ಯಕ್ತಿಗಳಾಗಿದ್ದರೂ ಕೂಡ ನಾವು ರೈತರಿಗೆ ಮೂರು ಫೇಸ್‌ನಲ್ಲಿ ದಿನಕ್ಕೆ ಕನಿಷ್ಟ 18 ಗಂಟೆಗಳ ಕಾಲ ವಿದ್ಯುತ್‌ನ್ನು ಸರಬರಾಜು ಮಾಡದೇ ಹೋದರೆ ನಾವು ಇವೊತ್ತು ರೈತರನ್ನು ಉದ್ಧಾರ ಮಾಡುವುದಕ್ಕೆ ಸಾಧ್ಯವಿಲ್ಲ.

12.40 ಪಿ.ಎಂ

ಆ ಕಾರಣದಿಂದ ತಾವು ಎಂಟು ತಾಸುಗಳ ಬದಲಿಗೆ ಎಲ್ಲಾ ರೈತರಿಗೂ ಕೂಡ 18 ತಾಸುಗಳ ಕಾಲ ಮೂರು ಫೇಸ್ ವಿದ್ಯುತ್ ಪೂರೈಕೆಯನ್ನು ತಾವು ಮಾಡಲೇಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಾ, ವೈಟಿ ಎನ್ನುವ ಹೊಸ ಪದ್ಧತಿಯನ್ನು ಕಳೆದ ಅಕ್ಟೋಬರ್

2003 ರಿಂದ ವಿದ್ಯುತ್ ಇಲಾಖೆಯವರು ಜಾರಿಗೊಳಿಸಿದ್ದಾರೆ. ಈ ಒಂದು ಪದ್ಧತಿಯಲ್ಲಿ ತುಂಬಿರುವಂತಹ ಅನೇಕ ಜನ ರೈತರಿಗೆ ಅಂದರೆ ಪ್ರತಿಶತ 99 ರೈತರಿಗೆ ಇವತ್ತಿನವರೆಗೂ ಕೂಡ ಟ್ರಾನ್ಸ್‌ಫರ್ಮರ್ ಕೊಟ್ಟಿಲ್ಲ. ಇದೊಂದು ದುರ್ದೈವದ ಸಂಗತಿ. ನಮ್ಮ ರೈತರ ಅಭಿವೃದ್ಧಿ ಆಗುವುದಕ್ಕೆ ಕೂಡ ಹಿನ್ನೆಡೆ ಅನುಭವಿಸುತ್ತಿದ್ದೇವೆ. ಈ ಓವೈಟಿ ಪದ್ಧತಿಯನ್ನು ಸಂಪೂರ್ಣವಾಗಿ ರದ್ದುಪಡಿಸಿ ಮೊದಲು ಇದ್ದಂತಹ ಪದ್ಧತಿಯನ್ನು ಜಾರಿಗೊಳಿಸಬೇಕೆಂದು ಈ ಸದನದ ಮುಖಾಂತರ ನಾನು ಸರ್ಕಾರದ ಗಮನವನ್ನು ಸೆಳೆಯ ಬಯಸುತ್ತೇನೆ. ಇನ್ನು ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿ ಬಗ್ಗೆ ಕೂಡ ಈ ವರ್ಷದ ಆಯವ್ಯಯದಲ್ಲಿ ಯಾವುದೇ ಒಂದು ವಿಚಾರವನ್ನು ಕೂಡ ಪ್ರಸ್ತಾಪ ಮಾಡಿಲ್ಲ. ಒಬ್ಬ ಗ್ರಾಮಪಂಚಾಯತ್ ಸದಸ್ಯನಿಗೆ ತನ್ನ ಕ್ಷೇತ್ರದಲ್ಲಿ ಅಭಿವೃದ್ಧಿ ಹಣವನ್ನು ಕೊಡುವುದಕ್ಕೆ ಸಾಧ್ಯತೆ ಇದೆ. ಆದರೆ ಒಬ್ಬ ತಾಲ್ಲುಕಿನ ಶಾಸಕನಾಗಿ ಆ ಕ್ಷೇತ್ರದಲ್ಲಿ ಇರುವಂತಹ ಅತ್ಯಂತ ಅವಶ್ಯಕವಾಗಿರತಕ್ಕಂಥ ಅಭಿವೃದ್ಧಿ ಕೆಲಸಗಳಿಗೆ ಇವತ್ತು ಹಣಕಾಸಿನ ನೆರವನ್ನು ಕೊಡುವುದಕ್ಕೆ ನಾವು ವಿಫಲರಾಗಿದ್ದೇವೆ. ಶಾಸಕರಾಗಿ ಇದು ದುರ್ದೈವದ ಸಂಗತಿ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಚ್ಛೆಪಡುತ್ತಿದ್ದೇನೆ. ಅದಕ್ಕೋಸ್ಕರ ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಯನ್ನು ಈ ವರ್ಷದ ಆಯವ್ಯಯದಲ್ಲಿ ಒಂದು ಕೋಟಿ ರೂಪಾಯಿಯನ್ನು ಇಡಬೇಕೆಂದು ಒತ್ತಾಯವನ್ನು ಮಾಡುತ್ತೇನೆ.

ಅಧ್ಯಕ್ಷರು : ಇನ್ನು ಬಹಳ ಜನ ಸದಸ್ಯರಿದ್ದಾರೆ, ಎಲ್ಲಾ ಹೊಸಬರಿಗೆ ಅವಕಾಶ ಕೊಡಬೇಕೆಂದು ಕೊಡುತ್ತಿದ್ದೇನೆ. ತಾವು ಹತ್ತು ನಿಮಿಷದಲ್ಲಿ ಮುಗಿಸಬೇಕು. ತಾವು ಈಗಾಗಲೆ ಪ್ರಾರಂಭ ಮಾಡಿ 15 ನಿಮಿಷವಾಯಿತು.

ಶ್ರೀ ಶಿವರಾಜ್ : ಮಾನ್ಯ ಅಧ್ಯಕ್ಷರೇ, ನನಗೆ ಈ ಸಂದರ್ಭದಲ್ಲಿ ಕಾಲವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಗೊಂದಲ

ಅಧ್ಯಕ್ಷರು : ಈಗ ಬಿ.ಆರ್. ಪಾಟೀಲ್ ಮಾತನಾಡಿ. ದಯಮಾಡಿ ಎಲ್ಲಾ ಕುಳಿತುಕೊಳ್ಳಿ. ಮಾನ್ಯ ಆಂಜನೇಯ ಅವರೇ ದಯಮಾಡಿ ತಾವು ಕುಳಿತುಕೊಳ್ಳಿ.

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ಅಪೋಜೆಷನ್ ಪಾರ್ಟಿಗೆ ಅವಕಾಶ ಕೊಡಿ.

ಗೊಂದಲ

ಶ್ರೀ ಕಟ್ಟಾ ಸುಬ್ರಮ್ಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ, ಸರ್ಕಾರದ ಕಡೆ ಅವಕಾಶ ಕೊಟ್ಟರೆ ಹೇಗೆ?

ಅಧ್ಯಕ್ಷರು : ನಾನು ಯಾವ್ಯಾವ ಪಕ್ಷಕ್ಕೆ ಎಷ್ಟೆಷ್ಟು ಸಮಯ ಕೊಡಬೇಕೆಂದು ನೋಡಿ ಕೊಡುತ್ತಿದ್ದೇನೆ. ಎಲ್ಲರೂ ದಯಮಾಡಿ ಕುಳಿತುಕೊಳ್ಳಿ. ನಿಮಗೆಲ್ಲಾ ಅವಕಾಶ ಸಿಗುತ್ತದೆ. ನೀವು ಈ ರೀತಿ ಮಾತನಾಡಿದರೆ ಪದೇಪದೇ ಅರ್ಥ ಇಲ್ಲ.

ಶ್ರೀ ಹೆಚ್. ಆಂಜನೇಯ : ಮಾನ್ಯ ಅಧ್ಯಕ್ಷರೆ, ನಾವು ನಿನ್ನೆಯಿಂದ ಕಾಯುತ್ತಿದ್ದೇವೆ.

ಅಧ್ಯಕ್ಷರು : ಕೋಡೋಣ, ಇವತ್ತೆಲ್ಲಾ ಚರ್ಚೆ ಇದೆ. ಇವತ್ತು ನಮ್ಮ ಅರ್ಥ ಸಚಿವರು ಎರಡು ಘಂಟೆಗೆ ಉತ್ತರ ಕೊಡುತ್ತಿಲ್ಲ.

ಶ್ರೀ ಕಟ್ಟಾ ಸುಬ್ರಮ್ಮಣ್ಯ ನಾಯ್ಡು : ಅವಕಾಶ ಎಲ್ಲಾ ಅವರಿಗೆ ಕೊಡುತ್ತಿದ್ದರೆ ನಾವೇನು ಮಾಡಬೇಕು? ನಮಗೆ ಅವಕಾಶ ದಯವಿಟ್ಟು ಮಾಡಿಕೊಡಬೇಕು.

ಅಧ್ಯಕ್ಷರು : ಎಲ್ಲರ ವಿವೇಚನೆಗೆ ನಾನು ಬಿಡುತ್ತೇನೆ. ಕುಳಿತುಕೊಳ್ಳಿ, ಪಾಟೀಲರೇ, ತಾವು ಆದಷ್ಟು ಬೇಗ ಮುಗಿಸಿ. ಇನ್ನೂ ಬಹಳ ಜನ ಮಾತನಾಡುವುದಕ್ಕೆ ಇಷ್ಟ ಪಡುತ್ತಿದ್ದಾರೆ.

† **ಶ್ರೀ ಬಿ.ಆರ್. ಪಾಟೀಲ್ (ಆಳಂದ)** : ಮಾನ್ಯ ಅಧ್ಯಕ್ಷರೆ, ಮಾನ್ಯ ಹಣಕಾಸಿನ ಸಚಿವರಾದಂತಹ ಸಿದ್ಧರಾಮಯ್ಯನವರು 2004–05ನೇ ಸಾಲಿನ ಬಜೆಟ್ ಅನ್ನು ಏನು ಸದನದ ಮುಂದೆ ಮಂಡಿಸಿದ್ದಾರೆ, ಅದಕ್ಕೆ ನಾನು ಸ್ವಾಗತ ಬಯಸುತ್ತಾ ಈ ಒಂದು ಬಜೆಟ್ ಅನ್ನು ಜನಪರವಾದಂತಹ ಹಾಗೂ ಪ್ರಗತಿಯ ಬಜೆಟ್ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಈ ಬಜೆಟ್ ಅನ್ನು ಏನು ಮಂಡಿಸಿದ್ದಾರೆ ಇದು ಬಹಳ ಅಸಾಮಾನ್ಯ ಕೆಲಸ. ಏಕೆಂದರೆ ಇಡೀ ದೇಶ ಆರ್ಥಿಕ ಬಿಕ್ಕಟ್ಟಿನಲ್ಲಿ ಹೋಗುತ್ತಿರಬೇಕಾದರೆ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದರ ಜೊತೆಗೆ ಮತ್ತು ಸಾಮಾನ್ಯ ಜನರಿಗೆ ಒಂದು ಒಳ್ಳೆಯ ಜೀವನ ಕೊಡತಕ್ಕಂಥ ಮತ್ತು ಆಡಳಿತ ಕೊಡತಕ್ಕಂಥ ಬಜೆಟ್‌ನ್ನು ಮಂಡಿಸಿದ್ದಾರೆ. ಇದು ಏನು ತೋರಿಸುತ್ತದೆಂದರೆ ಒಬ್ಬ ಗಟ್ಟಿ ಮನುಷ್ಯನ ದಿಟ್ಟ ಹೆಜ್ಜೆ ಎಂದು ತೋರಿಸುತ್ತದೆ. ಇವತ್ತೇನು ಪಾಪ್ಯುಲಿಸ್ಟ್ ಪ್ರೋಗ್ರಾಂ ಎಂದು ಸರ್ಕಾರದಿಂದ ತೆಗೆದುಕೊಂಡು ಜನರನ್ನು ಒಲೈಸುವಂತಹ ರಾಜಕಾರಣ ನಡೆದಿದೆ ಇಂತಹ ಒಂದು ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಕೂಡ ಸಾಮಾನ್ಯ ಜನರ ಮೇಲೆ ಭಾರವನ್ನು ಹಾಕದೆ ಇಂತಹ ಒಂದು ಬಜೆಟ್‌ನ್ನು ಕೊಟ್ಟಿದ್ದನ್ನು ನೋಡಿದರೆ ಮಾನ್ಯ ಹಣಕಾಸು ಸಚಿವರಿಗೆ ಒಂದು ದೂರದೃಷ್ಟಿ ಇದೆ ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಒಂದು ಪೊಲಿಟಿಕಲ್ ವಿಷನ್ ಎಂದು ಹೇಳುತ್ತಾರೆ. ಯಾವುದೇ ಒಬ್ಬ ರಾಜಕೀಯ ವ್ಯಕ್ತಿ ಅಥವಾ ನಾಯಕರಾದಂತಹವರಿಗೆ ಒಂದು ದೂರದೃಷ್ಟಿ ಇರಬೇಕಾದ್ದು ಬಹಳ ಅವಶ್ಯಕತೆ. ಇವತ್ತೇನು ಬಜೆಟ್ ಮಂಡಿಸಿದ್ದಾರೆ ಇದರಲ್ಲಿ ಒಂದು ಪೊಲಿಟಿಕಲ್ ವಿಷನ್ ಮತ್ತು ದೂರದೃಷ್ಟಿಯನ್ನು ನಾವು ಗಮನಿಸಬೇಕಾಗುತ್ತದೆ. ಇದೊಂದು ಬಜೆಟ್ ಕೊಡಬೇಕಾದರೆ ರಾಜಕೀಯ ಇಚ್ಛಾಶಕ್ತಿ ಕೂಡ ಬಹಳ ಅವಶ್ಯಕತೆ ಇದೆ. ಪೊಲಿಟಿಕಲ್ ವಿಲ್, ಈ ಪೊಲಿಟಿಕಲ್ ವಿಲ್ ಅನ್ನು ಯಾರು ತೆಗೆದುಕೊಳ್ಳುತ್ತಾರೆ ಎಂದರೆ ಯಾರು ಮುಂದಿನ ಆಗುಹೋಗುಗಳ ಬಗ್ಗೆ ಯೋಚನೆ ಮಾಡದೇ ಬರೀ ಜನಪರವಾದಂತಹ ಚಿಂತನೆ ಮಾಡುವಂತಹ ಮನುಷ್ಯ ಇಂತಹ ಪ್ರಗತಿ ಪರವಾದಂತಹ ಬಜೆಟ್ ಅನ್ನು ಕೊಡುವಂತಹ ಇಚ್ಛಾಶಕ್ತಿ ಇರುವಂತಹ ಮಾನ್ಯ ಸಿದ್ಧರಾಮಯ್ಯ-ನವರನ್ನು ನಾವೆಲ್ಲಾ ನಿಜವಾಗಿಯೂ ಅಭಿನಂದಿಸಬೇಕಾಗುತ್ತದೆ. ಇವತ್ತು ಈ ಬಜೆಟ್ ಬಗ್ಗೆ ಬಹಳ ಚರ್ಚೆಯಾಗಿದೆ. ಇದರ ಬಗ್ಗೆ ಪತ್ರಿಕೆಯಲ್ಲಿ ಸಹ ಬರೆದಿದ್ದಾರೆ. ಆರ್ಥಿಕ ತಜ್ಞರೂ ಕೂಡ ಬಹಳ ಒಳ್ಳೆಯ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಇದು ಅಷ್ಟೇ ಅಲ್ಲ ಇದರ ಬಗ್ಗೆ ಪಾರ್ಲಿಮೆಂಟ್‌ನಲ್ಲಿ ಕೂಡ ಇದರ ಬಗ್ಗೆ ಹೊಗಳಿಕೆ ಬಂದಿದೆ. ಮಾಜಿ ಪ್ರಧಾನಿಗಳಾದಂತಹ ದೇವೇಗೌಡರು ಇಡೀ ರಾಷ್ಟ್ರಕ್ಕೆ ಈ ಬಜೆಟ್ ಬಗ್ಗೆ ಇದು ಆದರ್ಶವಾದಂತಹ ಬಜೆಟ್, ಇದನ್ನು ಎಲ್ಲರೂ ಕೂಡ ಗಮನಿಸಬೇಕೆಂದು ಹೇಳಿ ಪಾರ್ಲಿಮೆಂಟ್‌ನಲ್ಲಿ ಹೊಗಳಿಕೆಯಾಗಿರತಕ್ಕಂಥ ಬಜೆಟ್ ಅನ್ನು ನೋಡಿದರೆ ನಿಜವಾಗಿಯೂ ಕೂಡ ಇಂತಹ ಒಂದು ಬಜೆಟ್ ಅನ್ನು ಕೊಟ್ಟಿದ್ದು ಸಂತೋಷದ ವಿಚಾರ. ಈ ಬಜೆಟ್‌ನಲ್ಲಿ ಮುಖ್ಯವಾದ ಅಂಶಗಳೇನೆಂದರೆ ಕೃಷಿ ಮತ್ತು ನೀರಾವರಿ ಹಾಗೂ ಇಂಡಸ್ಟ್ರೀ ಬಗ್ಗೆ ಹೇಳುವುದಾದರೆ, ಯಾವುದೇ ಒಬ್ಬ ವ್ಯಕ್ತಿ ರಾಜಕೀಯ ದೂರದೃಷ್ಟಿ ಇರುವವನು ಮೂಲವನ್ನು ಹುಡುಕಿಕೊಂಡು ಹೋಗಿ ಎಲ್ಲಿ ಅಭಿವೃದ್ಧಿ ಮಾಡಬೇಕು, ಎಲ್ಲಿ ಹೆಚ್ಚು ಜನರಿಗೆ ಉದ್ಯೋಗವನ್ನು ಸೃಷ್ಟಿಸಬೇಕು ಮತ್ತು ಯಾವ ಕ್ಷೇತ್ರವನ್ನು ಇವತ್ತಿನ ಪರಿಸ್ಥಿತಿಯಲ್ಲಿ ರಕ್ಷಣೆ ಮಾಡಬೇಕೆನ್ನುವ ವಿಚಾರದಲ್ಲಿ

ಯಾರು ಯೋಚನೆ ಮಾಡುತ್ತಾನೆ ಅವನಿಗೆ ಮಾತ್ರ ಈ ಮೂರು ವಲಯಗಳ ಬಗ್ಗೆ ಕಾಳಜಿ ಇರುವುದಕ್ಕೆ ಸಾಧ್ಯತೆ ಇದೆ. ಇವತ್ತು ಪಕ್ಷ ಬೇದಭಾವ ಇಲ್ಲದೆ ಇಡೀ ಸದನದಲ್ಲಿ ಎಲ್ಲರೂ ಸಹ ರೈತರ ಬಗ್ಗೆ ಅವರ ಪರವಾಗಿ ಮಾತನಾಡಿದರು. ಮತ್ತು ರೈತರ ರಕ್ಷಣೆ ಮಾಡಬೇಕೆನ್ನುವ ಮಾತನ್ನು ಹೇಳಿದರು. ಇವತ್ತು ಬಹಳ ಕಷ್ಟದ ಕಾಲ. ಇವತ್ತು ನಮ್ಮ ದೇಶದ ಬಾಗಿಲು ಮುಕ್ತವಾಗಿ ತೆರೆದಿಟ್ಟಿದ್ದಾರೆ. ಈ ಒಂದು ಆರ್ಥಿಕ ಉದಾರೀಕರಣದ ನೀತಿಯನ್ನು ಆಧರಿಸಿ ಇಂತಹ ಒಂದು ಪರಿಸ್ಥಿತಿಯಲ್ಲಿ ನಮ್ಮ ಕೃಷಿಯನ್ನು ಗಟ್ಟಿಯಾಗಿ ಉಳಿಸಿಕೊಂಡು ಇದನ್ನು ಬೆಳೆಸಿಕೊಂಡು ನಮ್ಮ ರೈತರಿಗೆ ರಕ್ಷಣೆ ಕೊಡಬೇಕಾದಂತಹ ಕೆಲಸ ಬಹಳ ಕಷ್ಟದಾಯದವಾದಂತಹ ಕೆಲಸ. ಆದರೂ ಕೂಡ ಮಾನ್ಯ ಸಿದ್ಧರಾಮಯ್ಯನವರು ಒಂದು ಕ್ರಾಂತಿಕಾರಿ ಮಾತನ್ನು ಹೇಳಿದ್ದಾರೆ. We will consider agriculture as an industry ಎಂದು ಹೇಳಿದ್ದಾರೆ. ಬಹುಶಃ ಇದುವರೆಗೆ ಯಾರೂ ಕೂಡ ಈ ಮಾತನ್ನು ಹೇಳಿರಲಿಲ್ಲ. ಇದು ಕೃಷಿ ಬರೀ ಕೃಷಿಯಾಗಿಯೇ ಉಳಿಯಬಾರದು. ಈ ಒಂದು ಕೃಷಿ ಇಂಡಸ್ಟ್ರೀ ಆಗಬೇಕೆನ್ನುವ ಮಾತು ಅನೇಕ ದಿನಗಳಿಂದ ಕೇಳುತ್ತಿತ್ತು. ಮಾನ್ಯ ಸಿದ್ಧರಾಮಯ್ಯನವರು ಮೊದಲನೆ ಸಲ ಈ ಬಜೆಟ್‌ನಲ್ಲಿ ಈ ಕೃಷಿಯನ್ನು ಉದ್ದಿಮೆಯನ್ನಾಗಿ ಪರಿವರ್ತನೆ ಮಾಡುವಂತಹ ವಿಚಾರವನ್ನು ಹೇಳಿರುವುದನ್ನು ನೋಡಿದರೆ ಇವತ್ತು ಈ ಕೃಷಿಗೆ ಬಹಳ ಮಹತ್ವವಾದ ಸ್ಥಾನಮಾನ ಸಿಗಬೇಕಾದ್ದು ಸಿಗುತ್ತದೆ ಎನ್ನುವ ಭರವಸೆ ನನಗೆ ಇದೆ. ಇವತ್ತೆನೋ ಕೃಷಿ ಕ್ಷೇತ್ರದಲ್ಲಿ ಬಹಳಷ್ಟು ಏರುಪೇರುಗಳು ಆಗಿವೆ. ಯಾವ ರೈತ ಬೆಳೆ ಬೆಳೆಯುತ್ತಾನೆ ಅವನಿಗೆ ಒಳ್ಳೆಯ ಬೆಲೆ ಸಿಗುತ್ತದೆ ಎನ್ನುವ ಭರವಸೆ ಇಲ್ಲ. ಈ ಮುಕ್ತ ಉದಾರೀಕರಣ ಮತ್ತು ವ್ಯಾಪಾರೀಕರಣದಿಂದ ಬೇರೆ ದೇಶದಿಂದ ಯಾವುದೇ ವಸ್ತು ಬಂದರೂ ಕೂಡ ಮಾರಾಟ ಮಾಡಬಹುದು. ಇಂತಹ ಒಂದು ಕಾಂಪಿಟೇಷನ್‌ನಲ್ಲಿ ಈ ಕೃಷಿಯನ್ನು ಉಳಿಸಿಕೊಳ್ಳಬೇಕಾದಂತಹ ಕೆಲಸ ರಾಜ್ಯಸರ್ಕಾರದಷ್ಟೇ ಅಲ್ಲ, ಕೇಂದ್ರ ಸರ್ಕಾರದಲ್ಲಿ ಕೂಡ ಅಷ್ಟೇ ದೊಡ್ಡ ಒಂದು ಜವಾಬ್ದಾರಿಯನ್ನು ಇದೆ ಎನ್ನುವುದನ್ನು ನಾವು ಮರೆಯಬಾರದು. ಇಡೀ ದೇಶದ ಒಂದು ನೀತಿ ನಿರ್ಧಾರ ರೂಪ ಮಾಡುವವರು ಕೇಂದ್ರ ಸರ್ಕಾರದವರು. ಹಾಗಾಗಿ ಈ ಕೇಂದ್ರ ಸರ್ಕಾರ ಕೂಡ ಕೃಷಿ ರಕ್ಷಣೆ ಮಾಡುವಂತಹ ನೀತಿಯನ್ನು ಅಳವಡಿಸಿಕೊಂಡರೆ ನಿಜವಾಗಲೂ ಕೂಡ ಕೃಷಿಯನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಕೂಡ ಕೇಂದ್ರ ಸರ್ಕಾರ ಗಮನಿಸಬೇಕಾಗುತ್ತದೆ. ಸಾಮಾನ್ಯವಾಗಿ ನಿರುದ್ಯೋಗ ಸಮಸ್ಯೆಯನ್ನು ನಾವೆಲ್ಲಾ ಕ್ಷೇತ್ರಗಳಲ್ಲಿ ನೋಡುತ್ತಿದ್ದೇವೆ. ಆದರೆ ದುರ್ದೈವ ನಿರುದ್ಯೋಗ ಎಂದತಕ್ಷಣ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ಎಷ್ಟು ಜನ ಓದು ಬರುವವರು ಇಂಜನಿಯರ್‌ಗಳು ಹೆಸರು ನೋಂದಾಯಿಸಿದ್ದಾರೆ ಎಂದು ನೋಡಿದಾಗ ಅಷ್ಟೇ ಜನರ ಅಂಕಿ ಅಂಶವನ್ನು ಮಾತ್ರ ನಾವು ಗಮನಕ್ಕೆ ತೆಗೆದುಕೊಳ್ಳುತ್ತೇವೆ. ಎಕ್ಸ್‌ಚೇಂಜ್‌ನಲ್ಲಿ ಎಷ್ಟು ಜನರು ಓದುಬರೆ ಈ ನಿರುದ್ಯೋಗದ ಬಗ್ಗೆ ಗ್ರಾಮೀಣ ಪ್ರದೇಶದಲ್ಲಿ ಕೂಲಿಕೆಲಸ ಮಾಡುವವರ ಬಗ್ಗೆ ಗಮನಹರಿಸುವುದಿಲ್ಲ. ಅವರ ಅಂಕಿಸಂಖ್ಯೆಗಳು ಇಲ್ಲ, ಇವತ್ತು ಈ ಅನಕ್ಷಕರು ಅತ್ಯಂತ ಕಷ್ಟದಲ್ಲಿದ್ದಾರೆ. ಅವರ ಬಗ್ಗೆ ಯಾರೂ ಮಾತನಾಡುವವರು ಇಲ್ಲ. ಅವರು ಸಂಘಟಿತರಾಗಿಲ್ಲ, ಹೋರಾಟ ಮಾಡುವುದಿಲ್ಲ, ಮತ್ತೆ ಅವರು ಪತ್ರಿಕೆಗಳಲ್ಲಿ ಬರೆಯುವುದಿಲ್ಲ. ಈ ರೀತಿಯಾಗಿ ನಿರುದ್ಯೋಗದ ಸಂಖ್ಯೆ ಗ್ರಾಮೀಣ ಪ್ರದೇಶಗಳಲ್ಲಿ ಭೀಕರವಾಗಿ ಬೆಳೆಯುತ್ತಿದೆ. ಇದಕ್ಕೆ ಕಾರಣ ಕೃಷಿಯೂ ಲಾಭದಾಯಕವಾಗಿ ಇಲ್ಲವೆನ್ನುವಂಥಾದ್ದು ಮುಖ್ಯವಾದದ್ದು ಎಂದು ಇವತ್ತು ನಾವು ಗಮನಿಸಬೇಕಾಗುತ್ತದೆ. ನಮ್ಮ ದೇಶದ ಎಲ್ಲಾ ನೀರಾವರಿ ಸಂಪನ್ಮೂಲಗಳನ್ನು ನಾವು ಉಪಯೋಗ

ಮಾಡಿಕೊಂಡರೂ ಕೂಡ, ಇವತ್ತು ತಜ್ಞರ ಅಭಿಪ್ರಾಯದ ಪ್ರಕಾರ, ಶೇಕಡಾ 33 ರಷ್ಟು ಭೂಮಿಯನ್ನು ಮಾತ್ರ ನೀರಾವರಿಗೆ ಒಳಪಡಿಸಲು ಸಾಧ್ಯವಿದೆಯೆಂಬ ಮಾತನ್ನು ತಜ್ಞರು ಹೇಳುತ್ತಿದ್ದಾರೆ. ಆದರೆ ದುರ್ದೈವದಿಂದ ನಮ್ಮ ದೇಶದ ರಾಜಸ್ಥಾನದ ನಂತರ, ನಮ್ಮ ಕರ್ನಾಟಕ ರಾಜ್ಯ ಅತ್ಯಂತ ಒಣ ಭೂಮಿ ಪ್ರದೇಶವಾಗಿದ್ದು, ಇವು ಕೃಷಿ ಆಧಾರಿತವಾಗಿರುವುದರಿಂದ, ಇಲ್ಲಿ ಇದಕ್ಕೆ ಹೆಚ್ಚು ಗಮನಕೊಡಬೇಕಾದಂಥಾದ್ದು, ನೀರಾವರಿಗೆ ಆಗಿದೆ. ಈ ನೀರಾವರಿಗೂ ಸಾಕಷ್ಟು ಹಣವನ್ನು ಒದಗಿಸುವಂತಹ ಮಾತನ್ನು ಹೇಳಿದರೂ ಕೂಡ, ಇದು ಸಾಕಾಗುವುದಿಲ್ಲ. ಇವತ್ತು ಆನ್ ಗೋಯಿಂಗ್ ಪ್ರಾಜೆಕ್ಟ್‌ಗಳು ಏನು ಇವೆ, ಅದರ ಬಗ್ಗೆ ಮಾತ್ರ ಹಣದ ವ್ಯವಸ್ಥೆಯನ್ನು ಮಾಡಿಕೊಟ್ಟಿದ್ದಾರೆ. ಇನ್ನೂ ಹೆಚ್ಚಿಗೆ ನೀರಾವರಿಗೆ ಬಳಸಿಕೊಳ್ಳುವಂತಹ ಅವಕಾಶಗಳು ಇವೆ. ಅದರ ಬಗ್ಗೆಯೂ ಕೂಡ ನಾವು ಗಮನ ಹರಿಸಬೇಕಾಗುತ್ತದೆ. ಈ ನೀರಾವರಿಯನ್ನು ನಾವು ಹೆಚ್ಚಿಗೆ ಮಾಡಿಕೊಳ್ಳಬೇಕಾದರೆ, ನಾವು ನೀರಿನ ಬಳಕೆಯನ್ನು ಇವತ್ತು ಹೆಚ್ಚಿಗೆ ಮಾಡಿಕೊಳ್ಳಬೇಕಾದರೆ, ನಾವು ಬಹಳ ಯುದ್ಧೋಪಾದಿಯಲ್ಲಿ ಈ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ. ಮೊನ್ನೆ ಒಂದು ಪತ್ರಿಕೆಯಲ್ಲಿ ವರದಿ ಬಂದಿತ್ತು, ಅದು ಏನೆಂದರೆ ಕೊಲಂಬೊ ವಿಶ್ವವಿದ್ಯಾನಿಲಯದ ಒಬ್ಬ ವಿಜ್ಞಾನಿ ಹೇಳಿದ್ದಾರೆ. ನಮ್ಮ ಭಾರತದೇಶದಲ್ಲಿ ನೀರಿನ ಪರಿಸ್ಥಿತಿ ಇದೇ ರೀತಿಯಲ್ಲಿ ಗಂಭಿರವಾಗಿ ಮುಂದುವರೆದರೆ, 2024 ರಲ್ಲಿ ಭಾರತ ದೇಶಕ್ಕೆ ಕುಡಿಯುವ ನೀರನ್ನು ಆಮದು ಮಾಡುಕೊಳ್ಳಬೇಕಾಗುತ್ತದೆಂಬ ಮಾತನ್ನು ಈ ವಿಜ್ಞಾನಿ ಹೇಳಿದ್ದಾರೆ. ಈ 2024ನೇ ವರ್ಷ ಏನೂ ದೂರವಿಲ್ಲ. ನಾವು ಮಳೆ ನೀರನ್ನು ಹಿಡಿದು ಇಟ್ಟುಕೊಳ್ಳುವ ಕೆಲಸವನ್ನು ಮಾಡದೇ ಹೋದರೆ, 2024ರ ಆ ದಿನಗಳನ್ನು ನಾವೆಲ್ಲಾ ಅನುಭವಿಸಬೇಕಾಗುತ್ತದೆ. ಆ ಒಂದು ವಿಚಾರವನ್ನು ದೃಷ್ಟಿಯಲ್ಲಿಟ್ಟುಕೊಂಡು, ಈ ಮಳೆನೀರನ್ನು ಯಾವ ರೀತಿಯಲ್ಲಿ ಹೆಚ್ಚಿಗೆ ಉಪಯೋಗ ಮಾಡಿಕೊಳ್ಳಬೇಕೆಂಬ ವಿಚಾರವನ್ನು, ಗಂಭೀರವಾಗಿ ನಾನು ಸರ್ಕಾರಕ್ಕೆ ಹೇಳುವಂಥಾದ್ದು, ಏನೆಂದರೆ, ಎಲ್ಲಾ ಕೆಲಸಗಳನ್ನು ಬದಿಗೊತ್ತಿ, ಎಲ್ಲಿಯವರೆಗೆ ನಾವು ನೀರು ಸಂಗ್ರಹಣೆ ಮಾಡುವಂಥ ಮತ್ತು ಈ ಮಳೆನೀರನ್ನು ಉಪಯೋಗ ಮಾಡಿಕೊಳ್ಳುವಂತಹ, ಕೆಲಸವನ್ನು ಮಾಡುವುದಕ್ಕೆ ನಾವು ಮುಂದಾಗುವುದಿಲ್ಲ, ಅಲ್ಲಿಯವರೆಗೆ, ನಾವು ಈ ದೇಶವನ್ನು ಯಾರೂ ಉಳಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಈ ಜನರನ್ನು ರಕ್ಷಣೆ ಮಾಡುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ಇಲ್ಲಿ ರಾಜಕಾರಣಗಳೂ ಉಳಿಯುವುದಿಲ್ಲ, ಮತದಾರರೂ ಉಳಿಯುವುದಿಲ್ಲ, ಅಂತಹ ಗಂಭೀರವಾದಂತಹ ಪರಿಸ್ಥಿತಿ ಬಹಳ ಹತ್ತಿರಕ್ಕೆ ಬರುತ್ತಿದೆ. ಇವತ್ತು ಮಳೆಗಾಲ ಕಡಿಮೆಯಾಗಿದೆ ಎಂಬ ಮಾತು ಇದೆ, ಇದರಲ್ಲಿ ಅಷ್ಟು ಸತ್ಯಾಂಶವಿಲ್ಲ, ಮಳೆಗಾಲವಿದೆ. ಆದರೆ ಅದು ಸಮಯಕ್ಕೆ ತಕ್ಕಂತೆ ಮಳೆ ಬರುತ್ತಿಲ್ಲ. ಕರ್ನಾಟಕ ರಾಜ್ಯದ ಸರಾಸರಿ ಬೀಳುವಂತಹ ಮಳೆಯನ್ನು ನಾವು ಗಮನಿಸಿದರೆ, ಸುಮಾರು 20 ರಿಂದ 24 ಇಂಚು ಮಳೆ ಬರುತ್ತಲೇ ಇದೆ. ಆದರೆ ನೀರಿನ ಉಪಯೋಗ ಜನಸಂಖ್ಯೆ ಜಾಸ್ತಿಯಾಗಿರುವುದರಿಂದ ಹೆಚ್ಚು ಆಗುತ್ತಿದೆ. ಹೀಗಾಗಿ ಮಳೆನೀರಿನ ನಿರ್ವಹಣೆ ಸರಿಯಾಗಿ ಆಗುತ್ತಿಲ್ಲ. ಹಾಗಾಗಿ ಇವತ್ತು ಮಳೆ ಬೀಳುತ್ತದೆ, ಆ ಮಳೆ ನೀರಿನಲ್ಲಿ ಶೇಕಡಾ :93ರಷ್ಟು ನೀರು ಸಮುದ್ರಕ್ಕೆ ಇವತ್ತು ಹರಿದು ಹೋಗುತ್ತಿದೆ. ಇವತ್ತು ಶೇ. 3 ರಷ್ಟು ನೀರನ್ನು ಮಾತ್ರ ನಾವು ಉಪಯೋಗ ಮಾಡಿಕೊಳ್ಳುತ್ತಿದ್ದೇವೆ. ಇವತ್ತು ಇಷ್ಟೊಂದು ನೈಸರ್ಗಿಕ ಸಂಪನ್ಮೂಲ ನದಿಗೆ ಹರಿದು ಹೋಗುತ್ತಿರುವಂತಹ ಸಂದರ್ಭದಲ್ಲಿ ನಾವು ನೀರಿಲ್ಲವೆನ್ನುವಂತಹ ಮಾತು, ನಮಗೆ ನಿಜವಾಗಿ ಕೂಡ ಅಪಮಾನವಾಗುವಂಥಾದ್ದು, ಮತ್ತೆ ದುಃಖಕ್ಕೆ ಈಡು ಮಾಡುವಂತಹ ಕೆಲಸ. ಹಾಗಾಗಿ ನಾವು ಎಲ್ಲಿಯವರೆಗೆ ಮಳೆ ನೀರನ್ನು ಇವತ್ತು

ಕ್ರಾಂತಿಕಾರಿಯಾಗಿ, ಬಹಳ ಪರಿಣಾಮಕಾರಿಯಾಗಿ ಉಪಯೋಗ ಮಾಡಿಕೊಳ್ಳುವುದಕ್ಕೆ ನಾವು ಮುಂದಾಗುವುದಿಲ್ಲ, ಅಲ್ಲಿಯವರೆಗೆ ಈ ದೇಶವನ್ನು ಯಾರೂ ಉಳಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ಅಷ್ಟಿಷ್ಟು ಆಗಿದೆ. ಇನ್ನು ಅನೇಕ ಸಂಪನ್ಮೂಲಗಳನ್ನು ನಾವು ಉಪಯೋಗ ಮಾಡಿಕೊಂಡು ನೀರಾವರಿ ಮಾಡಿದರೆ, ಇವತ್ತು ಏನು ಕೂಲಿಕಾರರಿಗೆ ಉದ್ಯೋಗವಿಲ್ಲವೆನ್ನುವಂತಹ ಮಾತು ಇದೆ, ಅಂಥವರಿಗೂ ಸಹ ಕೆಲಸವನ್ನು ಕೊಡುವಂತಹ ಸಾಧ್ಯತೆಗಳು ಇವೆ. ಒಣ ಭೂಮಿಯಲ್ಲಿ ಬರೀ ಒಂದು ಎಕರೆಗೆ ಮೂರು ಜನರಿಗೆ ಉದ್ಯೋಗವನ್ನು ಕೊಡಲು ಸಾಧ್ಯವಾದರೆ ನೀರಾವರಿ ಭೂಮಿಯಲ್ಲಿ ಒಂದು ಎಕರೆಗೆ ಎಂಟು ಜನರಿಗೆ ಉದ್ಯೋಗವನ್ನು ಕೊಡುವ ಸಾಧ್ಯತೆ ಇದೆ. ನಾವು ಇದರ ಬಗ್ಗೆ ಹೆಚ್ಚು ಗಮನಹರಿಸಬೇಕು. ಇವತ್ತು ಹಳ್ಳಿಗಳಲ್ಲಿ ಉದ್ಯೋಗವಿಲ್ಲದೆ, ಇವರು ಪಟ್ಟಣಗಳಿಗೆ ವಲಸೆ ಹೋಗುತ್ತಿದ್ದಾರೆ. ಇವತ್ತು ಈ ಪಟ್ಟಣಗಳು ಬೃಹದಾಕಾರವಾಗಿ ಬೆಳೆದು, ಅಲ್ಲಿ ಇಲ್ಲಸಲ್ಲದ ಸಮಸ್ಯೆಗಳು ಇವತ್ತು ಉದ್ಭವವಾಗುತ್ತಿದೆ. ಅದು ಒಂದು ಸಮಸ್ಯೆಯಿಂದ ಇನ್ನೊಂದು ಸಮಸ್ಯೆ ಉದ್ಭವವಾಗುತ್ತಿದೆ. ಮಹಾತ್ಮಾ ಗಾಂಧೀಜಿಯವರು ಪಟ್ಟಣ ಮತ್ತು ಹಳ್ಳಿಗಳ ನಡುವೆ ಹೆಚ್ಚಿನ ಅಂತರವಿರಬಾರದೆಂಬ ಮಾತನ್ನು ಹೇಳಿದರು. ಇದು ದೊಡ್ಡ ಅಪಾಯಕಾರಿ ಎಂಬ ಮಾತನ್ನು ಹೇಳಿದರು. ಆದರೆ ಇವತ್ತು ನಾವು ಮಾಡಿದ್ದು ಏನೆಂದರೆ, ನಾವು ಹಳ್ಳಿಗಳನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿದೆವು. ಇದನ್ನು ನಾವು ಸಂಪೂರ್ಣವಾಗಿ ಕಡೆಗಣಿಸಿ, ಪಟ್ಟಣಗಳ ಕಡೆಗೆ ಹೆಚ್ಚಿನ ಗಮನವನ್ನು ಕೊಟ್ಟೆವು. ಈ ಪಟ್ಟಣಗಳು ಬೃಹದಾಕಾರವಾಗಿ ಬೆಳೆದವು, ಇವತ್ತು ಈ ಪಟ್ಟಣಗಳಿಗೆ ವಲಸೆ ಬಂದಂತಹ ಜನರು ಕೆಲಸವಿಲ್ಲದಾಗ, ಕ್ರೈಮ್ ಸಂಖ್ಯೆಗಳು ಜಾಸ್ತಿಯಾಗುತ್ತಿವೆ, ಸಾಮಾಜಿಕ ಸಮಸ್ಯೆಗಳು ಹೆಚ್ಚುತ್ತಿವೆ, ನೀರಿನ ಸಮಸ್ಯೆಯೂ ಹೆಚ್ಚುತ್ತಿದೆ, ಇವತ್ತು ಈ ಗ್ರಾಮೀಣ ಕೃಷಿ ಮತ್ತು ನೀರಾವರಿ, ಇದರ ಬಗ್ಗೆ ನಾವು ಆದ್ಯತೆಯನ್ನು ಕೊಡದೇ ಹೋದರೆ ಬಹಳ ಕಷ್ಟವಾಗುತ್ತದೆಂಬ ಮಾತನ್ನು ಹೇಳುತ್ತೇನೆ. ಇನ್ನು ಇಂಡಸ್ಟ್ರಿಗಳ ಬಗ್ಗೆ ನೋಡಿದರೆ, ಇವತ್ತು ಎಲ್ಲೂ ಕೂಡ ಈ ಇಂಡಸ್ಟ್ರಿಗಳು ಜೀವಂತವಾಗಿ ಉಳಿಯುವುದಕ್ಕೆ ಸಾಧ್ಯವಾಗುತ್ತಿಲ್ಲ. ನಮ್ಮ ದೇಶದಲ್ಲಿ ಒಂದು ಲೆಕ್ಕಾಚಾರದ ಪ್ರಕಾರ ಸುಮಾರು ಇಪ್ಪತ್ತು ಲಕ್ಷ ಸಣ್ಣ ಕೈಗಾರಿಕೆಗಳು ಇವತ್ತು ನಿಂತು ಹೋಗಿವೆ. ಇದಕ್ಕೆ ಕಾರಣ ಉದಾರಿಕರಣ ನೀತಿಯಿಂದ, ಈ ಉದಾರಿಕರಣ ನೀತಿ ಬಂದು ಎಲ್ಲಾ ನಮ್ಮ ಉದ್ದಿಮೆಗಳನ್ನು ಹಾಳು ಮಾಡಿದರು. ನಮ್ಮ ಗುಡಿ ಕೈಗಾರಿಕೆಗಳನ್ನು ಹಾಳು ಮಾಡಿದರು. ಇವತ್ತು ನೇಕಾರರಿಗೆ ಕೆಲಸವಿಲ್ಲವೆಂಬ ಬಗ್ಗೆ ಈ ಸದನದಲ್ಲೂ ಚರ್ಚೆಯಾಯಿತು. ಈ ಉದಾರೀಕರಣ ನೀತಿಯಿಂದಲೇ, ದೇಶಕ್ಕೆ ದೊಡ್ಡ ಅಪಾಯ ಬಂದಿರುವಂಥಾದ್ದು. ಇಂತಹ ಪರಿಸ್ಥಿತಿಯಲ್ಲಿ ಮಾನ್ಯ ಲಾಲು ಪ್ರಸಾದ್ ಯಾದವರವರಿಗೆ ಈ ಸದನದಿಂದ ಅಭಿನಂದನೆಯನ್ನು ಸಲ್ಲಿಸಬೇಕಾಗುತ್ತದೆ. ಇವರು ಒಂದು ದೊಡ್ಡ ಕ್ರಾಂತಿಕಾರಕ ಕೆಲಸವನ್ನು ಮಾಡಿದರು. ಅವರು ಖಾದಿ ಭಂಡಾರದಲ್ಲಿ ಉತ್ಪಾದನೆಯಾದಂತಹ ಎಲ್ಲಾ ಬಟ್ಟೆಯನ್ನು ರೈಲ್ವೆ ಇಲಾಖೆಯವರು ಖರೀದಿಸಬೇಕೆನ್ನುವಂತಹ ಮಾತನ್ನು ಆದೇಶದ ಮೂಲಕ ಹೇಳಿದರು. ಇದರಿಂದ ಇವತ್ತು ಈ ಖಾದಿ ಉದ್ದಿಮೆ ಜೀವಂತವಾಗಿ ಉಳಿಯುವುದಕ್ಕೆ ಸಾಧ್ಯತೆಗಳು ಇವೆ. ಅದೇ ಪ್ರಕಾರ ನಾನು ಸರ್ಕಾರಕ್ಕೆ ಸಲಹೆ ಮಾಡುವುದೆನೆಂದರೆ, ನಮ್ಮ ಕೈಮಗ್ಗದ ಮೇಲೆ ನೇಕಾರರು ಬಟ್ಟೆಯನ್ನು ತಯಾರು ಮಾಡುತ್ತಾರೆ, ಖಾದಿ ಉದ್ದಿಮೆಯಲ್ಲಿ ಬಟ್ಟೆ ತಯಾರಾಗುತ್ತದೆ. ಈ ಎಲ್ಲಾ ಬಟ್ಟೆಗಳನ್ನು ನಮ್ಮ ಸರ್ಕಾರ ಖರೀದಿ ಮಾಡಬೇಕು. ಇದನ್ನು ಮಕ್ಕಳ ಸಮವಸ್ತ್ರಕ್ಕಾಗಿ, ಮತ್ತೆ ಆಸ್ಪತ್ರೆಗಳಲ್ಲಿ ಬೆಡ್‌ಶೀಟ್‌ಗಳಿಗೆ, ಹಾಸ್ಟೆಲ್‌ಗಳಲ್ಲಿ ಹಾಗೂ ನಮ್ಮ

ಕಛೇರಿಗಳಲ್ಲಿ, ಎಲ್ಲೂ ಮಿಲ್ ಬಟ್ಟೆಗಳನ್ನು ಉಪಯೋಗ ಮಾಡಬಾರದು. ನಮ್ಮ ಕಛೇರಿಗಳಲ್ಲಿ, ಸರ್ಕಾರದ ಎಲ್ಲಾ ಸ್ಥಳಗಳಲ್ಲಿ, ನಮ್ಮ ಶಾಸಕರ ಭವನವನ್ನು ಸೇರಿಸಿಕೊಂಡು, ಖಾದಿ ಬಟ್ಟೆ ಹ್ಯಾಂಡ್ ಲೂಂ ಬಟ್ಟೆಗಳನ್ನು ಖರೀದಿ ಮಾಡಬೇಕಾಗುತ್ತದೆ, ಇಲ್ಲದಿದ್ದರೆ ನಾವು ಬರೀ ಬಾಯಿ ಮಾತಿನಿಂದ ನೇಕಾರರಿಗೆ ರಕ್ಷಣೆಯನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಇಂತಹ ಉದಾರಿಕರಣದಿಂದ ನಮ್ಮ ಇಂಡಸ್ಟ್ರಿಗಳು ಹಾಳಾಗುವಂತಹ ಸಂದರ್ಭದಲ್ಲಿ ಸರ್ಕಾರವೂ ಇದರ ಬಗ್ಗೆ ದಿಟ್ಟ ನಿರ್ಧಾರವನ್ನು ತೆಗೆದುಕೊಳ್ಳಬೇಕಾಗುತ್ತದೆ. ನಾನು ಹಿಂದೆ ವಿಧಾನ ಪರಿಷತ್ತಿನಲ್ಲಿದ್ದಾಗ, ಹೌಸ್ ಕಮಿಟಿಯ ಅಧ್ಯಕ್ಷನಾಗಿದ್ದೆ. ನಾವೆಲ್ಲರೂ ಸೇರಿ ಒಂದು ನಿರ್ಧಾರವನ್ನು ತೆಗೆದುಕೊಂಡೆವು, ಅದು ಏನೆಂದರೆ ನಮ್ಮ ಶಾಸಕರ ಭವನಕ್ಕೆ ಬಟ್ಟೆಗಳು ಬೇಕಾಗುತ್ತದೆ, ಅವೆಲ್ಲವನ್ನೂ ಖಾದಿ ಭಂಡಾರದಿಂದಲೇ ಖರೀದಿ ಮಾಡಬೇಕೆಂಬ ನಿರ್ಧಾರವನ್ನು ಮಾಡಿದೆವು. ಈ ನಿರ್ಧಾರವನ್ನು ನಾವು ತೆಗೆದುಕೊಂಡ ಮೇಲೆ ಖಾದಿ ಭಂಡಾರದಲ್ಲೂ ಸಹ ವ್ಯಾಪಾರ ಹೆಚ್ಚಾಯಿತು. ಇಲ್ಲಿ ನಮಗೆ ಬೇಕಾದಂತಹ ಬಟ್ಟೆಯ ಪ್ರಮಾಣವೂ ದೊಡ್ಡ ಪ್ರಮಾಣದ್ದು. ಇವತ್ತು ಸರ್ಕಾರ ಮನಸ್ಸು ಮಾಡಿದರೆ ನೇಕಾರರು ಏನು ಬಟ್ಟೆಯನ್ನು ತಯಾರು ಮಾಡುತ್ತಾರೆ, ಅದೇ ರೀತಿಯಲ್ಲಿ ಖಾದಿ ಉದ್ದಿಮೆಯಿಂದ ಏನು ಬಟ್ಟೆ ತಯಾರಾಗುತ್ತದೆ, ಅದೆಲ್ಲವನ್ನೂ ಸರ್ಕಾರ ಖರೀದಿ ಮಾಡಿದರೆ, ಈ ಉದ್ದಿಮೆಗಳನ್ನು ಉಳಿಸುವಂತಹ ಸಾಧ್ಯತೆಗಳು ಇವೆ. ಅದೇ ರೀತಿಯಲ್ಲಿ ಸಣ್ಣ ಸಣ್ಣ ಉದ್ದಿಮೆಗಳನ್ನು ಸಹ ಜೀವಂತವಾಗಿ ಉಳಿಸಬೇಕಾಗುತ್ತದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 56 ವರ್ಷಗಳಾದರೂ, ಯಾರಿಂದ ಪ್ರೇರಣೆಯನ್ನು ಪಡೆದು, ಇದಕ್ಕೆ ಯಾರ ಸ್ಫೂರ್ತಿಯಿಂದ ಸ್ವಾತಂತ್ರ್ಯ ಸಿಕ್ಕಿತು, ಅವರು ಮಹಾತ್ಮ ಗಾಂಧೀಜಿಯವರು ಇವರನ್ನು ನಾವು ಇವತ್ತು ಮರೆತಿದ್ದೇವೆ. ನಾವು ಇವರನ್ನು ಮರೆತು ಅಮೇರಿಕಾ ಮತ್ತೆ ಇತರ ಶ್ರೀಮಂತ ದೇಶಗಳನ್ನು ನೋಡಿಕೊಂಡು, ಇವತ್ತು ನಮ್ಮ ನೆಲೆಯನ್ನು ಹಾಳು ಮಾಡಿಕೊಂಡು, ಬೇರೆಯವರ ಮನೆಗೆ ಹೋಗಿ ಕೈ ಚಾಚುವಂತಹ ಪರಿಸ್ಥಿತಿ ಬಂದಿದೆ. ಇವತ್ತು ನಮ್ಮ ಕೇಂದ್ರ ಸರ್ಕಾರಕ್ಕೆ ನಮ್ಮೆಲ್ಲರ ಒಂದು ಸಂಘಟನೆಯಿಂದ ಏನು ಒಂದು ಬೇಡಿಕೆಯನ್ನು ಇಡುತ್ತಿದ್ದೇವೆ. ಎಂದರೆ ಈ ಕೃಷಿ ಎಂಬುದು ವ್ಯಾಪಾರವಲ್ಲ. ಹಾಗಾಗಿ, ಡಬ್ಲ್ಯೂಟಿಓ ನಲ್ಲಿ ಕೃಷಿ ವಲಯವನ್ನು ಸೇರಿಸಿರುವುದನ್ನು ತೆಗೆಯಬೇಕು ಎನ್ನುವ ಬೇಡಿಕೆಯನ್ನು ನಾವು ಇಡುತ್ತಿದ್ದೇವೆ. ಇವತ್ತು ನಾನು ಕರ್ನಾಟಕದ ಈ ಸದನದ ಎಲ್ಲಾ ಸದಸ್ಯರಿಗೆ ವಿನಂತಿ ಮಾಡಿಕೊಳ್ಳುತ್ತೇನೆ, ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ನಾವು ಒಂದು ಮನವಿಯನ್ನು ಮಾಡಿಕೊಳ್ಳಬೇಕು, ಕೃಷಿ ವಲಯವನ್ನು ವ್ಯಾಪಾರೀಕರಣದಿಂದ ಹೊರಗಿಟ್ಟು, ಕೃಷಿಯನ್ನು ಸ್ವತಂತ್ರವಾಗಿ ಉಳಿಸಿಕೊಳ್ಳದೇ ಹೋದರೆ, ಬಹುಶಃ ಯಾವುದೇ ಉದ್ದಿಮೆಗಳು ಬೆಳೆಯಲು ಸಾಧ್ಯವಿಲ್ಲ. ಇವತ್ತು ಉದ್ದಿಮೆಗಳನ್ನು ಮಾಡಲು ನಮಗೆ ಇನ್ನೂ ಅವಕಾಶವಿದೆ. ಎಲ್ಲಿಯವರೆಗೆ ನಾವು ಕೃಷಿಯನ್ನು ಜೀವಂತವಾಗಿಟ್ಟು, ಗಟ್ಟಿಯಾಗಿ ಬೆಳೆಸುವುದಿಲ್ಲ, ಅಲ್ಲಿಯವರೆಗೆ ಕೃಷಿ ಆಧಾರಿತ ಉದ್ದಿಮೆಗಳನ್ನು ಬೆಳೆಸಲು ಸಾಧ್ಯವಿಲ್ಲ. ಇವತ್ತು ನಮಗೆ ಆಗ್ರೋ ಬೇಸ್ಡ್ ಇಂಡಸ್ಟ್ರೀಗಳನ್ನೂ ಕೂಡ ಉಳಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ದೊಡ್ಡದೊಡ್ಡ ಕಂಪನಿಗಳು ಬಂದು ಇವುಗಳನ್ನೆಲ್ಲಾ ನುಂಗಿ ಹಾಕುತ್ತಿವೆ. ಮಾನ್ಯ ಡಿ.ಆರ್. ಪಾಟೀಲ್‌ರವರೂ ಕೂಡ ಮಾತನಾಡುವಾಗ ಈ ಮಾತನ್ನು ಹೇಳಿದರು. ಈ ರೀತಿ ನಾವು ಕೃಷಿಯನ್ನು ಗಟ್ಟಿಯಾಗಿ ಬೆಳೆಸಿಕೊಂಡು, ಕೃಷಿ ಜೊತೆಗೆ ಅವರಿಗೆ ನೀರಾವರಿಯನ್ನು ಸಂಪೂರ್ಣವಾಗಿ ಒದಗಿಸಿ, ಆ ನೀರಾವರಿ ಆಧಾರದ ಮೇಲೆ ಹೆಚ್ಚಿನ ಬೆಳೆಯನ್ನು ಬೆಳೆದು, ಅದರ ಮೇಲೆ ನಾವು ಹೆಚ್ಚಿನ ಉದ್ದಿಮೆಗಳನ್ನು ಸ್ಥಾಪನೆ ಮಾಡಿಕೊಂಡು ಬರಬಹುದು. ನಿರುದ್ಯೋಗಕ್ಕೆ ಒಂದು ದೊಡ್ಡ ಉತ್ತರವನ್ನು

ಕಂಡುಹಿಡಿಯಬೇಕಾಗಿದ್ದರೆ ಅದು ಇದರಿಂದಲೂ ಸಾಧ್ಯವಾಗುತ್ತದೆ. ಕೃಷಿಯಿಂದಲೂ ಕೂಡ ನಾವು ನಿರುದ್ಯೋಗವನ್ನು ಹೋಗಲಾಡಿಸಬಹುದು ಮತ್ತು ಕೃಷಿ ಆಧಾರಿತ ಕಾರ್ಖಾನೆಗಳಲ್ಲಿ ಕೂಡ ಉದ್ಯೋಗಗಳನ್ನು ಒದಗಿಸಬಹುದು. ಇತ್ತೀಚೆಗೆ ಮಳೆ ಏರುಪೇರಾಗಿದ್ದು, ಹೆಚ್ಚಿಗೆ ಬೀಳುತ್ತಿಲ್ಲ. ನೀರಿಗಾಗಿ ನಾವು ಇನ್ನೊಂದು ಉಪಾಯವನ್ನೂ ಕೂಡ ಮಾಡಬಹುದು. ಮಳೆ ಬಂದಾಗ ನದಿಗಳು ಸಂಪೂರ್ಣವಾಗಿ ಹರಿದು, ಶೇಕಡಾ 93ರಷ್ಟು ನದಿ ನೀರು ಎಲ್ಲಾ ಸಮುದ್ರಕ್ಕೆ ಹೋಗುತ್ತದೆ. ಅಂಥ ಕಡೆಗಳಲ್ಲಿ ಪಂಪುಸೆಟ್ಟುಗಳನ್ನು ಹಾಕಿ, ಎಲ್ಲೆಲ್ಲಿ ಕೆರೆಗಳು ಖಾಲಿ ಇವೆ, ಅವುಗಳನ್ನು ತುಂಬಿಕೊಳ್ಳಲು ಸಾಧ್ಯವಿದೆ. ಇದಕ್ಕೇನೂ ಹೆಚ್ಚಿಗೆ ಟೆಕ್ನಾಲಜಿ ಬೇಕಾಗಿಲ್ಲ. ಇದಕ್ಕೇನೂ ತಂತ್ರಜ್ಞಾನವನ್ನು ಅಮೇರಿಕಾದವರು ಕೊಡಬೇಕಾಗಿಲ್ಲ. ನಮ್ಮಲ್ಲಿರತಕ್ಕಂಥ ತಂತ್ರಜ್ಞಾನವನ್ನು ಉಪಯೋಗಿಸಿ, ಗ್ರಾವಿಟಿ ಮೇಲೆ ಪಂಪುಸೆಟ್ಟುಗಳನ್ನು ಹಾಕಿಕೊಂಡು ನದಿಯ ನೀರನ್ನು ಕೆರೆಗಳಲ್ಲಿ, ಬಾವಿಗಳಲ್ಲಿ ತುಂಬಿಕೊಂಡರೆ ನೀರಿನ ಸಮಸ್ಯೆಯನ್ನು ಬಹಳ ತ್ವರಿತವಾಗಿ ಬಗೆಹರಿಸಲು ಸಾಧ್ಯವಿದೆ. ಅಧ್ಯಕ್ಷರೇ, ನನ್ನನ್ನೊಂದು ಪ್ರಶ್ನೆ ಕಾಡುತ್ತಿದೆ. ಈ ದೇಶಕ್ಕೆ ನಾವು ಓಮಾನ್‌ನಿಂದ ಪೈಪ್‌ಲೈನನ್ನು ಹಾಕಿ ಗ್ಯಾಸನ್ನು ತರುತ್ತಿದ್ದೇವೆ. ಇದು ನಮಗೆ ಆದ್ಯತೆಯೇನು? ರಿಲಿಯನ್ಸ್‌ನವರಿಗೆ ನಾವು ಅವಕಾಶ ಮಾಡಿಕೊಟ್ಟು ಇಡೀ ದೇಶದ ತುಂಬಾ ಪೈಪ್‌ಲೈನ್ಸ್ ಮುಖಾಂತರ ಗ್ಯಾಸನ್ನು ಒದಗಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಇದು ನಮಗೆ ಆದ್ಯತೆಯೇನು? ಮಂಗಳೂರು ಬಂದರಿನಿಂದ ಬೆಂಗಳೂರಿಗೆ ಪೈಪ್‌ಲೈನ್ ಮುಖಾಂತರ ಗ್ಯಾಸ್ ಬರುತ್ತಿದೆ. ಇದು ನಮಗೆ ಆದ್ಯತೆಯೇನು? ಇದನ್ನು ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ, ಸಮುದ್ರಕ್ಕೆ ಹರಿದು ಹೋಗುತ್ತಿರುವ ನದಿ ನೀರನ್ನು ನಾವು ಎಲ್ಲಾ ಹಳ್ಳ, ಕೆರೆ, ಕೊಳಗಳಿಗೆ ತುಂಬಿಸಿಕೊಳ್ಳುವಂಥ ಒಂದು ಸಾಮಾನ್ಯ ಕೆಲಸವನ್ನು ಮಾಡಿದರೆ ಬರದ ಛಾಯೆಯಿಂದ ನಾವು ಹೊರಗೆ ಬರಲು ಸಾಧ್ಯವಿದೆ. ತನ್ಮೂಲಕ ಅನೇಕ ಸಮಸ್ಯೆಗಳನ್ನೂ ಕೂಡ ಬಗೆಹರಿಸಿಕೊಳ್ಳಲು ಸಾಧ್ಯವಿದೆ. ಅಂಥ ಒಂದು ಕ್ರಾಂತಿಕಾರಿ ಕೆಲಸವನ್ನು ನಾವು ಮಾಡಬೇಕಾಗುತ್ತದೆ. ಇವತ್ತು ಮೇಲಿಂದ ಮೇಲೆ ಬರ ಬಂದು ಜನ ಬದುಕಲು ಸಾಧ್ಯವಿಲ್ಲ. ನನಗೆ ಒಂದೊಂದು ಸಲ ಹೆದರಿಕೆ ಬರುತ್ತದೆ, ಏನೆಂದರೆ, ಹಿಂದೆ ಯಾವ ರೀತಿ ನಾಗರೀಕತೆ ವ್ಯವಸ್ಥೆ ಬಂತು, ಆ ರೀತಿ ಜನರು ನೀರು ಇಲ್ಲದ ಕಡೆಗಳಿಂದ ಬೇರೆ ಕಡೆಗಳಿಗೆ ವಲಸೆ ಹೋಗಿ ಹೊಸ ನಾಗರೀಕತೆ ಪ್ರಾರಂಭವಾಗುವಂಥ ಸಾಧ್ಯತೆ ಕೂಡ ಇದೆ. ಅಂಥ ಒಂದು ಗಂಭೀರ ಪರಿಸ್ಥಿತಿ ಇದೆ. ಇವತ್ತು ಭೂಮಿಯಲ್ಲಿ ನೀರಿನ ಮಟ್ಟ ಎಷ್ಟು ಕೆಳಗಡೆ ಹೋಗಿದೆ ಎನ್ನುವುದಕ್ಕೆ ಕೋಲಾರ ಜಿಲ್ಲೆ ಒಂದು ದೊಡ್ಡ ದೃಷ್ಟಾಂತ. ಕೋಲಾರ ಜಿಲ್ಲೆಯಲ್ಲಿ ಸಾವಿರಸಾವಿರ ಫೀಟುಗಳಷ್ಟು ಬೋರ್ ಹಾಕಿದರೂ ಕೂಡ ನೀರು ಸಿಗುತ್ತಿಲ್ಲ. ನಮ್ಮ ಉತ್ತರ ಕರ್ನಾಟಕದ ಕಡೆ ಬಂದರೆ, ಅಲ್ಲಿ ಮೊದಲು 300 ಅಡಿಗಳಿಗೆ ನೀರು ಸಿಗುತ್ತಿತ್ತು. ಅದು ಹೋಗಿ 400 ಅಡಿಗಳಾಯಿತು. ನಂತರ 400 ಅಡಿ ಹೋಗಿ 500 ಅಡಿಗಳಾಯಿತು. ಈಗ 500 ಅಡಿಗಳಷ್ಟು ಹೋದರೂ ಕೂಡ ಈಗ ನೀರು ಸಿಗುತ್ತಿಲ್ಲ. ಹಾಗಾದರೆ, ಕುಡಿಯಲು ಬೇಕಾದಂಥ ನೀರನ್ನು ಎಲ್ಲಿಂದ ಒದಗಿಸುವುದು? ಸರ್ಕಾರ ಎಷ್ಟು ದುಡ್ಡು ಖರ್ಚು ಮಾಡಲು ಸಾಧ್ಯವಿದೆ? ಅದು ಎಲ್ಲಿಂದ ನೀರನ್ನು ತರಲು ಸಾಧ್ಯವಿದೆ? ಆದರೆ ಇದರಿಂದ ಅಧಿಕಾರಿಗಳಿಗೆ ಬಹಳ ಮೋಜು-ಮಜವಾಗಿದೆ. ಈ ವರ್ಷ ಬೋರ್‌ವೆಲ್ಲಿನ ನೀರು ಹಾಳಾದರೆ, ಅದಕ್ಕೆ ಪಂಚಾಯಿತಿಯವರು, ನಮ್ಮಂಥವರು ಅರ್ಜಿ ಕೊಡುತ್ತೇವೆ. ಆಗ ಮತ್ತೊಂದು ಬೋರ್ ಪಾಯಿಂಟ್ ಹುಡುಕುತ್ತಾರೆ. 500 ಅಡಿ ಹೊಡೆದಿದ್ದೇವೆ ಎಂದು ಹೇಳಿ, 200 ಅಡಿಗಳಷ್ಟು ಹೊಡೆದು, ಬಿಲ್ಲನ್ನು ತೆಗೆದುಕೊಂಡು ಮನೆಗೆ

ಹೋಗುತ್ತಾರೆ. ಅಲ್ಲಿ ಮತ್ತೆ ನೀರು ಬೀಳುವುದಿಲ್ಲ. ಆ ವರ್ಷ ಅಲ್ಲಿಗೆ ನೀರು ಮುಗಿಯಿತು ಎಂದರೆ ಮತ್ತೆ ಮುಂದಿನ ವರ್ಷ 400-500 ಅಡಿಗಳಿಗೆ ಹೋಗುತ್ತಾರೆ. ಒಟ್ಟಿನಲ್ಲಿ ಇಂಜಿನಿಯರುಗಳಿಗೆ, ಪಂಪುಸೆಟ್ಟುಗಳ ಮಾರಾಟದಾರರಿಗೆ ಮತ್ತು ಪೈಪ್ ಮಾರುವವರಿಗೆ ದೊಡ್ಡ ಲಾಭ ಆಗುತ್ತದೆಯೇ ಹೊರತು ನೀರಿಗೆ ಶಾಶ್ವತವಾದ ಪರಿಹಾರ ಸಿಗುತ್ತಿಲ್ಲ. ಪಕ್ಕದ ಮಹಾರಾಷ್ಟ್ರದಲ್ಲಿ ಒಂದು ದೊಡ್ಡ ಕ್ರಾಂತಿಯನ್ನು ಮಾಡಿದ್ದಾರೆ, ಅದನ್ನು ನಾವು ಮೆಚ್ಚಬೇಕು. ಅಲ್ಲಿ ಕೂಡ ಕಾಂಗ್ರೆಸ್ ಸರ್ಕಾರ ಇದೆ. ಅಲ್ಲಿ ಬಹಳ ದೊಡ್ಡ ಕೆಲಸ ಮಾಡಿದ್ದಾರೆ. ಸರ್ಕಾರವೇ ಮುಂದಾಗಿ ಹನಿಹನಿ ನೀರನ್ನು ಹಿಡಿದಿಡುವಂಥ ಕೆಲಸವನ್ನು ಮಾಡಿದ್ದಾರೆ. ಆ ಮಾದರಿಯನ್ನು ನಮ್ಮ ಸರ್ಕಾರದವರೂ ಅನುಸರಿಸಬೇಕು. ಆ ಮಾದರಿಯನ್ನು ಅನುಸರಿಸದಿದ್ದರೆ, ನಮ್ಮಲ್ಲಿ ಯಾವುದೇ ಒಂದು ಕೆಲಸವನ್ನು ಮಾಡಲು ಸಾಧ್ಯವಿಲ್ಲ. ಅವರು ಅಂಥ ಒಂದು ದೊಡ್ಡ ಕ್ರಾಂತಿಕಾರಿ ಕೆಲಸವನ್ನು ಮಾಡಿದ್ದಾರೆ. ಯಾವುದೇ ಪಕ್ಷದವರು ಮುಖ್ಯಮಂತ್ರಿಯಾಗಿರಬಹುದು, ಆತನ ದೃಷ್ಟಿಕೋನ ಮೊದಲು ಹಳ್ಳಿಗಾಡಿನ ಕಡೆ ಇರುತ್ತದೆ. ಹಳ್ಳಿಗಳಲ್ಲಿರುವಂಥ ನೀರಿನ ಸಮಸ್ಯೆಗಳ ಬಗ್ಗೆ ಇರುತ್ತದೆ. ಕೃಷಿ ಬಗ್ಗೆ ಇರುತ್ತದೆ, ಗ್ರಾಮೀಣ ಭಾಗದ ಜನರ ಬಗ್ಗೆ ಇರುತ್ತದೆ. ಇವತ್ತು ನಾವು ನೋಡುತ್ತಿದ್ದೇವೆ, ಬೊಂಬಾಯಿ, ಪೂನಾ ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಿಗೆ ಮೈಗ್ರೇಷನ್ ಆಗಿ ಹೋದಂಥ ಜನರು ಕರ್ನಾಟಕದವರು. ಆದರೆ ಮಹಾರಾಷ್ಟ್ರದಿಂದ, ಅಲ್ಲಿ ಕೂಲಿ ಕೆಲಸ ಮಾಡುವ ಒಬ್ಬರೂ ಬೇರೆ ಕಡೆಗಳಿಗೆ ಕೂಲಿಕೆಲಸ ಮಾಡಲು ಹೋಗುವುದಿಲ್ಲ. ಏಕೆಂದರೆ, ಅಲ್ಲಿಯ ಹಳ್ಳಿಗಳಲ್ಲಿ ಅವರು ಕೃಷಿಯನ್ನು ಗಟ್ಟಿಯಾಗಿ ಇಟ್ಟಿದ್ದಾರೆ, ಅಲ್ಲಿ ನೀರಾವರಿ ಸೌಲಭ್ಯಗಳನ್ನು ಕೊಟ್ಟಿದ್ದಾರೆ. ಇದರ ಜೊತೆಗೆ ಸಂಪೂರ್ಣ ರಾಜ್ಯ ಸರ್ಕಾರದ ಬೆಂಬಲ ಇದೆ. ದುರ್ದೈವವೆಂದರೆ, ಯಾವ ಒಂದು ದೃಷ್ಟಿಕೋನವನ್ನು ಮಹಾರಾಷ್ಟ್ರ ಸರ್ಕಾರ ಅಲ್ಲಿ ರೈತರ ಬಗ್ಗೆ, ಕೂಲಿಗಾರರ ಬಗ್ಗೆ, ಹಳ್ಳಿಗಾಡಿನ ಬಗ್ಗೆ ಇಟ್ಟಿದೆ, ಆ ಒಂದು ಪ್ರವೃತ್ತಿ ನಮ್ಮ ಕರ್ನಾಟಕದಲ್ಲಿ ಇಲ್ಲ. ಈ ಉದಾರೀಕರಣದಿಂದ ಸಕ್ಕರೆ ಬೆಲೆ ಬಿದ್ದುಹೋಯಿತು. ಸಕ್ಕರೆ ಬೆಲೆ ಬಿದ್ದಮೇಲೆ ತಕ್ಷಣ ಕೇಂದ್ರ ಸರ್ಕಾರದವರು ನೆರವಿಗೆ ಬಂದರು. ಒಂದು ಟನ್ನಿಗೆ ಎರಡು ನೂರು ರೂಪಾಯಿಗಳ ಸಹಾಯಧನವನ್ನು ಕೊಡಲು ತಯಾರಾದರು. ಆ ಕಾರಣಕ್ಕಾಗಿಯೇ, ಇವತ್ತು ಸಕ್ಕರೆ ಉದ್ಯಮ ಜೀವಂತವಾಗಿರಲು ಸಾಧ್ಯವಾಗಿದೆ. ಆದರೆ ನಮ್ಮಲ್ಲಿ ಕೃಷಿಯಲ್ಲಿ ಏನೇ ಏರುಪೇರುಗಳಾದರೂ ಸಹ ಸರ್ಕಾರಗಳು ಅದನ್ನು ಗಮನಿಸುವುದಿಲ್ಲ, ಏನೇ ತೊಂದರೆಯಾದರೂ ಕೂಡ ನಾವು ಅದರ ಕಡೆ ನೋಡುವುದಿಲ್ಲ. ಆದ್ದರಿಂದ, ಅವುಗಳನ್ನು ನೋಡುವಂಥ ದೃಷ್ಟಿಕೋನದ ಬಗ್ಗೆಯೂ ಕೂಡ, ಈ ಸದನದಲ್ಲಿ ಇರುವಂಥ ನಾವುಗಳು ಪಕ್ಷಬೇಧವನ್ನು ಮರೆತು ಯೋಚನೆ ಮಾಡಬೇಕಾಗಿದೆ. ಕೃಷಿ ನಮ್ಮ ಮೂಲ ಆಧಾರ. ಅದನ್ನು ಜೀವಂತವಾಗಿಟ್ಟುಕೊಂಡು, ಕೃಷಿಯಲ್ಲಿರತಕ್ಕಂಥ ಜನರಿಗೆ ನಾವು ರಕ್ಷಣೆ ಮಾಡಿಕೊಂಡು, ಈ ಕೃಷಿ ಕ್ಷೇತ್ರವನ್ನು ಗಟ್ಟಿಯಾಗಿ ಉಳಿಸಿಕೊಳ್ಳಲು ನಾವು ಎಲ್ಲಿಯವರೆಗೆ ಸರ್ವ ಪ್ರಯತ್ನ ಮಾಡುವುದಿಲ್ಲ ಅಲ್ಲಿಯವರೆಗೆ ಈ ದೇಶದಲ್ಲಿ ರೈತರು ಉಳಿಯಲು ಸಾಧ್ಯವಿಲ್ಲ. ಇವತ್ತು ನಾವು ಅಮೇರಿಕಾ ಮಾದರಿ ಎಂದು ಅವರ ಎಲ್ಲಾ ವ್ಯವಸ್ಥೆಯನ್ನೂ ಅನುಕರಣೆ ಮಾಡುತ್ತಿದ್ದೇವೆ. ಅಲ್ಲಿ ಅವರು ಸಬ್ಸಿಡಿ ಬೇಡ ಎಂದು ಹೇಳಿದ್ದಕ್ಕೆ, ವರ್ಲ್ಡ್ ಬ್ಯಾಂಕಿನವರಿಗೆ ಮತ್ತು ಡಬ್ಲ್ಯು ಟಿ ಓ ನವರಿಗೆ ನಾವು ಸಬ್ಸಿಡಿ ಬೇಡ ಎಂದು ಹೇಳಿ ಸಬ್ಸಿಡಿಯನ್ನು ತೆಗೆಯುತ್ತಿದ್ದೇವೆ. ಆದರೆ ಅವರು ಧಾರಾಳವಾಗಿ ಅವರಿಗೆ ಸಬ್ಸಿಡಿ ಕೊಡುತ್ತಿದ್ದಾರೆ. ನಮ್ಮ ಆರ್ಥಿಕ ಪರಿಸ್ಥಿತಿ ಬೇರೆ, ನಮ್ಮ ಸಾಮಾಜಿಕ ಪರಿಸ್ಥಿತಿ ಬೇರೆ ಮತ್ತು ಇಲ್ಲಿಯ ನಮ್ಮ ಪರಿಸರದ ಪರಿಸ್ಥಿತಿ ಬೇರೆ. ಇದೊಂದು ಬಡ ರಾಷ್ಟ್ರ

ಎನ್ನುವುದನ್ನು ನಾವ್ಯಾರೂ ಕೂಡ ಮರೆಯಬಾರದು. ಒಂದು ಕಡೆ ರೈತರ ಸಭೆಯಲ್ಲಿ ಚರ್ಚೆಯಾಯಿತು. ಅಲ್ಲಿ, ಈ ಡಬ್ಲ್ಯೂಟಿ ಓ ಮತ್ತು ಉದಾರೀಕರಣದ ಬಗ್ಗೆ ಸಮರ್ಥನೆ ಮಾಡುವಂಥಾದ್ದು ಒಂದು ಕಡೆ ಆಯಿತು. ಮಾನ್ಯ ಶರದ್ ಪವಾರ್‌ರವರು ಆ ಸಭೆಯಲ್ಲಿದ್ದರು. ಅವರು ಹೇಳಿದರು, ಒಬ್ಬ ದೊಡ್ಡ ಪೈಲ್ವಾನನಿಗೆ, ಒಬ್ಬ ಕಡ್ಡಿ ಪೈಲ್ವಾನನ ಜೊತೆ ಕುಸ್ತಿ ಇಡಿಸಿದರೆ ಗತಿ ಏನಾಗುತ್ತದೆ? ಸಾಮಾನ್ಯವಾಗಿ ಕಡ್ಡಿ ಪೈಲ್ವಾನ್ ಸೋಲುತ್ತಾನೆ ಮತ್ತು ಬಲಿಷ್ಟವಾದ ಪೈಲ್ವಾನ್ ಗೆಲ್ಲುತ್ತಾನೆ. ಅದೇ ರೀತಿ, ಇವತ್ತು ಅಮೇರಿಕಾದಂಥ ಶ್ರೀಮಂತ ರಾಷ್ಟ್ರಗಳ ಜೊತೆ ನಾವು ಸ್ಪರ್ಧೆ ಮಾಡಲು ಸಾಧ್ಯವಿಲ್ಲ. ಇವತ್ತು ನಮ್ಮ ನಾಯಕರುಗಳು ಬಹಳ ದೊಡ್ಡ ದೊಡ್ಡ ಪಾಲಿಸಿ ಮಾತುಗಳನ್ನು ಹೇಳುತ್ತಾರೆ. ಜಗತ್ತಿನಲ್ಲಿ ಸ್ಪರ್ಧೆ ಶುರುವಾಗಿದೆ, ನಾವೂ ಕೂಡ ಸ್ಪರ್ಧೆ ಮಾಡಬೇಕು ಎಂದು ಹೇಳುತ್ತಾರೆ. ಆದರೆ ಸ್ಪರ್ಧೆ ಮಾಡಲು ನಮಗೆ ಶಕ್ತಿ ಇದೆಯೇನು? ಸ್ಪರ್ಧೆ ಮಾಡುವುದಕ್ಕೆ ನಮಗೆ ಸಾಧನ ಇದೇಯೇನು? ಸ್ಪರ್ಧೆ ಮಾಡುವುದಕ್ಕೆ ನಮಗೆ ಅವಕಾಶಗಳಿವೆಯೇನು? ಇವುಗಳನ್ನು ಯಾರೂ ಗಮನಿಸುವುದಿಲ್ಲ. ಹಾಗಾಗಿ, ಇವತ್ತು ಜಗತ್ತಿನಲ್ಲಿ ಏನೊಂದು ಅನ್–ಹೆಲ್ತಿ ಕಾಂಪಿಟೇಷನ್ ನಡೆಯುತ್ತಿದೆ, ಬಡ ರಾಷ್ಟ್ರಗಳನ್ನು ತುಳಿದು, ಬಡ ರಾಷ್ಟ್ರಗಳನ್ನು ಕಬಳಿಸಿ ಖಾಯಂ ಆಗಿ ಬಡರಾಷ್ಟ್ರಗಳನ್ನು ಶೋಷಣೆಗೆ ಒಳಪಡಿಸುವಂಥ ಏನೊಂದು ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ, ಅದಕ್ಕೋಸ್ಕರ ನಾವೊಂದು ನಿರ್ಧಾರವನ್ನು ತೆಗೆದುಕೊಳ್ಳಬೇಕಾಗುತ್ತದೆ, ಈ ದೇಶದಲ್ಲಿ ಗಾಂಧಿಯವರು ಹೇಳಿ ಹೋದಂತೆ, ಆ ಗಾಂಧೀ ಮಾರ್ಗವನ್ನು ನಾವು ಹಿಡಿಯದಿದ್ದರೆ ಈ ದೇಶವನ್ನು ಯಾವ ಪಕ್ಷವೂ ಉಳಿಸಲು ಸಾಧ್ಯವಿಲ್ಲ; ಯಾವ ನಾಯಕನೂ ಉಳಿಸಲು ಸಾಧ್ಯವಿಲ್ಲ. ಅಂಥ ಒಂದು ದಿಟ್ಟವಾದ ಮಾರ್ಗವನ್ನು ಹಿಡಿಯದೇ ಹೋದರೆ, ಈ ಉದಾರೀಕರಣ ನೀತಿಗೆ ಒಳಗಾಗಿ ಈ ದೇಶ ಸಂಪೂರ್ಣವಾಗಿ ಹಾಳಾಗುತ್ತದೆ. ಇಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದಂಥ ವಿಚಾರ. ರೈತನಿಗೆ ಇವತ್ತು ಗೊತ್ತಾಗಿದೆ, ನಾನು ಜೀವನ ಮಾಡಿ ಬದುಕಲು ಸಾಧ್ಯವಿಲ್ಲ, ಜೀವನ ಮಾಡಿ ಈ ಸಮಾಜದಲ್ಲಿ ಬಾಳಲು ಸಾಧ್ಯವಿಲ್ಲ. ನಾನು ಸಾಯುವುದೊಂದೇ ದಾರಿ ಎನ್ನುವುದು ಅವನ ಮನಸ್ಸಿಗೆ ಬಂದಮೇಲೆ ಅವನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ. ಇಲ್ಲಿ ಯಾರಿಗೆ ಸಾಲ ಸಿಗುತ್ತಿದೆ? ಪ್ರತಿಯೊಂದು ಬ್ಯಾಂಕಿನವರೂ ಕೂಡ ಕೊಲ್ಯಾಟರಲ್ ಸೆಕ್ಯುರಿಟಿ ಕೇಳುತ್ತಾರೆ. ಒಬ್ಬನಿಗೆ ಒಂದು ಲಕ್ಷ ರೂಪಾಯಿ ಸಾಲ ಬೇಕಾಗಿದ್ದರೆ, ಅವನು ಅಷ್ಟೇ ಮೊತ್ತದ ಗ್ಯಾರಂಟಿ ಕೊಡಬೇಕು. ಹಾಗಾದರೆ, ಯಾವ ಬಡ ರೈತನಿಗೆ, ಸಾಮಾನ್ಯ ಜನರಿಗೆ ಸಾಲ ಸಿಗುವ ಸಾಧ್ಯತೆ ಇದೆ? ಈ ಕೊಲ್ಯಾಟರಲ್ ಸೆಕ್ಯುರಿಟಿಯನ್ನು ತಂದವರು ರಿಸರ್ವ್ ಬ್ಯಾಂಕಿನವರು. ರಿಸರ್ವ್ ಬ್ಯಾಂಕ್‌ನವರಿಗೆ ಡಿಕ್ಟೇಟ್ ಮಾಡಿದಂಥವರು ಇದೇ ಡಬ್ಲ್ಯು ಟಿ ಓ ಮತ್ತು ಐ ಎಂ ಎಫ್ ನವರು. ಇದರ ಬಗ್ಗೆ ನಮ್ಮ ಸರ್ಕಾರಗಳು ಮತ್ತು ನಾಯಕರುಗಳು ಏಕೆ ಬಹಿರಂಗವಾಗಿ ಹೋರಾಟ ಮಾಡಲು ಮತ್ತು ಶ್ರೀಮಂತ ರಾಷ್ಟ್ರಗಳ ಶಕ್ತಿಗಳ ವಿರುದ್ಧ ಹೋರಾಟ ಮಾಡಲು ಏಕೆ ನಿಲ್ಲುವುದಿಲ್ಲ? ಮಾನ್ಯ ಸಿದ್ಧರಾಮಯ್ಯನವರು ಬಹಳ ಒಂದು ಒಳ್ಳೆಯ ಉದ್ದೇಶವನ್ನಿಟ್ಟುಕೊಂಡು ಕೃಷಿ ಸಾಲಕ್ಕೆ ಬಡ್ಡಿಯನ್ನು ಕಡಿಮೆ ಮಾಡಿದ್ದಾರೆ. ಬಹಳ ಸಂತೋಷ. ಅದನ್ನು ಶೇಕಡಾ 12 ರಿಂದ 6ಕ್ಕೆ ತಂದಿದ್ದಾರೆ. ಇಲ್ಲಿ ಕುಳಿತಿರುವಂಥವರಲ್ಲಿ ಬಹುತೇಕವಾಗಿ ಕೃಷಿ ಕುಟುಂಬದಿಂದ ಬಂದವರು. ರೈತರು ಈಗಾಗಲೇ ಎಲ್ಲಾ ಬ್ಯಾಂಕುಗಳಲ್ಲಿ ಸಾಲ ತೆಗೆದಿದ್ದಾರೆ. ಯಾವ ಬ್ಯಾಂಕೂ ಖಾಲಿ ಉಳಿದಿಲ್ಲ. ಎಲ್ಲಾ ಬ್ಯಾಂಕುಗಳಲ್ಲಿಯೂ ಕೂಡ ಸಾಲಕ್ಕೆ ಚಕ್ರಬಡ್ಡಿಯಿದ್ದು, ನಮ್ಮ ಜಮೀನು, ಮನೆಗಳನ್ನು ಮಾರಿದರೂ ಕೂಡ ಸಾಲವನ್ನು ತೀರಿಸಲು ಸಾಧ್ಯವಿಲ್ಲ.

ಅಧ್ಯಕ್ಷರು : ಪಾಟೀಲರೇ ಬೇಗ ಮುಗಿಸಿ. ಮಾತನಾಡುವವರು ಇನ್ನೂ ಬಹಳ ಜನರಿದ್ದಾರೆ.

ಶ್ರೀ ಬಿ.ಆರ್. ಪಾಟೀಲ್ : ಈಗ ಹೊಸ ಸಾಲವನ್ನು ಶೇಕಡಾ 6ರ ಬಡ್ಡಿಯಲ್ಲಿ ಯಾವ ಬ್ಯಾಂಕಿನಲ್ಲಿ ತೆಗೆದುಕೊಳ್ಳುವುದು? ಕೇಂದ್ರ ಸರ್ಕಾರದ ವಾಣಿಜ್ಯ ಬ್ಯಾಂಕಿನ ನೀತಿ ಕೂಡ ಬದಲಾವಣೆಯಾಗಬೇಕು. ಆದಕಾರಣ ನಾನು ಕೇಂದ್ರ ಸರ್ಕಾರಕ್ಕೆ ಮನವಿ ಮಾಡುತ್ತೇನೆ, ಕಮರ್ಷಿಯಲ್ ಬ್ಯಾಂಕುಗಳೂ ಕೂಡ ತಮ್ಮ ಬಡ್ಡಿಯನ್ನು ಇಳಿಸಬೇಕು.

1.10 ಪಿ.ಎಂ

ಈಗ ಕಾರು ತೆಗೆದುಕೊಳ್ಳುವವರಿಗೆ ಶೇಕಡ 8 ರಷ್ಟು ಬಡ್ಡಿಯಲ್ಲಿ ಸಾಲ ಕೊಡುತ್ತಾರೆ, ಮನೆ ಕಟ್ಟುವವರಿಗೆ ಶೇಕಡ 6 ರಷ್ಟು ಬಡ್ಡಿ ದರದಲ್ಲಿ ಸಾಲ ಕೊಡುತ್ತಾರೆ, ಯಾರು ಇವತ್ತು ಬೆವರು ಸುರಿಸಿ ದೇಶಕ್ಕೆ ಅನ್ನ ಕೊಡುತ್ತಿದ್ದಾರೆ ಅವರಿಗೆ ಶೇಕಡ 12ರಷ್ಟು ಬಡ್ಡಿ ದರದಲ್ಲಿ ಸಾಲ ಕೊಡುವಂಥ ಈ Commercial Bank Attitude ಬದಲಾವಣೆಯಾಗಬೇಕಾದರೆ ರಾಜ್ಯಸರ್ಕಾರದವರು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕು. ಕರ್ನಾಟಕ ರಾಜ್ಯಸರ್ಕಾರ ಅಷ್ಟೇ ಅಲ್ಲ, ದೇಶದ ಎಲ್ಲಾ ರಾಜ್ಯಸರ್ಕಾರಗಳು ಕೇಂದ್ರದಲ್ಲಿ ಒತ್ತಡ ತಂದು ಈ ಬಡ್ಡಿ ದರವನ್ನು ಇಳಿಸಬೇಕಾಗುತ್ತದೆ. ಅಂಥ ಒಂದು ಕೆಲಸ ಮಾಡಿದರೆ ಮಾನ್ಯ ಸಿದ್ಧರಾಮಯ್ಯನವರು ಏನು 6 ಪರ್ಸೆಂಟ್ ಬಡ್ಡಿಗೆ ಕೊಡುವಂಥ ಒಂದು ಮಾತನ್ನು ಕೊಟ್ಟಿದ್ದಾರೆ, ನಿಜವಾಗಿಯೂ ಅದರಿಂದ ರೈತರಿಗೆ ಸಹಾಯ ಆಗಲಿಕ್ಕೆ ಸಾಧ್ಯತೆ ಇದೆ. ಇನ್ನು ಮುಂದೆ ಯಾರಿಗೂ ಕೂಡ ಸಾಲ ಸಿಗುವಂಥ ಅವಕಾಶಗಳಿಲ್ಲ. ಅಷ್ಟು ಸಾಲಗಳನ್ನು ಇಲ್ಲಿ ಈಗ ನಾವು ಮಾಡಿಕೊಂಡಿದ್ದೇವೆ. ಆದ್ದರಿಂದ ಇವತ್ತು ನಾವು ಕೃಷಿಯನ್ನು ಗಟ್ಟಿಯಾಗಿ ಉಳಿಸಿಕೊಂಡೆವು. ಅದರ ಜೊತೆಗೆ ಉದ್ಯೋಗವನ್ನು ಕೊಡಿಸುವಂಥ ಕೆಲಸವನ್ನು ಮಾಡಿಸುವುದರ ಜೊತೆಗೆ ಆ ಕೃಷಿ ಆಧಾರಿತ ಉದ್ದಿಮೆಗಳನ್ನು ನಾವು ಹೆಚ್ಚಿಗೆ ಮಾಡುತ್ತಾ ಹೋದರೆ ಮಾತ್ರ ಈ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲಿಕ್ಕೆ ಸಾಧ್ಯತೆ ಇದೆ ಎನ್ನುವಂಥ ಮಾತುಗಳನ್ನು ಹೇಳುತ್ತಾ, ಇನ್ನೊಂದು ಬಹಳ ಮುಖ್ಯವಾದದ್ದು ಪರಿಸರ. ಈ ಅರಣ್ಯ ನಾಶ ಎಷ್ಟು ಆಗುತ್ತಿದೆಯೆಂದರೆ, ಈ ಮಾನವ ರಾಕ್ಷಸಿ ಶಕ್ತಿಗೆ ಎಷ್ಟು ಸಾಧ್ಯವೋ ಅಷ್ಟೆಲ್ಲಾ ಅರಣ್ಯ ನಾಶವನ್ನು ನಾವು ಮಾಡುತ್ತಲೇ ಇದ್ದೇವೆ. ಇವತ್ತು ಇನ್ನೊಂದು ಸಂತೋಷದ ವಿಷಯ ಎಂದರೆ, ಕರ್ನಾಟಕ ರಾಜ್ಯ ಇಡೀ ದೇಶಕ್ಕೆ ಮಾದರಿಯಾದ ರಾಜ್ಯವಾಗಿದೆ. ಹಿಂದೆ ಇದ್ದ Number One Man Made Forests ಇದು ನಮ್ಮ ರಾಜ್ಯಕ್ಕೆ ಸಿಕ್ಕಿದಂಥ ಕೀರ್ತಿಯಾಗಿದೆ. ಹಾಗಾಗಿ ಇವತ್ತು ಏನು ಅರಣ್ಯ ಬೆಳೆಸುವಂಥ ಕೆಲಸದಲ್ಲಿ ಇಷ್ಟೊಂದು ಪ್ರಗತಿಯಲ್ಲಿದ್ದೇವೆ ಅದೇ ರೀತಿ ಇನ್ನೂ ಒಂದು ಕ್ರಾಂತಿ ಮಾಡಲಿಕ್ಕೆ ಸಾಧ್ಯತೆ ಇದೆ. ಅದು ಹೇಗೆಂದರೆ, ಇವತ್ತು 10 ಎಕರೆ 5 ಎಕರೆ ಇರತಕ್ಕಂತ ನಮ್ಮ ಸಣ್ಣ ಜಮೀನುದಾರರು ಇದ್ದಾರೆ ಅಥವಾ 40–50 ಎಕರೆ ಇರುವಂಥ ಜಮೀನುದಾರರು ಇದ್ದಾರೆ ಸರ್ಕಾರ ಏನಾದರೊಂದು ಕ್ರಾಂತಿಕಾರಿ ಕಾನೂನನ್ನು ತರಬೇಕು. ಹಿಂದೆ Land Reforms ಕಾನೂನನ್ನು ತಂದಿದ್ದೇವೆ. ಅವನು ಕನಿಷ್ಟಪಕ್ಷ ಒಂದು ಎಕರೆಯಲ್ಲಿ ಅರಣ್ಯ ಬೆಳೆಸಲೇ ಬೇಕು ಎನ್ನುವಂಥ ಒಂದು compulsory ಕಾನೂನು ಮಾಡಿದರೆ ನಾವು ಇಡೀ ನಮ್ಮ ನಾಡಿನಲ್ಲಿ ಅರಣ್ಯ ಬೆಳೆಸುವುದಕ್ಕೆ ಸಾಧ್ಯತೆ ಇದೆ. ಅರಣ್ಯ ಬೆಳೆಸಿದರೆ ಈ ಪರಿಸರ ಸಮತೋಲನವನ್ನು ಕಾಯ್ದುಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ ಮತ್ತು ಕಟ್ಟಿಗೆಯನ್ನು ಕೂಡ ನಾವು ಉಳಿಸಿಕೊಳ್ಳಲಿಕ್ಕೆ ಸಾಧ್ಯತೆ ಇದೆ. ನಮ್ಮ ದೇಶ ಇಷ್ಟು ಮುಂದುವರಿದಿದೆ ಎಂದು ಮಾತನಾಡಿದರೂ ಕೂಡ ನಮ್ಮ ದೇಶಕ್ಕೆ ಕಟ್ಟಿಗೆ ಹೊರಗಡೆ ದೇಶದಿಂದ ಬರುತ್ತಿದೆ. ಆಫ್ರಿಕಾ ದೇಶದಿಂದ ಬರುತ್ತದೆ, ಮಲೇಶಿಯಾದಿಂದ ಬರುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಅವರು ಅರಣ್ಯವನ್ನು ಯಾವ ರೀತಿ ಬೆಳೆಸಬಹುದೆಂದು ಹೇಳಿದರು. ಈಗ ಬಗರ್‌ಹುಕುಂ ಸಾಗುವಳಿ ಏನು ಮಾಡುತ್ತಾರೆ, ಅದರಲ್ಲಿ casuarinas ಮತ್ತು ಬೇರೆ ಮರಗಳನ್ನು ನೆಟ್ಟಾಗ ನಮಗೆ ಸಕ್ರಮ ಮಾಡಲಿಕ್ಕೆ ಬರುವುದಿಲ್ಲ. ಅದಕ್ಕೆ ಅವಕಾಶ ಮಾಡಿದಾಗ ಇನ್ನೂ ಹೆಚ್ಚು ಜನ ಮರ ಬೆಳೆಯುತ್ತಾರೆ. ದಯವಿಟ್ಟು ಅದನ್ನು ಏನಾದರೂ ಸ್ವಲ್ಪ ತಿದ್ದುಪಡಿ ಮಾಡಿ ಬಗರ್‌ಹುಕುಂ ಜಾಗದಲ್ಲಿ casuarinas ಮತ್ತು ಇತರೆ ಮರಗಳನ್ನು ಬೆಳೆದಾಗ ಅವರಿಗೆ ಸಕ್ರಮ ಮಾಡಿಕೊಡಲಿಕ್ಕೆ ಅವಕಾಶ ಇದ್ದಾಗ ಇನ್ನೂ ಜಾಸ್ತಿ ಬೆಳೆಯಲಿಕ್ಕೆ ಪ್ರಯತ್ನವನ್ನು ಮಾಡುತ್ತಾರೆ.

ಶ್ರೀ ಆಲ್ಕೋಡ್ ಹನುಮಂತಪ್ಪ : ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಸದಸ್ಯರಾದ ಬಿ.ಆರ್. ಪಾಟೀಲರು ಮಾತನಾಡಿರತಕ್ಕಂಥ ವಿಷಯದಲ್ಲಿ ಅರಣ್ಯ ಬೆಳೆಸತಕ್ಕಂಥದ್ದಕ್ಕೆ ಎಲ್ಲರೂ ಸಹಮತ ವ್ಯಕ್ತಪಡಿಸುತ್ತಾರೆ. ಬಹಳ ದೊಡ್ಡ ರೀತಿಯಲ್ಲಿ ಅರಣ್ಯ ಬೆಳೆಸಬೇಕು. ಇನ್ನೊಂದು ಕಡೆ ಏನಾಗುತ್ತಿದೆಯೆಂದರೆ ಅಧಿಕಾರಿಗಳಿಂದಲೇ ಅರಣ್ಯ ನಾಶವಾಗುತ್ತಿದೆ. ಅಧಿಕಾರಿಗಳೇ ಅರಣ್ಯವನ್ನು ನಾಶಮಾಡುತ್ತಿದ್ದಾರೆ. ಈಗ ಏನಾಗಿದೆಯೆಂದರೆ ಅರಣ್ಯವನ್ನು ಅಧಿಕಾರಿಗಳಿಗೋಸ್ಕರವೇ ಬೆಳೆಸುತ್ತಿದ್ದೇವೆ ಎನ್ನತಕ್ಕಂಥದ್ದು ಆಗಿದೆ. ಬೇಕಾದರೆ ತಮಗೆ ಜೀವಂತ ಉದಾಹರಣೆಯನ್ನು ಹೇಳುತ್ತೇನೆ. ಕಲಘಟಗಿ ತಾಲ್ಲೂಕಿನಲ್ಲಿ ಬಹಳ ದೊಡ್ಡ ರೀತಿಯಲ್ಲಿ ಅರಣ್ಯವನ್ನು ಕಡಿದು ಅಧಿಕಾರಿಗಳಿಂದಲೇ ಮಾರಾಟವಾಗುತ್ತಿದೆ. ಬಹಳ ದೊಡ್ಡ ದೊಡ್ಡ ಮರವನ್ನು ಕಡಿದು ಅಧಿಕಾರಿಗಳು ಒಂದು ಕಡೆಗೆ dump ಮಾಡಿ ಅದನ್ನು ಬೇರೆ ರೀತಿಯಲ್ಲಿ ಮಾರಾಟ ಮಾಡತಕ್ಕಂಥದ್ದನ್ನು ನಾವು ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕಿನಲ್ಲಿ ನೋಡುತ್ತೇವೆ. ನಾವು ಇದನ್ನು ಪತ್ರಿಕೆಯಲ್ಲಿ ಕೂಡ ಓದಿದ್ದೇವೆ ಮತ್ತು ಟಿ.ವಿ.ಯಲ್ಲಿ ಸಹ ಬಂದಿದೆ ಆದರೆ ಇವತ್ತಿನವರೆಗೂ ಯಾವ ಅಧಿಕಾರಿಗಳ ಮೇಲೂ ಏನೂ ಕ್ರಮ ತೆಗೆದುಕೊಂಡಿಲ್ಲ.

ಅಧ್ಯಕ್ಷರು : ತಾವು ಕುಳಿತುಕೊಳ್ಳಿ. ಅವರು ಮಾತನಾಡುತ್ತಿದ್ದಾರೆ, ಮಾತನಾಡಲಿ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಬಹಳ ಮಹತ್ವದ ವಿಚಾರವನ್ನು ಅವರು ಹೇಳುತ್ತಿದ್ದಾರೆ. ಅಧಿಕಾರಿಗಳೇ ಅರಣ್ಯವನ್ನು ಕಡಿದು ಮಾರುತ್ತಿದ್ದಾರೆಂದು ನೇರವಾಗಿ ಹೇಳುತ್ತಿದ್ದಾರೆ. ದಯವಿಟ್ಟು ಅದರ ಬಗ್ಗೆ ಲಕ್ಷ್ಯ ಕೊಡಬೇಕು.

ಶ್ರೀ ಆಲ್ಕೋಡ್ ಹನುಮಂತಪ್ಪ : ಅದಕ್ಕೆ ಈ ರೀತಿಯಾಗುವುದರಿಂದ, ಅರಣ್ಯವನ್ನು ಬೆಳೆಸತಕ್ಕಂಥದ್ದು ಸರಿಯಾದ ಕ್ರಮ. ಆದರೆ ಈ ಮರಗಳನ್ನು ಕಡಿದು ಮಾರದ ಹಾಗೆ ಕಟ್ಟುನಿಟ್ಟಾಗಿ ಅಧಿಕಾರಿಗಳು ನೋಡಿಕೊಂಡಿರಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಶ್ರೀ ಬಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಅಲ್ಕೋಡ್‌ರವರು ಹೇಳಿದ್ದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಇದು ಇನ್ನೊಂದು ತರಹದಲ್ಲಿ ಚರ್ಚೆ ಆಗಬೇಕಾಗುತ್ತದೆ. ಇವತ್ತು ಇಂಥ ಎಲ್ಲಾ ಅಧಿಕಾರಿಗಳಿಗೆ ರಕ್ಷಣೆ ಕೊಡುವವರು ನಾವೇ. ತಪ್ಪು ತಿಳಿದುಕೊಳ್ಳಬೇಡಿ ಅಲ್ಕೋಡ್‌ರವರೇ ನಮಗೆ ಅಂಥ ಅಧಿಕಾರಿಯೇ ಬೇಕು ಇಂಥ ಅಧಿಕಾರಿಯೇ ಬೇಕೆನ್ನುವಂಥ ನಮ್ಮ ಪರವಾದಂಥ ಅಧಿಕಾರಿಗಳನ್ನು ಹಾಕಿಸಿಕೊಳ್ಳುವಂಥ ಪ್ರವೃತ್ತಿಯನ್ನು ನಾವು ಬೆಳೆಸಿಕೊಂಡಿರುವುದರಿಂದ ಆ ಸಲಿಗೆಯಿಂದ ಅಧಿಕಾರಿಗಳು ಅಂಥ ಕೆಲಸಗಳನ್ನು ಮಾಡುತ್ತಾರೆ ಮತ್ತು ಸಲ್ಲಿಸಬೇಕಾದಂಥ ಎಲ್ಲವನ್ನೂ ಸಲ್ಲಿಸುತ್ತಾರೆ. ಹೀಗಾಗಿ ವ್ಯವಸ್ಥೆಯಲ್ಲಿ ಈ ಅಧಿಕಾರಿಗಳ

ಮೇಲೆ ನಾವು ಆರೋಪ ಹೇರಿಸಿದರೆ ಸರಿ ತಪ್ಪು ಎಂದಲ್ಲ, ನಮ್ಮ ಮೇಲೆ ಕೂಡ ನಾವು ಅದನ್ನು ನೋಡಿಕೊಳ್ಳಬೇಕಾಗುತ್ತದೆ. ಇಂಥ ಒಂದು ಅರಣ್ಯ ಬೆಳೆಸುವಂಥ ಕೆಲಸವನ್ನು ನಾವು ಕಾನೂನಿನ ಮುಖಾಂತರ ನಾವು ತಂದರೆ ನಿಜವಾಗಿ ಕೂಡ ಅರಣ್ಯ ಬೆಳೆಸಬಹುದು ಮತ್ತು ಹೊರಗಡೆಯಿಂದ ಕಟ್ಟಿಗೆಯನ್ನು ಆಮದು ಮಾಡಿಕೊಳ್ಳುವಂಥ ಪರಿಸ್ಥಿತಿ ಏನಿದೆ ಅದನ್ನು ನಿಲ್ಲಿಸಬಹುದು ಎನ್ನುವಂಥ ಸಲಹೆಯನ್ನು ಇವತ್ತು ಸರ್ಕಾರಕ್ಕೆ ಕೊಡುತ್ತಾ, ಇವತ್ತು ನೀರಾವರಿ ಯೋಜನೆಗಳೇನಿವೆ, ರೈತರ ಜಮೀನಿಗೆ ನೀರು ಸಿಗಬೇಕೆನ್ನುವಂಥದ್ದು ನೀರಾವರಿ ಯೋಜನೆಯ ಮೂಲ ಕಲ್ಪನೆಯಾಗಿದೆ. ಆದರೆ ಬಹುತೇಕವಾಗಿ ಎಲ್ಲಾ ನೀರಾವರಿ ಯೋಜನೆಗಳಿಂದ ದೊಡ್ಡ ದೊಡ್ಡ ಪಟ್ಟಣ ಪ್ರದೇಶಗಳಿಗೆ ಕುಡಿಯಲಿಕ್ಕೆ ನೀರನ್ನು ತರುವಂಥ ಪ್ರವೃತ್ತಿ ಇತ್ತೀಚೆಗೆ ಪ್ರಾರಂಭವಾಗಿದೆ. ಇದು ಸರಿಯಾದುದಲ್ಲ. ಪಟ್ಟಣ ಪ್ರದೇಶದವರಿಗೆ ಅನುಕೂಲ ಮಾಡಿಕೊಡುವುದಕ್ಕೆ ಆ ಅಣೆಕಟ್ಟೆಗಳನ್ನು ಕಟ್ಟಿಲ್ಲ. ರೈತರ ಜಮೀನುಗಳಿಗೆ ನೀರು ಕೊಡಿಸುವುದಕ್ಕೆ ಮತ್ತು ಅಲ್ಲಿ ಕೃಷಿ ಕಾರ್ಮಿಕರಿಗೆ ಕೆಲಸ ಕೊಡಿಸಿ ರೈತರು ಉತ್ಪನ್ನ ಹೆಚ್ಚು ಮಾಡುವುದಕ್ಕೆಂದು ಆಣೆಕಟ್ಟೆಗಳನ್ನು ಕಟ್ಟಿರುವಂಥದ್ದು ಆಗಿದೆ. ಆದರೆ ಇವತ್ತು ಈ ಪ್ರವೃತ್ತಿ ಏನಿದೆ ಇದು ಬಹಳ ಅಪಾಯಕಾರಿ ಪ್ರವೃತ್ತಿ, ದಯಮಾಡಿ ಸರ್ಕಾರದವರು ಇದನ್ನು ಗಂಭೀರವಾಗಿ ಪರಿಗಣಿಸಬೇಕು ಅದನ್ನು ನಿಲ್ಲಿಸಬೇಕಾಗುತ್ತದೆ. ಇವತ್ತು ಕಾವೇರಿಯಿಂದ ಬೆಂಗಳೂರಿಗೆ ಎಷ್ಟು ನೀರು ಬರುತ್ತಿದೆ? ಬೆಂಗಳೂರು ಎಷ್ಟು ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದೆ? ಹೀಗಾಗಿ ಒಂದು ದಿವಸ ಇಡೀ ಕಾವೇರಿಯಲ್ಲಿ ಬರತಕ್ಕಂಥ ನೀರನ್ನು ಬೆಂಗಳೂರಿಗೆ ಕೊಟ್ಟರೂ ಕೂಡ ಸಾಕಾಗಲಾರದು ಅಷ್ಟು ದೊಡ್ಡ ಪ್ರಮಾಣದಲ್ಲಿ ಬೆಂಗಳೂರು ಬೆಳೆಯುತ್ತಿದೆ. ಇಲ್ಲಿ ಪಟ್ಟಣದವರ ಸಮಸ್ಯೆಯೇ ಬೇರೆ. ಈ ಪಟ್ಟಣದವರು ಉಪಯೋಗ ಮಡತಕ್ಕಂಥ ನೀರು ಮತ್ತು ಹಳ್ಳಿಯವರು ಉಪಯೋಗ ಮಾಡತಕ್ಕಂಥ ನೀರಿನ ಪ್ರಮಾಣ ನೋಡಿದರೆ ಬಹಳ ವ್ಯತ್ಯಾಸವಿದೆ. ಪಟ್ಟಣದ ವ್ಯಕ್ತಿ ದಿನಾ ಸರಾಸರಿ 45 ಲೀಟರ್ ನೀರನ್ನು ಉಪಯೋಗ ಮಾಡುತ್ತಾನೆ. ಆದರೆ ಹಳ್ಳಿ ಮನುಷ್ಯ ಕಷ್ಟಸುಖದಲ್ಲಿ ಬೆಳೆದರೂ ಕೂಡ ಅವರು ಕೇವಲ 15 ಲೀಟರ್ ನೀರನ್ನು ಉಪಯೋಗ ಮಾಡುತ್ತಾನೆ. ಒಂದು ಸಲ ಈ ಪಟ್ಟಣದವರು toilet ಗೆ ಹೋದರೆ flush ಮಾಡಿದರೆ 5 ಲೀಟರ್ ನೀರು ಹೋಗುತ್ತದೆ. ಪಾಪ, ಹಳ್ಳಿ ಮನುಷ್ಯನಿಗೆ ಇವತ್ತು ಸ್ನಾನಕ್ಕೆ ನೀರು ಇಲ್ಲ, ಕುಡಿಯಲಿಕ್ಕೆ ನೀರಿಲ್ಲ. ಹಾಗೆಯೇ ರೈತನಿಗೆ ಒಕ್ಕಲುತನ ಮಾಡಲಿಕ್ಕೆ ಅವನ ಜಮೀನಿಗೆ ನೀರಿಲ್ಲ. ಇಂಥ ಒಂದು ಕೆಟ್ಟ ಪ್ರವೃತ್ತಿಯನ್ನು ಸರ್ಕಾರ ನಿಲ್ಲಿಸಿ ಏನು ಆಣೆಕಟ್ಟೆಗಳನ್ನು ಕಟ್ಟಿದ್ದಾರೆ, ಆ ಆಣೆಕಟ್ಟೆಗಳಲ್ಲಿರತಕ್ಕಂಥ ನೀರನ್ನು ಕೃಷಿಗೆ ಮಾತ್ರ ಹೋಗಬೇಕು, ಅದು ಕುಡಿಯಲಿಕ್ಕೆ ಹೋಗಬಾರದು ಎನ್ನುವಂಥದ್ದರಲ್ಲಿ ನಾವು ಬಹಳ ಎಚ್ಚರಿಕೆಯಿಂದ ಹೆಜ್ಜೆಯನ್ನು ಇಡಬೇಕಾಗುತ್ತದೆ. ಇನ್ನು ನನ್ನ ಇನ್ನೊಂದು ಆಸಕ್ತಿಯ ಕ್ಷೇತ್ರ ಎಂದರೆ ವಿಕೇಂದ್ರಿಕರಣದ ವಿಷಯ. ಇದರ ಬಗ್ಗೆ ಎರಡು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ. ಇವತ್ತು ನಾವು ಜನತಾಂತ್ರಿಕ ವಿಕೇಂದ್ರಿಕರಣದಲ್ಲಿ ನಂಬಿಕೆ ಇಟ್ಟಿದ್ದೇವೆ. ನಮಗೆ ಅಧಿಕಾರವಿಲ್ಲ ಎಂದು ಇವತ್ತು ನಾವು ಶಾಸನಸಭೆಯಲ್ಲಿ ಹೇಳುತ್ತೇವೆ. ಆದರೆ ಆ ಸಂಸ್ಥೆಗಳೂ ಕೂಡ ಸ್ವತಂತ್ರವಾಗಿ ನಿರ್ವಹಣೆ ಮಾಡುವಂಥ ಸಂಪೂರ್ಣವಾದ ಅಧಿಕಾರವನ್ನು ನಮಗೆ ಕೊಟ್ಟಿಲ್ಲ. ಆದರೆ ದುರ್ದೈವದಿಂದ ಎಲ್ಲಿ ಸಂಪೂರ್ಣವಾಗಿ ನಿರ್ವಹಣೆ ಮಾಡುವಂಥ ಅಧಿಕಾರ ಈ ಸ್ವತಂತ್ರ ಸಂಸ್ಥೆಗಳಿಗೆ ಕೊಟ್ಟಿದ್ದೇವೆ ಅದು ಸರಿಯಾಗಿ ಉಪಯೋಗವಾಗುತ್ತಿಲ್ಲ. ಇದರ ಬಗ್ಗೆಯೂ ನಾವು ಇವತ್ತು ವಿಚಾರ ಮಾಡಬೇಕು. ಇವತ್ತು ಜಿಲ್ಲಾ ಪಂಚಾಯತ್ ತಾಲ್ಲೂಕು ಪಂಚಾಯತ್‌ಗಳಲ್ಲಿ ಆಗಿದ್ದೇನು? ಎಲ್ಲಾ ಪಕ್ಷದ ರಾಜಕೀಯ

ಕಾರ್ಯಕರ್ತರು ಕಂಟ್ರಾಕ್ಟರುಗಳಾಗಿದ್ದಾರೆ. ಯಾರು ಹೇಳುವವರು, ಯಾರು ಕೇಳುವವರು? ಭ್ರಷ್ಟಾಚಾರ ಆಯಿತು, ಭ್ರಷ್ಟಾಚಾರ ಆಯಿತು ಎಂದು ನಾವು ಇಲ್ಲಿ ಮಾತನಾಡುತ್ತೇವೆ. ಭ್ರಷ್ಟಾಚಾರ ಯಾರಿಂದ ಆಯಿತು? ಯಾರು ಚುನಾಯಿತ ಪ್ರತಿನಿಧಿಗಳು ಹೋಗಿದ್ದಾರೆ, ಯಾರು ಕೆಲಸ ಮಾಡಲಿಕ್ಕೆ ಹೋಗಿದ್ದಾರೆ, ಅವರೇ ಈ ಕೆಲಸ ಮಾಡಲು ಹೊರಟರೆ, ಭ್ರಷ್ಟಾಚಾರವಾಗದೆ ಮತ್ತೇನಾಗುತ್ತದೆ? ಸರ್ಕಾರ ಹಾಗೂ ಎಲ್ಲರೂ ಒಂದು ಯೋಚನೆ ಮಾಡಬೇಕಾಗುತ್ತದೆ. ಈ ಒಂದು ಕೆಟ್ಟ ಸಂಸ್ಕೃತಿ, ಪರಂಪರೆ ಬೆಳೆದು ಬರುತ್ತಿದೆ. ರಾಜಕೀಯದಲ್ಲಿ ಗೆದ್ದು ಬಂದ ತಕ್ಷಣ, ಅವರು ಕಂಟ್ರಾಕ್ಟರ್ ಆಗಿ ಬಿಡುವುದು, ಆ ಕಡೆ ಇಂಜಿನಿಯರ್‌ಗಳು ಅವರ ಮಾತನ್ನು ಕೇಳಲೇಬೇಕಾಗುತ್ತದೆ. ಏನಾದರೂ ಲೋಪದೋಷಗಳಾದರೆ, ಮುಚ್ಚಬೇಕಾಗುತ್ತದೆ. ಇಂಥ ಕೆಟ್ಟ ಸಂಸ್ಕೃತಿ ಬಂದ ಕಾರಣಕ್ಕಾಗಿ, ಗ್ರಾಮೀಣ ಭಾಗದಲ್ಲಿ, ಈ ಸಂಸ್ಥೆಗಳಲ್ಲಿ ವ್ಯಾಪಕವಾದ ಭ್ರಷ್ಟಾಚಾರ ನಡೆಯುತ್ತಿದೆ. ಅದಕ್ಕೆ ಒಂದು ನಿರ್ಬಂಧ ಮಾಡಬೇಕಾಗುತ್ತದೆ. ಇವತ್ತು ಡಿಪ್ಲೊಮಾ ಹೋಲ್ಡರ್ಸ್ ಇದ್ದಾರೆ, ಅವರಿಗೆ ಉದ್ಯೋಗವಿಲ್ಲ, ನಿರುದ್ಯೋಗಿಗಳಾಗಿದ್ದಾರೆ. ಅವರಿಗೆ ಲೈಸೆನ್ಸ್ ಕೊಡಿ. ಅವರು ಮಾತ್ರ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್‌ಗಳಲ್ಲಿ ಕೆಲಸ ಮಾಡಬೇಕು. ಡಿಪ್ಲೊಮಾ ಹೋಲ್ಡರ್ಸ್ ಅಡ್ಡಾಡುತ್ತಿದ್ದಾರೆ. ದೊಡ್ಡ ದೊಡ್ಡ ಕಂಟ್ರಾಕ್ಟರ್ಸ್, ರಾಜಕೀಯ ವ್ಯಕ್ತಿಗಳು ಕಂಟ್ರಾಕ್ಟರ್ ಕೆಲಸ ಮಾಡುವುದಕ್ಕೆ ಅವಕಾಶ ಕೊಡಬಾರದು. ಅವರಿಗೆ ನಿರ್ಬಂಧ ಹಾಕಿದರೆ ಮಾತ್ರ, ಈ ಕ್ಷೇತ್ರದಲ್ಲಿ ಕೆಲಸ ಮಾಡಲಿಕ್ಕೆ ಸಾಧ್ಯವಾಗುತ್ತದೆನ್ನುವ ಮಾತನ್ನು ಹೇಳುತ್ತೇನೆ. ಪ್ರತಿ ಸಲ ಒಂದು ಮಾತಿನ ಬಗ್ಗೆ ಇಲ್ಲಿ ಚರ್ಚೆ ನಡೆಯುತ್ತಿದೆ. ಮಹಿಳಾ ಶೌಚಾಲಯದ ಬಗ್ಗೆ ಮಾನ್ಯ ಶ್ರೀರಾಮರೆಡ್ಡಿಯವರು ಮುಂಜಾನೆ ಮಾತನಾಡುತ್ತಾ ಹೇಳಿದರು. ಇಲ್ಲಿ ಕುಳಿತ ನಮ್ಮ ಸಹೋದ್ಯೋಗಿಗಳಿಗೆ ಅವರ ನೋವು ಅರ್ಥವಾಗುತ್ತದೆ. ಯಾವುದೇ ಹಳ್ಳಿಗಳಲ್ಲಿ ಹೋದರೂ, ಹೆಣ್ಣು ಮಕ್ಕಳು ಕೇಳುವ ಬೇಡಿಕೆ ಎಂದರೆ, ನಮಗೆ ಶೌಚಾಲಯ ಕಟ್ಟಿಕೊಡಬೇಕು ಮತ್ತು ತಮ್ಮ ಊರಿನಲ್ಲಿ ಸಾರಾಯಿ ಬಂದ್ ಆಗಬೇಕು. ಇವತ್ತು ಪಂಚಾಯಿತಿಗಳಿಗೆ ಪ್ಲಾನ್ ಮಾಡುವ ಅಧಿಕಾರವಿದೆ, ಅದನ್ನು ಮೊಟಕುಗೊಳಿಸುವುದು ಬೇಡ. ಮಾನ್ಯ ಎಂ.ಪಿ. ಪ್ರಕಾಶ್‌ರವರು ಯಾವ ತರಹ ಆದೇಶ ಕೊಟ್ಟು ಮಾಡಿದ್ದರು; ಅದೇ ಪ್ರಕಾರವಾಗಿ, ನಾನು ಸರ್ಕಾರಕ್ಕೆ ಸಲಹೆ ಕೊಡುವುದೇನೆಂದರೆ, ಗ್ರಾಮ ಪಂಚಾಯತ್‌ನವರು ಪ್ರತಿ ಹಳ್ಳಿಗಳಲ್ಲಿ ಮಹಿಳೆಯರ ಸಂಖ್ಯೆಯ ಆಧಾರಿತವಾಗಿ ಮಹಿಳಾ ಶೌಚಾಲಯಗಳನ್ನು ಕಟ್ಟಿದರೆ ಮಾತ್ರ ಅನುದಾನ ಬಿಡುಗಡೆ ಮಾಡುತ್ತೇವೆ, ಇಲ್ಲದಿದ್ದರೆ ಮಾಡುವುದಕ್ಕಾಗುವುದಿಲ್ಲವೆನ್ನುವ ಮಾತನ್ನು ಸರ್ಕಾರದವರು ಸ್ಪಷ್ಟಪಡಿಸಿ ಹೇಳಬೇಕು. ಇಲ್ಲದಿದ್ದರೆ, ಅವರ ಮನೆಗಳ ಮುಂದೆ ರೋಡ್ ಮಾಡಿಕೊಳ್ಳುವುದು, ಅವರಿಗೆ ಬೇಕಾದ ಕೆಲಸಗಳನ್ನು ಮಾಡಿಕೊಳ್ಳುವುದು, ಆ ಹಣವನ್ನು ಬೇರೆ ಯಾವುದೋ ಕೆಲಸಗಳಿಗೆ ಉಪಯೋಗ ಮಾಡಿಕೊಳ್ಳುವ ಮೊದಲು, ಹಾಗೆ ಮಾಡಬೇಕು. ಏಕೆಂದರೆ, ಇದು ಮಾನವೀಯ ಪ್ರಶ್ನೆಯಾಗಿದೆ. ಗ್ರಾಮ, ತಾಲ್ಲೂಕು, ಜಿಲ್ಲಾ ಪಂಚಾಯತ್‌ಗಳಿಗೆ ಸ್ಪಷ್ಟವಾದ ಆದೇಶವನ್ನು ಸರ್ಕಾರ ಈ ಬಗ್ಗೆ ಕೊಡಬೇಕು. It should be mandatory ಎಂದು ಮಾಡಬೇಕು. ನಿಮ್ಮ ಯೋಜನೆಯಲ್ಲಿ ಮಹಿಳೆಯರ ಸಂಖ್ಯೆಯ ಆಧಾರಿತವಾಗಿ ಅಷ್ಟು ಶೌಚಾಲಯಗಳನ್ನು ಕಟ್ಟಲೇಬೇಕೆಂಬ ನಿರ್ಬಂಧ ಹೇರಿದರೆ ಮಾತ್ರ ಗ್ರಾಮೀಣ ಭಾಗದಲ್ಲಿ ಶೌಚಾಲಯಗಳನ್ನು ಕಟ್ಟಲಿಕ್ಕೆ ಸಾಧ್ಯವಿದೆ. ಇಲ್ಲದಿದ್ದರೆ, ಆ ತಾಯಂದಿರ ಕಷ್ಟಗಳನ್ನು ಕಣ್ಣಿನಿಂದ ನೋಡಲಾಗುವುದಿಲ್ಲ, ಕಿವಿಯಿಂದ ಕೇಳಬಾರದು, ಆ ರೀತಿ ಇರುತ್ತದೆ. ಆದುದರಿಂದ, ಆ ಕೆಲಸವನ್ನು ಮಾಡಬೇಕು. ಅಧಿಕಾರಿ ಶಾಹಿಗಳು, ಇದೊಂದು ಪ್ರಜಾತಂತ್ರ ವ್ಯವಸ್ಥೆಗಿರುವ ದೊಡ್ಡ

ಸಮಸ್ಯೆ. ಇದೇನು ನಿಜವಾದ ಪ್ರಜಾತಂತ್ರವೋ ಏನೋ ಎಂದು ಒಂದು ಸಲ ಯೋಚಿಸಬೇಕಾಗುತ್ತದೆ. ನಾಮ್ ಕಾ ವಾಸ್ತೆ ಪ್ರಜಾತಂತ್ರವಿದು. ನಾವೆಲ್ಲಾ ಗೆದ್ದು ಬರುತ್ತೇವೆ. ನೀವು ಅವಕಾಶ ಕೊಡುತ್ತೀರಿ. ನಾವು ದೊಡ್ಡ ದೊಡ್ಡದಾಗಿ ಮಾತನಾಡುತ್ತೇವೆ. ಮಂತ್ರಿಗಳು ಆದೇಶ ಮಾಡುತ್ತಾರೆ. ಆದರೆ, ಕಾರ್ಯಗತವಾಗಲಿಕ್ಕೆ ಹೋದಾಗ, ಅಧಿಕಾರಿಗಳು ಎಷ್ಟು ಗಟ್ಟಿಯಾಗಿ ಬೆಳೆದಿದ್ದಾರೆಂದರೆ, ಅವರು ಯಾರ ಮಾತನ್ನೂ ಕೇಳಲು ಸಿದ್ಧರಿಲ್ಲ. ಅವರು ಅವರ ಮನಸ್ಸಿಗೆ ಏನು ಬರುತ್ತದೋ ಹಾಗೆ ಮಾಡುತ್ತಾರೆ. ತಮಗೇನು ಅನುಕೂಲವಾಗುತ್ತದೋ ಅದೇ ಮಾಡುತ್ತಾರೆ. ಇಷ್ಟೊಂದು ಅಧಿಕಾರಿ ಶಾಹಿ ಗಟ್ಟಿಯಾಗಿ ಬೆಳೆದರೆ, ಪ್ರಜಾತಂತ್ರಕ್ಕೆ ಬಹಳ ದೊಡ್ಡ ಹೊಡೆತ ಬೀಳುತ್ತದೆ, ದೊಡ್ಡ ಅಪಾಯಕಾರಿಯಾಗುತ್ತದೆ. ಈ ಒಂದು ಅಧಿಕಾರಿ ಶಾಹಿಗಳನ್ನು ಮೊಟಕು ಮಾಡಬೇಕಾಗಿದ್ದರೆ, ಅವರನ್ನು ನಿಯಂತ್ರಣದಲ್ಲಿಡಬೇಕಾದರೆ, ನಮ್ಮ ರಾಜಕೀಯ ವ್ಯಕ್ತಿಗಳು, ರಾಜಕೀಯ ಪಕ್ಷಗಳು ಗಟ್ಟಿಯಾದ ನಿಲುವನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಧಿಕಾರಿಗಳು ಎಂದರೆ ಯಾರು? ಸರ್ಕಾರದಿಂದ ಸಂಬಳ ಪಡೆದು, ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಕೆಲಸ ಮಾಡುವವರು. ಕಾನೂನನ್ನು ಮೀರಿ ಯಾರು ರಾಜಕಾರಣಿಗಳು ಆದೇಶ ಕೊಡುತ್ತಾರೆ, ಅದನ್ನು ಇವರು ಪಾಲನೆ ಮಾಡಬಾರದು. ಅದು ಅವರು ಮಾಡಬೇಕಾದ ಕೆಲಸ. ಆದರೆ, ನಾವು ಇವತ್ತು ನೋಡುತ್ತಿದ್ದೇನೆ, ಆ ಅಧಿಕಾರಿಗಳ ದರ್ಪ, ದುರಹಂಕಾರ, ಆಡಳಿತ ನೋಡಿದರೆ ನಿಜವಾಗಿಯೂ ಇವರೇ ಪ್ರಜಾತಂತ್ರ ವ್ಯವಸ್ಥೆಯನ್ನು ಕೈಯಲ್ಲಿ ಹಿಡಿದುಕೊಂಡಿದ್ದಾರೆ, ಇವರಿಗೇ ದೇಶದ ಸಂಪೂರ್ಣ ಅಧಿಕಾರವಿದೆ ಎನ್ನುವ ವರ್ತನೆಯನ್ನು ಕಾಣಬಹುದು. ನಾವು ಶಾಸಕರು ಫೋನ್ ಮಾಡಿ ಮಾತನಾಡುತ್ತಿದ್ದೇವೆ, ಎಂದರೆ, ಅವರು ಎಷ್ಟು ಕಠೋರವಾಗಿ, ಕಠಿಣವಾದ ಶೈಲಿಯಲ್ಲಿ ಉತ್ತರಿಸುತ್ತಾರೆಂದರೆ, ಬಹುಶಃ ಬಹಳ ಶಾಸಕರು ಇದನ್ನು ಅನುಭವಿಸಿದ್ದೇವೆ. ನಾವು ಅನೇಕ ಕೆಲಸಗಳಿಗೆ ಕಛೇರಿಗೆ ಹೋಗುತ್ತೇವೆ. ನಮ್ಮ ಮನೆಗಳ ಕೆಲಸಕ್ಕಾಗಿ ಕಛೇರಿಗೆ ಹೋಗುವುದಿಲ್ಲ. ಸಾರ್ವಜನಿಕರ ಕೆಲಸಕ್ಕೆ ಹೋಗುತ್ತೇವೆ. ಆದರೆ, ಸೌಜನ್ಯದ ಮಾತು ಎಂದಿರುತ್ತಧೆ. ಕನಿಷ್ಠ ಸೌಜನ್ಯ ಕೊಡುವ ಅಧಿಕಾರಿಗಳೂ ಸಹ ಇಲ್ಲ. ಹೋದಾಗ, ಬಹಳ ಧಿಮಾಕಿನಿಂದ ಕಾಲ ಮೇಲೆ ಕಾಲು ಹಾಕಿ ಕುಳಿತಿರುತ್ತಾರೆ. ಬಂದವರಿಗೆ ಕುಳಿತುಕೊಳ್ಳಿ ಎಂದು ಹೇಳುವುದಿಲ್ಲ. ಇಂಥ ಒಂದು ವರ್ತನೆ ಇವತ್ತು ಮುಂದುವರೆದರೆ....

ಅಧ್ಯಕ್ಷರು : ಅದಕ್ಕೆ ಯಾರು ಕಾರಣವೆಂದು ಹೇಳಿ.

ಶ್ರೀ ಕೆ. ಪದ್ಮನಾಭ ಕೊಟಾರಿ : ಇದು ಅವರದೇ ಬಡ್ಜೆಟ್. ಅವರೇ ಇಷ್ಟು ಮಾತನಾಡಿದರೆ ಹೇಗೆ? ಆಡಳಿತ ಪಕ್ಷದವರೇ ಬಡ್ಜೆಟ್ ಬಗ್ಗೆ ಮಾತನಾಡಿದರೆ ಹೇಗೆ?

ಅಧ್ಯಕ್ಷರು : ಆಡಳಿತ ಪಕ್ಷದವರು ಮಾತನಾಡಬಾರದೆಂದೇನೂ ಅಲ್ಲ. ಅವರಿಗೂ ಸಮಯ ನಿಗದಿ ಮಾಡಿರುತ್ತೇವೆ. ಅವರ ಪರಿಮಿತಿಯಲ್ಲಿ ಮಾತನಾಡಬಹುದು. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿ.ಎಸ್. ಪುಟ್ಟೇಗೌಡ : ನಮಗೂ ಸಮಸ್ಯೆ ಇದೆ. ಮಾತು ಮಾತಿಗೆ ಆಡಳಿತ ಪಕ್ಷದವರು ಮಾತನಾಡಬಾರದೆಂದು ಹೇಳಿದರೆ ಹೇಗೆ?

ಅಧ್ಯಕ್ಷರು : ನೀವು ಕುಳಿತುಕೊಳ್ಳಿ. ನಿಮಗೂ ಅವಕಾಶವಿದೆ.

ಗೊಂದಲ

ಶ್ರೀ ಸಿ.ಎಸ್. ಪುಟ್ಟೇಗೌಡ : ಇವರು ಹೇಳುವುದನ್ನು ಕೇಳುವುದಕ್ಕೆ ಬಂದಿದ್ದೇವೆನ್ನುವ ರೀತಿಯಲ್ಲಿ ಮಾತನಾಡುತ್ತಾರೆ. ನಮಗೆ ನಮ್ಮದೇ ಆದ ಸಮಸ್ಯೆಗಳಿರುತ್ತವೆ. ಮಾತು ಮಾತಿಗೂ

ಇದನ್ನು ಅವರು ಹೇಳಬಾರದು. ಜನ ನಮ್ಮನ್ನು ಅಡ್ಡ ಹಾಕಿ ಕೇಳುತ್ತಾರೆ. ಮಾತು ಮಾತಿಗೂ ಆಡಳಿತ ಪಕ್ಷದವರು ಮಾತನಾಡಬಾರದೆಂದು ಹೇಳಿದರೆ ಹೇಗೆ? ನಾವು ಬಾಯಿ ಹೊಲಿದುಕೊಂಡು, ನಿಮ್ಮ ಭಾಷಣ ಕೇಳಲು ಬಂದಿದ್ದೇವೆಯೇ? ನಮಗೂ ನಿಮ್ಮ ಭಾಷಣ ಚೆನ್ನಾಗಿ ಗೊತ್ತಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ವಿರೋಧ ಪಕ್ಷದವರು ಮಾತನಾಡುವಾಗ ಆಡಳಿತ ಪಕ್ಷದವರು ಈ ರೀತಿ ಗಲಾಟೆ ಮಾಡುವುದಾದರೆ, ಇದೇನು ತಮಾಷೆ ಮಾಡುತ್ತಾರೆಯೇ? ಹೇಗೆ? ವಿರೋಧ ಪಕ್ಷದವರು ಮಾತನಾಡುವಾಗ ಎಲ್ಲರೂ ಎದ್ದು ಗಲಾಟೆ ಮಾಡಿದರೆ ವಿರೋಧ ಪಕ್ಷದವರು ಮಾತನಾಡುವ ಹಾಗೆಯೇ ಇಲ್ಲ.

ಅಧ್ಯಕ್ಷರು : ಕುಳಿತುಕೊಳ್ಳಿ ಶ್ರೀರಾಮರೆಡ್ಡಿಯವರೆ, ನೀವು ಮಾತನಾಡಿದ್ದೀರಲ್ಲಾ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವು ನಮ್ಮ ರಕ್ಷಣೆಗೆ ಬರಬೇಕು.

ಅಧ್ಯಕ್ಷರು : ನಾನು ನಿಮ್ಮ ರಕ್ಷಣೆಗೆ ಬರುತ್ತಿದ್ದೇವೆ. ಅವರಿಗೂ ಸಹ ಮಾತನಾಡುವುದಕ್ಕೆ ಅವಕಾಶವಿದೆ. ಅವರಿಗೂ ಸಮಯವಿದೆ. ಯಾವ್ಯಾವ ಪಕ್ಷಗಳಿಗೆ ಎಷ್ಟೆಷ್ಟು ಸಮಯ ನಿಗದಿಪಡಿಸುತ್ತೇವೆ, ಹಾಗೇ ಎಲ್ಲರಿಗೂ ಅವಕಾಶ ಕೊಡುತ್ತೇನೆ. ಆದುದರಿಂದ, ಸುಮ್ಮನೆ ಅವರೇ ಮಾತನಾಡಬೇಕೆಂದಲ್ಲ. ನೀವು ಕುಳಿತುಕೊಳ್ಳಿ. ನಿಮಗೂ ಅವಕಾಶ ಕೊಡುತ್ತೇನೆ. ಪಾಟೀಲರೆ ನೀವು ಮಾತನಾಡಿ.

ಶ್ರೀ ಕೆ. ಪದ್ಮನಾಭ ಕೊಟಾರಿ : ಅಧಿಕಾರಿಗಳು ಅವರೇ ಆಡಳಿತ ಮಾಡುತ್ತಾರೆ.

ಶ್ರೀ ಆಲ್ಕೋಡ್ ಹನುಮಂತಪ್ಪ : ಇವರ ದೃಷ್ಟಿಯಲ್ಲಿ ನಾವು ಮಾತನಾಡಬಾರದೆಂದು ಇದೆಯೇ? ಕೇಳಿ. ನಿಮ್ಮ ದೃಷ್ಟಿಯಲ್ಲಿ ನಾವು ಮಾತನಾಡಬಾರದೆ?

ಅಧ್ಯಕ್ಷರು : ನೀವು ಸದಸ್ಯರು ಈ ರೀತಿ ಮಾಡಬಾರದು. ಕುಳಿತುಕೊಳ್ಳಿ. ಪಾಟೀಲರೆ, ನೀವು ಯೀಲ್ಡ್ ಆಗಬೇಡಿ. ಆಗಲೇ ಒಂದು ಗಂಟೆಯಾಯಿತು. ಬೇಗ ಮುಗಿಸಿ.

ಶ್ರೀ ಬಿ.ಆರ್. ಪಾಟೀಲ್ : ನಮ್ಮ ಸ್ನೇಹಿತರು ತಪ್ಪು ತಿಳಿದುಕೊಂಡಿದ್ದಾರೆ. ನೀವೆಲ್ಲಾ ಹೊಸದಾಗಿ ಬಂದಿದ್ದೀರಿ, ಇನ್ನೂ ಅನುಭವವಾಗಿಲ್ಲ, ತಪ್ಪು ತಿಳಿದುಕೊಳ್ಳಬೇಡಿ.

ಅಧ್ಯಕ್ಷರು : ಪಾಟೀಲರೆ, ಅವರಿಗೆ ಉತ್ತರ ಕೊಡುವ ಅಗತ್ಯವಿಲ್ಲ. ನೀವು ಅಧಿಕಾರಿಗಳ ಬಗ್ಗೆ ಏನೋ ಮಾತನಾಡಿದಿರಿ. ವ್ಯವಸ್ಥೆಯಲ್ಲಿ ಯಾರು ಕಾರಣ ಎಂದು ಸ್ಪಷ್ಟೀಕರಣ ಹೇಳಿದರೆ ಅನುಕೂಲವಾಗುತ್ತದೆ.

ಶ್ರೀ ಬಿ.ಆರ್. ಪಾಟೀಲ್ : ನಾವೇನು ಜನಪ್ರತಿನಿಧಿಗಳು 5 ವರ್ಷ ಬಂದು ಮತ್ತೆ ಜನ ಕಳುಹಿಸಿಲ್ಲವೆಂದರೆ ಮನೆಗೆ ಹೋಗುತ್ತೇವೆ. ಆದರೆ, 30–35 ವರ್ಷ ಅಧಿಕಾರಿಗಳು ಗಟ್ಟಿಯಾಗಿ ಕುಳಿತಿರುತ್ತಾರೆ. ಅವರು ನಮ್ಮಂಥವರನ್ನು ಎಷ್ಟೋ ಜನ ನೋಡಿರುತ್ತಾರೆ. ಹೀಗಾಗಿ, ಈ ಸಮಸ್ಯೆ ಕೇವಲ ಆಡಳಿತ ಪಕ್ಷದವರಿಗೆ ಸಂಬಂಧಿಸಿದ್ದು, ನಮಗೆ ಸಂಬಂಧವಿಲ್ಲವೆಂದು ತಿಳಿದುಕೊಳ್ಳಬೇಡಿ. ಅದು ಎಷ್ಟು ಕೆಟ್ಟದ್ದಾಗಿದೆ ಎನ್ನುವುದು ತಮಗೂ ಸ್ವಲ್ಪ ದಿವಸದಲ್ಲಿ ಅನುಭವವಾಗುತ್ತದೆ. ಅದು ಆಗಿದೆ ಎಂದು ಅವರೇ ಹೇಳುತ್ತಿದ್ದಾರೆ. ಮಾನ್ಯ ಸಿದ್ಧರಾಮಯ್ಯನವರು ಬಹಳ ದಿಟ್ಟ ನಿಲುವಿಗೆ ಮತ್ತು ದೃಢ ನಿರ್ಧಾರಕ್ಕೆ ನಿಲ್ಲುವ ಮನುಷ್ಯ. ಅವರಿಗೆ ನಾನು ವಿನಂತಿಸುತ್ತೇನೆ, ಅಧಿಕಾರಿ ಶಾಹಿಗಳನ್ನು ನೀವು ನಿಯಂತ್ರಣದಲ್ಲಿಡಬೇಕು. ಜನ ಪ್ರತಿನಿಧಿಗಳು ಯಾರೂ ಜನ ಪರ ಕೆಲಸಗಳಿದ್ದರೆ, ವೈಯಕ್ತಿಕ ಕೆಲಸ, ಯಾವುದೇ ಲಾಭಕ್ಕೆ ಇರುವ ಕೆಲಸಕ್ಕೆ ಬಂದರೆ ಯಾರೂ ಎಂಟರ್‌ಟೇನ್ ಮಾಡುವ ಅವಶ್ಯಕತೆ ಇಲ್ಲ. ಜನ ಪರವಾದ ಯಾವುದೇ ಒಂದು ಸಾರ್ವಜನಿಕ ಕೆಲಸ ತೆಗೆದುಕೊಂಡು ಹೋದರೆ,

ಅಧಿಕಾರಿಗಳು ಅವರನ್ನು ಗೌರವಿಸಿ, ಅವರ ಕೆಲಸವನ್ನು ಮಾಡಿಕೊಡುವ ಹಾಗೆ ಅಧಿಕಾರಿಗಳಿಗೆ ನಿರ್ದೇಶನ ಕೊಡದಿದ್ದರೆ, ಈ ಜನ ಪ್ರತಿನಿಧಿಗಳಿಗೆ ಮರ್ಯಾದೆ ಸಿಗುವುದಿಲ್ಲ. ಅಂಥ ಒಂದು ಕೆಲಸವನ್ನು ತಾವು ದಯವಿಟ್ಟು ಮಾಡಲೇ ಬೇಕೆನ್ನುವ ಮಾತನ್ನು ಹೇಳುತ್ತೇನೆ. ಕೊನೆಯದಾಗಿ, ಉತ್ತರ ಕರ್ನಾಟಕದ ಬಗ್ಗೆ ಮಾನ್ಯ ಹಣಕಾಸು ಸಚಿವರು, ಹೈದರಾಬಾದ್-ಕರ್ನಾಟಕಕ್ಕೆ ಒಂದು ವಿಶೇಷವಾದ ಆಶೆ ತೋರಿಸಿದ್ದಾರೆ. ಆದರೆ, ಗುಟ್ಟು ಬಿಟ್ಟುಕೊಟ್ಟಿಲ್ಲ. ನಾವು ವಿಶೇಷ ಕಾಳಜಿ ವಹಿಸುತ್ತೇವೆನ್ನುವ ಮಾತನ್ನು ಹೇಳಿದ್ದಾರೆ. ಆದರೆ, ಯಾವ ತರಹ ಕಾಳಜಿ ಎಂದರು ಹೇಳುತ್ತಿಲ್ಲ. ಹೈದರಾಬಾದ್-ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಆದ ಮೇಲೆ, ನಮಗೆ ವರ್ಷಕ್ಕೆ 100 ಕೋಟಿ ರೂ. ಕೊಡುವಂಥ ಮಾತಾಗಿದೆ. ಆದರೆ, ಅದಾಗುತ್ತಿಲ್ಲ. ಬರಬರುತ್ತಾ, ಕಡಿಮೆಯಾಗಿ ಕಳೆದ ವರ್ಷ 20 ಕೋಟಿ ರೂ. ಬಂದಿತ್ತು. ನಾನು ಈಗ ಹಣಕಾಸು ಸಚಿವರಿಗೆ ವಿನಂತಿಸುತ್ತೇನೆ, ಹಿಂದಿನದ್ದು ಆಯಿತು. ಇನ್ನು ಮುಂದೆ, ತಾವು ಈಗ ಈ ಒಂದು 100 ಕೋಟಿ ರೂ.ಗಳನ್ನು ರೆಗ್ಯುಲರ್ ಆಗಿ ಒದಗಿಸಬೇಕು. ಇನ್ನೊಂದನ್ನು ವಿನಂತಿಸುತ್ತೇನೆ, ಇದಕ್ಕೆ ಆದ್ಯತೆ ಪಟ್ಟಿ ಇದ್ದರೆ ಮಾತ್ರ ನೀವು ಹಣವನ್ನು ಕೊಡಬೇಕು. ಏನಾಗಿದೆ ಎಂದರೆ, ನಮ್ಮ ಶಾಸಕರು ತಮಗೆ ಬೇಕಾದ ಕೆಲಸಗಳಿಗೆ ಹಣವನ್ನು ಉಪಯೋಗ ಮಾಡಿಕೊಂಡಿದ್ದೇವೆ. ಆದರೆ, ಯಾವುದೇ ಶಾಶ್ವತವಾದ ಕೆಲಸವಾಗಲಿಲ್ಲ. ಅದಾಗಬೇಕು.

1.40 ಪಿ.ಎಂ

ಶ್ರೀ ರೇವುನಾಯಕ ಬೆಳಮಗಿ : ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸತತ ಮೂರು ವರ್ಷಗಳ ಕಾಲ ಬರಗಾಲವೆಂದು ಹಣವನ್ನೇ ಕೊಟ್ಟಿಲ್ಲ. ಅನೇಕ ಕಂಟ್ರಾಕ್ಟರ್ಸ್ ಕೆಲಸ ಮಾಡಿದ್ದಾರೆ ಬಹಳಷ್ಟು ಬಿಲ್‌ಗಳು ಪೆಂಡಿಂಗ್ ಇವೆ. ಅದಕ್ಕೆ ಸರ್ಕಾರಕ್ಕೆ ನಾನು ಅಧ್ಯಕ್ಷರ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ, ಬಹಳಷ್ಟು ಹೆಚ್‌ಕೆಡಿಬಿ ಫಂಡ್ ಬಿಲ್ ಪೆಂಡಿಂಗ್ ಇದೆ. ದಯವಿಟ್ಟು ಆ ಬಿಲ್‌ನ್ನು ಪೇಮೆಂಟ್ ಮಾಡುವುದಕ್ಕೆ ಅನುವು ಮಾಡಿಕೊಡಬೇಕು. ಮತ್ತು ಹೈದರಾಬಾದ್ ಕರ್ನಾಟಕ ಮಂಡಳಿಗೆ ನಾವು ಆಶೆ ಇಟ್ಟುಕೊಂಡಿದ್ದೆವು, ಸತತ ಮೂರು ವರ್ಷಗಳಿಂದ ಬರಗಾಲ ಎಂದು ನೀವು ಏನೂ ಹಣ ಕೊಟ್ಟಿಲ್ಲ. ಈ ಸಾರಿ ಹಣ ಹೆಚ್ಚಿಗೆ ಕೊಡುತ್ತೀರೆಂದು ನಾವು ಆಶಾ ಮಾಡಿದ್ದೆವು, ಸರ್ಕಾರಕ್ಕೆ ನಾನು ಒತ್ತಾಯ ಮಾಡುವುದು ಏನೆಂದರೆ, ಹೈದರಾಬಾದ್ ಕರ್ನಾಟಕ ಹಿಂದುಳಿದ ಪ್ರದೇಶ, ಎಂದು ಎಲ್ಲರೂ ಭಾಷಣ ಮಾಡುತ್ತೇವೆ, ಆದರೆ ಅದಕ್ಕೆ ಒತ್ತು ಕೊಟ್ಟು ಕನಿಷ್ಠ ಒಂದು ನೂರು ಕೋಟಿ ರೂಪಾಯಿ ಅದಕ್ಕೆ ಕೊಡಬೇಕೆಂದು ತಮ್ಮ ಮೂಲಕ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಬಿ.ಆರ್. ಪಾಟೀಲ್ : ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಮುಂದೆ ಸತತವಾಗಿ 100 ಕೋಟಿ ರೂಪಾಯಿಗಳನ್ನು ಕೊಡುವುದರ ಮುಖೇನ, ಇದಕ್ಕೆ ಆದ್ಯತಾ ಪಟ್ಟಿಯನ್ನು ಮಾಡಿ ಕಳುಹಿಸಬೇಕಾಗುತ್ತದೆ. ಇಲ್ಲದಿದ್ದರೆ ಆ ದುಡ್ಡು ಬೇರೆ ಬೇರೆ ಕಡೆಗೆ ಉಪಯೋಗವಾಗುತ್ತದೆ. ಆದ್ಯತೆ ಪಟ್ಟಿ ಮಾಡದೇ ಇರುವ ಕಾರಣಕ್ಕಾಗಿ ಈಗ ಏನು 650 ಕೋಟಿ ರೂ ಬಂತು ಅದರಿಂದ ಯಾವುದೇ ಒಂದು ಸ್ಪಷ್ಟವಾದ ಕೆಲಸಗಳು ಅಲ್ಲಿ ಆಗುವುದಕ್ಕೆ ಸಾಧ್ಯವಾಗಿಲ್ಲ. ಮಾನ್ಯ ದಿ. ವೀರೇಂದ್ರ ಪಾಟೀಲ್‌ರವರು ಮುಖ್ಯಮಂತ್ರಿಯಾಗಿದ್ದಾಗ, ಈ ಆದ್ಯತಾ ಪಟ್ಟಿಯನ್ನು ಮಾಡಿದ್ದರು. ಆದ್ಯತಾ ಪಟ್ಟಿಯನುಗುಣವಾಗಿಯೇ ಕೆಲಸಗಳು ಆಗಬೇಕೆಂದು ಮಾಡಿದ್ದರು. ಆದರೆ ಬರಬರುತ್ತಾ ಮುಂದೆ

ಹೋಗಿ ಆದ್ಯತಾ ಪಟ್ಟಿ ಹಳಿ ತಪ್ಪಿ ಆ ದುಡ್ಡು ಎಲ್ಲೆಲ್ಲಿಗೋ ಹೋಯಿತು. ಆದರೆ ಆಗಬೇಕಾದ ಕೆಲಸಗಳು ಆಗಲಿಲ್ಲ. ಇದರ ಜೊತೆಗೆ ಇವ್ಯಾಲ್ಯುಯೇಷನ್ ಕಮಿಟಿ ಕೂಡ ಸರ್ಕಾರದವರು ಮಾಡಬೇಕಾಗುತ್ತದೆ. ದುಡ್ಡು ನಿಜವಾಗಿ ಎಷ್ಟು ಬಂತು? ಎಲ್ಲಿ ಖರ್ಚು ಆಯಿತು? ಯಾವ ಕೆಲಸಕ್ಕೆ ಖರ್ಚು ಆಯಿತು? ಅದು ನಿಜವಾಗಿಯೂ ಕೂಡ ಇದೆಯೋ ಇಲ್ಲವೊ ಎನ್ನುವುದನ್ನು ನೋಡುವುದಕ್ಕಾಗಿಯೇ ಒಂದು ಇವ್ಯಾಲ್ಯೂಯೇಷನ್ ಕಮಿಟಿಯ ಒಪ್ಪಿಗೆಯಾದರೆ ಮಾತ್ರ ಬಿಲ್ ಕೊಡಬೇಕು. ಆ ಒಂದು ವ್ಯವಸ್ಥೆಯನ್ನು ಈ ಹೆಚ್‌ಕೆಡಿಬಿ ಯಲ್ಲಿ ಮಾಡಬೇಕೆಂದು ಹೇಳುತ್ತಾ, ತಾವು ನನಗೇನು ಇವತ್ತು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರಿ, ಅದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† **ಶ್ರೀ ಸಿದ್ದು ಸಾವದಿ (ಜಮಖಂಡಿ)** : ಮಾನ್ಯ ಅಧ್ಯಕ್ಷರೆ, ಈ ಬಜೆಟ್‌ನಲ್ಲಿ ಮಾನ್ಯ ಸಿದ್ಧರಾಮಯ್ಯನವರು ನೇಕಾರರ ಸಲುವಾಗಿ 20 ಕೋಟಿ ರೂಪಾಯಿಗಳನ್ನು ಮೊದಲಬಾರಿಗೆ ಅವಕಾಶವನ್ನು ಕೊಟ್ಟಿದ್ದಾರೆ ಅವರಿಗೆ ಅಭಿನಂದನೆಗಳನ್ನು ಹೇಳಬಯಸುತ್ತೇನೆ. ಆದರೆ ಆ ಮೂಲಕ ನೇಕಾರರ ಸ್ಥಿತಿಗತಿಗಳ ಬಗ್ಗೆನೂ ಒಂದೆರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಈ ರಾಜ್ಯದಲ್ಲಿ ನೇಕಾರರೂ ಕೂಡ ಸುಮಾರು 10 ಲಕ್ಷ ಕುಟುಂಬಗಳು ಇವೆ. ಆ ನೇಕಾರರ ಸ್ಥಿತಿಗತಿಯ ಬಗ್ಗೆ ಸರ್ಕಾರ ಯಾವುದೇ ರೀತಿಯ ಯೋಚನೆ ಮಾಡಿಲ್ಲವೆಂದು ನನಗೆ ಅನ್ನಿಸುತ್ತದೆ. ಏಕೆಂದರೆ, ಅವನು ನೂರು ರೂಪಾಯಿ ಗಳಿಸಬೇಕಾದರೆ ಹಗಲು–ರಾತ್ರಿ ತನ್ನ ಕುಟುಂಬದ ಸಮೇತ ದುಡಿದು ಗಳಿಸುವಂಥ ವ್ಯವಸ್ಥೆಯಿದೆ. ಆದರೆ ಕಳೆದ 4–5 ವರ್ಷಗಳಲ್ಲಿ ಆತನಿಗೆ ಸರಿಯಾಗಿ ನೂಲು ದೊರಕದೆ ಸರಿಯಾಗಿ ಕೂಲಿ ದೊರಕದೆ ಅವರ ಸ್ಥಿತಿ ಗಂಭೀರವಾದ ಪರಿಸ್ಥಿತಿಗೆ ಬಂದೊದಗಿದೆ. ಆ ನಿಟ್ಟಿನೊಳಗೆ ಈಗಾಗಲೇ ಮೊನ್ನೆ ಸದನದಲ್ಲಿ ಆ ವಿದ್ಯಾ ವಿಕಾಸ ಯೋಜನೆಯನ್ನು ಅವನಿಗೆ ಕೊಡುವುದರ ಮೂಲಕ ಸ್ವಲ್ಪ ಉಸಿರಾಡುವಂಥ ವ್ಯವಸ್ಥೆಯಾಗಿದೆ. ಆದರೂ ಸಹಿತ ಕೇವಲ 50 ಪರ್ಸೆಂಟ್ ಆತನ ಮಗ್ಗಗಳು ಪ್ರಾರಂಭವಾಗಿವೆ, ಇನ್ನೂ 50 ಪರ್ಸೆಂಟ್ ಪ್ರಾರಂಭವಾಗುವ ಹಂತದಲ್ಲಿ ಇಲ್ಲ ಅದಕ್ಕಾಗಿ ಕೆಹೆಚ್‌ಡಿಸಿ ಯವರು ಏನು ಒನ್‌ಘೋರ್ ಹಣ ಅಡ್ವಾನ್ಸ್ ಆಗಿ ಬೇಡಿದ್ದರು, ಅದನ್ನು ಇನ್ನೂ ಕೊಡುವಂಥ ವ್ಯವಸ್ಥೆಯಾಗಿಲ್ಲ. ಈ ಸದನ ಮೂಲಕ ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಪಡಿಸುತ್ತೇನೆ, ಆ ಬಡ ನೇಕಾರನ ಒಂದೂವರೆ ವರ್ಷಗಳಿಂದ ಬಂದ್ ಇರುವ ಆ ಮಗ್ಗವನ್ನು ಪ್ರಾರಂಭ ಮಾಡಿ ಅವನ ಉಪ ಜೀವನಕ್ಕೆ ಅನುಕೂಲವಾಗುವ ಹಾಗೆ ತಕ್ಷಣ ಅವರೇನು ಒನ್ ಘೋರ್ ಹಣ ಅಡ್ವಾನ್ಸ್ ಆಗಿ ಕೇಳಿದ್ದಾರೆ ಅದನ್ನು ತಕ್ಷಣ ಬಿಡುಗಡೆ ಮಾಡಬೇಕೆಂದು ಕೇಳುತ್ತೇನೆ. ಆ ನಿಟ್ಟಿನೊಳಗೆ ಇಲ್ಲಿಯವರೆಗೆ ಅನೇಕ ಮಾನ್ಯ ಹಿರಿಯ ಸದಸ್ಯರು ಮಾತನಾಡಿದ್ದಾರೆ. ಎಲ್ಲಾ ಸರ್ಕಾರಿ ಸಂಸ್ಥೆಗಳಿಗೆ ಬೇಕಾದಂಥ ಬಟ್ಟೆಯ ಅವಶ್ಯಕ ಇದೆಯೋ ಅದನ್ನು ಕೆಹೆಚ್‌ಡಿಸಿ ಮೂಲಕ ಕಡ್ಡಾಯವಾಗಿ ಖರೀದಿಸಬೇಕೆಂದು ಆದೇಶವನ್ನು ಹೊರಡಿಸಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಎರಡನೇಯದಾಗಿ ಪವರ್ ಲೂಮ್ ನೇಕಾರನ ಸ್ಥಿತಿಯೂ ಕೂಡ ಕೈ ಮಗ್ಗದ ನೇಕಾರನ ಸ್ಥಿತಿಗಿಂತ ಭಿನ್ನವಾಗಿಲ್ಲವೆಂದು ನಾನು ಹೇಳಬಯಸುತ್ತೇನೆ. ಏಕೆಂದರೆ, ನಮ್ಮ ನೆರೆಯ ಆಂಧ್ರ, ತಮಿಳುನಾಡು, ಮಹಾರಾಷ್ಟ್ರ, ಗುಜರಾತ್, ಈ ರೀತಿಯ ಸುತ್ತಮುತ್ತಲಿನ ರಾಜ್ಯಗಳಲ್ಲಿ ಒಂದು ರೂಪಾಯಿ ಎಂಭತ್ತೈದು ಪೈಸೆ, ಒಂದು ರೂಪಾಯಿ ಹತ್ತು ಪೈಸೆ, ಒಂದು ರೂಪಾಯಿ ಮೂವತ್ತು ಪೈಸೆ, ಈ ರೀತಿ ರಿಯಾಯಿತಿ ದರದಲ್ಲಿ ವಿದ್ಯುತ್ ಕೊಡುವುದರಿಂದ ನಮ್ಮಲ್ಲಿ ನಾಲ್ಕು, ಐದು ರೂಪಾಯಿಗಳಿಗೆ ಒಂದು ಯೂನಿಟ್

ವಿದ್ಯುತ್ ಕೊಡುವುದರಿಂದ ಅವರ ಜೊತೆ ಸ್ಪರ್ಧೆ ಮಾಡಲು ಆಗದೆ ಅನಿವಾರ್ಯವಾಗಿ ಸಾಲ ಸೋಲ ಮಾಡಿಕೊಂಡು ಅವನ ಮಗ್ಗಗಳನ್ನು ಕೈಗೆ ಬಂದ ಬೆಲೆಗೆ ಮಾರಾಟ ಮಾಡತಕ್ಕಂಥ ದಯಾನೀಯ ಸ್ಥಿತಿ ನಮ್ಮ ಪವರ್‌ಲೂಮ್ ನೇಕಾರರಿಗೆ ಬಂದೊದಗಿದೆ. ಅಷ್ಟೇ ಅಲ್ಲ ಎಷ್ಟೋ ಪವರ್ ಲೂಮ್‌ಗಳು ನೆರೆಯ ರಾಜ್ಯಗಳಿಗೆ ಶಿಫ್ಟ್ ಆಗುವಂಥ ವ್ಯವಸ್ಥೆಯಿದೆ. ಆತನು ಕೊನೆಗೆ ಈ ರೀತಿಯಾದಂಥ ದಯಾನೀಯ ಸ್ಥಿತಿಯಲ್ಲಿ ಆತನ ಮಗ್ಗಗಳನ್ನು ತೂಕಕ್ಕೆ ಮಾರಾಟ ಮಾಡುವಂಥ ಸ್ಥಿತಿ ಆ ನೇಕಾರರಿಗೆ ಬಂದೊದಗಿದೆ. ನಾನೊಂದು ವಿಷಯ ಕೇಳಬಯಸುತ್ತೇನೆ. ಈ ರೀತಿ ನೇಕಾರನು ತನ್ನ ಉದ್ಯೋಗವನ್ನು ತನ್ನ ಉಪ ಜೀವನಕ್ಕೆ ಆಧಾರವಾಗಿರತಕ್ಕಂಥ ಒಂದು ಪವರ್‌ಲೂಮ್‌ನ್ನೇ ತೂಕದ ಬಿಲ್‌ಗೆ ಮಾರಾಟ ಮಾಡಿದರೆ ಆತನ ಮುಂದಿನ ಭವಿಷ್ಯ ಹೇಗೆ ಎನ್ನುವುದರ ಬಗ್ಗೆ ಸರ್ಕಾರ ಕಿಂಚಿತ್ತೂ ಕೂಡ ಕಾಳಜಿ ಮಾಡಿಲ್ಲ. ಇನ್ನೊಂದು ವಿಶೇಷವಾದ ಹಾಗೂ ಅವಶ್ಯವಾದ ಒಂದು ಮಾತನ್ನು ಹೇಳಬಯಸುತ್ತೇನೆ. ಈ ರಾಜ್ಯದಲ್ಲಿ ಯಾರಾದರೂ ಪ್ರಾಮಾಣಿಕವಾಗಿ ಕೆಪಿಟಿಸಿಎಲ್ ಗೆ ಬಿಲ್ ಕಟ್ಟಿದ್ದರೆ ಅದು ಕೇವಲ ಈ ನೇಕಾರರ ವರ್ಗ ಎಂದು ನಾನು ಹೇಳಬಯಸುತ್ತೇನೆ. ನೂರಕ್ಕೆ ನೂರು ಇಲ್ಲಿ ಏನಾದರೂ ಕೆಪಿಟಿಸಿಎಲ್ ಬಿಲ್ ಕಟ್ಟಿದ್ದರೆ, ಪ್ರಾಮಾಣಿಕವಾಗಿ ಯಾವುದೇ ಒಬ್ಬ ವ್ಯಕ್ತಿ ಎಂದರೆ ಕೆಪಿಟಿಸಿಎಲ್‌ಗೆ ಬಿಲ್ ಕಟ್ಟುವಂಥ ವ್ಯವಸ್ಥೆಯನ್ನು ಈ ನೇಕಾರರ ಸಮೂಹ ಮಾತ್ರ ಈ ರಾಜ್ಯದಲ್ಲಿ ಆ ಪ್ರವೃತ್ತಿಯನ್ನು ಬೆಳೆಸಿಕೊಂಡು ಬಂದಿರುತ್ತಾನೆ. ಇಂಥ ಒಬ್ಬ ಪ್ರಾಮಾಣಿಕ ಸಮೂಹಕ್ಕೆ ನಮ್ಮ ರಾಜ್ಯ ಸರ್ಕಾರ ಅನ್ಯಾಯವೆಸಗಿದೆ ಎಂದು ನಾನು ಹೇಳಬಯಸುತ್ತೇನೆ. ಇಲ್ಲಿಯವರೆಗೆ ಒಂದು ಮಾತನ್ನು ಮಾನ್ಯ ಹಿರಿಯರಾದ ಡಿ ಆರ್ ಪಾಟೀಲ್ ರವರು ಹೇಳಿದರು, ತಮ್ಮ ಮಾತಿನಲ್ಲಿ ಕೇಂದ್ರ ಸರ್ಕಾರದ ಮೇಲೆ ಆಪಾದನೆ ಮಾಡುವಂಥ ಪ್ರಯತ್ನವನ್ನು ಮಾಡಿದರು. ಆದರೆ ನಾನು ಹೇಳಬಯಸುತ್ತೇನೆ, ಇವತ್ತಿನ ರಾಜ್ಯ ಸರ್ಕಾರ ನೇಕಾರರ ಸಲುವಾಗಿ 20 ಕೋಟಿ ರೂಪಾಯಿ ಬಜೆಟ್‌ನಲ್ಲಿ ಇಟ್ಟಿದೆ. ಆದರೆ ಯಾವುದರ ಸಲುವಾಗಿ ಇಟ್ಟಿದೆ? ಕೈ ಮಗ್ಗದ ನೇಕಾರರ ಸಲುವಾಗಿಯೋ ಅಥವಾ ಪವರ್‌ಲೂಮ್ ನೇಕಾರರ ಸಲುವಾಗಿಯೋ? ಯಾವ ಉದ್ದೇಶಕ್ಕೆ ಇಟ್ಟಿದ್ದೇವೆಂಬುದನ್ನು ಬಿಡಿಸಿ ಹೇಳುವಂಥ ವ್ಯವಸ್ಥೆ ಅಲ್ಲಿ ಮಾಡಿಲ್ಲ. ಪವರ್‌ಲೂಮ್ ನೇಕಾರ ನಮಗಾಗಿ ಇಟ್ಟಿದ್ದಾರೆಂದು ಹೇಳುತ್ತಾರೆ, ಕೈಮಗ್ಗ ನೇಕಾರ ನಮಗಾಗಿ ಇಟ್ಟಿದ್ದಾರೆಂದು ಹೇಳುತ್ತಾರೆ. ಈ ರೀತಿ ಗೊಂದಲದಲ್ಲಿ ಆ 20 ಕೋಟಿ ರೂ. ಇಡುವಂಥ ವ್ಯವಸ್ಥೆಯಾಗಿದೆ. ನಾನು ಇನ್ನೊಂದು ಮಾತನ್ನು ತಮ್ಮ ಮೂಲಕ ಸರ್ಕಾರಕ್ಕೆ ಕೇಳಬಯಸುತ್ತೇನೆ. ಹಿಂದಿನ ಸರ್ಕಾರ ಆ ಕೆಹೆಚ್‌ಡಿಸಿ ಸಲುವಾಗಿ 105 ಕೋಟಿ ರೂಪಾಯಿಗಳ ಪ್ಯಾಕೇಜ್‌ನ್ನು ಘೋಷಣೆ ಮಾಡಿತ್ತು. ಅದನ್ನು ಏಕೆ ಬಿಡುಗಡೆ ಮಾಡಲಿಲ್ಲ? ಯಾವುದರ ಸಲುವಾಗಿ ತಡೆ ಹಿಡಿಯಲಾಯಿತು? ಕೇಂದ್ರ ಸರ್ಕಾರದ ಮೇಲೆ ಆಪಾದನೆ ಮಾಡುವಂಥ ಹಿರಿಯ ಸದಸ್ಯರನ್ನು ನಾನು ಕೇಳಬಯಸುತ್ತೇನೆ, ಕೇಂದ್ರ ಸರ್ಕಾರ 20 ಕೋಟಿ ರೂಪಾಯಿ ಹಣವನ್ನು ಬಿಡುಗಡೆ ಮಾಡಿತ್ತು. ಮಾನ್ಯ ಬಸವನಗೌಡರು ಜವಳಿ ಮಿನಿಸ್ಟರ್ ಇದ್ದಾಗ 20 ಕೋಟಿ ರೂ. ಬಿಡುಗಡೆ ಮಾಡಿ ಏನು ಕಂಡೀಷನ್ ಹಾಕಿದ್ದರು ಎಂದರೆ, ತಮ್ಮ ರಾಜ್ಯ ಸರ್ಕಾರದ ಮಾರ್ಜಿನ್ ಮನಿ 20 ಕೋಟಿ ರೂ. ಬಿಡುಗಡೆ ಮಾಡಿದರೆ ಅದನ್ನು ಉಪಯೋಗ ಮಾಡಿಕೊಳ್ಳಬಹುದು ಎಂದು ಕಂಡೀಷನ್ ಹಾಕಿ ಪತ್ರ ಬರೆದು ಸ್ಯಾಂಕ್ಷನ್ಡ್ ಕೊಟ್ಟಿದ್ದರು. ಆ 20 ಕೋಟಿ ರೂಪಾಯಿ ಮಾರ್ಜಿನ್ ಮನಿಯನ್ನು ಇಲ್ಲಿಯವರೆವಿಗೂ ಬಿಡುಗಡೆ ಮಾಡುವಂಥ ವ್ಯವಸ್ಥೆಯಾಗಿಲ್ಲ. ಅದಲ್ಲದೆ ಏನು ಕೆಹೆಚ್‌ಡಿಸಿ ಯಲ್ಲಿ 270 ಹೆಚ್ಚುವರಿ ಸಿಬ್ಬಂದಿ ಇದೆಯೋ ಅವರಿಗೆ ವಿಆರ್‌ಎಸ್ ಕೊಡುವಂಥ

ವ್ಯವಸ್ಥೆಯೂ ಆಗಿಲ್ಲ. ಅವರಿಗೆ ಏನು ಸಾಲದ ಹೊರೆ ಇದೆ, ಆ ಸಾಲದ ಹೊರೆಯ ಸಲುವಾಗಿ 14 ಕೋಟಿ ರೂಪಾಯಿಗಳನ್ನು ಇಡಬೇಕಾಗಿತ್ತು. ಅದನ್ನೂ ಸಹಿತ ಈ ರಾಜ್ಯ ಸರ್ಕಾರ ಇಟ್ಟಿಲ್ಲ. ಹಿಂದಿನ ಚುನಾವಣೆಯ ವಿಷಯ ಸಲುವಾಗಿ ಚುನಾವಣೆಯನ್ನು ಆಧಾರವಾಗಿಟ್ಟುಕೊಂಡು ಓಟು ಸೆಳೆಯುವಂಥ ಒಂದು ದುರುದ್ದೇಶವಿಟ್ಟುಕೊಂಡು 105 ಕೋಟಿ ರೂಪಾಯಿ ಪ್ಯಾಕೇಜ್‌ನ್ನು ಘೋಷಣೆ ಮಾಡುವ ಮೂಲಕ ಆ ನೇಕಾರನಿಗೆ ಹಿಂದಿನ ಸರ್ಕಾರ ಅನ್ಯಾಯ ಮಾಡಿದೆ ಎಂದು ನಾನು ಹೇಳಬಯಸುತ್ತೇನೆ. ಅದಲ್ಲದೇ ಇವತ್ತಿನ ಪವರ್‌ಲೂಮ್ ನೇಕಾರರ ಬೇಡಿಕೆ ಏನು ಇದೆ, ನೆರೆಯ ರಾಜ್ಯಗಳಂತೆ ಒಂದು ರೂಪಾಯಿ ಹಾಗೆ ಪವರ್‌ಲೂಮ್ ನೇಕಾರರ ಮಗ್ಗಗಳಿಗೆ ವಿದ್ಯುತ್ ರಿಯಾಯಿತಿ ಕೊಡಬೇಕು. ಯಾವ ರೀತಿ ರೈತರಿಗೆ ಈ ರಾಜ್ಯದಲ್ಲಿ 6 ಪರ್ಸೆಂಟ್‌ನಂಗೆ ಸಾಲ ಕೊಡುವ ಏನು ವ್ಯವಸ್ಥೆ ಇದೆಯೋ ಅದೇ ರೀತಿ ರಾಜ್ಯದಲ್ಲಿರುವ ನೇಕಾರರಿಗೆ 10 ಲಕ್ಷದ ರೂಪಾಯಿ ವರೆಗೆ 6 ಪರ್ಸೆಂಟ್ ಬಡ್ಡಿಯಂತೆ ಸಾಲ ಕೊಡುವ ವ್ಯವಸ್ಥೆಯಾಗಬೇಕು. ಅದಲ್ಲದೆ ಹಿರಿಯ ಸದಸ್ಯರಾದ ಮಾನ್ಯ ಡಿ.ಆರ್. ಪಾಟೀಲ್‌ರವರು ಏನು ಹೇಳಿದರು, 10 ಹೆಚ್‌ಪಿ ಯವರೆಗೆ, 10 ಪವರ್ ಲೂಮ್ ಮಗ್ಗಗಳವರೆಗೆ ರಿಯಾಯಿತಿ ದರದಲ್ಲಿ ವಿದ್ಯುತ್ ಕೊಡುವಂಥ ವ್ಯವಸ್ಥೆಯಾದರೆ ಮಾತ್ರ ಅವನು ಈ ರಾಜ್ಯದಲ್ಲಿ ಗೌರವಯುತವಾಗಿ ಬದುಕಲು ನೇಕಾರರಿಗೆ ಸಾಧ್ಯವಿದೆ. ಆ ರೀತಿ ವ್ಯವಸ್ಥೆಯನ್ನು ಈ ರಾಜ್ಯ ಸರ್ಕಾರ ಮಾಡಿಕೊಡಬೇಕು ಹಾಗೂ ಈ ಬಜೆಟ್‌ನಲ್ಲಿ ಆ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ನಾನು ಸನ್ಮಾನ್ಯ ಹಣಕಾಸಿನ ಸಚಿವರಲ್ಲಿ ಹೇಳಬಯಸುತ್ತೇನೆ. ಇನ್ನು ಒಂದು ವಿಷಯ ಹೇಳುವುದಾದರೆ, ರೈತರ ಟಿ.ಸಿ., ಈ ರಾಜ್ಯದಲ್ಲಿ ಸರ್ಕಾರಿ ಸ್ವಾಮ್ಯದ ಕಾರ್ಖಾನೆಗಳು ಇದ್ದರೂ ಕೂಡ ರೈತರ ಸುಟ್ಟು ಹೋದಂಥ ಟಿ.ಸಿ. ಗಳನ್ನು ಯಾವುದೋ ಒಬ್ಬ ಖಾಸಗಿ ವ್ಯಕ್ತಿಗಳಿಂದ ರಿಪೇರಿ ಮಾಡಿಸುವ ಸ್ಥಿತಿ ಇದೆ. ಆ ಸ್ಥಿತಿ ಹೇಗಿದೆ ಎಂದರೆ, ಒಂದು 8 ದಿವಸಕ್ಕೊಮ್ಮೆ ರೈತರ ಟಿ.ಸಿ.ಗಳು ಸುಟ್ಟು ಹೋಗುತ್ತಿವೆ, ಟಿ.ಸಿ. ಸುಟ್ಟಾಗ ಕೆಪಿಟಿಸಿಎಲ್ ಆಫೀಸ್‌ಗೆ ಹೋದಾಗ ಒಂದು ಟಿ.ಸಿ. ಗೆ 5 ರಿಂದ 10 ಸಾವಿರ ರೂ. ಕೊಟ್ಟಾಗ ಮಾತ್ರ ಟಿ.ಸಿ. ರಿಪೇರಿಯಾಗುವಂಥ ವ್ಯವಸ್ಥೆಯಿದೆ. ಕೊಡದೇ ಹೋದರೆ ಆ ಟಿ.ಸಿ.ಯನ್ನು ಎರಡು-ಮೂರು ತಿಂಗಳ ಕೊಡುವಂಥ ವ್ಯವಸ್ಥೆ-ಯಾಗುವುದರಿಂದ, ಆ ರೈತನ ಸ್ಥಿತಿ ಆ ರೈತನ ಬೆಳೆ ಸಂಪೂರ್ಣವಾಗಿ ಹಾಳಾದ ನಂತರ ಆ ಟಿ.ಸಿ. ಸಿಗುವಂಥ ವ್ಯವಸ್ಥೆಯಿದೆ. ಅದೂ ಕೂಡ ಟಿ.ಸಿ. ಕೊಟ್ಟ ಮರುದಿನವೇ ಒಂದು ದಿವಸದಲ್ಲಿ ಪುನಃ ಸುಟ್ಟು ಹೋಗುವುದರಿಂದ, ಮತ್ತೊಮ್ಮೆ ಎರಡು ತಿಂಗಳವರೆಗೆ ಕಾದು ಟಿ.ಸಿ. ತೆಗೆದುಕೊಳ್ಳುವಂಥ ತಪ್ಪು ನೀತಿ ಈ ಸರ್ಕಾರದಿಂದ ಕೆಪಿಟಿಸಿಎಲ್ ನಲ್ಲಿ ನಡೆಯುತ್ತಿದೆ. ಅದು ಸರ್ಕಾರಿ ಸ್ವಾಮ್ಯದ ಕಾರ್ಖಾನೆಗಳಲ್ಲಿ ಮಾತ್ರ ಟಿ.ಸಿ. ರಿಪೇರಿಯಾಗಿ ಟಿ.ಸಿ. ಸುಟ್ಟು ನಾಲ್ಕು ದಿವಸದಲ್ಲಿ ಆ ಟಿ.ಸಿ. ರೈತರಿಗೆ ಒದಗುವುದಾದರೆ, ಆತನು ಬೆಳೆ ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆ ರೀತಿಯಾದಂಥ ವ್ಯವಸ್ಥೆಯನ್ನು ಈ ಸರ್ಕಾರ ಕೆಪಿಟಿಸಿಎಲ್‌ಗೆ ಆದೇಶ ಕೊಡುವುದರ ಮುಖಾಂತರ ಸರ್ಕಾರ ಸ್ವಾಮ್ಯದ ಕಾರ್ಖಾನೆಗಳಲ್ಲಿ ಆ ಟಿ.ಸಿ.ಗಳು ರಿಪೇರಿಯಾದರೆ ಒಳ್ಳೆಯ ಮೇಟಿರಿಯಲ್ಸ್ ಹಾಕಿ ಒಳ್ಳೆಯ ಗುಣಮಟ್ಟದ ರಿಪೇರಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಹೊಸದಾಗಿ ಕೊಡತಕ್ಕಂಥ ಟಿ.ಸಿ. ಸುಮಾರು ಎರಡು-ಮೂರು ವರ್ಷಗಳಾದರೂ ಸುಡುವುದಿಲ್ಲ. ಆದರೆ, ರಿಪೇರಿ ಮಾಡಿ ಕೊಡತಕ್ಕಂಥ ಟಿ.ಸಿ 3 ಅಥವಾ 4 ದಿವಸ ಅಥವಾ ಕೆಲವು ಸಲ ಒಂದೇ ಗಂಟೆಯಲ್ಲಿ ಮತ್ತೆ ಬರ್ನ್ ಆಗುವಂಥ ದುಸ್ಥಿತಿ ಕೆ.ಪಿ.ಟಿ.ಸಿ.ಎಲ್. ನಲ್ಲಿರುವುದರಿಂದ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಹಾನಿಯಾಗುವುದಕ್ಕೆ ಇಂಥ

ಸಂಸ್ಥೆಗಳೇ ಕಾರಣ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮುಂದೆ ಬರತಕ್ಕಂಥ ದಿವಸಗಳಲ್ಲಿ ರೈತರಿಗೆ ಯಾವುದೇ ರೀತಿ ತೊಂದರೆಯಾಗದಂತೆ ಹೊಸದಾಗಿ ಕೊಡತಕ್ಕಂತ ಟಿ.ಸಿ.ಗಳನ್ನು ಉತ್ತಮ ಗುಣಮಟ್ಟದನ್ನು ಕೊಡಬೇಕೆಂದು ಮತ್ತು ಸುಟ್ಟಂಥ ಟಿ.ಸಿ.ಗಳನ್ನು ಮತ್ತೆ ರಿಪೇರಿ ಮಾಡಿ ಕೊಡುವುದರ ಬದಲು ಹೊಸ ಟಿ.ಸಿ.ಯನ್ನು ಕೊಡುವಂಥ ಒಂದು ವ್ಯವಸ್ಥೆ ಸರ್ಕಾರದ ಮೂಲಕ ಆಗಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮತ್ತೆ ವೈ.ಓ.ಟಿ. ಸ್ಕೀಂ ಅಡಿಯಲ್ಲಿ ರೈತರು ಪಂಪ್‌ಸೆಟ್ ಅಳವಡಿಸಿಕೊಳ್ಳಬೇಕೆಂದು ಸರ್ಕಾರದ ಆದೇಶ ಹೊರಡಿಸಿದೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಮ್ಮ ರಾಜ್ಯದಲ್ಲಿ ಲಕ್ಷಾವದಿ ರೈತರು ಇನ್ನೂ ನೀರಾವರಿ ಸೌಲಭ್ಯ ಮಾಡಿಕೊಳ್ಳುವುದಕ್ಕೆ ಆಗದೆ ಇರತಕ್ಕಂಥ ಸ್ಥಿತಿಯಿರುವಾಗ ವೈ.ಓ.ಟಿ. ಸ್ಕೀಂ ನಲ್ಲಿ ಸುಮಾರು 30 ರಿಂದ 40 ಸಾವಿರ ರೂಪಾಯಿ ಕೊಟ್ಟು ಪಂಪ್‌ಸೆಟ್ ಅಳವಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ಕೇವಲ 1, 2, 3 ಅಥವಾ 5 ಎಕರೆ ಹೊಂದಿರತಕ್ಕಂಥ ಒಬ್ಬ ಬಡ ರೈತ ಸುಮಾರು 30 ರಿಂದ 40 ಸಾವಿರ ರೂಪಾಯಿಗಳನ್ನು ಕೆ.ಪಿ.ಟಿ.ಸಿ.ಎಲ್.ಗೆ ಕೊಟ್ಟು ಟಿ.ಸಿ. ಹಾಕಿಸಿಕೊಳ್ಳತಕ್ಕಂಥ ತಾಕತ್ ಈ ರಾಜ್ಯದ ಬಡ ರೈತರಿಗೆ ಇವತ್ತಿನದಿವಸ ಇಲ್ಲ. ಮೊದಲು ಪಂಪ್‌ಸೆಟ್‌ಗೆ ಯಾವರೀತಿಯಾಗಿ ಸ್ಯಾಂಕ್ಷನ್ ಕೊಡತಕ್ಕಂಥ ವ್ಯವಸ್ಥೆ ಇತ್ತೋ ಅದೇ ರೀತಿ ಅಂದರೆ, ಪುಕ್ಕಟೆಯಾಗಿ ಆತನಿಗೆ ಅವಕಾಶ ಕೊಟ್ಟು ನೀರಾವರಿ ಮಾಡಿಕೊಳ್ಳುವಂಥ ಒಂದು ವ್ಯವಸ್ಥೆಯನ್ನು ಈ ಸರ್ಕಾರ ಮಾಡಿಕೊಳ್ಳಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಇನ್ನು ಶಿಕ್ಷಣದ ಬಗ್ಗೆ ಹೇಳುವುದಾದರೆ, ಶಿಕ್ಷಣದ ಬಗ್ಗೆ ಈಗಾಗಲೇ ಸಾಕಷ್ಟು ಜನ ಸದಸ್ಯರು ಮಾತನಾಡಿದ್ದಾರೆ. ನಮ್ಮ ಭಾಗದಲ್ಲಿ ಶಿಕ್ಷಣದ ವ್ಯವಸ್ಥೆ ಯಾವರೀತಿ ಇದೆ ಎಂದರೆ, ಮೊದಲು ಅಂದರೆ ನಾವು ಕರೆಯುವಂಥ ಸಂದರ್ಭದಲ್ಲಿ ಅಂದರೆ ಸುಮಾರು 10 ರಿಂದ 20 ವರ್ಷಗಳ ಹಿಂದೆ ಶಾಲೆಗಳೆಲ್ಲವೂ ಖಾಲಿ ಇರುತ್ತಿತ್ತು. ಆ ದಿವಸಗಳಲ್ಲಿ ಶಿಕ್ಷಣಕ್ಕೆಂದು ಶಾಲೆಗೆ ಬರಬೇಕಾದರೆ ನಾಲ್ಕು ಜನ ನಮ್ಮನ್ನು ಹೊತ್ತುಕೊಂಡು ಬರಬೇಕಾಗಿತ್ತು. ಆದರೆ, ಇವತ್ತಿನದಿವಸ ಆ ರೀತಿಯಾದ ಸ್ಥಿತಿಯಿಲ್ಲ. ಇವತ್ತಿನದಿವಸ ಎಲ್ಲಾ ಜನರಿಗೆ ಶಿಕ್ಷಣದ ಬಗ್ಗೆ ಅವೇರ್‌ನೆಸ್ ಹೆಚ್ಚಾಗಿ ತಮ್ಮ ಮಕ್ಕಳು ಕಡ್ಡಾಯವಾಗಿ ಶಿಕ್ಷಣವನ್ನು ಕರೆಯಬೇಕೆಂಬ ದೃಷ್ಟಿಕೋನದಿಂದ ಮಕ್ಕಳನ್ನು ಶಾಲೆಗೆ ಕಳುಹಿಸುವಂಥ ಸಂಖ್ಯೆ ಹೆಚ್ಚಾಗಿದೆ. ಮತ್ತೆ ಕಡ್ಡಾಯ ಶಿಕ್ಷಣ, ಉಚಿತ ಬಟ್ಟೆ, ಉಚಿತ ಪುಸ್ತಕ ಮತ್ತು ಉಚಿತ ಆಹಾರ ಎನ್ನುವ ಸರ್ಕಾರದ ನೀತಿ ಕೂಡ ಇದೆ. ಆದ್ದರಿಂದ, ನಮ್ಮ ಕೂಲಿಕಾರ್ಮಿಕರು ಮತ್ತು ಬಡ ರೈತರು ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ಮಕ್ಕಳನ್ನು ಶಿಕ್ಷಣಕ್ಕೆ ಕಲಿಸಬೇಕೆಂಬ ಸದುದ್ದೇಶವನ್ನು ಈ ರಾಜ್ಯದಲ್ಲಿ ಹೊಂದಿದ್ದರೂ ಕೂಡ ಈಗಿನ ವ್ಯವಸ್ಥೆ ಯಾವರೀತಿ ಇದೆ ಎಂದರೆ, ಬಡ ಮಕ್ಕಳು ಸರ್ಕಾರಿ ಶಾಲೆಗೆ ಹೋಗುವುದಕ್ಕೆ ಪ್ರವೇಶ ಸಿಗುವುದಿಲ್ಲ. ಏಕೆಂದರೆ, ಅಲ್ಲಿರತಕ್ಕಂಥ ಒಂದೊಂದು ಕೋಣೆಯಲ್ಲಿ ಸುಮಾರು 120 ಮಕ್ಕಳು ತುಂಬಿ ಹೋಗಿರುವುದರಿಂದ ಮಕ್ಕಳು ಕುಳಿತು ಅಥವಾ ನಿಂತು ಕಲಿಯುವುದಕ್ಕೂ ಕೂಡ ಜಾಗದ ಸ್ಥಳಾವಕಾಶ ಇರುವುದಿಲ್ಲ. ಈ ಕಾರಣಕ್ಕೋಸ್ಕರ ತಮ್ಮ ಮುಖಾಂತರ ಸರ್ಕಾರದವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಬಡ ಮತ್ತು ರೈತರ ಮಕ್ಕಳಿಗೆ ಶಿಕ್ಷಣ ಕೊಡುವ ಸಲುವಾಗಿ ಅಲ್ಲಿರತಕ್ಕಂಥ ಸರ್ಕಾರಿ ಶಾಲೆಗಳನ್ನು ಮೇಲ್ದರ್ಜೆಗೇರಿಸಬೇಕು ಅಥವಾ ಅಲ್ಲಿರತಕ್ಕಂಥ ಕೋಣೆಗಳ ಸಂಖ್ಯೆಗಳನ್ನು ಹೆಚ್ಚು ಮಾಡಬೇಕು. ಇವತ್ತಿನದಿವಸ ಯಾವುದೇ ಬಡ ಮಕ್ಕಳಿಗೆ ಶಿಕ್ಷಣದಿಂದ ವಂಚಿತವಾಗಬಹುದು ಮತ್ತು ಇಲ್ಲಿಗೆ ಬರತಕ್ಕಂಥ ಎಲ್ಲಾ ಮಕ್ಕಳಿಗೆ ಉಚಿತವಾಗಿ

ಸ್ಥಾನ ಮತ್ತು ಪ್ರವೇಶ ಸಿಗುವಂಥ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಏಕೆಂದರೆ ನನ್ನ ಕ್ಷೇತ್ರದಲ್ಲಿರತಕ್ಕಂಥ ಪರಿಸ್ಥಿತಿ ಬಗ್ಗೆ ಹೇಳುವುದಾದರೆ, ಅನೇಕ ವಿದ್ಯಾವಂಥ ಮಕ್ಕಳು ಮೆಟ್ರಿಕ್ ಅಥವಾ ಸೆಕೆಂಡರಿ ಮುಗಿಸಿ ಕಾಲೇಜ್‌ಗೆ ಅಡ್ಮಿಷನ್ ಆಗಬೇಕಾಗಿರುತ್ತದೆ. ಆದರೆ, ಈ ಮಕ್ಕಳ ತಂದೆ-ತಾಯಿ ಕೂಲಿ ಮಾಡಿಕೊಂಡು ಜೀವನ ಮಾಡುತ್ತಿರುವಾಗ ತಮ್ಮ ಮಕ್ಕಳಿಗೆ ಮುಂದಿನ ವಿದ್ಯಾಭ್ಯಾಸಕ್ಕೆ ಫೀ ಕಟ್ಟುವುದಕ್ಕೂ ಆಗದೇ ಇರತಕ್ಕಂಥ ಬಡತನ ಅವರಿಗೆ ಇರುತ್ತದೆ. ಆದರೆ, ಇಂಥ ಮಕ್ಕಳ ಹತ್ತಿರ ಖಾಸಗಿ ಶಿಕ್ಷಣ ಸಂಸ್ಥೆಗಳು 10 ರಿಂದ 15 ಸಾವಿರ ರೂಪಾಯಿ ಡೊನೇಷನ್ ಕೇಳಿದರೆ ಇಂಥ ಮಕ್ಕಳು ಇಷ್ಟೊಂದು ಹಣ ಕೊಡುವುದಕ್ಕೆ ಆಗದೆ ಶಿಕ್ಷಣವನ್ನು ಮುಂದುವರಿಸುವುದಕ್ಕೆ ಆಗದೇ ಇರತಕ್ಕಂಥ ಪರಿಸ್ಥಿತಿ ಇದೆ. ಇಂಥ ಒಂದು ಅನಿವಾರ್ಯ ಸ್ಥಿತಿಯಲ್ಲಿ ಇಂಥ ಮಕ್ಕಳು ದನ ಕಾಯುವಂಥ ದಯಾನೀಯ ಸ್ಥಿತಿ ಇವತ್ತಿನದಿವಸ ಈ ರಾಜ್ಯದಲ್ಲಿದೆ. ಇಂಥ ಬಡ ಮಕ್ಕಳಿಗೆ ಶಿಕ್ಷಣ ಒದಗಿಸುವಂಥ ವ್ಯವಸ್ಥೆ ಈ ಸರ್ಕಾರದಿಂದ ಆಗಬೇಕು. ಮತ್ತೆ ಎಲ್ಲೆಲ್ಲಿ ಶಾಲಾ ಕೊಠಡಿಗಳ ಸಂಖ್ಯೆ ಕಡಿಮೆ ಇದೆಯೋ ಅಂಥ ಕಡೆ ಹೆಚ್ಚಿನ ಸಂಖ್ಯೆಯಲ್ಲಿ ಕೊಠಡಿಗಳನ್ನು ನಿರ್ಮಿಸಿಕೊಡಬೇಕು. ಮತ್ತು ಯಾವ್ಯಾವ ಶಿಕ್ಷಣ ಸಂಸ್ಥೆಯವರು ಬಡ ಮಕ್ಕಳಿಂದ ಡೊನೇಷನ್ ತೆಗೆದುಕೊಳ್ಳುತ್ತಾರೋ ಅಂಥ ಸಂಸ್ಥೆಯಲ್ಲಿ ಡೊನೇಷನ್ ತೆಗೆದುಕೊಳ್ಳತಕ್ಕಂಥ ಒಂದು ಪದ್ಧತಿಯನ್ನು ನಿರ್ಮೂಲನ ಮಾಡಬೇಕು. ಬಡ ಮತ್ತು ರೈತ ಹಾಗೂ ಕೂಲಿಕಾರ್ಮಿಕರ ಮಕ್ಕಳಿಗೆ ಉಚಿತವಾಗಿ ಶಿಕ್ಷಣವನ್ನು ಒದಗಿಸುವಂಥ ಒಂದು ವ್ಯವಸ್ಥೆ ಈ ರಾಜ್ಯ ಸರ್ಕಾರದಿಂದ ಆಗಬೇಕೆಂದು ತಮ್ಮ ಮುಖಾಂತರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ಮಹತ್ವದ ವಿಷಯ ಏನೆಂದರೆ, ಇಂಟರ್ ಸ್ಟೇಟ್ ಟ್ಯಾಕ್ಸ್ ಬಗ್ಗೆ ಹೇಳುವುದಾದರೆ, ನಮ್ಮ ರಾಜ್ಯದಲ್ಲಿ ಸಕ್ಕರೆಗೆ ಇಂಟರ್ ಸ್ಟೇಟ್ ಟ್ಯಾಕ್ಸ್ ಇದೆ. ನಮ್ಮ ರಾಜ್ಯದಲ್ಲಿರತಕ್ಕಂತ ಸಕ್ಕರೆ ಕಾರ್ಖಾನೆಗಳಿಂದ ವ್ಯಾಪಾರಸ್ಥರು ಸಕ್ಕರೆ ತೆಗೆದುಕೊಂಡರೆ 1 ಪರ್ಸೆಂಟ್‌ನಷ್ಟು ಇಂಟರ್ ಸ್ಟೇಟ್ ಟ್ಯಾಕ್ಸ್ ಇದೆ. ಈ ಇಂಟರ್ ಸ್ಟೇಟ್ ಟ್ಯಾಕ್ಸ್‌ನ್ನು ತಪ್ಪಿಸುವ ಸಲುವಾಗಿ ಮಹಾರಾಷ್ಟ್ರದ ಹೆಸರಿನಿಂದ ವ್ಯಾಪಾರಸ್ಥರು ಸಕ್ಕರೆಯನ್ನು ಖರೀದಿ ಮಾಡುತ್ತಾರೆ. ಇದರಿಂದ ನಮ್ಮ ರಾಜ್ಯಕ್ಕೆ ಬರತಕ್ಕಂಥ 1 ಪರ್ಸೆಂಟ್ ಟ್ಯಾಕ್ಸ್ ಕೂಡ ತಪ್ಪಿ ಹೋಗುತ್ತಿದೆ. ಮತ್ತೆ ಇದರಿಂದ ನಮ್ಮ ರಾಜ್ಯದ ಬೊಕ್ಕಸಕ್ಕೆ ಸುಮಾರು ನೂರಾರು ಕೋಟಿ ರೂಪಾಯಿಗಳಷ್ಟು ಹೊರೆ ಬೀಳುತ್ತದೆ. ಮಹಾರಾಷ್ಟ್ರದ ಹೆಸರಿನಲ್ಲಿ ವ್ಯಾಪಾರಸ್ಥರು ಸಕ್ಕರೆಯನ್ನು ಖರೀದಿ ಮಾಡಿ ನಮ್ಮ ರಾಜ್ಯಕ್ಕೆ ಬರಬೇಕಾಗಿರತಕ್ಕಂಥ ಟ್ಯಾಕ್ಸ್ ಹಣವನ್ನು ತಪ್ಪಿಸುವಂಥ ಒಬ್ಬ ಅಪರಾಧಿ ಆಗುತ್ತಾನೆ. ಈ ವ್ಯವಸ್ಥೆಯನ್ನು ತಪ್ಪಿಸುವ ಸಲುವಾಗಿ ಅಲ್ಲಿರತಕ್ಕಂಥ ಎಂಟ್ರಿ ಟ್ಯಾಕ್ಸ್‌ನ್ನು ರದ್ದು ಮಾಡಬೇಕು. ಇಲ್ಲದಿದ್ದರೆ, ಮೂಲ ಸ್ಥಾನದಿಂದ ಮಾರಾಟ ಮಾಡತಕ್ಕಂತ ಅಂದರೆ ಕಾರ್ಖಾನೆಯಿಂದ ಮಾರಾಟ ಮಾಡುವಾಗ ಕಾರ್ಖಾನೆಯ ಮಾಲೀಕನೇ ಬಿಲ್ ಮಾಡುವಾಗ ಇಂಟರ್ ಸ್ಟೇಟ್ ಟ್ಯಾಕ್ಸ್‌ನ್ನು ಕಲೆಕ್ಟ್ ಮಾಡುವುದಕ್ಕೆ ನಮ್ಮ ರಾಜ್ಯ ಸರ್ಕಾರದ ವತಿಯಿಂದ ಆದೇಶ ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಇಲ್ಲದಿದ್ದರೆ ಎಲ್ಲಾ ವ್ಯಾಪಾರಸ್ಥರೂ ಕೂಡ ಅನಿವಾರ್ಯವಾಗಿ ಕಳ್ಳತನ ಮಾಡುವಂಥ ವ್ಯವಸ್ಥೆಯಾಗುತ್ತದೆ. 106 ಕೋಟಿ ರೂಪಾಯಿ ರಾಜಸ್ವಕ್ಕೆ ಹೋಗತಕ್ಕಂಥ ಸಂದರ್ಭದಲ್ಲಿ ಇದು ಸರಿಯಾಗಿ ಆಗದೇ ಇರುವುದರಿಂದ ನಮ್ಮ ರಾಜ್ಯದ ಬೊಕ್ಕಸಕ್ಕೆ ಈಗ ಹೊರೆ ಬೀಳುತ್ತಿದೆ. ಆದ್ದರಿಂದ ಈ ಒಂದು ನೀತಿಯನ್ನು ತಕ್ಷಣದಿಂದಲೇ ಜಾರಿಗೆ ತರಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ಮುಖ್ಯವಾದ ವಿಷಯ ಏನೆಂದರೆ, ಎಸ್‌ಸಿ:ಎಸ್‌ಟಿ ಮತ್ತು ಹಿಂದುಳಿದ ಸಮಾಜವನ್ನು

ಅಭಿವೃದ್ಧಿಪಡಿಸಲು ನಮ್ಮ ರಾಜ್ಯ ಸರ್ಕಾರ ಬಹಳ ದಿವಸಗಳಿಂದಲೂ ಪ್ರಯತ್ನ ಮಾಡುತ್ತಿದೆ. ಆದರೆ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ ಎಸ್‌ಸಿ:ಎಸ್‌ಟಿ ಕಾರ್ಪೊರೇಷನ್‌ನಿಂದ ಅನೇಕ ಯೋಜನೆಗಳನ್ನು ಎಸ್‌ಸಿ:ಎಸ್‌ಟಿ ರೈತರಿಗೆ ಮತ್ತು ಬಡತನ ರೇಖೆಗಿಂತ ಕೆಳಗಿರತಕ್ಕಂಥ ರೈತರಿಗೆ ಅಭಿವೃದ್ಧಿ ಸೌಲಭ್ಯಗಳನ್ನು ಒದಗಿಸಿಕೊಡಲಾಗುತ್ತಿದೆ. ಆದರೆ, ಇದು ಪ್ರಾಮಾಣಿಕವಾಗಿ ಆಗುತ್ತಿದೆಯೇ? ಪ್ರಾಮಾಣಿಕವಾಗಿ ಸಿಗುತ್ತಿಲ್ಲವೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ಎಸ್‌ಸಿ:ಎಸ್‌ಟಿ ಕಾರ್ಪೊರೇಷನ್‌ನಿಂದ 7 ಸಾವಿರ ಪಂಪ್‌ಸೆಟ್‌ಗಳನ್ನು ಕೊರೆಸುವುದಕ್ಕೆ ನಮ್ಮ ರಾಜ್ಯ ಸರ್ಕಾರ ಯೋಜನೆ ಹಾಕಿಕೊಂಡಿದೆ. ಇಂಥ ಒಂದು ಜನರಿಗೆ ಕೊಡತಕ್ಕಂಥ ಒಂದು ಪಂಪ್ ಸೆಟ್‌ನ್ನು ಯಾವರೀತಿಯದ್ದು ಖರೀದಿ ಮಾಡಬೇಕೆಂದರೆ, ಆತನ ಜೀವನದ ಪೂರ್ತಿ ಸರ್ಕಾರ ಕೊಟ್ಟಿರತಕ್ಕಂಥ ಪಂಪ್‌ಸೆಟ್‌ನಿಂದ ನೀರನ್ನು ಹೊರಕ್ಕೆ ತೆಗೆದು ಅದರಿಂದ ಉತ್ಪನ್ನ ಬೆಳೆದು ಆತ ಸ್ವಾಭಿಮಾನದಿಂದ ಬದುಕುವಂಥ ವ್ಯವಸ್ಥೆ ನಮ್ಮಲ್ಲಿಲ್ಲ. ನಾವು ಇವತ್ತಿನದಿವಸ ಯಾವರೀತಿಯಾದ ಪಂಪ್‌ಸೆಟ್‌ಗಳನ್ನು ಖರೀದಿ ಮಾಡುತ್ತೇವೆಂದರೆ, ನಮ್ಮ ರಾಜ್ಯ ಸರ್ಕಾರ ನಿಗದಿ ಮಾಡಿರತಕ್ಕಂಥ ಸ್ಟ್ಯಾಂಡರ್ಡ್ ಕಂಪನಿಯ ಕೊಟೇಷನ್ ರದ್ದು ಮಾಡಿ ಯಾರೊಬ್ಬರು 100 ಪಂಪ್‌ಸೆಟ್ ತಯಾರು ಮಾಡಿದಂಥ ಡೂಪ್ಲಿಕೇಟ್ ಪಂಪ್‌ಸೆಟ್‌ಗಳನ್ನು ಸರ್ಕಾರದ್ದೆಂದು ಖರೀದಿ ಮಾಡಿ ಎಸ್‌ಸಿ:ಎಸ್‌ಟಿ ರೈತರಿಗೆ ಒದಗಿಸುತ್ತಾರೆ. ಒಂದು ವರ್ಷದ ಅವಧಿಯಲ್ಲಿ ಈ ಪಂಪ್‌ಸೆಟ್‌ಗಳನ್ನು ಕಿತ್ತು ಆತ ತಿಪ್ಪೆಗೆ ಎಸೆಯುತ್ತಾನೆ. ಇವತ್ತಿನದಿವಸ 106 ಕೋಟಿ ರೂಪಾಯಿ ಇಂಥ ಒಂದು ಯೋಜನೆಗೆ ಖರ್ಚಾಗಿ ಸರ್ಕಾರದ ಬೊಕ್ಕಸಕ್ಕೆ ಭಾರ ಬಿದ್ದರೂ ಸಹ ಇವತ್ತಿನದಿವಸ ಎಸ್‌ಸಿ:ಎಸ್‌ಟಿ ಜನರು ಇದುವರೆಗೂ ಉದ್ಧಾರವಾಗಿಲ್ಲ. ಇಂಥ ಒಂದು ಕಳಪೆ ದರ್ಜೆಯ ಮೆಟೀರಿಯಲ್ಸ್‌ನ್ನು ಕೊಡುವುದರ ಮುಖಾಂತರ ಸರ್ಕಾರದ ಬೊಕ್ಕಸಕ್ಕೂ ಹಾನಿ ಮತ್ತು ಎಸ್‌ಸಿ:ಎಸ್‌ಟಿ ಜನರೂ ಕೂಡ ಉದ್ಧಾರವಾಗುವಂಥ ಸ್ಥಿತಿ ನಮ್ಮ ರಾಜ್ಯದಲ್ಲಿ ಆಗಿಲ್ಲ. 7 ಸಾವಿರ ಪಂಪ್‌ಸೆಟ್‌ಗಳಿಗೆ ಸುಮಾರು 70 ಕೋಟಿ ರೂಪಾಯಿ ಖರ್ಚಾಗುತ್ತದೆ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಖರೀದಿ ಮಾಡತಕ್ಕಂಥ ಪಂಪ್‌ಸೆಟ್‌ಗೆ ಸರ್ಕಾರದ ಕಂಡಿಷನ್ ಪ್ರಕಾರ 45 ಪರ್ಸೆಂಟ್‌ನಷ್ಟು ಎಫಿಶಿಯೆನ್ಸಿ ಇರಬೇಕಾಗುತ್ತದೆ. ಆದ್ದರಿಂದ ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳುವುದೇನೆಂದರೆ ಖರೀದಿ ಮಾಡಿರತಕ್ಕಂಥ ಒಂದು ಪಂಪ್‌ಸೆಟ್ ತರಿಸಿ ತರ್ಡ್ ಪಾರ್ಟಿ ಕಡೆಯಿಂದ ಟೆಸ್ಟ್ ಮಾಡಿಸಿ ಅದರ ಎಫಿಶಿಯೆನ್ಸಿ ಎಷ್ಟು ಬರುತ್ತದೆ ಎಂಬುದನ್ನು ಚೆಕ್ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ ಇವರು ಕೊಡತಕ್ಕಂಥದ್ದು 100ಕ್ಕೆ 100 ರಷ್ಟು ಡೂಪ್ಲಿಕೇಟ್ ಆಗಿರುತ್ತದೆ. 6 ತಿಂಗಳ ನಂತರ ಅದನ್ನು ಕಿತ್ತು ತಿಪ್ಪೆಗೆ ಎಸೆಯುವಂಥ ಸಂದರ್ಭ ಇದೆ. ಮತ್ತೆ ಇದು ಮುಕ್ತವಾಗಿ ಬಂದಿದೆ, ಆದ್ದರಿಂದ ಹೋದರೆ ಹೋಗಲಿ ಎನ್ನತಕ್ಕಂಥ ಸಾಮಾನ್ಯ ಅಭಿಪ್ರಾಯವಾಗಿರುವುದರಿಂದ ಇಡೀ ವ್ಯವಸ್ಥೆ ಹಾಳಾಗಿ ಮತ್ತೆ ಎಸ್‌ಸಿ:ಎಸ್‌ಟಿ ಜನ ಎಂದೂ ಸಹ ಮುಂದೆ ಬರುವಂಥ ಸ್ಥಿತಿ ಆಗುವುದಿಲ್ಲ. ಅವರನ್ನು ತಪ್ಪು ದಾರಿಗೆ ಎಳೆಯುವುದಕ್ಕೆ ನಾವೇ ಕಾರಣವಾಗುತ್ತೇವೆ. ಮತ್ತೆ ಇದರ ಜೊತೆಗೆ ರಾಜ್ಯ ಸರ್ಕಾರದ ಬೊಕ್ಕಸವನ್ನು ಲೂಟಿ ಮಾಡತಕ್ಕಂಥ ಕೆಲಸ ಈ ರಾಜ್ಯದಲ್ಲಿ ಅವ್ಯಾಹತವಾಗಿ ನಡೆದಿದೆ. ಈ ಸಂದರ್ಭದಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಅಪ್ಪರ್ ಕೃಷ್ಣಾದಲ್ಲಿ ಕಮೀಷನರ್ ಆಗಿದ್ದಂಥ ಮಾನ್ಯ ಜಾಮದಾರ್ ಸಾಹೇಬರ್ ಅಲ್ಲಿರತಕ್ಕಂಥ ಯೋಜನೆಗಳಿಗೆ ಒಂದು ಒಳ್ಳೆಯ ಸ್ಟ್ಯಾಂಡರ್ಡ್ ಕ್ವಾಲಿಟಿಯ ಐಟಂಗಳನ್ನು ಅವರೇ ಹಾಕಿಸಿದ್ದಾರೆ. ಇಂಥ ಒಂದು ಸ್ಟ್ಯಾಂಡರ್ಡ್

ಕಂಪನಿಯ ವಸ್ತುಗಳನ್ನು ಖರೀದಿ ಮಾಡಿ ಕೊಡತಕ್ಕಂಥ ವ್ಯವಸ್ಥೆ ನಮ್ಮ ದೇಶದಲ್ಲಿರುವಾಗ ಎಸ್‌ಸಿ:ಎಸ್‌ಟಿ ಜನರಿಗೂ ಕೂಡ ಇಂಥ ಒಂದು ಸ್ಟ್ಯಾಂಡರ್ಡ್ ಕಂಪನಿಯ ಪಂಪ್ ಸೆಟ್‌ಗಳನ್ನು ಖರೀದಿ ಮಾಡಿ ಕೊಟ್ಟರೆ ಅವರ ಭವಿಷ್ಯವನ್ನು ನಾವು ಉದ್ಧಾರ ಮಾಡಿದಂತಾಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರ ಆ ಕಡೆ ಲಕ್ಷ್ಯವಹಿಸಿ ಕಳಪೆ ಗುಣಮಟ್ಟದ ವಸ್ತುಗಳನ್ನು ಎಸ್‌ಸಿ:ಎಸ್‌ಟಿ ಜನರಿಗೆ ಕೊಡುವಂಥದ್ದು ಆಗಬಾರದೆಂದು ತಮ್ಮ ಮುಖಾಂತರ ಈ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಅನೇಕ ವಿಷಯಗಳಿದ್ದರೂ ಕೂಡ ಸಮಯದ ಅಭಾವದಿಂದ ತಾವು ನನಗೆ ಈಗ ಕೊಟ್ಟಂಥ ಅವಕಾಶಕ್ಕಾಗಿ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಐವಾನ್ ನಿಗ್ಲಿರವರು ಮಾತನಾಡಬೇಕು.

ಶ್ರೀ ಶಶಿಕಾಂತ್ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ನೇಕಾರರ ಕುಟುಂಬಗಳು ಸುಮಾರು 80 ಸಾವಿರ ಇವೆ.

ಅಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಿ. ನಾನು ಈಗ ಮಾತನಾಡುವುದಕ್ಕೆ ಮಾನ್ಯ ಐವಾನ್ ಇಗ್ಲಿರವರಿಗೆ ಅವಕಾಶಕೊಟ್ಟಿದ್ದೇನೆ.

† **ಶ್ರೀ ಐವಾನ್ ನಿಗ್ಲಿ (ನಾಮ ನಿರ್ದೇಶನ) :** ಮಾನ್ಯ ಅಧ್ಯಕ್ಷರೆ, ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳು. At the outset, I express my sincere thanks to the Hon'ble Speaker for giving me this opportunity....

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಸದಸ್ಯರು ದಯವಿಟ್ಟು ಕನ್ನಡದಲ್ಲಿ ಮಾತನಾಡಬೇಕು. ಅವರು ಕನ್ನಡದಲ್ಲಿ ಮಾತನಾಡಿ ಎಂದು ಮಾನ್ಯ ಅಧ್ಯಕ್ಷರು ಅವರಿಗೆ ಹೇಳಬೇಕು. ಅವರು ಕನ್ನಡ ಕಲಿಯಬೇಕು.

ಅಧ್ಯಕ್ಷರು : ಮಾನ್ಯ ಪಾಟೀಲ್‌ರವರೇ, ನಿಮ್ಮ ಸರ್ಕಾರವೇ ಅವರನ್ನು ನಾಮಿನೇಟ್ ಮಾಡಿದೆ. ಆದ್ದರಿಂದ ಅವರನ್ನು ನಾನು ಯಾವರೀತಿ ನಿಯಂತ್ರಣ ಮಾಡಲಿ? ಆದ್ದರಿಂದ ಅವರು ಮಾತನಾಡುವುದಕ್ಕೆ ದಯಮಾಡಿ ಅವಕಾಶ ಕೊಡಿ. ಇನ್ನೂ ಮಾತನಾಡುವವರು ಇದ್ದಾರೆ. ಮಧ್ಯದಲ್ಲಿ ಸುಮ್ಮನೆ ಕೆಲಸಕ್ಕೆ ಬಾರದೇ ಇರತಕ್ಕಂಥವುಗಳೆಲ್ಲವನ್ನೂ ಮಾತನಾಡಿ ಸಮಯವನ್ನು ಏತಕ್ಕೆ ವ್ಯರ್ಥ ಮಾಡುತ್ತೀರಿ. ಮಾನ್ಯ ಐವಾನ್ ಇಗ್ಲಿಯವರೇ, ತಾವು ಮಾತನಾಡಿ.

Sri Ivan Nigli : At the outset, I express my sincere thanks to the Hon'ble Speaker for giving me this opportunity of addressing this August House for the first time during my term.

Sir, I also take this opportunity to express my heartfelt thanks and gratitude to Sri Dharam Singhji, the Hon'ble Chief Minister and his cabinet for nominating me as Member of the Legislative Assembly of Karnataka on behalf of the Anglo-Indian community. The people belonging to this section of the Minority are grateful to the Government of Karnataka and look forward for the schemes and programmes of the Government for their welfare in the coming days.

Today, I would confine my speech to the educational opportunities to the members of the Anglo-Indian community. The Hon'ble Deputy Chief Minister and the Finance Minister in his Budget speech in page 22 paragraph 68 has assured that there will be five residential schools for minority community to be provided in the coming academic session. In this connection, I wish to bring to the kind notice of the Hon'ble Deputy Chief Minister that there are minority institutions for all the linguistic minorities namely Telugu, Tamil and Urdu. But, there are no institutions run by the Government for the educational needs the Anglo-Indian children. My sincere appeal to the Government is that out of the proposed five institutions for minorities, one institution may be exclusively reserved for Anglo-Indian students.

Such an institution will be unique and first of its kind in the entire Country. I request the Government to give priority to this aspect. If possible, teachers and staff from Anglo-Indian community may be appointed to this institution. Priority should be given to Anglo-Indian/ Christ/other minority children and if there are any further vacancies, they may be got filled up by students belonging to other general communities.

Regarding Housing Scheme, I appeal to the Hon'ble Government to reserve at least 2% of the Houses under the Ashraya Scheme to the people belonging to the Anglo-Indian community. It is a well known fact that the people belonging to the Anglo-Indian community are economically and socially backward and they really deserve help and encourgement from the Government. I suggest that the allotment to this community may be made through the Anglo-Indian MLA.

The last thing which want to say is about the reimbursement of fear for the children of the Anglo-Indian community. An order has been passed vide proceeding of the Government of Karnataka regarding the reimbursement of fee paid by the children of the Anglo-Indian community. The order No. ED 63 MES A7 Bangalore dtd. 7.11.1987 was passed. It is stated that the Committee appointed by the Government to study the

problems of the children of the Anglo-Indian community has submitted its report and the recommendations are as follows. The main thing which I suggest is that the Anglo-Indian children were given reiumbursement in the year 1987. I think for the past two or three years. It is being cancelled. The fee was Rs. 780/-p.a. Now the fee has been increased Rs. 2,400/- to Rs. 5,000/- I humbly request the Government to bring back the reimbursement scheme. That is the only main subject, I want to say. Thank you very much for giving me an opportunity to speak.

ಶ್ರೀ ಶಶಿಕಾಂತ ಎ. ನಾಯ್ಕ್ : ಕಡ್ಡಾಯವಾಗಿ ಕನ್ನಡ ಬರುವವರೆಗೆ ಮಾತ್ರ ನಾಮನಿರ್ದೇಶನ ಸದಸ್ಯರನ್ನಾಗಿ ಮಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು. ಅವರಿಗೆ ಕನ್ನಡ ಓದುವುದಕ್ಕೆ ಮತ್ತು ಬರೆಯುವುದಕ್ಕೆ ಬರದಿದ್ದರೆ, ಅವರಿಗೆ ಕಲಿಸುವುದಕ್ಕಾದರೂ ಅವಕಾಶ ಮಾಡಿಕೊಡಬೇಕು ಎನ್ನುವುದು ನನ್ನ ವಿನಂತಿ.

ಅಧ್ಯಕ್ಷರು : ಆಯಿತಲ್ಲಾ ಬಿಡಿ.

† **ಶಶಿಕಾಂತ ಎ.ನಾಯ್ಕ್ (ಹುಕ್ಕೇರಿ)** : ಮಾನ್ಯ ಅಧ್ಯಕ್ಷರೆ, 2004–05ನೇ ಸಾಲಿನ ಬಜೆಟ್‌ನಲ್ಲಿ ಕೃಷಿಕನಿಗೆ ಆರ್ಥಿಕ ದೇಶದ ಬೆನ್ನೆಲುಬು ಎಂದು ಮಾನ್ಯ ಉಪ ಮುಖ್ಯಮಂತ್ರಿಗಳು ಇವತ್ತು ಹೇಳಿದ್ದಾರೆ. ಆ ರೀತಿ ನಿಜವಾಗಿಯೂ ಕೂಡ ಶೇಕಡಾ 6 ರಂತೆ ಬಡ್ಡಿ ರೈತನಿಗೆ ಬಹಳ ಭಾರವಾಗುತ್ತದೆ ಎನ್ನುವಂಥ ಒಂದು ಹಿನ್ನೆಲೆಯಲ್ಲಿ ಅವರು ತೆಗೆದು ಕೊಂಡಿರುವಂಥ ಈ ನಿರ್ಣಯಕ್ಕೆ ಅಭಿನಂದಿಸುತ್ತೇನೆ. ಕಳೆದ 3–4 ವರ್ಷಗಳಿಂದ ಸತತವಾಗಿ ಬರಗಾಲ ಇದ್ದುದರಿಂದ ಇವತ್ತು ರಾಜ್ಯದ ರೈತರು ಬದುಕಲಾರದಂತೆ ನಿಜವಾಗಲೂ ಕೂಡ ರಾಜ್ಯದ ಅನೇಕ ರೈತರು ಹಿಂದಿನ ಸರ್ಕಾರದಲ್ಲಿ ಇವತ್ತು ಸಹಿತ ರೈತರು ಉರುಳು ಹಾಕಿಕ್ಕೊಳ್ಳುವಂಥ ಸ್ಥಿತಿ ಮುಂದುವರೆದಿದೆ. ಇವತ್ತು ತಜ್ಞರ ಒಂದು ರಿಪೋರ್ಟ್‌ನ ಪ್ರಕಾರ ಅವರು ಏನು ಹೇಳುತ್ತಿದ್ದಾರೆಂದರೆ, ಇವತ್ತು ರೈತನಿಗೆ ಲಕ್ಷಗಟ್ಟಲೆ ಪರಿಹಾರವನ್ನು ಕೊಡುತ್ತಿರುವುದರಿಂದ ಆ ಹಿನ್ನೆಲೆಯೊಳಗೆ ರೈತರು ಉರುಳು ಹಾಕಿಕೊಳ್ಳುವಂಥ ಪ್ರಸಂಗಗಳು ಉಂಟಾಗುತ್ತವೆ ಎಂದು ಸರ್ಕಾರಕ್ಕೆ ಬೆಳಕು ಚೆಲ್ಲುತ್ತಿದ್ದಾರೆ. ಅದು ನಿಜವಾಗಿಯೂ ಬಹಳ ದೊಡ್ಡ ತಪ್ಪು ಇದೆ. ಯಾರಿಗಾದರು ಇವತ್ತು ದೊಡ್ಡ ಜನರಿಗೆ ಇವತ್ತು ನಾವು 10 ಲಕ್ಷ ರೂ.ಗಳನ್ನು ಕೊಡುತ್ತೇವೆಂದು ಹೇಳಿದರೆ ಅವರು ಉರುಳು ಹಾಕಿಕೊಳ್ಳಲು ಶಕ್ಯವಿದೆಯೇ ಎಂದು ನಾನು ಇವತ್ತು ಕೇಳುತ್ತೇನೆ. ಆ ಹಿನ್ನೆಲೆಯಲ್ಲಿ ಇವತ್ತು ನಿಜವಾಗಿಯೂ ಕೂಡ ರೈತ ಬೆಳೆದಂಥ ಬೆಳೆಗೆ ಯೋಗ್ಯ ಬೆಲೆ ಸಿಗಲಾರದೆ ಸರಿಯಾದ ಸಮಯಕ್ಕೆ ಸಕಾಲದಲ್ಲಿ ವಿದ್ಯುತ್ ಸಿಗಲಾರದೆ ಇವತ್ತು ನಿಜವಾಗಿಯೂ ರೈತನ ಬೆಳೆ ಹಾಳಾಗುವಂಥ ಇವತ್ತಿನ ಸ್ಥಿತಿಯಲ್ಲಿ ಈ ವರ್ಷ ಮಳೆಯಾದರೂ ಕೂಡ ಬಿತ್ತನೆ ನಡೆದರೂ ಸಹ ಸಕಾಲಕ್ಕೆ ಮಳೆಬಾರದೆ ಇವತ್ತು ಸೊಯಾಬಿನ್, ಶೇಂಗಾ, ಕಬ್ಬಿನ ಬೆಳೆ ಕೀಟದ ಭಾದೆಯಿಂದ ಹಾಳಾಗಿದೆ. ಕರ್ನಾಟಕ ರಾಜ್ಯದಲ್ಲಿ ರೈತನ ಆರ್ಥಿಕ ಬೆಳೆಯಾದಂಥ ಕಬ್ಬು ಬೆಳೆಗೆ ಇವತ್ತು ನುಸಿ ರೋಗ ಬಂದು ಸುಮಾರು ಶೇಕಡಾ 75 ಭಾಗ ಮಾತ್ರ ಪೂರ್ತಿ ಹಾಳಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ ಹೆಚ್ಚಿಗೆ ಬೆಳೆಯತಕ್ಕಂಥ ಕಬ್ಬಿನ ಬೆಳೆ, ಬೆಳಗಾಂ, ಬಾಗಲಕೋಟೆ, ಬಿಜಾಪುರ, ಧಾರವಾಡ, ಮಂಡ್ಯ, ಮೈಸೂರು ಮತ್ತು ದಾವಣಗೆರೆ ಜಿಲ್ಲೆಗಳ[illegible]

ನುಸಿರೋಗ ಪೀಡಿತದಿಂದ ಇವತ್ತು ಹಾಳಾಗಿ ರೈತರು ಕಂಗಾಲಾಗಿ ಆತ್ಮಹತ್ಯೆಗೆ ಹೊರಟಿದ್ದಾರೆ. ಈ ನಿಟ್ಟಿನಲ್ಲಿ ರೈತನಿಗೆ ಸರ್ಕಾರದ ಯಾವ ನೆರವೂ ಇಲ್ಲ. ಕಬ್ಬಿನ ಬೆಳೆ ವಿಮೆಯಲ್ಲಿ ಸೇರಿಲ್ಲ. ಒಂದು ಎಕರೆ ಕಬ್ಬನ್ನು ಬೆಳೆಯಬೇಕಾದರೆ ಇವತ್ತು ಸರಿಯಾಗಿ 15 ರಿಂದ 20 ಸಾವಿರ ರೂ.ಗಳ ಖರ್ಚಾಗುತ್ತದೆ. ಆದರೆ ಉತ್ಪಾದನೆ ಸರಿಯಾಗಿ ಆಗುತ್ತಿಲ್ಲ. ಒಂದು ಎಕರೆಗೆ 25 ಟನ್ ರೈತರು ಒಂದು ಎಕರೆಗೆ ಬೆಳೆದರೂ ಸಹ 25 ರಿಂದ 30 ಸಾವಿರ ರೈತರಿಗೆ ಹಣ ಸಿಗುತ್ತಿಲ್ಲ.

ಛೇರ್ಮನ್ (ಶ್ರೀ ಎ.ಟಿ. ರಾಮಸ್ವಾಮಿರವರು) : ಅಧ್ಯಕ್ಷ ಪೀಠವನ್ನಲಂಕರಿಸಿದರು. ಈ ಹಿನ್ನೆಲೆಯಲ್ಲಿ ರೈತರು ನಿಜವಾಗಲೂ ಇವತ್ತು ಸಾಲಗಾರರಾಗಿದ್ದಾರೆ. ರಾಜ್ಯದಲ್ಲಿ ಬೆಳೆ ವಿಮೆಗೆ ಈ ಸಲ ತಾವು 240 ಕೋಟಿ ರೂ.ಗಳನ್ನು ತಾವು ಇಟ್ಟಿದ್ದೀರಿ, ನಿಜವಾಗಿಯೂ ಇವತ್ತು ತಾವು, 1200 ಕೋಟಿ ರೂ.ಗಳನ್ನು ಕೊಡಬೇಕು. ಈ ಹಿನ್ನೆಲೆಯಲ್ಲಿ ರೈತನ ಇವತ್ತಿನ ಆರ್ಥಿಕ ಸ್ಥಿತಿಯ ಹಿನ್ನೆಲೆಯಲ್ಲಿ ಸರ್ಕಾರ ಇವತ್ತು ನೆರವಿಗೆ ಬರಬೇಕು. ಸತತ 3–4 ವರ್ಷದ ಬರಗಾಲದಿಂದ ರೈತ ಮಾಡಿದ ಬ್ಯಾಂಕ್ ಸಾಲ ಮತ್ತು ಸಾಲದ ಬಡ್ಡಿಯನ್ನು ತುಂಬಲಾಗದೆ ರೈತರು ಇವತ್ತು ತೊಂದರೆಗೊಳಗಿದ್ದಾರೆ, ಇಂತಹ ಕಠಿಣ ಪರಿಸ್ಥಿತಿಯಲ್ಲಿಯೂ ಕೂಡ ರೈತರು ದುಡಿದು ಇವತ್ತು ಅನೇಕ ಸಾಲವನ್ನು ತೀರಿಸಿಕೊಂಡು ಬಂದಿದ್ದಾರೆ. ಕಳೆದ ಅನೇಕ ವರ್ಷಗಳಿಂದ ರೈತರು ಸಾಲವನ್ನು ತುಂಬಿಕೊಂಡು ಬಂದಿದ್ದಾರೆ, ಇವತ್ತಿನವರೆಗೆ ಯಾವ ಸರ್ಕಾರವು ಸಹಿತ ಸಾಲವನ್ನು ಮನ್ನಾ ಮಾಡಿರುವುದಿಲ್ಲ. ಇಂತಹ ಆರ್ಥಿಕವಾದ ಗಂಭೀರವಾದ ಪರಿಸ್ಥಿತಿಯಲ್ಲಿ ಸರ್ಕಾರ ಒಂದು ಹೆಜ್ಜೆ ಮುಂದೆ ಬಂದು ಇವತ್ತು ರೈತರ ಈ ತೊಂದರೆಗಳಿಗೆ ತಾವು ನಿಲ್ಲಬೇಕು. ರೈತರ ಪೂರ್ತಿ ಸಾಲವನ್ನು ಪೂರ್ತಿ ಬಡ್ಡಿ ಮನ್ನಾ ಮಾಡಬೇಕೆಂದು ನಾವು ಇವತ್ತು ಕೇಳಿಕೊಳ್ಳುತ್ತೇನೆ. ಏಕೆಂದರೆ ರೈತರು ಈ ದೇಶದೊಳಗೆ ಬಹಳಷ್ಟು ತೊಂದರೆಗೊಳಗಿದ್ದಾರೆ. ಸ್ವಾತಂತ್ರ್ಯ ಸಿಕ್ಕ ನಂತರ ಇವತ್ತಿನವರೆಗೆ ರೈತನ ಪರಿಸ್ಥಿತಿ ಬೇರೆ ಬೇರೆ ದೇಶಗಳಿಗೆ ಹೋಲಿಸಿ ನೋಡಿದರೆ ಆ ರೈತ ಇವತ್ತು ಯಾವ ರೀತಿ ಬದುಕಿದ್ದಾನೆ ಎನ್ನುವಂಥ ವಿಚಾರ ಮಾಡಿದಾಗ ನಿಜವಾಗಿಯೂ ಭಾರತ ದೇಶದಲ್ಲಿ ಹುಟ್ಟಬಾರದು ನಮ್ಮ ಈ ಕರ್ನಾಟಕದಲ್ಲಿ ಹುಟ್ಟಬಾರದು ಎಂದು ನಮ್ಮ ರೈತರಿಗೆ ಅನಿಸಿದೆ. ರೈತರಿಗೆ ನೀಡುವ ವಿದ್ಯುತ್ತಿನಿಂದ ಅನೇಕ ಕಡೆ ಭಾದೆಯನ್ನು ಅನುಭವಿಸುತ್ತಿದ್ದಾರೆ. ರೈತರ ಸಂಕಷ್ಟದ ಬಗ್ಗೆ ಮಾನ್ಯ ಸಿದ್ದು ಸವದಿಯವರು ಇವಾಗ ಹೇಳಿದರು. ಒಂದು ಪಂಪ್‌ಸೆಟ್ಟನ್ನು ಕೂಡಿಸಬೇಕಾದರೆ ಟಿಸಿ ಗೆ 25 ಸಾವಿರ ರೂ.ಗಳ ಮತ್ತು ಕಂಬಕ್ಕೆ ಲೈನ್ ಎಳೆಯುವರೆಗೆ ಇವತ್ತು ದುಡ್ಡನ್ನು ತುಂಬಬೇಕಾದರೆ, 5 ರಿಂದ 10 ಹಾರ್ಸ್‌ಪವರ್ ಮೋಟಾರ್‌ಗೆ ಕನಿಷ್ಠ 40 ರಿಂದ 45 ಸಾವಿರ ರೂ.ಗಳು ತುಂಬಬೇಕಾಗುತ್ತದೆ. ಬರಗಾಲದಿಂದ ರೈತನಿಗೆ ಶಕ್ತಿ ಇವತ್ತು ಇಲ್ಲದ ಕಾರಣದಿಂದ ಈ ಭಾರವನ್ನು ರೈತನಿಗೆ ಹೊರಿಸಬಾರದು. ಮೊದಲು ಯಾವರೀತಿಯಾಗಿತ್ತು ಅಂದರೆ ಟಿಸಿ ಮತ್ತು ಪಂಪ್‌ಸೆಟ್ಟಗಳು ಸುಟ್ಟರೆ ಅಲ್ಲಿ ಟಿಸಿ ಮತ್ತು ಪಂಪ್‌ಸೆಟ್ಟಗಳನ್ನು ಕೂಡಿಸುತ್ತಿದ್ದರು. ಈಗ ಪ್ರತಿಯೊಬ್ಬ ರೈತರಿಗೆ ಸಣ್ಣ ಸಣ್ಣ ಟಿ.ಸಿ. ಗಳನ್ನು ಸುಮಾರು 10 ರಿಂದ 15 ಹೆಚ್‌ಪಿ ಹಾಕುತ್ತಿದ್ದರು. ಪ್ರತಿಯೊಬ್ಬ ರೈತರಿಗೆ ಟಿ.ಸಿ.ಯನ್ನು ಕೂಡಿಸುವ ಬಗ್ಗೆ ತಾವು ಹೊರಟಿದ್ದೀರಿ, ಇದರ ಹಿನ್ನೆಲೆಯಿಂದ ರೈತರಿಗೆ ಬಹಳ ತೊಂದರೆಯಾಗುತ್ತದೆ. ಮೊದಲಿನ ರೀತಿಯಿಂದ 100 ಕೆ.ವಿ. ಟಿ.ಸಿ. ಮತ್ತು 200 ಸಮರ್ಥ್ಯವುಳ್ಳ ಟಿಸಿಯನ್ನು ದೊಡ್ಡ ದೊಡ್ಡ ಟಿಸಿಯನ್ನು ಕೂಡಿಸಿ ಮೊದಲಿನ ರೀತಿಯಲ್ಲಿಯೇ ಕನೆಕ್ಷನ್ ಕೊಡಬೇಕೆಂದು ನಾನು ಇಲ್ಲಿ ಒತ್ತಾಯವನ್ನು ಮಾಡುತ್ತೇನೆ. ರಾಜ್ಯದಲ್ಲಿ ಈ ಸಲ ಬರಗಾಲ ಬಂದಿದ್ದರಿಂದಾಗಿ ಮಾನ್ಯ ಸಿದ್ಧರಾಮಯ್ಯನವರಲ್ಲಿ

ಒತ್ತಾಯವನ್ನು ಮಾಡುತ್ತೇನೆ. ಇವತ್ತು ಪೂರ್ತಿ ಸಾಲವನ್ನು ಮನ್ನಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆಯೇ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† **ಶ್ರೀ ಕೆ. ರಘುಪತಿ ಭಟ್ (ಉಡುಪಿ)** : ಮಾನ್ಯ ಛೇರ್ಮನ್‌ರವರೆ, ನಾನು ಬಜೆಟ್ ಮೇಲೆ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಪ್ರಥಮ ಬಾರಿಗೆ ಅವಕಾಶವನ್ನು ಕೊಟ್ಟಿದಕ್ಕಾಗಿ ತಮಗೆ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇನೆ. ನಾವು ಈಗ 2004–05ನೇ ಬಜೆಟ್‌ನ್ನು ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಅವರ ಪಕ್ಷದವರು ಬಹಳ ಐತಿಹಾಸಿಕವಾದಂತಹ ಬಜೆಟ್, ಹಾಗೂ ಬಹಳ ಒಳ್ಳೆಯ ಬಜೆಟ್ ಎಂದು ವರ್ಣನೆಯನ್ನು ಮಾಡಿದ್ದಾರೆ. ಆದರೆ ನನಗೆ ಇವತ್ತು ಆಶ್ಚರ್ಯವಾಗುತ್ತಿರುವುದು ನಮ್ಮ ಶಾಸಕರಿಗೆ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯನ್ನು ಕೊಡಲಿಕ್ಕೆ ಆಗದಿರುವಂತಹ ಬಜೆಟ್, ಇದು ಯಾವ ತರಹದ ಒಳ್ಳೆಯ ಬಜೆಟ್ ಎಂಬುದು ನನಗರ್ಥವಾಗುತ್ತಿಲ್ಲ. ಇನ್ನು 72.83 ಕೋಟಿ ರೂಪಾಯಿಗಳನ್ನು ಒಂದು ಉಳಿಕೆ ಮಾಡಿರುವಂತಹ ಬಜೆಟ್ ಎಂದು ಹೇಳಿಕೊಂಡಿದ್ದಾರೆ. ಪ್ರಾಯಶಃ ನಮ್ಮ ಎಲ್ಲಾ ಶಾಸಕರಿಗೆ 50–60 ಲಕ್ಷ ರೂಪಾಯಿಗಳನ್ನು ಕೊಟ್ಟರೂ 150 ಕೋಟಿ ರೂಪಾಯಿಗಳು ಮಾತ್ರ ಸಾಕಾಗುತ್ತದೆ. 150 ಕೋಟಿ ರೂಪಾಯಿಗಳನ್ನು ಈ ಬಜೆಟ್‌ನಲ್ಲಿ ಒದಗಿಸಿದ್ದರೆ ನಮ್ಮ ವಿಧಾನಸಭೆಯ 225 ಸದಸ್ಯರಿಗೆ ವಿಧಾನಪರಿಷತ್ತಿನ 75 ಸದಸ್ಯರಿಗೆ ತಲಾ 50 ಲಕ್ಷ ರೂಪಾಯಿಗಳನ್ನು ಕೊಟ್ಟರೂ 150 ಕೋಟಿ ರೂಪಾಯಿಗಳು ನಮ್ಮ ಪೂರೈಕೆಯನ್ನು ಮಾಡಬಹುದಾಗಿತ್ತು. ನಾನು ಮಾನ್ಯ ಉಪಮುಖ್ಯಮಂತ್ರಿಗಳಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ತಮ್ಮ ಉತ್ತರದಲ್ಲಿ ದಯವಿಟ್ಟು ಕನಿಷ್ಠ 50 ಲಕ್ಷ ರೂಪಾಯಿಗಳನ್ನಾದರೂ ಪ್ರದೇಶಾಭಿವೃದ್ಧಿ, ವಿಧಿಯನ್ನು ಕೊಡಲೇಬೇಕು. ಏಕೆಂದರೆ, ವೈಯಕ್ತಿಕವಾಗಿ ನಾವು ಸುಮಾರು 103 ಜನ ಪ್ರಥಮ ಬಾರಿಗೆ ಇಲ್ಲಿ ಶಾಸಕರಾಗಿ ಆಯ್ಕೆಯಾಗಿ ಬಂದಿದ್ದೇವೆ. ನಾವು ಚುನಾವಣೆಯ ಸಮಯದಲ್ಲಿ ಅದು ಮಾಡಿಕೊಡುತ್ತೇವೆ ಇದು ಮಾಡಿಕೊಡುತ್ತೇವೆ ಎಂದು ಹೇಳಿದ್ದೇವೆ. ಈಗ ಚುನಾವಣೆ ಮುಗಿದು 2–3 ತಿಂಗಳಾದ ನಂತರ ನಮ್ಮ ಕ್ಷೇತ್ರಕ್ಕೆ ಹೋದಾಗ ಬೇರೆ ಬೇರೆ ಪಂಚಾಯಿತಿಗಳಿಂದ ನಮಗೆ ಅದನ್ನು ಕೊಡಬೇಕು. ಇದನ್ನು ಕೊಡಬೇಕೆಂದು ವಿನಂತಿ ಬಂದಿದೆ. ನಾವು ಇದನ್ನು ನಂಬಿಕೊಂಡಿದ್ದೆವು. ಕಳೆದ ಬಾರಿ 40 ಲಕ್ಷ ರೂಪಾಯಿಗಳನ್ನು ಎಲ್ಲರಿಗೂ ಕೊಟ್ಟಿದ್ದರು. ನಮ್ಮ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗೆ ಬರಗಾಲ ಎಂದು ಹೇಳಿ ಅದನ್ನು ಕಟ್ ಮಾಡಿದ್ದರು. ಆದರೆ ಮಳೆ ಬಂದಿರುವುದನ್ನು ನೋಡಿದರೆ ನಮಗೆ ಬರಗಾಲವಿಲ್ಲ 40 ಲಕ್ಷ ರೂಪಾಯಿಗಳು ಸಿಗಬಹುದು ನಾವುಗಳು ಈಗಾಗಲೇ ಅದನ್ನು ಹಂಚಿಯಾಗಿದೆ. ಒಂದೊಂದು ಪಂಚಾಯಿತಿಗೆ 5–5 ಲಕ್ಷ ರೂಗಳೆಂದು ಹಂಚಿ ಆಗಿದೆ. ತಾವುಗಳು ಅದನ್ನು ಕೊಡಲಿಲ್ಲವೆಂದರೆ ನಾವು ಊರಿಗೆ ಹೋಗದಿರುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಮಾನ್ಯ ಉಪ ಮುಖ್ಯಮಂತ್ರಿಗಳು ದಯವಿಟ್ಟು ಇದನ್ನು ಪರಿಗಣಿಸಲೇಬೇಕು. ಪ್ರಾಯಶಃ ನಾವುಗಳು ಮಾತ್ರವಲ್ಲ, ಆಡಳಿತ ಪಕ್ಷದ ಶಾಸಕರೂ ಕೂಡ ಇದರ ಬಗ್ಗೆ ಒತ್ತಾಯವನ್ನು ಮಾಡುತ್ತಾರೆ. ನಾವು ಕಳೆದ ಬಾರಿ ರೈತರುಗಳು ಆತ್ಮಹತ್ಯೆಯನ್ನು ಮಾಡಿಕೊಂಡಿರುವುದನ್ನು ಕೇಳಿದ್ದೇವೆ. ಪ್ರಾಯಶಃ ಇವತ್ತು. ಶಾಸಕರಿಗೆ ನೀವು ಪ್ರದೇಶಾಭಿವೃದ್ಧಿ ನಿಧಿಯನ್ನು ಕೊಡದಿದ್ದರೆ ಶಾಸಕರು ಆತ್ಮಹತ್ಯೆ ಮಾಡಿಕೊಳ್ಳುವಂತಹ ಸ್ಥಿತಿ ಬರಬಹುದು ಮಾನ್ಯ ಉಪ ಮುಖ್ಯಮಂತ್ರಿಗಳು ದಯವಿಟ್ಟು ಇದನ್ನು ಪರಿಗಣಿಸಬಹುದು.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ಇದರಿಂದ ಜನರಿಗೆ ತಪ್ಪು ಸಂದೇಶ ಹೋಗುತ್ತದೆ.

ಶ್ರೀ ಕೆ. ರಘುಪತಿ ಭಟ್ : ನಾನು ನನ್ನ ಅಭಿಪ್ರಾಯವನ್ನು ಹೇಳುತ್ತಿದ್ದೇನೆ. ಬರಬಹುದು ಎಂದು ಹೇಳಿದ್ದೇನೆ. ಮಾಡಿಕೊಳ್ಳುತ್ತಾರೆಂದು ಹೇಳಿಲ್ಲ. ಮಾಡಿಕೊಳ್ಳಬಹುದು ಅಂತ. ರೈತರು ಮುಂಚೆ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆಂದು ಯಾರಿಗೂ ಗೊತ್ತಿರಲಿಲ್ಲ. ಅವರು ಹಾಗೆ ಮಾಡಿಕೊಂಡ ಮೇಲೆಯೇ ಗೊತ್ತಾದುದು.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ಜನರಿಗೆ ತಪ್ಪು ಸಂದೇಶ ಹೋಗುತ್ತದೆ.

ಶ್ರೀ ಕೆ. ರಘುಪತಿ ಭಟ್ : ನಾನು ನನ್ನ ಅಭಿಪ್ರಾಯವನ್ನು ಹೇಳುತ್ತಿದ್ದೇನೆ. ನಿಮ್ಮ ಅಭಿಪ್ರಾಯವನ್ನು ನೀವು ಮತ್ತೆ ಹೇಳಿ. ಶಾಸಕರು ಅಂತಹ ಒತ್ತಡದಲ್ಲಿದ್ದಾರೆ. ಏನಿದೆ ಇಲ್ಲಿ, ಯಾವುದೂ ಕೂಡ ಇಲ್ಲ. ಪ್ರದೇಶಾಭಿವೃದ್ಧಿಯೂ ಇಲ್ಲ, ಯಾವುದೂ ಕೂಡ ಇಲ್ಲ.

ಶ್ರೀ ಎಸ್.ಎಸ್. ಭೋಸರಾಜು : ಕೆಲಸ ಮಾಡುವ ಶಾಸಕರು ಬಿಡುವಿಲ್ಲದೆ ಕೆಲಸವನ್ನು ಮಾಡಬಹುದು.

ಗೊಂದಲ

ಅಧ್ಯಕ್ಷರು : ಮಾನ್ಯ ರಘುಪತಿ ಭಟ್‌ರವರು ಮಾತನಾಡಲಿ ಬಿಡಿ.

ಶ್ರೀ ಕೆ. ರಘುಪತಿ ಭಟ್ : ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುತ್ತೇನೆ. ಹಾಗಿದ್ದರೆ ಆಡಳಿತ ಪಕ್ಷದ ಸದಸ್ಯರಿಗೆ ಆ ನಿಧಿ ಬೇಡವೆಂದು ಬರೆದು ಕೊಡಿ. ನಮ್ಮ ವಿರೋಧಪಕ್ಷದವರಿಗಾದರೂ ಕೊಡಿ. ಆ 72 ಕೋಟಿ ರೂಪಾಯಿಗಳಲ್ಲಿಯಾದರೂ ಕೊಡಬಹುದು. ನಾನು ನನ್ನ ಅಭಿಪ್ರಾಯವನ್ನು ಹೇಳಿಕೊಳ್ಳುವಂತಹ ಸ್ವಾತಂತ್ರ ಇದೆ. ನಾನು ಮಾನ್ಯ ಉಪಮುಖ್ಯಮಂತ್ರಿಗಳಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಪ್ರದೇಶಾಭಿವೃದ್ಧಿ ನಿಧಿಯನ್ನು ದಯವಿಟ್ಟು ತಾವು ಮಾಡಲೇ ಬೇಕು. ಇಲ್ಲವೆಂದರೆ ಸಾಧ್ಯವೇ ಇಲ್ಲ. ಪ್ರದೇಶಾಭಿವೃದ್ಧಿ ನಿಧಿಯನ್ನು ಕೊಡಲಿಲ್ಲವೆಂದರೆ ಬೇರೆಬೇರೆಯದ್ದು ಇದೆ ಎಂದು ನಮ್ಮ ಹಿರಿಯ ಶಾಸಕರುಗಳು ಹೇಳುತ್ತಾರೆ. ಅದು ಯಾವುದು ಇದೆ ಎಂಬುದು ನಮಗೆ ಗೊತ್ತಿಲ್ಲ. ಆದರೆ ಇವತ್ತು ಗ್ರಾಮಪಂಚಾಯಿತಿಗಳಿಗೆ 5–5 ಲಕ್ಷ ರೂ.ಗಳ ಅನುದಾನವನ್ನು ಕೊಡುತ್ತಾ ಇದ್ದರು. ಅದರಲ್ಲಿಯೂ ಕಳೆದ ವರ್ಷ 2,40.000 ರೂಗಳನ್ನು ಕಟ್ ಮಾಡಿದ್ದಾರೆ. 2,60,000 ರೂಗಳನ್ನು ಮಾತ್ರ ಕೊಟ್ಟಿದ್ದಾರೆ. ವಿದ್ಯುತ್ ಇಲಾಖೆಗೆ ಕೊಡಬೇಕಾಗಿರುವಂತಹ ಬಾಕಿ ಎಂದು ಹೇಳಿಕೊಂಡು ಕಟ್ ಮಾಡಿದ್ದಾರೆ. ಈ ವರ್ಷವೂ ಅದನ್ನು ಕಟ್ ಮಾಡಿದ್ದೇ ಆದರೆ ಗ್ರಾಮಪಂಚಾಯಿತಿಗಳು ಯಾವುದೂ ಕೂಡ ಸರಿಯಾದ ರೀತಿಯಲ್ಲಿ ಕೆಲಸವನ್ನು ಮಾಡುವುದಿಲ್ಲ. 5 ಲಕ್ಷ ರೂಪಾಯಿಗಳು ಅವರಿಗೆ ಶಾಸನಬದ್ಧವಾಗಿ ಬರುವಂತಹ ಅನುದಾನವಾಗಿದೆ. ಅದರಲ್ಲಿ ಕಳೆದ ವರ್ಷ 2,40,000 ರೂಪಾಯಿಗಳನ್ನು ಕಟ್ ಮಾಡಿದ್ದಾರೆ. 2,60,000 ರೂಪಾಯಿಗಳನ್ನು ಮಾತ್ರ ಅವರಿಗೆ ಕೊಟ್ಟಿದ್ದಾರೆ. ನನ್ನ ಕ್ಷೇತ್ರದ ಕೆಲವು ಪಂಚಾಯಿತಿಗಳಲ್ಲಿ ವಿದ್ಯುತ್ ಇಲಾಖೆಗೆ ಸರಿಯಾಗಿ ಒಂದು ಪೈಸೆ ಬಾಕಿ ಇಲ್ಲದ ಹಾಗೆ ಹಣವನ್ನು ಕಟ್ಟುತ್ತಿದ್ದಂತಹ ಪಂಚಾಯಿತಿತಳಿಗೂ 1,80,000 ರೂ. ಕಟ್ ಮಾಡಿರುವಂತಹ ನಿದರ್ಶನವಿದೆ. ಅವರು ವಿದ್ಯುತ್ ಇಲಾಖೆಗೆ ಸರಿಯಾಗಿ ಹಣವನ್ನು ಕಟ್ಟುತ್ತಿದ್ದರು. ಇದೇ ಪರಿಸ್ಥಿತಿಯೂ ಈ ವರ್ಷವೂ ಆದರೆ ಗ್ರಾಮಪಂಚಾಯಿತಿಗಳಲ್ಲಿ ಸರಿಯಾದ ರೀತಿಯಲ್ಲಿ ಕೆಲಸವಾಗದ ಪರಿಸ್ಥಿತಿಯಾಗುತ್ತದೆ. ನಾನು

ಗ್ರಾಮಪಂಚಾಯಿತಿಗಳಿಗೆ ಹೋದಾಗ ಗ್ರಾಮಪಂಚಾಯಿತಿಯವರು ಅನುಭವಿಸಿದನ್ನು ನಾನು ತಮ್ಮ ಮುಂದೆ ಹೇಳುತ್ತಿದ್ದೇನೆ. ಇದರ ಮಧ್ಯೆ ನಮಗೆ ಪ್ರದೇಶಾಭಿವೃದ್ಧಿ ನಿಧಿ ಇಲ್ಲ. ಗ್ರಾಮ ಪಂಚಾಯಿತಿಗೆ ಅನುದಾನ ಬರುವುದನ್ನು ಅಲ್ಲಿಯೂ ಕೂಡ ಕಟ್ ಮಾಡುವಂತಹದ್ದು ಆಗಿದೆ. ಜಿಲ್ಲಾ ಪಂಚಾಯಿತಿಗಳ ಸಭೆಗೆ ಹೋದರೆ ಅಲ್ಲಿ ನಮಗೆ ಒತ್ತಾಯವನ್ನು ಮಾಡುತ್ತಿದ್ದಾರೆ. ಸರ್ಕಾರದಿಂದ ಬರುವಂತಹ ಯಾವುದೇ ಅನುದಾನವು ನಮಗೆ ಬರುತ್ತಿಲ್ಲ ಅವರು ಅವರ ಗೋಳನ್ನು ಹೇಳುತ್ತಿದ್ದಾರೆ. ನಗರಸಭೆಗಳಿಗೆ ಹೋದರೆ ಅಲ್ಲೂ ಕೂಡ ಇದೇ ಪರಿಸ್ಥಿತಿಯಾಗಿದೆ. ರಾಜ್ಯ ಸರ್ಕಾರದಿಂದ ಅವರಿಗೆ ಶಾಸನಬದ್ಧವಾಗಿರಬೇಕಾದಂಥ ಅನುದಾನಗಳು ಬರುತ್ತಿಲ್ಲ. ಕೆಲವು ಇಂತಹದ್ದೇ ಅನುಭವವು ಅವರಲ್ಲಿಯೂ ಕೂಡ ಆಗಿದೆ. ಮೆಸ್ಕಾಂಗಳಿಗೆ ಇರಬಹುದು. ಈ ವಿದ್ಯುತ್‌ಗೆ ಬಾಕಿ ಇರುವಂತಹ ನಗರಸಭೆಗೂ ನಮ್ಮಲ್ಲಿರುವಂತಹ ಎಲ್ಲಾ ಕ್ಷೇತ್ರಗಳಿಗೂ ಪಾಲು ಮಾಡಿ ಅದನ್ನು ಹಂಚಿದ್ದಾರೆ. ಯಾರು ಸರಿಯಾಗಿ ಹಣವನ್ನು ಕಟ್ಟುತ್ತಿದ್ದಾರೆ, ಅವರಿಗೂ ಕಟ್ ಮಾಡುವಂತಹ ವ್ಯವಸ್ಥೆಯನ್ನು ಇವತ್ತು ಮಾಡುತ್ತಿದ್ದಾರೆ. ಈ ರೀತಿ ಮಾಡಿದರೆ ಸರ್ಕಾರ ಹೇಳಿಕೊಟ್ಟು ಮಾಡಿಸಿದಂತಾಗುತ್ತದೆ. ನೀವು ಸರಿಯಾಗಿ ಹಣವನ್ನು ಕಟ್ಟಬೇಡಿ, ನೀವು ಗ್ರಾಮಪಂಚಾಯಿತಿ, ನಗರಸಭೆ ಇರಬಹುದು ವಿದ್ಯುತ್ ಬಿಲ್‌ಗಳನ್ನು ಸರಿಯಾಗಿ ಕಟ್ಟಬೇಡಿ, ಸರಿಯಾಗಿ ಹಣವನ್ನು ಕಟ್ಟಿದವರಿಗೂ ಒಂದೇ ಮಾನದಂಡ ಕಟ್ಟಿದವರಿಗೂ ಒಂದೇ ಮಾನದಂಡ ಎಂದು ಹೇಳುವಂತಹ ದೃಷ್ಟಿಯಲ್ಲಿ ಆಗುವಂತಹ ವ್ಯವಸ್ಥೆಯಾಗಿರುವುದರಿಂದ ಗ್ರಾಮಪಂಚಾಯಿತಿಗಳಿಗೆ ಮತ್ತು ನಗರಸಭೆಗಳಿಗೆ ಹಾಗೂ ಜಿಲ್ಲಾ ಪಂಚಾಯಿತಿಗಳಿಗೆ ಸರ್ಕಾರದಿಂದ ಶಾಸನಬದ್ಧವಾಗಿ ಕೊಡುವಂತಹ ಅನುದಾನಗಳನ್ನು ಯಾವುದೇ ಬಾಕಿಗಳನ್ನು ಕಟ್ ಮಾಡದೆಯೇ ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ರಘುಪತಿ ಭಟ್‌ರವರೇ, ಒಂದು ನಿಮಿಷ, ಮಾನ್ಯ ಸದಸ್ಯರು ಹೇಳಿದರಲ್ಲಾ ಶಾಸಕರ ಕರ್ತವ್ಯ ಏನು ಎಂಬುದು ನನಗೆ ಗೊತ್ತಿಲ್ಲ. ಏಕೆಂದರೆ ಜಿಲ್ಲಾ ಪಂಚಾಯಿತಿಯಲ್ಲಿ ಏನು ಕೊಡುತ್ತಾರೆ, ಜಿಲ್ಲಾ ಪಂಚಾಯಿತಿಯವರು ಕೆಲಸವನ್ನು ಮಾಡುತ್ತಾರೆ. ಹಾಗೆಯೇ ತಾಲ್ಲೂಕು ಪಂಚಾಯಿತಿಯಲ್ಲಿ ಏನು ಬರುತ್ತದೆಯೋ ಹಾಗೆಯೇ ಆ ಸದಸ್ಯರುಗಳು ಕೆಲಸವನ್ನು ಮಾಡುತ್ತಾರೆ. ಗ್ರಾಮಪಂಚಾಯಿತಿಯಲ್ಲಿ ಏನು ಬರುತ್ತದೆಯೋ ಗ್ರಾಮ ಪಂಚಾಯಿತಿಯ ಸದಸ್ಯರುಗಳು ಕೆಲಸವನ್ನು ಮಾಡುತ್ತಾರೆ. ಆದರೆ ಶಾಸಕರು ಇದನ್ನು ನೋಡುತ್ತಾ ಕುಳಿತು-ಕೊಳ್ಳಬೇಕೋ ಏನೋ ಗೊತ್ತಿಲ್ಲ. ಏಕೆಂದರೆ ನಾವು ಆರಿಸಿಬಂದಿರುವಂತಹ ವ್ಯಕ್ತಿಗಳು ಇವತ್ತಿನದಿವಸ ಹೆಚ್ಚು ಕಡಿಮೆ ಎಲ್ಲರೂ ನಮ್ಮನ್ನು ಕೇಳುತ್ತಾರೆ. ನೀರು ಇಲ್ಲ, ಕರೆಂಟ್ ಇಲ್ಲ, ಟಿ.ಸಿ. ಸುಟ್ಟುಹೋಗಿದೆ, ಅನೇಕ ರಸ್ತೆಗಳು ಇಲ್ಲ, ಶೌಚಾಲಯಗಳು ಇಲ್ಲ, ಇದನ್ನು ಕೇಳತಕ್ಕಂತಹದ್ದು ಇದೆಯಲ್ಲಾ ಇದರ ಬಗ್ಗೆ ನಾವೇನೂ ಉತ್ತರ ಕೊಡಬೇಕೋ ನನಗಂತೂ ಗೊತ್ತಿಲ್ಲ.

ಛೇರ್ಮನ್ : ಅವರಿಗೆಲ್ಲಾ ಕೊಡುವುದು ನೀವೆಯೇ, ಅದಕ್ಕಾಗಿ ಆಯವ್ಯಯ ಮಂಡಿಸಿರುವುದು. ನೀವೇ ಪಾಸ್ ಮಾಡಿ ಅವರಿಗೆ ಕೊಡುವುದು.

ಶ್ರೀ ಕೆ. ರಘುಪತಿ ಭಟ್ : ಅದು ನಮ್ಮ ಮೂಲಕ ಬರುವುದಿಲ್ಲ, ಅದು ನೇರವಾಗಿ ಸರ್ಕಾರಕ್ಕೆ ಹೋಗುತ್ತದೆ. ನಾನು ಜನರಿಗೆ ಏನು ಭರವಸೆಯನ್ನು ಕೊಟ್ಟಿರುತ್ತೇವೆಯೋ ಅದನ್ನು ಕೊಡುವುದಕ್ಕಾಗುವುದಿಲ್ಲ. ಅದಕ್ಕಾಗಿ ನಾನು ಉಪ ಮುಖ್ಯಮಂತ್ರಿಗಳಲ್ಲಿ ವಿನಂತಿಯನ್ನು

ಮಾಡಿಕೊಳ್ಳುತ್ತೇನೆ. ದಯವಿಟ್ಟು ನಾನು ಕೈಮುಗಿದು ಕೇಳಿಕೊಳ್ಳುತ್ತೇನೆ. ಎಲ್ಲಾ ಶಾಸಕರ ಪರವಾಗಿ ನಾವು 103 ಜನ ಹೊಸ ಶಾಸಕರಿದ್ದೇವೆ. ಅವರ ಪರವಾಗಿ ನಾನು ದಯವಿಟ್ಟು ಕೇಳಿಕೊಳ್ಳುತ್ತೇನೆ. ತಾವು ಇದನ್ನು ಮಾಡಿದರೆ ತಾವು ಎಲ್ಲಿಯಾದರೂ ಕೊಡುವುದಿಲ್ಲವೆಂದರೆ ತಮ್ಮ ಉತ್ತರದಲ್ಲಿ ಹೇಳಿದರೆ ನಾವು ಧರಣಿಯನ್ನು ಕುಳಿತುಕೊಳ್ಳಬೇಕಾಗುತ್ತದೆ. ನಾವು ಮತ್ತೇನೂ ಮಾಡುವಹಾಗಿಲ್ಲ. ನಾವು ಊರಿಗೆ ಹೋಗುವ ಹಾಗಿಲ್ಲ.

ಶ್ರೀ ಹೆಚ್. ಹಾಲಪ್ಪ (ಹೊಸನಗರ) : ಮಾನ್ಯ ಛೇರ್ಮನ್‌ರವರೆ, ಮಾನ್ಯ ಭಟ್‌ರೆ, ಒಂದು ನಿಮಿಷ ತಾಳಿ. ಈ ಶಾಸಕರಿಗೆ ಅನುದಾನ ಕೊಡಬೇಕೆಂದರೆ ಅದು ದೊಡ್ಡ ವಿಷಯವೇನಲ್ಲ. ಸಂಪನ್ಮೂಲಗಳನ್ನು ಕ್ರೋಢೀಕರಿಸಬೇಕು, ಉದಾಹರಣೆಗೆ ಹೇಳುವುದಾದರೆ ಎಕ್ಸೈಸ್‌ನಲ್ಲಿ 300 ಕೋಟಿ ರೂಪಾಯಿಗಳು ಬರುತ್ತದೆಂದು ಹೇಳಿದ್ದಾರೆ. ಈ 300 ಕೋಟಿ ರೂಪಾಯಿಗಳು ಎಲ್ಲಿಂದ ಬರುತ್ತದೆ? ಆ ಕುಡಿಯುವರಿಗೆ ಜಾಸ್ತಿ ರೇಟ್ ಹಾಕಿದ್ದರಿಂದಾಗಿ ನಮಗೆ ಕಂಟ್ರಾಕ್ಟ್‌ದಾರರು ಕಟ್ಟುತ್ತಾರೆ. ಲೈಸೆನ್ಸ್‌ದಾರರು ಇರಬಹುದು, ಮತ್ತೊಂದು ಇರಬಹುದು, ಎಲ್ಲಿಂದ ಬರುತ್ತದೆ? 3000 ಕೋಟಿ ರೂಪಾಯಿಗಳು ಎಕ್ಸೈಸ್‌ನಿಂದ ಬರುತ್ತದೆ ಎಂದು ಹೇಳುತ್ತಾರಲ್ಲಾ ಅದು ಎಲ್ಲಿಂದ ಬರುತ್ತದೆ. ಕನಿಷ್ಠ ಕುಡಿಯುವವರಿಂದ ತೆಗೆದುಕೊಳ್ಳುತ್ತೇವೆ. ಈಗ ಜಾಸ್ತಿ ಮಾಡಿದ್ದರಿಂದ 300 ಕೋಟಿ ರೂಪಾಯಿಗಳು ಬರುತ್ತದೆ, ಆ 300 ಕೋಟಿ ರೂಪಾಯಿಗಳು ಅಷ್ಟೇ; ಕುಡಿಯುವವರ ಮೇಲೆ ರೇಟ್ ಜಾಸ್ತಿ ಮಾಡಿ ನಮಗೆ ಕಟ್ಟುತ್ತಾರೆ. ಈಗ ಇನ್ನೊಂದು ರೂಪಾಯಿಯನ್ನು ಜಾಸ್ತಿ ಮಾಡಿದರೆ 100 ಕೋಟಿ ರೂಪಾಯಿಗಳನ್ನು ಮಾಡಬಹುದು. ಎಕ್ಸೈಸ್‌ನಲ್ಲಿ ಏನು ಜಾಸ್ತಿ ದುಡ್ಡು ಬರುತ್ತದೆಂದು ಹೇಳಿದ್ದಾರೆ, ಅದು ಅವರಿಂದ ಕಸಿದುಕೊಳ್ಳುವ ಹಣವಾಗಿದೆ. ಈ ಹಣವನ್ನು ಕ್ರೋಢೀಕರಿಸುವುದು ಅಷ್ಟೊಂದು ದೊಡ್ಡ ವಿಷಯವಲ್ಲ.

ಶ್ರೀ ಕೆ. ರಘುಪತಿ ಭಟ್ : ಮಾನ್ಯ ಸದಸ್ಯರು ಹೇಳಿದ್ದಕ್ಕೆ ಪೂರಕವಾಗಿ ಇವತ್ತು ನಾವು ಹೊಸದಾಗಿ ಬಂದಿರುವಂತಹ ಶಾಸಕರಾಗಿದ್ದೇವೆ, ನಮಗೆ ಇಲ್ಲಿಯ ಬಗ್ಗೆ ಗೊತ್ತಿಲ್ಲ. 10 ಸಾವಿರ ಕೋಟಿ ರೂಪಾಯಿಗಳ ಹಗರಣವಾಗಿದೆ. 60 ಸಾವಿರ ಕೋಟಿ ರೂಪಾಯಿಗಳ ಹಗರಣವಾಗಿದೆ ಎಂದೆಲ್ಲಾ ಹೇಳುತ್ತಾರೆ. 150 ಕೋಟಿ ರೂಪಾಯಿಗಳನ್ನು ಪ್ರದೇಶಾಭಿವೃದ್ಧಿ ನಿಧಿಗೆ ಸರ್ಕಾರ ಕೊಡುವುದಕ್ಕೆ ಕಷ್ಟವಾಗುತ್ತದೆ ಎಂದು ಹೇಳುವಾಗ ನಮಗೆ ಬಹಳ ವ್ಯಥೆಯಾಗುತ್ತದೆ. ಇನ್ನೊಂದು ಮಾನ್ಯ ಸದಸ್ಯರು ಹೇಳಿದ್ದಕ್ಕೆ ಪೂರಕವಾಗಿ ಇವತ್ತು ಬಹಳ ಗೊಂದಲಮಯವಾಗಿರುವಂತಹ ಇನ್ನೊಂದು ನಗರಪ್ರದೇಶಗಳಿಗೆ ಸ್ವಯಂಘೋಷಿತ ಆಸ್ತಿ ತೆರಿಗೆ ಬಗ್ಗೆ ಇವತ್ತು ಕೆಲವು ಭಾಗದಲ್ಲಿ ಜನರು ತೆರಿಗೆಯನ್ನು ಕಟ್ಟದಿದ್ದಂತಹ ಒಂದು ಪರಿಸ್ಥಿತಿ ಇದ ಪರಿಷ್ಕೃತ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿ ಸಿಸ್ಟಮ್ ಒಳ್ಳೆಯದು ಇರಬಹುದು, ಆದರೆ ಅದರಲ್ಲಿ ಬಹಳಷ್ಟು ಲೂಪ್ ಹೋಲ್ಸ್‌ಗಳು ಇದೆ, ಅದನ್ನು ಸರಿ ಮಾಡಲೇ ಬೇಕು. ಇಲ್ಲವೆಂದರೆ ಜನರು ಯಾರು ಕಟ್ಟುವಂತಹ ವ್ಯವಸ್ಥೆ ಇಲ್ಲ. ಅದಕ್ಕೆ ಬೇಕಾದಷ್ಟು ಇವತ್ತು ಸಮಿತಿಗೆ ರಚನೆಯಾಗಿದೆ. ಅದರ ಬಗ್ಗೆ ಬೇಕಾದಷ್ಟು ಪರಿಹಾರಗಳು ಆಗಿರಬಹುದು.

2.10 ಪಿ.ಎಂ

ಇದನ್ನು ಮುಂದುವರಿಸುತ್ತೀರಾ ಅಥವಾ ಅದಕ್ಕೆ ಪರಿಷ್ಕರಣೆ ಮಾಡಿ ಹಾಕುತ್ತೀರೋ ಗೊತ್ತಿಲ್ಲ. ನಮ್ಮ ಜಿಲ್ಲೆಯಲ್ಲಿ ಮಾತ್ರ ಬಹಳ ಗೊಂದಲಮಯವಾಗಿದೆ. ಇವತ್ತು ಮಂಗಳೂರು

ಮಹಾ ನಗರಪಾಲಿಕೆಯವರು ನಾವು ಯಾವುದೇ ರೀತಿಯಲ್ಲಿ ಸ್ವಯಂ ಘೋಷಿತ ಆಸ್ತಿ ತೆರಿಗೆಯನ್ನು ಜಾರಿಗೆ ತರುವುದಿಲ್ಲ ಎಂದು ಘಂಟಾಘೋಷವಾಗಿ ಹೇಳುತ್ತಿದ್ದಾರೆ. ನಾನು ಉಡುಪಿ ನಗರಸಭೆಯ ಸದಸ್ಯನಾಗಿ ಇಲ್ಲಿಗೆ ಆಯ್ಕೆಯಾಗಿ ಬಂದವನು. ಅಲ್ಲಿ ನಮಗೆ ಜನರು ಒತ್ತಾಯ ಮಾಡುತ್ತಿದ್ದಾರೆ. ಆಡಳಿತ ಪಕ್ಷ ಆಡಳಿತ ಮಾಡುತ್ತಾ ಇರುವಂತಹ ಮಂಗಳೂರು ಮಹಾ ನಗರಪಾಲಿಕೆಯವರು ಸ್ವಯಂ ಘೋಷಿತ ಆಸ್ತಿ ತೆರಿಗೆಯನ್ನು ಜಾರಿಮಾಡುತ್ತಿಲ್ಲ. ನೀವು ವಿರೋಧ ಪಕ್ಷದಲ್ಲಿ ಇರುವವರು ಏಕೆ ಇದನ್ನು ಜಾರಿಗೆ ತರುತ್ತಿದ್ದೀರಿ ಎಂದು ಹೇಳುತ್ತಿದ್ದಾರೆ. ಆದರೆ ನಾವು ಸರ್ಕಾರದಲ್ಲಿ ಅಧಿಕಾರಿಗಳನ್ನು ಕೇಳಿದ ಕೂಡಲೇ ಅವರು ಏನು ಹೇಳುತ್ತಾರೆ ಎಂದರೆ ನೀವು ಜಾರಿಗೆ ತರದಿದ್ದರೂ ಕೂಡ ಅದು ಜಾರಿಗೆ ಬಂದಹಾಗೆಯೇ. ಅದನ್ನು ನೀವು ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ ಎಂದು. ಹೀಗೆ ಗೊಂದಲಮಯವಾದ ಒಂದು ವಾತಾವರಣ ಇಡೀ ರಾಜ್ಯದಲ್ಲಿ ಇರುವುದರಿಂದ ಇದರ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಗಳು ತಮ್ಮ......

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಸಚಿವರಲ್ಲಿ ಒಂದು ವಿಶೇಷ ವಿನಂತಿ. ಇದಕ್ಕೆ ಸಂಬಂಧಪಟ್ಟಂತೆ ಒಂದು ಸಮಿತಿಯನ್ನು ಮಾಡಿ. ಶೀಘ್ರದಲ್ಲೇ ಇದರ ಬಗ್ಗೆ ಒಂದು ಇತ್ಯರ್ಥಕ್ಕೆ ಬರುವ ಅವಶ್ಯಕತೆ ಇದೆ. ಹಲವು ವರ್ಷಗಳಿಂದ ನಾವು ಇದರ ಬಗ್ಗೆ ಸದನದಲ್ಲಿ ಪದೆಪದೇ ಪ್ರಸ್ತಾವನೆಯನ್ನು ಮಾಡಿದರೂ ಕೂಡ ಯಾವುದೇ ಒಂದು ನಿಷ್ಕರ್ಷೆಗೆ ಬರಲಿಕ್ಕೆ ಸಾಧ್ಯವಾಗಲಿಲ್ಲ. ಸ್ಪಷ್ಟವಾಗಿ ಇಂತಿಂಥ ರೀತಿಯಲ್ಲಿ ಲ್ಯಾಂಡ್ ವ್ಯಾಲ್ಯೂನಲ್ಲಿ ಅದಕ್ಕೆ ತೆರಿಗೆ ನಿಗದಿ ಪಡಿಸುವಂಥ ಹಕ್ಕನ್ನು ಅಲ್ಲಿಯ ಸ್ಥಳೀಯವಾಗಿರುವಂತಹ ಸಂಸ್ಥೆಗಳಿಗೆ ಕೊಡುವಂಥಾದ್ದು ಅದೇರೀತಿಯಲ್ಲಿ ಖಾಲಿ ಜಾಗಕ್ಕೆ ಸಂಬಂಧಪಟ್ಟಹಾಗೆ ಯಾವುದರ ಮೇಲೂ ಕೂಡ ತೆರಿಗೆಯನ್ನು ಹಾಕದೇ ಇರುವಂಥಾದ್ದು– ಇಂತಹ ಅನೇಕ ಕೆಲವು ತಿದ್ದುಪಡಿಗಳನ್ನು ಮಾಡುವುದರ ಮೂಲಕ ಅದನ್ನು ಸ್ವೀಕಾರಾರ್ಹ ಮಾಡುವುದಕ್ಕೆ ಸಾಧ್ಯವಿದೆ. ಇದರ ಬಗ್ಗೆ ತಾವು ವಿಶೇಷವಾಗಿ ಆಸಕ್ತಿ ವಹಿಸಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಕೆ. ರಘುಪತಿ ಭಟ್ : ಈ ಖಾಲಿ ಜಾಗಗಳಿಗೆ ತೆರಿಗೆ ಹಾಕುವುದನ್ನು ಜನ ಬಹಳಷ್ಟು ವಿರೋಧಿಸುತ್ತಿದ್ದಾರೆ. ಮತ್ತೆ ಯಾವುದು ಪ್ಲಿಂತ್ ಏರಿಯಾ ಇದೆ, ಅದಕ್ಕೆ ಒಮ್ಮೆ ಟ್ಯಾಕ್ಸ್‌ನ್ನು ಕೊಡುತ್ತಾರೆ. ಅದರ ಅಡಿಯ ಖಾಲಿ ಜಾಗಕ್ಕೂ ಮತ್ತೊಮ್ಮೆ ಟ್ಯಾಕ್ಸ್ ಕೊಡಬೇಕೆಂದು ಹೇಳುವಂತಹ ಒಂದು ಕಾನೂನು ಇದೆ. ಅದನ್ನು ತೆಗೆದು ಸ್ವಾಭಾವಿಕವಾಗಿ ಸ್ವಯಂ ಘೋಷಿತ ಆಸ್ತಿ ತೆರಿಗೆಯನ್ನು ಕೆಲವು ಪರಿಷ್ಕರಣೆ ಮಾಡಿ ಮಾಡಿದರೆ ಖಂಡಿತವಾಗಿಯೂ ಜನರು ಒಪ್ಪುತ್ತಾರೆ. ಅದನ್ನು ಸ್ವಾಗತ ಮಾಡುವಂತಹ ಬಹಳಷ್ಟು ಜನರು ಇದ್ದಾರೆ. ಎಲ್ಲರೂ ಇದನ್ನು ವಿರೋಧ ಮಾಡುತ್ತಾರೆ ಅಂತಲ್ಲ. ಉಡುಪಿ ನಗರಸಭೆಯ ನಮ್ಮ ಒಂದು ಅನುಭವದ ಪ್ರಕಾರ ಶೇಕಡಾ ಎಪ್ಪತ್ತರಷ್ಟು ಜನ ಸ್ವಯಂ ಘೋಷಿತ ಆಸ್ತಿ ತೆರಿಗೆಯನ್ನು ಸ್ವಾಗತಿಸಿ ಒಮ್ಮೆಗೇ ಕಟ್ಟಿದಂಥ ಜನರೂ ಕೂಡ ಇದ್ದಾರೆ. ಅದನ್ನು ಪೂರ್ತಿಯಾಗಿ ಹಾಳು ಎಂದು ಹೇಳುವುದಿಲ್ಲ. ಆದರೆ ಇದಕ್ಕೆ ಸ್ವಲ್ಪ ಪರಿಷ್ಕರಣ ಮಾಡಿದರೆ ಖಂಡಿತವಾಗಿಯೂ ಅವರಲ್ಲಿ ಬದಲಾವಣೆಯನ್ನು ತರಬಹುದು. ಇದರ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಗಳು ದಯವಿಟ್ಟು ಗಮನಕೊಟ್ಟು ಸೂಕ್ತ ಬದಲಾವಣೆಯನ್ನು ತರಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನೊಂದು ಈ ಬಜೆಟ್‌ನಲ್ಲಿ ಬಹಳ ಬೇಸರವಾಗುವಂತಹ ಸಂಗತಿ ಎಂದರೆ ನಮ್ಮ ರಾಜ್ಯದಲ್ಲಿ ಪ್ರವಾಸೋದ್ಯಮಕ್ಕೆ ಯಾವುದೇ ಒಂದು ಒತ್ತನ್ನು ಕೊಟ್ಟಹಾಗೆ ನನಗೆ

ಕಾಣಲಿಲ್ಲ. ನಮ್ಮ ರಾಜ್ಯಸ್ವವನ್ನು ಹೆಚ್ಚಿಸಿಕೊಳ್ಳಬೇಕು ಎಂದರೆ ಪ್ರವಾಸೋದ್ಯಮಕ್ಕೆ ಹೆಚ್ಚು ಒತ್ತನ್ನು ಕೊಡಬೇಕು. ಪ್ರವಾಸೋದ್ಯಮವನ್ನು ಬೆಳೆಸಬೇಕಾದರೆ ನಮ್ಮ ಉಡುಪಿಯಂತಹ ನಗರಗಳಲ್ಲಿ ಪ್ರವಾಸೋದ್ಯಮಕ್ಕೆ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸತಕ್ಕಂಥ ದೃಷ್ಟಿಯಲ್ಲಿ ಸರ್ಕಾರ ಏನಾದರೂ ಕಾರ್ಯಕ್ರಮ ತೆಗೆದುಕೊಂಡರೆ ಒಳ್ಳೆಯದು. ಸಮುದ್ರ ಕಿನಾರೆಗೆ ಜನರನ್ನು ಆಕರ್ಷಿಸುವಂಥಾದ್ದು ಆಗಬೇಕು. ಸೆಂಟ್ ಮೇರೀಸ್ ದ್ವೀಪ ಎನ್ನತಕ್ಕಂಥಾದ್ದು ನಮ್ಮಲ್ಲಿದೆ. ಅಲ್ಲಿಗೆ ಒಂದು ಯೋಜನೆಯನ್ನು ಹಾಕಿಕೊಂಡರೆ ಒಳ್ಳೆಯದು. ಅದೇರೀತಿಯಲ್ಲಿ ಯಾತ್ರಾಸ್ಥಳಗಳು ಕೂಡ ಇರಬಹುದು. ಇದಕ್ಕೆ ಏನಾದರೂ ಒಂದು ಯೋಜನೆಯನ್ನು ನಾವು ಹಾಕಿಕೊಂಡರೆ ಖಂಡಿತವಾಗಿಯೂ ಹೊರರಾಜ್ಯಗಳಿಂದ, ಹೊರ ದೇಶಗಳಿಂದ ಜನರು ನಮ್ಮಲ್ಲಿಗೆ ಬಂದು ಅದರಿಂದ ಪ್ರಯೋಜನ ಆಗಬಹುದು. ಇವತ್ತು ಪ್ರವಾಸೋದ್ಯಮಕ್ಕೆ ಸಂಬಂಧಪಟ್ಟಂತೆ ಯಾವುದೇ ಒಂದು ಆದ್ಯತೆ ನನಗೆ ಈ ಬಜೆಟ್‌ನಲ್ಲಿ ಕಾಣಲಿಲ್ಲ. ಅದು ನನಗೆ ಬಹಳ ಬೇಸರವನ್ನು ಉಂಟುಮಾಡಿತು. ಅದುಬಿಟ್ಟು ಇವತ್ತು ಹೋಟೆಲ್‌ಗಳಲ್ಲಿ 150 ರೂಪಾಯಿ ಕೋಣೆಗೂ ಟ್ಯಾಕ್ಸ್ ಹಾಕುವಂಥಾದ್ದನ್ನು ಮಾಡಿದ್ದೀರಿ. ಇದಂತೂ ಖಂಡನೀಯವೆಂದು ನನಗೆ ಕಾಣುತ್ತದೆ. ಏಕೆಂದರೆ 150 ರೂಪಾಯಿ ಬಾಡಿಗೆ ಕೊಟ್ಟು ಹೋಟೆಲ್‌ನಲ್ಲಿ ಉಳಿದುಕೊಳ್ಳುವವರೆಲ್ಲರೂ ಬಡವರೇ ಆಗಿರುತ್ತಾರೆ. ದೊಡ್ಡವರಿದ್ದರೆ 600–800 ರೂಪಾಯಿ ಬಾಡಿಗೆ ಇರುವ ಹೋಟೇಲುಗಳಿಗೆ ಹೋಗುತ್ತಾರೆಯೇ ವಿನಹ 150 ರೂಪಾಯಿ ಬಾಡಿಗೆಗೆ ಹೋಗುವವರು ಬಹಳ ಬಡವರೇ ಇರುತ್ತಾರೆ. ಅವರಿಗೂ ಕೂಡ ಟ್ಯಾಕ್ಸ್ ಹಾಕಿದರೆ ಹೋಟೆಲ್‌ನವರಿಗೆ ಯಾವುದೇ ಟ್ಯಾಕ್ಸ್ ಹೋಗುವುದಿಲ್ಲ. ಟ್ಯಾಕ್ಸ್ ನೇರವಾಗಿ ಜನರಿಗೇ ಹೋಗುವುದರಿಂದ ಇದನ್ನು ವಿರೋಧಿಸಬೇಕಾಗುತ್ತದೆ. ದಯವಿಟ್ಟು ಮಾನ್ಯ ಉಪ ಮುಖ್ಯಮಂತ್ರಿಗಳು ಇದರ ಬಗ್ಗೆ 150 ರೂಪಾಯಿ ಕೋಣೆ ಬಾಡಿಗೆಗೆ ಟ್ಯಾಕ್ಸ್ ಹಾಕಿದರೆ ಜನರಿಗೆ ತೊಂದರೆಯಾಗಬಹುದು. ಅದನ್ನು ದಯವಿಟ್ಟು ಪರಿಷ್ಕರಣ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಛೇರ್ಮನ್ (ಶ್ರೀ ಎ.ಟಿ. ರಾಮಸ್ವಾಮಿ) : ಸಮಯ ಆಯಿತು. ಬೇಗ ಮುಗಿಸಿ. ಹದಿನೈದು ನಿಮಿಷ ಆಯಿತು.

ಶ್ರೀ ಕೆ. ರಘುಪತಿ ಭಟ್ : ಐದು ನಿಮಿಷ ಕೂಡ ಆಗಿಲ್ಲ. ಒಂದೊಂದು ಗಂಟೆ ಮಾತನಾಡಿದವರೂ ಇದ್ದಾರೆ. ದಯಮಾಡಿ ಸ್ವಲ್ಪ ಅವಕಾಶ ಕೊಡಬೇಕು. ನನ್ನ ಹತ್ತಿರ ವಿಷಯಗಳು ಇವೆ. ಇನ್ನು ಮೂರು–ನಾಲ್ಕು ವಿಷಯಗಳನ್ನು ಹೇಳಿ ನಾನು ಮುಗಿಸುತ್ತೇನೆ. ನಾನು ತಮ್ಮ ಮೂಲಕ ಮಾನ್ಯ ಉಪಮುಖ್ಯಮಂತ್ರಿಗಳನ್ನು ವಿನಂತಿ ಮಾಡಿಕೊಳ್ಳುವುದು ಏನೆಂದರೆ, ಇವತ್ತು ನಮ್ಮ ರಾಜ್ಯದಲ್ಲಿ ಬಹಳಷ್ಟು ನಿವೇಶನ ರಹಿತರು ಇದ್ದಾರೆ. ಅವರಿಗೆ ಇದರಲ್ಲಿ ಯಾವುದೇ ಸವಲತ್ತನ್ನು ಕೊಟ್ಟಿದ್ದು ಕಾಣಲಿಲ್ಲ. ಇವತ್ತು ನಿವೇಶನ ರಹಿತರಿಗೆ ಸರ್ಕಾರದಿಂದ ಒಂದು ಕಾರ್ಯಕ್ರಮವನ್ನು ರೂಪಿಸಿ ಅವರಿಗೆ ಸರ್ಕಾರದ್ದೇ ಜಾಗಗಳು. ಹಾಳಾದಂಥಾದ್ದು ಬಹಳಷ್ಟು ಯಾರಿಗೂ ಪ್ರಯೋಜನ ಇಲ್ಲದಂಥ ಜಾಗಗಳು ಇವೆ. ಈಗ ನವಗ್ರಾಮ ಯೋಜನೆಯೆಂದು ಮಾಡಿದ್ದಾರೆ. ಅದರ ಮೂಲಕ ನಿವೇಶನ ರಹಿತರಿಗೆ ಕೊಡುವಂತಹ ವ್ಯವಸ್ಥೆಯನ್ನು ಮಾಡುವುದರ ಬಗ್ಗೆ ಬಜೆಟ್‌ನಲ್ಲಿ ಏನಾದರೂ ಒಂದು ಅವಕಾಶವನ್ನು ಮಾಡಬೇಕು. ನಾನು ಒಂದು ತಮ್ಮ ಗಮನಕ್ಕೆ ತರುವುದು ಏನೆಂದರೆ ಇವತ್ತು ನವಗ್ರಾಮ ಎಂದು ಬೇರೆಬೇರೆ ಯೋಜನೆಗಳು ಇವೆ. ಇವತ್ತು ಸರ್ಕಾರಿ ಜಾಗ ಇಲ್ಲದಿದ್ದರೂ ಖಾಸಗಿ ಜಾಗವನ್ನು ಸರ್ಕಾರಿ ಖರೀದಿ ಮಾಡಿ ರಹಿತರಿಗೆ ಹಂಚುವಂತಹ ವ್ಯವಸ್ಥೆ ಇದೆ. ಆದರೆ

ಇವತ್ತು ಅಧಿಕಾರಿಗಳು ಇದರ ಬಗ್ಗೆ ಆಸಕ್ತಿಯನ್ನು ತೋರುತ್ತಿಲ್ಲ. ಇದಕ್ಕೆ ಕಾರಣ ಏನೆಂದರೆ, ಸರ್ಕಾರ ಅಧಿಕಾರಿಗಳಿಗೆ ಒಂದು ಟಾರ್ಗೆಟ್ ಅಂತ ಕೊಟ್ಟಿಲ್ಲ. ಟಾರ್ಗೆಟ್ ಕೊಟ್ಟಾಗ ಮಾತ್ರ ಇವತ್ತು ಅಧಿಕಾರಿಗಳು ಕೆಲಸ ಮಾಡುವುದನ್ನು ನಾವು ನೋಡುತ್ತೇವೆ. ನೀವು ವರ್ಷಕ್ಕೆ ಇಷ್ಟು ನಿವೇಶನ ರಹಿತರಿಗೆ ನಿವೇಶನಗಳನ್ನು ಕೊಡಬೇಕು ಎಂದು ಸರ್ಕಾರ ಟಾರ್ಗೆಟ್ ಮಾಡಿದರೆ ಆಗ ಎಲ್ಲರೂ ಹುಡುಕಿಕೊಂಡು ಹೋಗುತ್ತಾರೆ. ಇಲ್ಲದಿದ್ದರೆ ಗ್ರಾಮ ಮಟ್ಟದ ವಿಲೇಜ್ ಅಕೌಂಟೆಂಟ್ ಇರಬಹುದು. ರೆವಿನ್ಯೂ ಇನ್‌ಸ್ಪೆಕ್ಟರ್ ಇರಬಹುದು, ಜಿಲ್ಲಾಧಿಕಾರಿಗಳು ಇರಬಹುದು. ಅವರು ಇದರ ಬಗ್ಗೆ ಅಸಡ್ಡೆ ವಹಿಸುತ್ತಾರೆ. ನಿವೇಶನ ರಹಿತರಿಗೆ ನಿವೇಶನಗಳನ್ನು ಕೊಡುವ ಬಗ್ಗೆ ಅವರು ಯಾವುದೇ ಆಸಕ್ತಿಯನ್ನು ತೋರಿಸುವುದಿಲ್ಲ. ಸರ್ಕಾರ ನಿಗದಿತವಾಗಿ ಒಂದು ಕ್ಷೇತ್ರದಲ್ಲಿ ಇಷ್ಟು ಜನ ನಿವೇಶನ ರಹಿತರಿಗೆ ನಿವೇಶನಗಳನ್ನು ಕೊಡಿಸಬೇಕು ಎಂದು ಮಾಡಿದರೆ ಎಲ್ಲಿ ಸರ್ಕಾರಿ ಜಾಗ ಖಾಲಿ ಇದೆಯೆಂದು ಅಧಿಕಾರಿಗಳು ಹುಡುಕಿಕೊಂಡು ಹೋಗುವ ವ್ಯವಸ್ಥೆಯಾಗುತ್ತದೆ. ಇದರ ಬಗ್ಗೆ ತಾವು ದಯವಿಟ್ಟು ಗಮನಹರಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಆಮೇಲೆ ವಿದ್ಯುತ್ ಇಲಾಖೆಗೆ ಸಂಬಂಧಪಟ್ಟಂತೆ ಮೂರು ವಿಷಯಗಳು ಇವೆ. ಒಂದನ್ನು ಈಗಾಗಲೇ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಕೃಷಿ ಪಂಪ್‌ಗೆ ನಮ್ಮಲ್ಲಿ ಮೆಸ್ಕಾಂ ಎಂದು ಹೇಳುವಂಥ ಸಂಸ್ಥೆಯಲ್ಲಿ 25 ಸಾವಿರ ರೂಪಾಯಿ ಡಿಪಾಸಿಟ್ ತೆಗೆದುಕೊಂಡರೆ ಮಾತ್ರ ಕೃಷಿ ಪಂಪ್‌ನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ. ಇದು ಜಾರಿಗೆ ಬಂದು ಆರೇಳು ತಿಂಗಳಾದ ನಂತರ ನಮ್ಮ ಇಂಧನ ಸಚಿವರು ಅಲ್ಲಿ ಬಂದಂಥ ಸಂದರ್ಭದಲ್ಲಿ ರಿವ್ಯೂ ಮೀಟಿಂಗ್ ಮಾಡುವಾಗ ಕೇಳಿದೆವು ಏನೆಂದರೆ ಈ ಕಾನೂನು ಬಂದನಂತರ ಎಷ್ಟು ಕೃಷಿ ಪಂಪುಗಳನ್ನು ಹೊಸದಾಗಿ ಇಲ್ಲಿ ಅಳವಡಿಸಿದ್ದಾರೆ ಎಂದು. ಅಂದರೆ ಎಷ್ಟು ಜನರು ಇದನ್ನು ಹಾಕಿದ್ದಾರೆ ಅಂತ. ಆದರೆ ಒಂದೇಒಂದು ಪಂಪನ್ನೂ ಕೂಡ ಯಾರೂ ಹಾಕಿರಲಿಲ್ಲ. ಅಂದರೆ 25 ಸಾವಿರ ರೂಪಾಯಿ ಕೊಟ್ಟು ಯಾರೂ ಇವತ್ತು ಕೃಷಿ ಪಂಪ್‌ನ್ನು ಅಳವಡಿಸುವಂಥ ವ್ಯವಸ್ಥೆಯಲ್ಲಿ ಇಲ್ಲ. ಏಕೆಂದರೆ ಇವತ್ತು ನಮ್ಮ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಭಾಗದಲ್ಲಿ ಯಾರಿಗಾದರೂ ಐದು ಎಕರೆ ಜಮೀನು ಇದ್ದರೆ ಐದು ಪಂಪುಗಳು ಬೇಕಾಗುತ್ತದೆ. ಒಂದೇ ಪಂಪ್‌ನಲ್ಲಿ ನಡೆಸುವುದಕ್ಕೆ ಆಗುವುದಿಲ್ಲ. ಏಕೆಂದರೆ ನಮ್ಮಲ್ಲಿ ನೀರಾವರಿ ಇಲ್ಲ. ನಮ್ಮಲ್ಲಿ ಯಾವುದೇ ಬಾವಿಯಿಂದ ಅಥವಾ ಕೆರೆಯಿಂದ ನೀರು ಎತ್ತಿಕೊಂಡು ನಾವು ಉಪಯೋಗ ಮಾಡಬೇಕು. ಒಂದೊಂದು ಕಡೆ 25 ಸಾವಿರ ರೂಪಾಯಿ ಡಿಪಾಸಿಟ್ ಕೊಟ್ಟುಕೊಂಡು ಪಂಪ್‌ಗಳನ್ನು ಮಾಡುತ್ತಾ ಕುಳಿತುಕೊಂಡರೆ ನಮ್ಮ ಹತ್ತಿರ ಖಂಡಿತ ಮಾಡುವುದಕ್ಕೆ ಆಗುವುದಿಲ್ಲ. ದಯಮಾಡಿ ತಾವು ರೈತರ ಪರವಾಗಿ ಇರುವವರು. ಏಕೆಂದರೆ ಎಲ್ಲಿ ಕಂಬ ಇದೆ, ಅಲ್ಲಿಗೆ ಮಾತ್ರ ಕನೆಕ್ಷನ್ ಕೊಡಬೇಕು. ಏನೂ ಟಿ.ಸಿ. ಇಲ್ಲದೆ, ಯಾವುದೇ ಕಂಬ ಹಾಕದೆ ಈ ವ್ಯವಸ್ಥೆಯನ್ನು ಮಾಡಬೇಕಾದರೆ ಇವತ್ತು ಮೆಸ್ಕಾಮ್‌ನವರು 25 ಸಾವಿರ ರೂಪಾಯಿಗಳನ್ನು ಕೇಳುತ್ತಿದ್ದಾರೆ. ಇದನ್ನು ನಾವು ಮಾನ್ಯ ಸಚಿವರು ನಮ್ಮಲ್ಲಿಗೆ ಬಂದಾಗ ಅವರ ಗಮನಕ್ಕೆ ತಂದಿದ್ದೆವು. ಅವರು ಅದನ್ನು ಪರಿಷ್ಕರಣ ಮಾಡುತ್ತೇನೆ ಎಂದು ಹೇಳಿದ್ದರು. ದಯವಿಟ್ಟು ಮಾನ್ಯ ಉಪಮುಖ್ಯಮಂತ್ರಿಗಳು ಇದರ ಬಗ್ಗೆ ಗಮನಹರಿಸಬೇಕು. ಇನ್ನೊಂದು ದೊಡ್ಡ ಸಮಸ್ಯೆ ಇರುವಂಥಾದ್ದು ಎಂದರೆ ಅಲ್ಲಿ ವಿದ್ಯುತ್ ತಂತಿಕಂಬ ಮತ್ತು ವಿದ್ಯುತ್ ದೀಪಗಳನ್ನು ಅಳವಡಿಸುವ ಬಗ್ಗೆ ಇವತ್ತು ಸರ್ಕಾರ ಒಂದು ಹೊಸ ಕಾನೂನನ್ನು ತಂದಿದೆ. ನಗರಸಭೆ ವ್ಯಾಪ್ತಿಯಲ್ಲಿ ಇದ್ದುದನ್ನು ಈಗ ಟೌನ್ ಪ್ಲಾನಿಂಗ್‌ಗೂ ಅದನ್ನು ವಿಸ್ತರಿಸಿದ್ದಾರೆ. ಟೌನ್ ಪ್ಲಾನಿಂಗ್

ಏರಿಯಾ ಬರುವಂತಹ ಕಡೆಗಳಲ್ಲಿ ವಿದ್ಯುತ್ ಕಂಬಗಳನ್ನು ಅಳವಡಿಸಬೇಕು ಅಂತಾದರೆ ಹತ್ತು ಪರ್ಸೆಂಟ್ ಮೆಸ್ಕಾಮ್‌ಗೆ ಕಟ್ಟಿ ಮತ್ತೆ ನೂರು ಪರ್ಸೆಂಟ್ ಕೆಲಸವನ್ನು ಗ್ರಾಮ ಪಂಚಾಯತಿಯವರೇ ಮಾಡಬೇಕು ಎನ್ನುವಂತಹ ಹೊಸ ಕಾನೂನನ್ನು ಆರೇಳು ತಿಂಗಳ ಹಿಂದೆ ತಂದಿದ್ದಾರೆ. ಇದು ಬಹಳ ಅನ್ಯಾಯಭರಿತವಾದ ಕಾನೂನು. ಏಕೆಂದರೆ ಗ್ರಾಮ ಪಂಚಾಯತಿಗೆ ಟೌನ್ ಪ್ಲಾನಿಂಗ್ ಸಂಬಂಧಪಟ್ಟಿದ್ದು ಇರಬಹುದು. ಆದರೆ ಅವರಿಗೆ ಯಾವುದೇ ಅನುದಾನ ಇಲ್ಲ ಮತ್ತು ಯಾವುದೇ ಸಂಪನ್ಮೂಲಗಳನ್ನು ಅವರಿಂದ ಕ್ರೋಢೀಕರಿಸುವ ವ್ಯವಸ್ಥೆಗಳು ಇಲ್ಲ. ಇವತ್ತು ಗ್ರಾಮ ಪಂಚಾಯತಿಗಳ ವ್ಯಾಪ್ತಿಗೆ ಟೌನ್ ಪ್ಲಾನಿಂಗ್ ಬರುವುದರಲ್ಲಿ ನೂರು ಪರ್ಸೆಂಟ್ ಈ ಕೆಲಸ ಮಾಡಬೇಕು ಎಂದರೆ ಒಂದೊಂದು ಗ್ರಾಮ ಪಂಚಾಯತಿ ಸದಸ್ಯರು ಎಲೆಕ್ಟ್ ಆಗಿ ಬರುವಾಗ ಅಲ್ಲಲ್ಲಿ ಸ್ಟ್ರೀಟ್ ಲೈಟ್ ಹಾಕಿಸುತ್ತೇನೆ, ಇಲ್ಲಿ ಕಂಬ ಹಾಕುತ್ತೇನೆ ಎನ್ನುವಂಥ ಭರವಸೆಯನ್ನು ಕೊಡುತ್ತಾರೆ. ಇವತ್ತು ನನ್ನ ಕ್ಷೇತ್ರದಲ್ಲಿ ಹನ್ನೊಂದು ಪಂಚಾಯತಿಗಳು ಬರುತ್ತವೆ. ಅವುಗಳಲ್ಲಿ ಏಳು ಟೌನ್ ಪ್ಲಾನಿಂಗ್ ಏರಿಯಾಕ್ಕೆ ಬರುವಂತಹ ಪಂಚಾಯತಿಗಳು. ಒಂದೇ ಒಂದು ಕಡೆ ಈ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಇವತ್ತು ಹತ್ತು ಪರ್ಸೆಂಟ್ ಮೆಸ್ಕಾಮ್‌ಗೆ ಕಟ್ಟಿ ಈ ಕೆಲಸವನ್ನು ಏನು ನಗರಸಭೆಗಳಲ್ಲಿ ಮಾಡುವಂತಹ ವ್ಯವಸ್ಥೆ ಇದೆ. ಅದೇ ವ್ಯವಸ್ಥೆಯನ್ನು ಗ್ರಾಮಪಂಚಾಯತಿಗಳಿಗೂ ಅಳವಡಿಸಿ ತಂದಿರುವಂಥಾದ್ದು ಖಂಡಿತವಾಗಿಯೂ ಒಪ್ಪತಕ್ಕಂಥಾದ್ದು ಅಲ್ಲ. ಇನ್ನೊಂದು ಬಹಳ ದೊಡ್ಡ ಸಮಸ್ಯೆ ಇರುವಂಥಾದ್ದು ಲೈನ್‌ಮನ್‌ಗಳದ್ದು, ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಲೈನ್‌ಮನ್‌ಗಳಿಲ್ಲ. ಸುಮಾರು 22 ಜನರು ಇರುವಲ್ಲಿ 8 ಜನ ಇದ್ದಾರೆ ಎಂದು ಹೇಳುತ್ತಾರೆ. ನಾನು ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುವುದು ಏನೆಂದರೆ, ಇವತ್ತು ನಮ್ಮ ಸೇವೆಗಾಗಿ ಇರುವಂತಹ ಕ್ಷೇತ್ರಗಳು ಇವೆ. ಯಾವುದೆಂದರೆ ಆಸ್ಪತ್ರೆಗಳು. ಇವತ್ತು ಅಲ್ಲಿ ಸಮೇತ ಗುತ್ತಿಗೆ ಆಧಾರದ ಮೇಲೆ ನರ್ಸ್ ಮತ್ತು ಕ್ಲೀನಿಂಗ್‌ನವರನ್ನು ತೆಗೆದುಕೊಳ್ಳುತ್ತೇವೆ. ಆದರೆ ಅಲ್ಲಿ ಸರ್ಕಾರಕ್ಕೆ ಏನೂ ಆದಾಯ ಇಲ್ಲ. ಆದರೆ ಇವತ್ತು ಮೆಸ್ಕಾಮ್‌ನಲ್ಲಿ ಹಾಗಲ್ಲ. ಒಟ್ಟಾರೆಯಾಗಿ ನೋಡುವಾಗ ವಿದ್ಯುತ್ ಇಲಾಖೆಯಲ್ಲಿ ನಷ್ಟ ಇರಬಹುದು. ಆದರೆ ನಾವು ಯಾರು ವಿದ್ಯುತ್‌ನ್ನು ಖರೀದಿ ಮಾಡುವವರು ಇದ್ದೇವೆ, ನಾವು ನಿಮಗೆ ದುಡ್ಡು ಕೊಟ್ಟು ತೆಗೆದುಕೊಳ್ಳುವರು. ದುಡ್ಡು ಕೊಟ್ಟು ವಿದ್ಯುತ್ ತೆಗೆದುಕೊಳ್ಳುವುದು ಇರುವಾಗ ಅಲ್ಲಿ ಲೈನ್‌ಮನ್‌ಗಳು ಇಲ್ಲವೆಂದು ಹೇಳುತ್ತಾರೆ. ಏಕೆ ನೀವು ಗುತ್ತಿಗೆ ಆಧಾರದ ಮೇಲೆ ಲೈನ್‌ಮನ್‌ಗಳನ್ನು ಸರ್ಕಾರದಿಂದ ನೇಮಿಸಿಕೊಳ್ಳಬಾರದು? ನಾವು ಸೇವೆ ಎಂದರೆ ಧರ್ಮಕ್ಕೆ ಮಾಡುವಂಥಾದ್ದಲ್ಲ. ಜನರಿಂದ ಹಣ ತೆಗೆದುಕೊಂಡು ಕೊಡುವಂತಹ ಸೇವೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ಹೆಚ್ಚು ಗಮನ ಹರಿಸಬೇಕು ಮತ್ತು ಗುತ್ತಿಗೆ ಆಧಾರದಮೇಲೆ ಈ ಲೈನ್‌ಮನ್‌ಗಳ ನೇಮಕಾತಿಯನ್ನು ಮಾಡಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ, ಇನ್ನು, ನನಗೆ ಈ ಬಜೆಟ್‌ನಲ್ಲಿ ಬಹಳ ಬೇಸರವಾದದ್ದು ಎಂದರೆ ಕರಾವಳಿ ಜಿಲ್ಲೆಗಳ ಬಗ್ಗೆ. ನಮ್ಮ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಬಗ್ಗೆ ಸಂಪೂರ್ಣವಾಗಿ ಕಡೆಗಣಿಸಿದ್ದಾರೆ ಎಂದು ನಾನು ಮಾನ್ಯ ಉಪಮುಖ್ಯಮಂತ್ರಿಗಳಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾನು ಮೊನ್ನೆ ತಮ್ಮ ಬಜೆಟ್ ಭಾಷಣ ಮುಗಿದ ನಂತರ ನಮ್ಮ ಊರಿಗೆ ಹೋದಾಗ ನಮ್ಮ ಹಿರಿಯರು ಹೇಳುತ್ತಿದ್ದರು ಏನೆಂದರೆ ನಮ್ಮ ಜಿಲ್ಲೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದಾರೆ ಎಂದು. ಏಕೆಂದರೆ ಇದಕ್ಕೆ ರಾಜಕೀಯ ಕಾರಣಗಳು ಇರಬಹುದು ಎಂದು ಹೇಳ್ತಾಇದ್ದರು. ನಮ್ಮ ಎರಡು ಜಿಲ್ಲೆಗಳಲ್ಲಿ 15 ಕ್ಷೇತ್ರಗಳು ಬರುತ್ತವೆ. ಇವುಗಳಲ್ಲಿ 11 ಬಿ.ಜೆ.ಪಿ. ಶಾಸಕರು ಬರುತ್ತಾರೆ. ನ[illegible]ರೇ ಜನ ಕಾಂಗ್ರೆಸ್‌ನವರು ಬಂದಿದ್ದಾರೆ.

ಮಾನ್ಯ ಜಯಪ್ರಕಾಶ್ ಹೆಗ್ಡೆಯವರೊಬ್ಬರು ಮಾತ್ರ ಪಕ್ಷೇತರರಾಗಿ ಗೆದ್ದಿದ್ದಾರೆ. ಆದ್ದರಿಂದ, ಇಲ್ಲಿ ಜನತಾ ದಳದವರು ಮತ್ತು ಕಾಂಗ್ರೆಸ್‌ನವರು ಯಾರೂ ಇಲ್ಲದ್ದರಿಂದ ಕರಾವಳಿ ಮತ್ತು ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯನ್ನು ನಿರ್ಲಕ್ಷಿಸಿದ್ದರೆಂದು ಹಿರಿಯ ಜನ ಹೇಳುತ್ತಾ ಇದ್ದರು. ಅಂದರೆ, ಯಾವುದೇ ಯೋಜನೆಗಳು ನಮ್ಮ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗೆ ಸಂಬಂಧಪಟ್ಟಂತೆ ಇಲ್ಲ. ನಮ್ಮ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಗೋಡಂಬಿ, ಇದನ್ನು ಮೂರು ಪರ್ಸೆಂಟ್ ಏರಿಸಿದ್ದಾರೆ. ಸುಗಂಧಿ ಸುಪಾರಿಗೆ ಮೂರು ಪರ್ಸೆಂಟ್ ಏರಿಸಿದ್ದಾರೆ. ಉಡುಪಿ ಮತ್ತು ಕಾರ್ಕಳದಲ್ಲಿ ಗೋಡಂಬಿ ಜಾಸ್ತಿ ಬೆಳೆಯುತ್ತೇವೆ. ಅದರಿಂದಲೇ ಆದಾಯ ತೆಗೆದುಕೊಂಡು ಜೀವನ ನಡೆಸುವವರು ಇದ್ದಾರೆ. ಇದರಿಂದಾಗಿ ನಮಗೆ ತೊಂದರೆಯಾಗುತ್ತದೆ. ಇನ್ನೊಂದು ಸಣ್ಣದಾಗಿ ಮಾರಾಟ ಮಾಡುವಂಥ ಬ್ರಾಂಡ್ ಇಲ್ಲದ ಕೊಬ್ಬರಿ ಎಣ್ಣೆಗೆ ಶೇಕಡ 16 ರಂತೆ ಏರಿಸಿದ್ದಾರೆ. ಇವತ್ತು ನಮ್ಮಲ್ಲಿ ಜಾಸ್ತಿ ಇರುವಂಥಾದ್ದು ತೆಂಗಿನ ಕಾಯಿ ಕೃಷಿ. ಭತ್ತದಂಥ ಲಾಭದಾಯಕ ಕೃಷಿಯನ್ನು ಯಾರೂ ಮಾಡುತ್ತಾ ಇಲ್ಲ. ಎಲ್ಲರೂ ಜಮೀನು ಖಾಲಿ ಬಿಡಬಾರದು ಎಂದು ಬೇಸಾಯ ಮಾಡುತ್ತಿದ್ದಾರೆಯೇ ವಿನಹ ಯಾರಿಗೂ ಅದರಿಂದ ಲಾಭ ಇಲ್ಲ. ಏನಾದರೂ ಅಲ್ಪಸ್ವಲ್ಪ ಲಾಭ ಇರುವಂಥಾದ್ದು ಅಡಿಕೆಯಿಂದ, ಗೇರು ಬೀಜದಿಂದ ಇನ್ನೊಂದು ತೆಂಗಿನ ಕಾಯಿಯಿಂದ. ಇವು ಮೂರಕ್ಕೂ ಭಾರಿ ಹೊಡೆತ ಬಿದ್ದಿದೆ. ಇದನ್ನು ದಯವಿಟ್ಟು ನಮ್ಮ ಉಪ ಮುಖ್ಯಮಂತ್ರಿಗಳು ಪರಿಷ್ಕರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನೊಂದು ನನ್ನ ವಿನಂತಿ ಎಂದು ಹೇಳಿದರೆ, ಮೂರ್ತೇದಾರರು. ಈ ಮೂರ್ತೇದಾರರು ನಮ್ಮ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಬಹಳಷ್ಟು ಜನ ಇದ್ದಾರೆ. ಅವರ ಬಗ್ಗೆ ಯಾವುದೇ ಯೋಜನೆ ಇಲ್ಲ. ಅವರಿಗೆ 10 ಕೋಟಿ ರೂಪಾಯಿಗಳ ಒಂದು ಪ್ಯಾಕೇಜ್ ಕೊಡಬೇಕೆಂದು ಬಹಳಷ್ಟು ಸಮಯದಿಂದ ಒತ್ತಾಯ ಮಾಡುತ್ತಿದ್ದಾರೆ. ಇವತ್ತು ಅವರಿಗೆ ಲೀಟರ್ ಫೀ ಯನ್ನು ಮನ್ನಾ ಮಾಡಿದರೆ ಎಲ್ಲಾ ಒಪ್ಪಿಕೊಳ್ಳುತ್ತಾರೆ. ಆದರೆ, ಆ ಮೂರ್ತೇದಾರರಿಗೆ 10 ಕೋಟಿ ರೂಪಾಯಿಗಳ ಒಂದು ಪ್ಯಾಕೇಜನ್ನು ಮಾಡಬೇಕು. ಸುಮಾರು 10 ಸಾವಿರ ಕುಟುಂಬಗಳು ಅದರಿಂದ ಜೀವನ ನಡೆಸುತ್ತಿದ್ದಾರೆ. ಇನ್ನೊಂದು ಅಬಕಾರಿ ಇಲಾಖೆ ಮಾನ್ಯ ಉಪ ಮುಖ್ಯಮಂತ್ರಿಗಳ ವ್ಯಾಪ್ತಿಗೇ ಬರುತ್ತಿರುವುದರಿಂದ, ಇವತ್ತು ಈ ಮೂರ್ತೇದಾರರನ್ನು, ಸೇಂದಿಯನ್ನು ಅಬಕಾರಿ ಇಲಾಖೆಗೆ ಸೇರಿಸುತ್ತಿದ್ದಾರೆ. ಇದರಿಂದ ಬಹಳಷ್ಟು ಜನರು ವ್ಯಾಪಾರವನ್ನು ಮಾಡಿಕೊಳ್ಳುವುದಕ್ಕೆ ಗೌರವ ಕಮ್ಮಿ ಎಂದು ಹೇಳುವಂಥ ದೃಷ್ಟಿಯಿಂದ ಮಾಡುತ್ತಿದ್ದಾರೆ. ಆದ್ದರಿಂದ, ಮೂರ್ತೇದಾರ ವೃತ್ತಿಯನ್ನು, ಸೇಂದಿಯನ್ನು ಅಬಕಾರಿ ಇಲಾಖೆಯಿಂದ ತೆಗೆಸಬೇಕೆಂಬ ವಿನಂತಿಯನ್ನು ನಾನು ಮಾಡಿಕೊಳ್ಳುತ್ತೇನೆ. ಇನ್ನು ನಮ್ಮ ಜಿಲ್ಲೆಗಳಿಗೆ ಸಂಬಂಧಪಟ್ಟ ಹಾಗೆ ಸಕ್ಕರೆ ಕಾರ್ಖಾನೆ ಬಹಳ ಹದಗೆಟ್ಟಿದೆ, ಬ್ರಹ್ಮಾವರ ಸಕ್ಕರೆ ಕಾರ್ಖಾನೆ. ನಮ್ಮ ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಅದರ ಅಧ್ಯಕ್ಷರಾಗಿದ್ದವರು. ಇವತ್ತು ರೈತರಿಗೆ ಮೂರು ಕೋಟಿ ರೂ. ಕೊಡಲಿಕ್ಕೆ ಬಾಕಿ ಇದೆ. ಅದರ ಬಗ್ಗೆ ಸರ್ಕಾರದಿಂದ ಯಾವುದೇ ಅನುದಾನಗಳು ಬರುತ್ತಾ ಇಲ್ಲ. ಲೆ ಆಫ್ ಮಾಡುತ್ತಾರೆಂದು ಸುದ್ದಿ ಬಂದು, ಬಹಳ ಪ್ರತಿಭಟನೆಗಳು ನಡೆಯುತ್ತಾ ಇವೆ, ಇವತ್ತು ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಬಗ್ಗೆ. ಅದರ ಬಗ್ಗೆ ಯಾವುದೇ ಒಂದು ಯೋಜನೆಗಳು ಇಲ್ಲ. ಇನ್ನು ಸಹಕಾರಿ ಸಂಸ್ಥೆಗಳಿಂದ ಸುಮಾರು 5 ಕೋಟಿ ರೂ ಸಾಲ ತೆಗೆದುಕೊಂಡಿದ್ದಾರೆ. ಇವತ್ತು ಎಲ್ಲಾದರೂ ಸಕ್ಕರೆ ಕಾರ್ಖಾನೆ ಮುಳುಗಿತು ಎಂದರೆ, ಸಹಕಾರಿ ಸಂಸ್ಥೆಗಳಿಂದ ಬಾಕಿ ಇರುವಂಥ ಸಾಲಗಳಿಂದ ಅದು ಮುಚ್ಚಿ ಹೋಗುವ ವ್ಯವಸ್ಥೆಗಳಿರುವುದರಿಂದ,

ತಾವು ಆ ಸಕ್ಕರೆ ಕಾರ್ಖಾನೆಯನ್ನು ಪುನಶ್ಚೇತನಗೊಳಿಸಬೇಕು. ಅದಕ್ಕೆ ವಿಶೇಷವಾದ ಪ್ಯಾಕೇಜನ್ನು ತಂದು, ಸಕ್ಕರೆ ಕಾರ್ಖಾನೆ ಉಳಿದರೆ ಮಾತ್ರ, ಆ ಜಿಲ್ಲೆಯಲ್ಲಿ ರೈತರು ಸ್ವಲ್ಪ ಬದುಕಬಹುದು. ನಮ್ಮಲ್ಲಿ ಭತ್ತ ಬೆಳೆ ಏನೂ ಲಾಭದಾಯಕ ಅಲ್ಲ. ಕಬ್ಬು ಬೆಳೆಗೆ ನಾವೇನಾದರೂ ಪ್ರೋತ್ಸಾಹ ಕೊಟ್ಟರೆ, ಸಕ್ಕರೆ ಕಾರ್ಖಾನೆ ಒಳ್ಳೆಯರೀತಿಯಲ್ಲಿ ನಡೆದರೆ, ಅದಕ್ಕೆ ಪ್ರಯೋಜನ ಬರುತ್ತದೆ. ಅದಕ್ಕೆ ಪ್ರಯೋಜನವಾಗಬೇಕೆಂದರೆ ವರಾಹಿ ನೀರಿನ ಯೋಜನೆ. ಸುಮಾರು 15–20 ವರ್ಷಗಳಿಂದ ಅದು ಹಾಗೆಯೇ ಬಿದ್ದುಕೊಂಡಿದೆ. ಆ ಯೋಜನೆ ಏನೂ ಚಾಲ್ತಿಯಾಗುತ್ತಾ ಇಲ್ಲ. ಇದನ್ನು ಸರ್ಕಾರ ತ್ವರಿತಗತಿಯಲ್ಲಿ, ವರಾಹಿ ನೀರಾವರಿ ಯೋಜನೆಯನ್ನು ಅನುಷ್ಠಾನಗೊಳಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಇನ್ನೊಂದು ಮೀನುಗಾರಿಕಾ ಡೀಸೆಲ್. ತಾವು 50 ಸಾವಿರ ಕಿಲೋಲೀಟರಿಗೆ, ಕಳೆದ ವರ್ಷಕ್ಕಿಂತ ಹೆಚ್ಚು ಕೊಟ್ಟಹಾಗೆ ಇಲ್ಲ. ನಮ್ಮಲ್ಲಿ ಮೀನುಗಾರರು ಬಹಳಷ್ಟು ಜನ ಇರುವುದರಿಂದ, ನಮ್ಮ ಉಪ ಮುಖ್ಯಮಂತ್ರಿಗಳ ಹತ್ತಿರ ಒಂದು ವಿನಂತಿ. ದಯವಿಟ್ಟು 50 ಸಾವಿರ ಕಿಲೋಮೀಟರ್ ಕೊಟ್ಟಿದ್ದನ್ನು 75 ಸಾವಿರ ಕಿಲೋಲೀಟರಿಗೆ ಏರಿಸಬೇಕೆಂಬ ವಿನಂತಿಯನ್ನು ನಾನು ಮಾಡಿಕೊಳ್ಳುತ್ತಿದ್ದೇನೆ. ಇನ್ನೊಂದು ಶಾಶ್ವತ ತಡೆಗೋಡೆ. ಇದು ಬಹಳ ದೊಡ್ಡ ಸಮಸ್ಯೆ ನಮ್ಮಲ್ಲಿರುವಂಥಾದ್ದು. ಕಡಲ ಕೊರೆತದಿಂದ ನಮ್ಮೆಲ್ಲಾ ಭಾಗಗಳು ಹೋಗುತ್ತಾ ಇದೆ. ಮರೆವಂತೆ ಎನ್ನುವ ಜಾಗದಲ್ಲಿ ಹೈವೇ ಹೋಗುತ್ತಾ ಇದೆ. ಪ್ರಧಾನಮಂತ್ರಿ ಗ್ರಾಮೀಣ ಸಡಕ್ ಯೋಜನೆಯಿಂದ ನಮ್ಮಲ್ಲಿ 1 ಕೋಟಿ 48 ರೂ.ನಲ್ಲಿ ನನ್ನ ಕ್ಷೇತ್ರದಲ್ಲಿ ಬರುವಂಥಾದ್ದರಲ್ಲಿ ಒಂದು ಕಾಂಕ್ರೀಟ್ ರೋಡ್ ಮಾಡಿದ್ದಾರೆ. ಅದು ಇವತ್ತು ಕಡಲ ಕೊರೆತದಿಂದ ತುಂಡಾಗಿದೆ. ಅಂದರೆ ಎಷ್ಟು ದೊಡ್ಡ ಸಮಸ್ಯೆ. ಇದಕ್ಕೆ ಶಾಶ್ವತ ತಡೆಗೋಡೆ. ಇವತ್ತು ಕೇಂದ್ರಕ್ಕೆ 136 ಕೋಟಿ ರೂಪಾಯಿಯ ಯೋಜನೆ ಹೋಗಿದೆ. ಅದನ್ನು ಅನುಷ್ಟಾನಕ್ಕೆ ತರಲಿಕ್ಕೆ ತಾವು ಪ್ರಯತ್ನ ಮಾಡಬೇಕು. ಮತ್ತೆ ಏನು ಒಂಭತ್ತು ಕೋಟಿ ರೂ. ಕಳೆದ ವರ್ಷ ಇಟ್ಟಿದ್ದನ್ನು ವಾಪಸ್ ತೆಗೆದುಕೊಂಡಿದ್ದಾರೆಂಬ ಗುಮಾನಿ ನಮಗೆ ಇದೆ. ಇದು ನಮಗೆ ಗೊತ್ತಿಲ್ಲ, ಸತ್ಯವೇ ಎಂದು ಹೇಳುವಂಥಾದ್ದು. ಅದನ್ನು ವಾಪಸ್ ತೆಗೆದುಕೊಳ್ಳಬಾರದು. ಇದನ್ನು ಶಾಶ್ವತ ತಡೆಗೋಡೆಗೇ ಉಪಯೋಗ ಮಾಡಬೇಕೆಂದು ಹೇಳುವಂಥ ವಿನಂತಿಯನ್ನು ನಾನು ಮಾಡಿಕೊಳ್ಳುತ್ತಾ ಇದ್ದೇನೆ. ಇನ್ನು ನನ್ನ ಉಡುಪಿಯ ಬಹಳ ದೊಡ್ಡ ಸಮಸ್ಯೆ. ಉಡುಪಿ ಮತ್ತು ಮಣಿಪಾಲ್ ಬಹಳ ಸಂಪರ್ಕದ ಜಾಗಗಳು. ಮಣಿಪಾಲ್ ಎಂದು ಹೇಳುವಂಥಾದ್ದು ಬಹಳ ದೊಡ್ಡ ವಿದ್ಯಾ ಕೇಂದ್ರ. ಆಸ್ಪತ್ರೆ ಮತ್ತು ಎಲ್ಲಾ ಕಾಲೇಜುಗಳು ಇರುವಂಥ ಒಂದು ಕೇಂದ್ರ. ಸಿಂಡಿಕೇಟ್ ಬ್ಯಾಂಕಿನ ಹೆಡ್ ಆಫೀಸ್ ಇರುವಂಥ ಒಂದು ಕ್ಷೇತ್ರ. ಇವತ್ತು ಉಡುಪಿಯಿಂದ ಮಣಿಪಾಲ್‌ಗೆ ಹೋಗಬೇಕಾದರೆ ಕೇವಲ 16 ರಿಂದ 18 ಅಡಿ ಇರುವಂಥ ಒಂದು ರಸ್ತೆ ಇದೆ. ಇದರ ಬಗ್ಗೆ ವಿಧಾನ ಪರಿಷತ್ತಿನ ಹಿರಿಯ ಸದಸ್ಯರಾದ ಡಾ॥ ವಿ.ಎಸ್. ಆಚಾರ್ಯರವರು ಸುಮಾರು 8–10 ಬಾರಿ ಪ್ರಸ್ತಾವನೆ ಮಾಡಿದ್ದಾರೆ. ಈ ಬಾರಿಯೂ ನಾವು ಪ್ರಸ್ತಾವನೆಯನ್ನು ಮಾಡಿದ್ದೇವೆ. ಸುಮಾರು 15 ಕೋಟಿ ರೂನಲ್ಲಿ ಆ ರಸ್ತೆಯನ್ನು ಅಗಲ ಮಾಡುವಂಥಾದ್ದು. ಇವತ್ತು ನಮ್ಮದು ಜಿಲ್ಲಾ ಕೇಂದ್ರವಾಗಿದೆ. ಆ ಜಿಲ್ಲಾ ಕೇಂದ್ರವಾದ ನಂತರ, ಇದು ಬಹಳ ಪ್ರಾಮುಖ್ಯವಾದಂಥ ಯೋಜನೆ. ಇದಕ್ಕೆ ನಮ್ಮ ಸರ್ಕಾರದಿಂದ ದಯವಿಟ್ಟು ಆ 15 ಕೋಟಿ ರೂ. ಯಲ್ಲಿ 8 ಕೋಟಿ ರೂಪಾಯಿಗಳನ್ನು ಆ ಜಾಗವನ್ನು ಖರೀದಿಸಲಿಕ್ಕೆ ಬೇಕಾದಂಥ ಯೋಜನೆ ಇದೆ. ಅದನ್ನು ದಯವಿಟ್ಟು ಸರ್ಕಾರದಿಂದ ಮಾಡಬೇಕು. ಅದು ಬಹಳ

ಪ್ರಾಮುಖ್ಯವಾದಂಥಾದ್ದು ನನಗೆ ಬಹಳ ಬೇಸರವಾಗುವುದೆಂದರೆ, ನಮ್ಮ ಉಡುಪಿ ಜಿಲ್ಲೆಯು ಹೊಸ ಜಿಲ್ಲೆ. ಈ ಹೊಸ ಜಿಲ್ಲೆಗೆ ಯಾವುದೇ ಯೋಜನೆಗಳು ಇಲ್ಲ. ನಮ್ಮಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಪ್ರಾರಂಭವಾಗಲಿಕ್ಕೆ ಯಾವುದೇ ಒಂದು ಮೂಲಭೂತ ಸೌಕರ್ಯಗಳು ಇಲ್ಲ. ಜಿಲ್ಲಾಕೇಂದ್ರಗಳು ಹೇಗಿರಬೇಕು. ಅದಾಗಲಿಕ್ಕೆ ಬೇಕಾದಂಥ ಯಾವುದೇ ಯೋಜನೆಗಳು ಇಲ್ಲ. ಈ ಎಲ್ಲಾ ಯೋಜನೆಗಳನ್ನು ತಾವು ದಯವಿಟ್ಟು ನಿಮ್ಮ ಬಜೆಟ್‌ನಲ್ಲಿ ಪರಿಷ್ಕರಿಸಬೇಕೆಂಬ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಇನ್ನೊಂದು ಬಹಳ ಪ್ರಾಮುಖ್ಯವಾದಂಥಾದ್ದು, ಬಜೆಟ್‌ನಲ್ಲಿ ನಮ್ಮ ಕೇಂದ್ರದ ರೈಲ್ವೆ ಬಜೆಟ್‌ನಲ್ಲಿ ಈ ಸಾರಿ ಮಂಗಳೂರು–ಹಾಸನ ಮಾರ್ಗವನ್ನು ಪೂರ್ಣ ಮಾಡುತ್ತೇವೆಂದು ಹೇಳಿದ್ದಾರೆ. ಅದು ಮಾಡಬೇಕಾದರೆ ರಾಜ್ಯಸರ್ಕಾರ 60 ಕೋಟಿ ರೂ. ಯನ್ನು ಒದಗಿಸಬೇಕು ಎಂದು ಹೇಳುವಂಥಾದ್ದನ್ನು ನಮ್ಮ ಸಂಸತ್ ಸದಸ್ಯರಾದ ಮಾನ್ಯ ಸದಾನಂದಗೌಡರಿಗೆ ಲಿಖಿತ ಉತ್ತರದಲ್ಲಿ, ಅವರು ಕೊಟ್ಟಿದ್ದಾರೆ. ಇವತ್ತಿನ ಈ ಬಜೆಟ್‌ನಲ್ಲಿ ಆ 60 ಕೋಟಿ ರೂ. ಯನ್ನು ಇಟ್ಟಂಥಾದ್ದು ಕಾಣುತ್ತಾ ಇಲ್ಲ. ಅದು ಇಡಲಿಲ್ಲವೆಂದರೆ ಈ ಯೋಜನೆ ಆಗುವುದಿಲ್ಲ. ಇದು ಇಟ್ಟಿದ್ದು ಎಂದಾದರೆ ಮಾರ್ಚ್ 2005ಕ್ಕೆ ಪೂರ್ಣವಾಗುತ್ತದೆಂದು ಕೇಂದ್ರ ಸರ್ಕಾರದವರು ಹೇಳುತ್ತಿದ್ದಾರೆ. ಇದರ ಬಗ್ಗೆಯೂ ಪರಿಷ್ಕರಿಸಬೇಕೆಂದು ಹೇಳುತ್ತಾ, ನನ್ನ ವಿಶೇಷ ವಿನಂತಿ ಪ್ರದೇಶಾಭಿವೃದ್ಧಿ ನಿಧಿಯನ್ನು ದಯವಿಟ್ಟು, ಉಪ ಮುಖ್ಯಮಂತ್ರಿಗಳು ನಮ್ಮ ಬಗ್ಗೆ ಸ್ವಲ್ಪ ಕರುಣೆಯನ್ನು ತೋರಿಸಿ, ಅದನ್ನು ಮಾಡಲೇಬೇಕೆಂಬ ವಿನಂತಿಯನ್ನು ಮಾಡಿಕೊಂಡು ಸನ್ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† **ಶ್ರೀಮತಿ ಶಕುಂತಲಾ ಟಿ. ಶೆಟ್ಟಿ (ಪುತ್ತೂರು)** : ಮಾನ್ಯ ಅಧ್ಯಕ್ಷರೇ, ಮೊನ್ನೆ ತಾನೆ ಮಂಡಿಸಿದ ಬಜೆಟ್‌ನಲ್ಲಿ ಮಹಿಳೆಯರನ್ನು ಸಂಪೂರ್ಣ ಮರೆತಿದ್ದಾರೆಂದು ಕಾಣುತ್ತದೆ. ರಾಜ್ಯಪಾಲರ ಭಾಷಣದಲ್ಲಿ ಸ್ತ್ರೀಶಕ್ತಿ ಗ್ರಾಮೀಣ ಬ್ಯಾಂಕುಗಳನ್ನು ಮಾಡುತ್ತೇವೆಂದು ಹೇಳಿದ್ದರು. ಬಜೆಟ್‌ನಲ್ಲಿ ಅದರ ಬಗ್ಗೆ ಯಾವುದೇ ವಿಚಾರ ತಿಳಿದು ಬರುತ್ತಾ ಇಲ್ಲ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಜನರ ಜೀವನಾಡಿಯೇ ಆಗಿರುವುದು ಮೀನುಗಾರಿಕೆ, ಅಡಿಕೆ, ತೆಂಗು, ಗೋಡಂಬಿ, ಹೆಂಚು ಮತ್ತು ಬೀಡಿ. ಮೀನುಗಾರಿಕೆಯಲ್ಲಿ ಮತ್ತೆ ಗೋಡಂಬಿ, ಬೀಡಿ, ಅಡಿಕೆ ಇವುಗಳಲ್ಲಿ ಸಾಧಾರಣ ಬೀಡಿ ಕಟ್ಟುವಂಥ ಮಹಿಳೆಯರು, ಗೃಹ ಗುಡಿ ಕೈಗಾರಿಕೆ ಮಾಡುವಂಥ ಮಹಿಳೆಯರು ಎರಡು ಜಿಲ್ಲೆಗಳಲ್ಲಿ ಮೂರುವರೆ ಲಕ್ಷ ಮಂದಿ ಇದ್ದಾರೆ. ಅದೇ ರೀತಿ ಗೋಡಂಬಿ ಕಾರ್ಖಾನೆಗಳಲ್ಲಿ ಸಾಧಾರಣ 98 ಪರ್ಸೆಂಟ್, ಅಂದರೆ ಒಂದು ಲಕ್ಷದಷ್ಟು ಯುವತಿಯರು ಇದ್ದಾರೆ. ಜೊತೆಗೆ, ಗಾರ್ಬಿಲ್ಸ್‌ನಲ್ಲೂ ಸುಮಾರು 50 ಸಾವಿರ ಮಹಿಳೆಯರು ಕೆಲಸ ಮಾಡುತ್ತಾ ಇದ್ದಾರೆ. ಅದರ ಬಗ್ಗೆ ಯಾವುದೇ ಒಂದು ಕಳಕಳಿ ಇಲ್ಲದೆ, ಗೋಡಂಬಿ ಮೇಲೆ ತೆರಿಗೆ ಹಾಕಿದ್ದಾರೆ. ಎಲ್ಲಾದರೂ ಗೋಡಂಬಿ ಕಾರ್ಖಾನೆ ಮುಚ್ಚಿದರೆ ನಮ್ಮ ಹುಡುಗಿಯರೆಲ್ಲಾ ಮನೆಯಲ್ಲಿ ಕುಳಿತುಕೊಳ್ಳುವಂಥ ಸ್ಥಿತಿ ಬರಬಹುದು. ದಯಮಾಡಿ, ಆ ಟ್ಯಾಕ್ಸನ್ನು ಹಿಂದೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಮಹಿಳೆಯರ ಬಗ್ಗೆ ಮಾತನಾಡುತ್ತಾ, ಅಂಗನವಾಡಿ ಕಾರ್ಯಕರ್ತೆಯರು, ಇವರು ಬಹಳಷ್ಟು ದಿನಗಳಿಂದ ಹೋರಾಟ ಮಾಡುತ್ತಿದ್ದಾರೆ. ಹಿಂದಿನ ಸರ್ಕಾರದಲ್ಲಿ ಆಗಿನ ಮುಖ್ಯಮಂತ್ರಿಯವರು ಅಂಗನವಾಡಿಯನ್ನು ಪಂಚಾಯ್ತಿಗೆ ವಶಕ್ಕೆ ಕೊಡಬೇಕೆಂದು ಹೇಳಿದ್ದಾರೆ. ಈಗ ಅದರ ಬಗ್ಗೆ ಹೋರಾಟವೂ ನಡೆಯುತ್ತಾ ಇದೆ. ಆದರೆ, ಸರ್ಕಾರದ ಕೆಳಗೆ ಕೆಲಸ ಮಾಡುವಂಥವರನ್ನು ಪಂಚಾಯ್ತಿಗೆ ವರ್ಗಾವಣೆ ಮಾಡುವ ಉದ್ದೇಶವೇನೆಂಬುದು

ಅರ್ಥವಾಗುತ್ತಾ ಇಲ್ಲ. ಅವರ ಬೇಡಿಕೆಗೆ ಅನುಗುಣವಾಗಿ, ಅವರನ್ನು ಸರ್ಕಾರದ ವತಿಯಲ್ಲೇ ಇಟ್ಟುಕೊಂಡು, ಅದರ ಅಡಿಯಲ್ಲೇ ಕೆಲಸ ಮಾಡಿಸಬೇಕಲ್ಲದೆ ಅವರಿಗೆ ಕಾಲಕಾಲಕ್ಕೆ ಇಂಕ್ರಿಮೆಂಟ್ ಕೊಡುವಂಥಾದ್ದು, ಬಿ.ಎ. ಆಗಿರುವಂಥ ಅಂಗನವಾಡಿ ಕಾರ್ಯಕರ್ತೆಯರಿಗೆ ಇನ್ನೊಂದು ಇಂಕ್ರಿಮೆಂಟ್ ಕೊಡುವಂಥಾದ್ದು, ಹಾಗೂ ಪ್ರಮೋಷನ್ ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕು. ಅಲ್ಲದೆ, ಗೌರವಧನವನ್ನು ಸ್ವಲ್ಪ ಹೆಚ್ಚಿಸಬೇಕೆಂದು ನಾನು ಕೇಳಿಕೊಳ್ಳುತ್ತಾ ಇದ್ದೇನೆ. ಮಹಿಳಾ ದೌರ್ಜನ್ಯ ಇಡೀ ರಾಜ್ಯದಲ್ಲಿ ಬಹಳಷ್ಟು ಜಾಸ್ತಿಯಾಗಿದೆ. ಎಲ್ಲಾ ಕಡೆ, ಅದೂ ಕೂಡ ನಮ್ಮ ಜಿಲ್ಲೆಯಲ್ಲಿ ಕಳೆದ ಒಂದೇ ವರ್ಷದಲ್ಲಿ ನಾಲ್ಕೈದು ಮಹಿಳೆಯರ ಕೊಲೆಯಾಗಿದೆ. ಶಮೀಯಾ, ಭಾರತಿ, ಸುಚಿತಾ ಶೆಟ್ಟಿ, ಚಂದ್ರಕಲಾ ಭಟ್ ಎಂದು ಹೇಳಿ, ಬೇರೆ ಬೇರೆ ಮಹಿಳೆಯರ ಕೊಲೆ ನಡೆದಾಗ ಬಹಳ ಹೋರಾಟ ಆಗಿತ್ತು. ಅಂತಹ ಜಿಲ್ಲೆಯಲ್ಲಿ ಸ್ವಶಕ್ತೀಕರಣಕ್ಕಾಗಿ ಯಾವುದೇ ವ್ಯವಸ್ಥೆ ಆಗಿಲ್ಲ. ಯಾವುದೇ ಹಣಕಾಸು ಇಟ್ಟಿಲ್ಲ. ಅಷ್ಟುಮಾತ್ರವಲ್ಲ, ಪೊಲೀಸ್ ಇಲಾಖೆ ಹೇಗೆ ರಕ್ಷಣೆ ಕೊಡಬೇಕೋ ಆ ರೀತಿ ಕೊಡಲಿಕ್ಕೆ ಸಾಧ್ಯವಾಗಿಲ್ಲ. ನನಗೆ ಈ ವಿಚಾರ ಹೇಳುವಾಗ ನಗು ಬರುತ್ತಿದೆ. ನನ್ನ ಕ್ಷೇತ್ರದಲ್ಲಿ ಉಪ್ಪಿನಂಗಡಿಯಲ್ಲಿ ಒಂದು ಪೊಲೀಸ್ ಉಪ ಠಾಣೆಯೊಂದು ಇದೆ. ಸ್ವಂತ ಕಟ್ಟಡ ಇದೆ. ನೆಲ್ಯಾಡಿಯಲ್ಲಿ ಅಲ್ಲಿ 10–12 ವರ್ಷಗಳಿಂದ ಉಪಠಾಣೆ ಇದೆ. ನಾಚಿಕೆಗೇಡಿನ ವಿಚಾರ ಅಂದರೆ ಆ ಪೊಲೀಸ್ ಠಾಣೆಯಲ್ಲಿ ಇವತ್ತಿನವರೆಗೂ ದೂರವಾಣಿ ಸಂಪರ್ಕ ಇಲ್ಲ. ಅದು ನ್ಯಾಷನಲ್ ಹೈವೇ ನಲ್ಲಿ ಇದೆ. ಸಾಧಾರಣ 25 ಕಿಲೋಮೀಟರ್ ಆ ಉಪ ಠಾಣೆಯ ವ್ಯಾಪ್ತಿಗೆ ಬರುತ್ತಿದೆ. ಸಾಧಾರಣ 12 ಗ್ರಾಮಗಳು ಬರುತ್ತವೆ. ಬೆಳ್ತಂಗಡಿ ತಾಲ್ಲೂಕಿನ 7–8 ಗ್ರಾಮಗಳು. ನಮ್ಮ ಪುತ್ತೂರಿನ ತಾಲ್ಲೂಕಿನಲ್ಲಿ 7–8 ಗ್ರಾಮಗಳು ಆ ಉಪ ಠಾಣೆಯ ವ್ಯಾಪ್ತಿಗೆ ಬರುವಾಗ ದಿನಂಪ್ರತಿ ಅಪಘಾತಗಳು ನಡೆಯುವಂತಹ ಸಂದರ್ಭಗಳು ಇರುವಂತಹ ಆ ಹೈವೇ ಇರುವಂತಹ ಜಾಗದಲ್ಲಿ ಒಂದು ಪೊಲೀಸ್ ಉಪ ಠಾಣೆಗೆ ನಮ್ಮ ಸರ್ಕಾರ ದೂರವಾಗಿ ಸಂಪರ್ಕ ಒದಗಿಸಿ ಕೊಟ್ಟಿಲ್ಲವೆಂದು ಹೇಳುವಾಗ ಬಹುಶಃ ಗೃಹ ಖಾತೆ ಎಷ್ಟು ವ್ಯವಸ್ಥಿತವಾಗಿ ನಡೆಯುತ್ತವೆ ಎನ್ನುವುದು ಗೊತ್ತಾಗುತ್ತದೆ. ಪೊಲೀಸ್ ಸ್ಟೇಷನ್‌ನಲ್ಲಿ ದೂರವಾಣಿ ಇಲ್ಲದಿದ್ದಾಗ ನಮ್ಮ ಜನರಿಗೆ ಕಷ್ಟ ಬಂದಾಗ ಯಾರಲ್ಲಿ ಹೇಳಿಕೊಳ್ಳುವುದು? ಅಲ್ಲಿನ ಅವಸ್ಥೆ ಏನಿದೆ ಅಂದರೆ ಅಲ್ಲಿನ ಹತ್ತಿರದ ಅಂಗಡಿಗೆ ಫೋನ್ ಮಾಡಿ, ಅಂಗಡಿಯವರು ಹೋಗಿ ಪೊಲೀಸ್‌ನವರನ್ನು ಕರೆದು ಪೊಲೀಸ್‌ನವರು ವಾಪಸ್ಸು ಬಂದು ಏನು ಅಂತ ಕೇಳಿ ಆಮೇಲೆ ಅಲ್ಲಿಗೆ ಬರುವಾಗ ಎಲ್ಲಾ ಮುಗಿದಿರುತ್ತದೆ. ಏನೋ ಅಲ್ಲಿ ಒಂದೋ, ಎರಡೋ ದರೋಡೆ ಪ್ರಕರಣ ನಡೆದಿತ್ತು. ಆ ಸಮಯದಲ್ಲಿ ದರೋಡೆ ಮಾಡಿ ಪೊಲೀಸ್‌ನವರು ಬರುವಷ್ಟರಲ್ಲಿ ಯಾವುದೋ ರಾಜ್ಯಕ್ಕೆ ಹೋಗಿ ಸೇರುವಂತಹ ವ್ಯವಸ್ಥೆಯಾಗುತ್ತದೆ. ಆದ್ದರಿಂದ ದಯಮಾಡಿ ಮಾನ್ಯ ಉಪ ಮುಖ್ಯಮಂತ್ರಿಯವರು ಪರಿಗಣಿಸಿಕೊಡಬೇಕು. ಅಲ್ಲಿಗೆ ದೂರವಾಣಿ ಸಂಪರ್ಕವನ್ನು ಇನ್ನಾದರೂ ಮಾಡಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಹಿಂದಿನ ಸರ್ಕಾರ ಫೆಬ್ರವರಿಯಲ್ಲಿ ಬಜೆಟ್ ಮಂಡನೆ ಮಾಡುತ್ತಾ 20 ಸಾವಿರ ಮೀನುಗಾರ ಮಹಿಳೆಯವರಿಗೆ 5 ಸಾವಿರ ರೂಪಾಯಿ ಮಾರ್ಜಿನ್ ಮನಿ ಕೊಡುತ್ತೇವೆಂದು ಹೇಳಿದ್ದರು. ಬಹುಶಃ ನಮ್ಮ ಜಿಲ್ಲೆಯಲ್ಲಿ 3 ಜನ ಚುನಾಯಿಸಿ ಬಂದಿದ್ದು ಆದ್ದರಿಂದಲೇ ಏನೋ ಗೊತ್ತಿಲ್ಲ, ಆದರೆ ಈ ಸಲ ಆ ಮಾರ್ಜಿನ್ ಮನಿ ಬಗ್ಗೆ ಏನೂ ಹೇಳಲಿಲ್ಲ. ಇವತ್ತು ಮಹಿಳೆಯರನ್ನು ಪೂರ್ತಿಯಾಗಿ ಮರೆತಿದ್ದೀರಿ ಎನ್ನುವುದಕ್ಕೆ ನಮ್ಮ ಈ ಸದನದಲ್ಲಿ 6 ಮಂದಿ ಮಹಿಳೆಯರಲ್ಲಿ 3 ಮಂದಿ ಮಹಿಳೆಯರು ಮಾತ್ರ ನಿಮ್ಮ ಕಡೆ ಇದ್ದಾರೆ. ಅವರಲ್ಲಿ

ಒಬ್ಬರನ್ನಾದರೂ ಮಂತ್ರಿಯನ್ನಾಗಿ ಮಾಡಲಿಲ್ಲ ಎನ್ನುವ ಬೇಸರದಲ್ಲಿ ನಮಗೆ ಇದು ಶೋಚನೀಯವಾಗಿ ಕಾಣುತ್ತಿದೆ. ಆದ್ದರಿಂದ ಮಹಿಳೆಯರಿಗೆ ಸ್ವಲ್ಪ ಸ್ಥಾನ ಮಾನ ಕೊಡಿ ಅಂತ ಎಲ್ಲರ ಪರವಾಗಿ ನಾನು ಕೇಳಿಕೊಳ್ಳುತ್ತಿದ್ದೇನೆ. ನಿರುದ್ಯೋಗ ಭತ್ಯೆ 500 ರೂಪಾಯಿ ಕೊಡುತ್ತೇವೆಂದು ಹೇಳಿದ್ದರು. ಆದರೆ ನಿರುದ್ಯೋಗಿ ಭತ್ಯೆ ಸುದ್ದಿಯೇ ಇಲ್ಲ. ಮುಂದುವರಿಕಾದವರಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ವರ್ಷದಿಂದ ಸಂಬಳವೇ ಬಂದಿಲ್ಲ. ಎಲ್ಲರನ್ನೂ ಮುಂದುವರಿಸಬೇಕು, ಮುಂದೆ ಮುಂದೆ ದೂಡಬೇಕೆಂದು ಮುಂದುವರಿಕಾ ಶಿಕ್ಷಣವನ್ನು ಮಾಡಿದ್ದಾರೆ ಮುಂದುರಿಕಾ ಶಿಕ್ಷಣದಲ್ಲಿ, ಹೋಗಿ ಹೋಗಿ ಮುಸ್ಲಿಂ ಮಹಿಳೆ ಶಮೀಮ್ ಕೊಲೆ ಬಗ್ಗೆ ಇನ್ನೂ ತನಿಖೆಯಾಗಲಿಲ್ಲ. ಹೀಗಿರುವಾಗ ಮುಂದುವರಿಕಾವನ್ನು ಮುಚ್ಚುತ್ತೀರಾ ಅಥವಾ ಉಳಿಸಿಕೊಳ್ಳುತ್ತೀರಾ? ಅವರ ಒಂದೂವರೆ ವರ್ಷದ ಸಂಬಳವನ್ನು ಶೀಘ್ರವಾಗಿ ಬಿಡುಗಡೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಹೊಟ್ಟೆಗೆ ಹಿಟ್ಟಿಲ್ಲದಾಗ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಜನಸಾಮಾನ್ಯ ಮಹಿಳೆಯರು ಎಲ್ಲರೂ ಮನೆಯಲ್ಲಿ ಕುಳಿತು ಬೀಡಿ ಉದ್ಯಮವನ್ನು ಪ್ರಾರಂಭ ಮಾಡಿದರು. ಇವತ್ತು ಆ ಬೀಡಿ ಉದ್ಯಮ ಮುಚ್ಚಿ ಹೋಗುವ ಸ್ಥಿತಿಯಲ್ಲಿದೆ. ಬೀಡಿ ಕಾರ್ಖಾನೆಗಳು ವಲಸೆ ಹೋಗುತ್ತಿವೆ. ದಿನಂಪ್ರತಿ ಕೆಲಸ ಸಿಗುತ್ತಿದ್ದಂತಹ ಬೀಡಿ ಉದ್ಯಮ ಇವತ್ತು ವಾರದಲ್ಲಿ ಎರಡು ದಿನವೂ ಕೆಲಸ ಸಿಗುತ್ತಿಲ್ಲ. ಆ ಬೀಡಿ ಕಾರ್ಮಿಕರಿಗೆ ಸಹಾಯ ಮಾಡುವ ದೃಷ್ಟಿಯಿಂದ ಆ ಬೀಡಿ ಕಂಪನಿಗಳು ವಲಸೆ ಹೋಗುವಂತಾದ್ದನ್ನು ಉಳಿಸಿಕೊಂಡು, ಅವರಿಗೆ ಜೀವನಕ್ಕೆ ಆಧಾರವಾಗಿರುವಂತಹ ಉದ್ಯೋಗವನ್ನು ಕೊಡಬೇಕಾಗಿದೆ. ಇಲ್ಲವಾದಲ್ಲಿ ಅವರಿಗೆ ಪರ್ಯಾಯವಾದ ವ್ಯವಸ್ಥೆಯನ್ನು ಮಾಡಿ, ಸಾಧಾರಣ ಒಂದು ಲಕ್ಷಕ್ಕೂ ಹೆಚ್ಚು ಕುಟುಂಬಗಳಿಗೆ ದಾರಿ ದೀಪವನ್ನು ತೋರುವಂತಹ ಒಂದು ಯೋಜನೆಯನ್ನು ರೂಪಿಸಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಗೋಡಂಬಿ, ಗೋಡಂಬಿಯಲ್ಲಿ 98 ಪರ್ಸೆಂಟ್ ಮಹಿಳೆಯವರೇ ಕೆಲಸ ಮಾಡುತ್ತಿದ್ದಾರೆ. ಆದರೆ ಗೋಡಂಬಿಯ ಟ್ಯಾಕ್ಸ್ ನೋಡಿದಾಗ ನಮ್ಮ ಊರಿನಲ್ಲಿ ಆ ಗೋಡಂಬಿ ಕೆಲಸ ಮಾಡುವ ಮಕ್ಕಳೇನಾದರೂ ಗೋಡಂಬಿ ತಿನ್ನಬೇಕೆಂದು ಇದ್ದರೆ ಆ ಗೋಡಂಬಿಗೆ ಕೊಡುವ ಟ್ಯಾಕ್ಸ್ ನಮ್ಮ ಊರಿನ ಎರಡು ಕೆ.ಜಿ. ಅಕ್ಕಿಗೆ ಕೊಡುವಷ್ಟು ಆಗಿದೆ. ಹೀಗಿರುವಾಗ ಆ ತೆರಿಗೆಯನ್ನು ಕಡಿಮೆ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಹಿಂದಿನ ಸರ್ಕಾರ ರಾಜ್ಯದಲ್ಲಿ, ವರ್ಷದಲ್ಲಿ 4 ಮಹಿಳಾ ಪೊಲೀಸ್ ಠಾಣೆಗಳನ್ನು ಮಾಡುತ್ತೇವೆಂದು ಹೇಳಿದರು. ಆದರೆ ಇಲ್ಲಿಯವರೆಗೂ ಮಾಡಲಿಲ್ಲ. ಈ ಸಲ ಸಮಿಶ್ರ ಸರ್ಕಾರ ಬಂದಾಗಲಾದರೂ ಮಾಡುತ್ತಾರೆ ಎನ್ನುವ ಆಸೆಯಲ್ಲಿದ್ದೇವೆ. ಈ ಬಜೆಟ್‌ನಲ್ಲಿ ಮಹಿಳಾ ಪೊಲೀಸ್ ಠಾಣೆಗಳ ಬಗ್ಗೆ ವಿಚಾರವೇ ಇಲ್ಲ. ನಾನು ಮಾನ್ಯ ಉಪ ಮುಖ್ಯಮಂತ್ರಿಯವರಲ್ಲಿ ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ ನಾನು ಸಾಧಾರಣ 4–5 ತಾಲ್ಲೂಕುಗಳಲ್ಲಿ ಏಕೈಕ ಶಾಸಕಿಯಾಗಿದ್ದೇನೆ. ದಯಮಾಡಿ ಪುತ್ತೂರಿನಲ್ಲಿ ಒಂದು ಮಹಿಳಾ ಪೊಲೀಸ್ ಠಾಣೆಯನ್ನು ಮಾಡಿ ಕೊಡಬೇಕು. ಅದೇ ರೀತಿಯಲ್ಲಿ ಉಡುಪಿಯಲ್ಲಿ ಒಂದು ಮಹಿಳಾ ಪೊಲೀಸ್ ಠಾಣೆ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಅಡಿಕೆ ನಮ್ಮ ಊರಿನ ಪ್ರಮುಖ ಬೆಳೆ. ಸಾಮಾನ್ಯ ಜನರು ದುಡಿದು ತಿನ್ನಲಿಕ್ಕೆ ಹಾಗೂ ಬೆಳೆಸುವವನಿಗೂ ಬೆಳೆಯುವವನಿಗೂ ಎಲ್ಲರಿಗೂ ಜೀವನಾಡಿಯಾಗಿರುವಂತಹ ಅಡಿಕೆ ಇವತ್ತು ಬಹಳ ಕೆಳಮಟ್ಟಕ್ಕೆ ಹೋಗಿ ಎಲ್ಲರೂ ಬಹಳ ಕಷ್ಟದ ಸ್ಥಿತಿಯಲ್ಲಿರುವಾಗ ಕಳೆದ ವರ್ಷ ನಮಗೆ ಒಂದು ಕೆಜಿಗೆ 60 ರೂಪಾಯಿ ಬೆಂಬಲ ಬೆಲೆ ಘೋಷಣೆಯಾಗಿತ್ತು. ಈ ವರ್ಷ ಅದನ್ನು

75 ರೂಪಾಯಿಗಳಿಗೆ ಏರಿಸಬೇಕೆಂದು ಕೇಳಿಕೊಳ್ಳುವುದಲ್ಲದೆ ಅವರ್ತ ನಿಧಿಯನ್ನು ಇನ್ನೂ ಬಹಳಷ್ಟು ಜಾಸ್ತಿ ಇಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ತೆಂಗಿನ ಎಣ್ಣೆಯ ಮೇಲೆ ಶೇಕಡ 20 ತೆರಿಗೆಯನ್ನು ಹಾಕಿದ್ದೀರಿ. ತೆಂಗು ಕರಾವಳಿ ಜನರ ಆಹಾರವಸ್ತು. ನಾವು ಮೀನು ತಿನ್ನುವವರು, ಕುಚಲಕ್ಕಿ ಊಟ ಮಾಡುವವರು. ನಮಗೆ ಎಣ್ಣೆ ಇಲ್ಲದೇ ಆಗುವುದೇ ಇಲ್ಲ. ತೆಂಗು ಹಾಗೂ ಎಣ್ಣೆ ನಮ್ಮ ಜೀವನದಲ್ಲಿ ಬಡವರಿಗೂ ಶ್ರೀಮಂತರಿಗೂ ಎಲ್ಲರಿಗೂ ಬೇಕಾದಂತಹ ವಸ್ತು. ಅದು ಇದ್ದ ಕಾರಣವೇ ಬಹುಶಃ ನಾವೆಲ್ಲರೂ ಬುದ್ಧಿವಂತ ಜಿಲ್ಲೆಯವರು ಹಾಗು ಆರೋಗ್ಯವಂತ ಜಿಲ್ಲೆಯವರು ಅಂತ ಎಣಿಸಿದ್ದು ಅಂತ ಕಾಣುತ್ತದೆ. ದಯಮಾಡಿ ಈ ತೆಂಗಿನ ಎಣ್ಣೆಯ ಮೇಲಿನ ತೆರಿಗೆಯನ್ನು ಕಡಿಮೆ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಇನ್ನು ನನ್ನ ತಾಲ್ಲೂಕಿಗೆ ಸಂಬಂಧಪಟ್ಟ ಹಾಗೆ ನನ್ನ ಪುತ್ತೂರು ತಾಲ್ಲೂಕಿನಿಂದ ಪ್ರಸಿದ್ಧ ಶ್ರೀ ಕುಕ್ಕೆ ಸುಬ್ರಮಣ್ಯ ದೇವಸ್ಥಾನಕ್ಕೆ 4 ರಸ್ತೆಗಳು ಇವೆ. ಮಾತ್ರವಲ್ಲ ಮೈಸೂರು-ಭಂಟ್ವಾಳ ರಸ್ತೆ ಕೂಡ ನಮ್ಮ ಪುತ್ತೂರು ತಾಲ್ಲೂಕಿನಲ್ಲಿ ಹಾದು ಹೋಗುತ್ತದೆ. ಉಪ್ಪಿನಂಗಡಿ-ಸುಬ್ರಮಣ್ಯ, ಪುತ್ತೂರು-ಕಾಣಿಯಾರು- ಸುಬ್ರಮಣ್ಯ ಪುತ್ತೂರು-ಕುಂಬ್ರ-ಬೆಳ್ಳಾರೆ-ಸುಬ್ರಮಣ್ಯ ಈ ರಸ್ತೆಗಳು ಬಹುಶಃ ನಾನು ಕಂಡ ಹಾಗೆ 35 ವರ್ಷಗಳಿಂದ, ನಾನು ಮದುವೆಯಾಗಿ ಆ ಊರಿಗೆ ಬಂದು 35 ವರ್ಷವಾಯಿತು, 35 ವರ್ಷದಿಂದ ಅಲ್ಲಿ ಪುನರ್ ಡಾಂಬರೀಕರಣವಾಗಿಲ್ಲ. ಬಹುಶಃ ಇವತ್ತು ಒಂದೊಂದು ಹೊಂಡಗಳಲ್ಲಿ ಮಾರುತಿ ವ್ಯಾನ್, ಮಾರುತಿ 800 ಹೋದರೆ ಹಳ್ಳಗಳಲ್ಲಿ ಹೂತುಹೋದಾಗ ಅಲ್ಲಿಗೆ ಎಲ್ಲರೂ ಬಂದು ಎತ್ತುವಂತಹ ಸ್ಥಿತಿಯಲ್ಲಿವೆ. ಆದ್ದರಿಂದ ದಯಮಾಡಿ ರಸ್ತೆಗಳಿಗೆ ಹೆಚ್ಚಿನ ಹಣ ಒದಗಿಸಿ ಕೊಡಬೇಕೆಂದು ನಾನು ಅಧ್ಯಕ್ಷರ ಮೂಲಕ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಅಷ್ಟು ಮಾತ್ರವಲ್ಲ ಸುಬ್ರಮಣ್ಯ ದೇವಸ್ಥಾನದಲ್ಲಿ ಬಹಳಷ್ಟು ಆದಾಯ ಬರುತ್ತಿದೆ. ಕೋಟಿಗಟ್ಟಲೆ ಆದಾಯ ಬರುತ್ತಿದೆ. ಸರ್ಕಾರ ಆ ಆದಾಯವನ್ನು ಯಾವುದೋ ಜನರಿಗೆ ಎಲ್ಲಿಗೋ ಕೊಡುವ ಬದಲು ಸರ್ಕಾರದಲ್ಲಿ ಹಣ ಇಲ್ಲದಿದ್ದರೆ ಆ ಹಣವನ್ನು ರಸ್ತೆಗಳಿಗೆ ಹಾಕಿ ಆ ದೇವಸ್ಥಾನಕ್ಕೆ ಹೋಗುವಂತಹ ಜನರಿಗೆ ಸೌಕರ್ಯ ಮಾಡಿಕೊಡುವುದಕ್ಕಾದರೂ ಆ ಹಣವನ್ನು ಉಪಯೋಗಿಸಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಸರ್ಕಾರ ರೈತರ ಪರವಾದ ಸರ್ಕಾರ ಎಂದು ಹೇಳುತ್ತಿದ್ದೀರಿ. ರೈತರು ಬೆಳೆಸುವಂತಹ ಎಲ್ಲಾ ಬೆಳೆಗಳಿಗೂ ತೆರಿಗೆಯನ್ನು ಹಾಕಿದ್ದೀರಿ. ಜೊತೆಗೆ ಮಾನ್ಯ ಶಾಸಕರಾದ ರಘುಪತಿ ಭಟ್‌ರು ವಿದ್ಯುತ್ ಬಗ್ಗೆ ಹೇಳಿದ್ದನ್ನು ನಾನು ವಾಪಸ್ಸು ಹೇಳುತ್ತಿಲ್ಲ. ಆದರೂ ನನ್ನ ತಾಲ್ಲೂಕಿನಲ್ಲಿ ಎರಡು ನದಿಗಳು ಹರಿಯುತ್ತವೆ. ಕುಮಾರಧಾರ ಹಾಗೂ ನೇತ್ರಾವತಿ ನದಿಗಳು ಹರಿದರೂ ನಮಗೆ ಮಳೆಗಾಲದಲ್ಲಿ ನೀರಿನ ಅವಶ್ಯಕತೆ ಇಲ್ಲ. ಆದರೆ ನಮಗೆ ಜನವರಿಯಿಂದ ಮೇ ತಿಂಗಳವರೆಗೆ ತೋಟಗಳಿಗೆ ನೀರಿನ ಅವಶ್ಯಕತೆ ಇದೆ. ಆ ಸಂದರ್ಭದಲ್ಲಿ ಜಿಲ್ಲಾಡಳಿತ ನದಿಗಳಿಗೆ ಪಂಪ್‌ಗಳನ್ನು ಇಡುವುದಕ್ಕೆ ಬಿಡುವುದಿಲ್ಲ. ಈಗ ಮಳೆಗಾಲವಾದರೂ ಯಾವುದೇ ಪಂಚಾಯತಿಗೆ ಹೋದರೂ ಕುಡಿಯಲು ನೀರು ಇಲ್ಲ ಅಂತ ಎಲ್ಲಾ ಜನರ ಮೊರೆ ಕೇಳುವಂತಾಗಿದೆ. ಆದ ಕಾರಣ ಮಾನ್ಯ ಉಪ ಮುಖ್ಯಮಂತ್ರಿಯವರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ ದಯಮಾಡಿ ಎಲ್ಲಾ ಗ್ರಾಮೀಣ ಜನರಿಗೂ ಕುಡಿಯುವ ನೀರಿನ ವ್ಯವಸ್ಥೆಯ ಜೊತೆಗೆ ನದಿ ನೀರನ್ನು ಕೃಷಿಗೆ ಉಪಯೋಗಿಸಿಕೊಳ್ಳುವುದಕ್ಕೆ, ಪಂಪ್ ಇಡುವುದಕ್ಕೆ ಯಾವುದೇ ರೀತಿಯ ತೊಂದರೆಯಾಗದ ಹಾಗೆ ಮಾತ್ರವಲ್ಲ ನೀರು ಉಳಿಯುವುದಕ್ಕಾಗಿ ಅಲ್ಲಲ್ಲಿ ವೆಂಟೆಡ್ ಡ್ಯಾಮ್ ಮಂಜೂರು ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಇನ್ನು ಅಕ್ಷರ ದಾಸೋಹ

ಕಾರ್ಯಕ್ರಮವನ್ನು ಖಾಸಗಿಯವರಿಗೆ ವಿಸ್ತರಣೆ ಮಾಡಿದ್ದಕ್ಕೆ ಅಭಿನಂದನೆಗಳು. ಆದರೆ ಎಲ್ಲಾ ಅನುದಾನಿತ, ಅನುದಾನರಹಿತ ಕನ್ನಡ ಶಾಲೆಗಳಿಗೂ ಎಲ್ಲದ್ದಕ್ಕೂ ಅದನ್ನು ವಿಸ್ತರಿಸಬೇಕು ಅದೇ ರೀತಿ ಸಮವಸ್ತ್ರಗಳನ್ನು ವಿತರಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಮಂಗಳೂರು–ಹಾಸನ ರೈಲು ನಮ್ಮ ಪುತ್ತೂರಿನಲ್ಲಿ ಹಾದು ಹೋಗುತ್ತಿದೆ. ಪುತ್ತೂರಿನವರೆಗೂ ರೈಲು ಬರುತ್ತಿದೆ. ಈಗ ನಾವು ಇಲ್ಲಿ ರೈಲು ಬಿಡುತ್ತಿದ್ದೇವೆ. ಬಹುಶಃ ಮಾರ್ಚ್ ಒಳಗೆ ಒಂದು ರೈಲು ಆಗಬಹುದು ಅಂತ ರೈಲು ಬಿಟ್ಟವರು ನಾವು ಸುಬ್ರಮಣ್ಯದಿಂದ ಹಾಸನದವರೆಗೆ ಮಾನ್ಯ ರಘುಪತಿ ಭಟ್ಟರು ಹೇಳಿದಂತೆ 60 ಕೋಟಿ ರೂಪಾಯಿಗಳನ್ನು ಬೇಗನೆ ಬಿಡುಗಡೆ ಮಾಡಬೇಕು. ಇದ್ದ ರೈಲನ್ನು ನಾವು ಇಲ್ಲದಾಗಿಸಿಕೊಂಡು ನಮ್ಮ ಊರಿನ ಗಾದೆ ಇದೆ. ಗಂಡ ಸೀರೆ ತರುತ್ತಾನೆಂದು ಹೇಳಿ ಇದ್ದ ಸೀರೆಯನ್ನು ಬೆಂಕಿಗೆ ಹಾಕಿದಳು ಅಂತ.

2.40 ಪಿ.ಎಂ

ಆ ಅವಸ್ಥೆ ನಮ್ಮದಾಗಿದೆ. ಬ್ರಾಡ್‌ಗೇಜ್ ಆಗುತ್ತದೆಂದು ಇದ್ದ ಮೀಟರ್‌ಗೇಜ್ ಅನ್ನು ಕಿತ್ತುಬಿಸಾಡಿ, ರೈಲೂ ಇಲ್ಲ ಏನೂ ಇಲ್ಲದ ಸ್ಥಿತಿಯಾಗಿದೆ. ದಯಮಾಡಿ, ಅದು ಪೂರ್ತಿಯಾಗುವ ವ್ಯವಸ್ಥೆಯಾಗಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಇನ್ನು ಸ್ವಯಂ ಘೋಷಿತ ಆಸ್ತಿ ತೆರಿಗೆಯ ಬಗ್ಗೆ ಹೇಳಿದರು, ಅದು ಈಗ ಹಳ್ಳಿಗೂ ಬಂದಿದೆ, ನಮ್ಮ ದಕ್ಷಿಣ ಕನ್ನಡ ಪಂಚಾಯಿತಿಯಲ್ಲಿ ಬಹಳ ದೊಡ್ಡ ಸಮಸ್ಯೆಯಾಗಿದೆ. ನಮ್ಮಲ್ಲಿ ಹಟ್ಟಿ ಇದೆ, ಕೊಟ್ಟಿಗೆ ಇದೆ, ಕೋಳಿ ಗೂಡು ಇದೆ, ನಾಯಿ ಗೂಡು ಇದೆ, ಇದೆಲ್ಲದಕ್ಕೂ ಈಗ ತೆರಿಗೆ ಹಾಕುವುದಕ್ಕೆ ಹೋದರೆ ಬಹುಶಃ ಮಾನ್ಯ ರಘುಪತಿ ಭಟ್ಟರು ಹೇಳಿದ ಹಾಗೆ, ನಮ್ಮ ಊರಿನಲ್ಲಿ ಇಲ್ಲಿಯವರೆಗೆ ಯಾವ ರೈತರು ಆತ್ಮಹತ್ಯೆ ಮಾಡಿಕೊಳ್ಳಲಿಲ್ಲ, ನಮ್ಮ ಊರಿನಲ್ಲೂ ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿ ಬಂದೀತು. ದಯಮಾಡಿ ಅದನ್ನು ಪರಿಷ್ಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಆಸ್ಪತ್ರೆಯ ಬಗ್ಗೆ ಹೇಳುವುದಾದರೆ, ನಮ್ಮ ಪುತ್ತೂರು ಆಸ್ಪತ್ರೆಯಲ್ಲಿ, ಬಹಳ ಚೆನ್ನಾಗಿರುವ ಕಟ್ಟಡವಿದೆ, ವೈದ್ಯರುಗಳಿದ್ದಾರೆ, ಆದರೆ ಬಹಳ ಬೇಸರದ ಸಂಗತಿ ಎಂದರೆ, 50 ಕೆವಿಯ ಜನರೇಟರ್ ಮೂರುವರೆ ಲಕ್ಷ ರೂ. ಬೆಲೆಯುಳ್ಳದ್ದು ಒಂದೇ ಒಂದು ದಿವಸ ಕೆಲಸ ಮಾಡದೆ ಏಳು ವರ್ಷಗಳಿಂದ ಅಲ್ಲೇ ಬಿದ್ದಿದೆ. ಯಾವುದೇ ಸರ್ಕಾರ ಆ ಬಗ್ಗೆ ಚಿಂತನೆ ಮಾಡಲಿಲ್ಲ, ಸಾಮಾನ್ಯ ಜನರೆಲ್ಲಾ ಪುತ್ತೂರು ಆಸ್ಪತ್ರೆಗೆ ಹೋಗುವ ಬದಲು ಖಾಸಗಿ ಆಸ್ಪತ್ರೆಗಳಿಗೆ ಹೋಗುವಂತಹ ಸ್ಥಿತಿಯಾಗಿದೆ, ಆ ಬಗ್ಗೆ ತನಿಖೆ ಮಾಡಿಸುವ ವ್ಯವಸ್ಥೆಯನ್ನು ಸರ್ಕಾರ ಮಾಡಿ ಅಲ್ಲಿ ಸರಿಯಾದ ವ್ಯವಸ್ಥೆಯನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಕೊಯ್ಲ ಪಿಹೆಚ್‌ಸಿಯಲ್ಲಿ 10 ರೂ. ನ ಒಂದು ಕಟ್ಟಡವಾಗಿ ಇದುವರೆವಿಗೂ ಅದನ್ನು ಬಿಟ್ಟುಕೊಟ್ಟಿಲ್ಲ, ಅದನ್ನು ವೈದ್ಯರಿಗೆ ಹಸ್ತಾಂತರ ಮಾಡಿಲ್ಲ, ಕಾಂಟ್ರಾಕ್ಟರ್ ಬಿಲ್ಲನ್ನು ಮಾಡಿಕೊಂಡು ಹಾಗೆ ಬಿಟ್ಟು ಬಂದಿದ್ದಾರೆ. ಆ ಬಗ್ಗೆ ಕೂಡಲೇ ಅದು ಸಾರ್ವಜನಿಕರ ಉಪಯೋಗ ಕ್ಕೆ ಬರುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ನಮ್ಮಲ್ಲಿ ಸಾಧಾರಣ ಪುತ್ತೂರು ತಾಲ್ಲೂಕಿನಲ್ಲಿ ಎಲ್ಲಾ ಕಾಲೇಜುಗಳಲ್ಲೂ, ಐದಾರು ತರಗತಿಗಳ ಕೊಠಡಿಗಳ ಅವಶ್ಯಕತೆ ಇದೆ, ಒಂದೊಂದು ತರಗತಿಯಲ್ಲು 132 ಕ್ಕೂ ಹೆಚ್ಚು ಮಕ್ಕಳನ್ನು ಕುಳ್ಳಿರಿಸಿ, ಉಪನ್ಯಾಸಕರಿಗೆ ಮತ್ತು ಮಕ್ಕಳಿಗೆ ಸ್ವಲ್ಪವೂ ಜಾಗವಿಲ್ಲದ ಸ್ಥಿತಿಯಲ್ಲಿ ಪಾಠ ನಡೆಯುತ್ತಿದೆ, ದಯಮಾಡಿ

ಅದನ್ನು ಗಮನಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಬಿಪಿಎಲ್ ಪಟ್ಟಿಯಲ್ಲಿರುವ ಜನರಿಗೆ ಆದಾಯ ಮಿತಿಯನ್ನು 11,800 ರೂಪಾಯಿಗಳ ಮಿತಿಯನ್ನು ತೆಗೆದು 17,000 ರೂಪಾಯಿಗಳಿಗೆ ಹೆಚ್ಚಿಸಬೇಕೆಂದು ಕೇಳಿಕೊಳ್ಳುತ್ತೇನೆ. ಕೊನೆಯದಾಗಿ, ನಾವು ಹೊಸದಾಗಿ ಬಂದಿದ್ದೇವೆ, ಏನೇನೂ ಕೆಲಸ ಮಾಡಬೇಕೆನ್ನುವ ಆಸೆಯಲ್ಲಿದ್ದೇವೆ, ಎಲ್ಲಾ ಶಾಸಕರಿಗೂ ಕನಿಷ್ಠ 50 ಲಕ್ಷ ರೂಪಾಯಿಗಳ ಶಾಸಕರ ನಿಧಿಯನ್ನು ನೀಡಬೇಕೆಂದು ಕೇಳಿಕೊಳ್ಳುತ್ತಾ ಇಷ್ಟು ಮಾತನಾಡುವುದಕ್ಕೆ ಅವಕಾಶ ನೀಡಿದಕ್ಕೆ ಧನ್ಯವಾದಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಮಾನ್ಯ ಸದಸ್ಯರು : ಇವತ್ತು ಸಣ್ಣಗಾಣದಿಂದ ಅರೆದಿರುವ ಬ್ಯಾಂಡ್‌ಲೆಸ್ ಕೊಬ್ಬರಿ ಎಣ್ಣೆ ಏನಿದೆ, ಅದರ ಮೇಲಿನ ತೆರಿಗೆ ಶೇ. 4 ಇದ್ದು ಇವತ್ತು 20 ಪರ್ಸೆಂಟ್ ಮಾಡಿದ್ದಾರೆ. ಕಡೂರು, ತರಿಕೆರೆ, ತಿಪಟೂರು, ತುಮಕೂರು ಇಲ್ಲೆಡೆ, ಕೊಬ್ಬರಿ ಕಾಯಿಯಿಂದ ಬದುಕತಕ್ಕಂಥವರು, ನುಸಿ ರೋಗದಿಂದ ತತ್ತರಿಸಿ ಹೋಗಿದ್ದೇವೆ, ಇವತ್ತು ಕೊಬ್ಬರಿ ಬಗ್ಗೆ ಪ್ರಸ್ತಾಪವೇ ಮಾಡಿಲ್ಲ. ಆದುದರಿಂದ ಇವತ್ತು 4 ಪರ್ಸೆಂಟ್ ತೆರಿಗೆ ಇದ್ದದ್ದು 20 ಪರ್ಸೆಂಟ್ ಹಾಕಿದ್ದಾರೆ, ಅದನ್ನು ಕಮ್ಮಿ ಮಾಡಬೇಕು. ಆದರೆ ಕೊಬ್ಬರಿಯ ಮೇಲಿರುವ ಟ್ಯಾಕ್ಸ್ ಏನಿದೆ ನಿಜವಾಗಲೂ ನುಸಿರೋಗದಿಂದ ತತ್ತರಿಸಿದವರಿಗೆ ಅನಾನುಕೂಲವಾಗಿದೆ ಅದನ್ನು ಕಡಿಮೆ ಮಾಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ.

† **ಶ್ರೀ ಹೆಚ್. ನಿಂಗಪ್ಪ (ಕುಣಿಗಲ್)** : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಅರ್ಥ ಸಚಿವರಾದ ಸನ್ಮಾನ್ಯ ಸಿದ್ಧರಾಮಯ್ಯನವರು ಮಂಡಿಸಿರುವ ಈ ಆಯವ್ಯಯ ಬಹಳ ಉತ್ತಮವಾಗಿದೆ ಎಂಬ ಮಾತು ಇವತ್ತು ಎಲ್ಲಾ ವರ್ಗದಿಂದಲೂ ಕೇಳಿಬರುತ್ತಿದೆ. ಇವತ್ತು ಪತ್ರಿಕೆಯವರು ಅತ್ಯುತ್ತಮ ಆಯವ್ಯಯ ಎಂದು ಹೇಳುತ್ತಿದ್ದಾರೆ, ಅರ್ಥ ಶಾಸ್ತ್ರಜ್ಞರು ಅತ್ಯುತ್ತಮ ಆಯವ್ಯಯವೆಂದು ಹೇಳುತ್ತಿದ್ದಾರೆ, ಜೊತೆಗೆ ಇವತ್ತು ಜನ ಸಾಮಾನ್ಯರ ಬಾಯಿಯಲ್ಲೂ ಕೂಡ ಇಂತಹ ಒಂದು ಉತ್ತಮವಾದ ಆಯವ್ಯಯವನ್ನು ಇವತ್ತು ಮಂಡಿಸಿದ್ದಾರೆನ್ನುವ ಮಾತುಗಳ ಬರುತ್ತಿದೆ. ಜೊತೆಗೆ ವಿರೋಧಪಕ್ಷದ ನಾಯಕರಾದ ಮಾನ್ಯ ಯಡಿಯೂರಪ್ಪನವರು ಮಾತನಾಡುವಾಗ ಇದು ಚುನಾವಣೆಯ ವರ್ಷದಲ್ಲಿ ತರತಕ್ಕಂಥ ಆಯವ್ಯಯವೆಂದು ಹೇಳಿದರು. ಅಂದರೆ ಪರೋಕ್ಷವಾಗಿ ಇದೊಂದು ಅತ್ಯುತ್ತಮವಾದ ಆಯವ್ಯಯವೆನ್ನುವುದನ್ನು ಮಾನ್ಯ ವಿರೋಧಪಕ್ಷದ ನಾಯಕರು ಒಪ್ಪಿಕೊಂಡಂತಾಗಿದೆ. ಆದುದರಿಂದ ಇಂತಹ ಒಂದು ಉತ್ತಮವಾದ ಆಯವ್ಯಯವನ್ನು ಕೊಟ್ಟಿರುವ ಕೀರ್ತಿ ನಮ್ಮ ಅರ್ಥಸಚಿವರಿಗೆ ಸೇರಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಕೆಲವೊಂದು ವಿಷಯಗಳನ್ನು ಈ ಆಯವ್ಯಯದಲ್ಲಿ ಪ್ರಸ್ತಾಪ ಮಾಡಿದ್ದರೆ ಉತ್ತಮವಾಗಿರುತ್ತಿತ್ತು ಎಂಬುದು ನನ್ನ ಭಾವನೆ. ಇವತ್ತು ನಾನು ಮೈಸೂರು ರೇಷ್ಮೆ ವಲಯದಿಂದ ಬಂದಿರುವವನು, ಇವತ್ತು ರೇಷ್ಮೆ ಬೆಳೆಗಾರರಿಗೆ ಸಾಕಷ್ಟು ಸಮಸ್ಯೆಗಳಿಗೆ ರೇಷ್ಮೆ ಬೆಳೆಗಾರರ ಅಭಿವೃದ್ಧಿಯ ಬಗ್ಗೆ ಕೆಲವೊಂದು ವಿಷಯಗಳನ್ನು ಈ ಆಯವ್ಯಯದಲ್ಲಿ ಪ್ರಸ್ತಾಪ ಮಾಡಬೇಕಾಗಿದ್ದು ಅನಿವಾರ್ಯವಾಗಿತ್ತೆಂಬುದು ನನ್ನ ಅನಿಸಿಕೆ. ಇವತ್ತು ನಮ್ಮ ಬೆಳೆಗಾರರಿಗೆ ಬೋನಸ್ ಕೊಟ್ಟಿಲ್ಲ, ಈಗಾಗಲೇ 1 ಕೋಟಿ 50 ಲಕ್ಷ ರೂಪಾಯಿಗಳನ್ನು ಬೋನಸ್ ರೂಪದಲ್ಲಿ ರೇಷ್ಮೆಬೆಳೆಗಾರರಿಗೆ ಕೊಡಬೇಕಾಗಿತ್ತು, ಆದರೆ ಕಳೆದ ಅಕ್ಟೋಬರ್‌ನಿಂದ ಬಾಕಿ ಇದೆ, ಅದನ್ನು ಈ ಆಯವ್ಯಯದಲ್ಲಿ ಪ್ರಸ್ತಾಪ ಮಾಡಿದ್ದರೆ, ಆ ಹಣವನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿತ್ತೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಜೊತೆಗೆ ಇವತ್ತು ರೇಷ್ಮೆ ಬೆಳೆಗಾರರ ಸಮಸ್ಯೆಗಳೇನಿವೆ ಎಂದರೆ, ಇವತ್ತು ಹೊಲದಲ್ಲಿ ರೈತ ಉಪ್ಪುನೇರಳೆ ಗಿಡವನ್ನು ಹಾಕಿ ಅದರಿಂದ ಈ ರೇಷ್ಮೆ ಹುಳುಗಳನ್ನು

ಸಾಕುವುದಕ್ಕೆ ಪ್ರಾರಂಭ ಮಾಡಿದ್ದರಿಂದ ಹಿಡಿದುಕೊಂಡು, ಮಲಗಿದ ಮೇಲೆ ಗೂಡು ಕಟ್ಟುವವರೆವಿಗೂ ಅನೇಕ ಸಮಸ್ಯೆಗಳನ್ನು ಈ ಬೆಳೆಗಾರರು ಎದುರಿಸಬೇಕಾಗಿ ಬಂದಿದೆ. ಇವತ್ತು ಫ್ಯಾಬ್ರಿನ್ ಎನ್ನುವ ರೋಗ ಬರುತ್ತಿದೆ, ಹಸಿರು ಮೋಟೊ ಎನ್ನುವ ರೋಗ ಬರುತ್ತಿದೆ, ಇನ್ನು ಅನೇಕ ತರಹದ ರೋಗಗಳಿಂದ ಇವತ್ತು ಸರಿಯಾಗಿ ಗೂಡು ಕಟ್ಟದೆ ಇವತ್ತು ಬೆಳೆ ಹಾಳಾಗುವ ಪರಿಸ್ಥಿತಿಯಲ್ಲಿ ಇವತ್ತು ಈ ಬೆಳೆವಿಮೆಯನ್ನು ಈ ರೇಷ್ಮೆ ಬೆಳೆಗೂ ವಿಸ್ತರಿಸಿದ್ದರೆ ಬಹಳ ಚೆನ್ನಾಗಿರುತ್ತಿತ್ತು ಎಂದು ನಾನು ಹೇಳುತ್ತಿದ್ದೇನೆ. ರೈತ ಇವತ್ತು ಕಷ್ಟಪಟ್ಟು ಬೆಳೆ ಬೆಳೆಯುತ್ತಾನೆ. ಬೆಳೆ ಬೆಳೆದು ಇನ್ನೇನು ಗೂಡು ಕಟ್ಟುವುದರೊಳಗಾಗಿ, ಆ ಗೂಡು ಹಾಳಾದರೆ, ಅಥವಾ ಉತ್ತಮಮಟ್ಟದ ಗೂಡು ಬರದೇ ಹೋದರೆ ಅದು ಬಿತ್ತನೆಗೆ ಹೋಗುವುದಿಲ್ಲ. ಬಿತ್ತನೆಗೆ ಹೋಗದೆ ಇರುವ ಸಂದರ್ಭದಲ್ಲಿ ಅದು ಚರಕಕ್ಕೆ ಹೋದಾಗ ಅದರ ಬೆಲೆ ಬಹಳ ಕಡಿಮೆ ಇರುತ್ತದೆ. ಇವತ್ತು ತಮಗೆಲ್ಲರಿಗೂ ಗೊತ್ತಿರುವಂತೆ ಇವತ್ತೇನು ಹೊರದೇಶಗಳಿಂದ ರೇಷ್ಮೆಯನ್ನು ಆಮದು ಮಾಡಿಕೊಳ್ಳುತ್ತಿದ್ದಾರೆ ಇಂತಹ ಸಂದರ್ಭದಲ್ಲಿ ಬೆಲೆ ಕುಸಿದು ಬೆಲೆ ಕಡಿಮೆಯಾಗಿದೆ, ಅದನ್ನು ಉತ್ತಮಪಡಿಸಿಕೊಳ್ಳಬೇಕಾದರೆ ರೇಷ್ಮೆ ಬೆಳೆಗಾರರ ಸ್ಥಿತಿಗತಿಗಳನ್ನು ಉತ್ತಮವಾಗಿ ಕಾಯ್ದುಕೊಳ್ಳಬೇಕಾದರೆ ಅವರಿಗೆ ಇವತ್ತು ಕೆಲವೊಂದು ಸವಲತ್ತುಗಳನ್ನು ಕೊಡಬೇಕಾಗಿ ಬರುತ್ತದೆ. ಇವತ್ತು ರೈತನಿಗೆ ಕೊಳವೆಭಾವಿಗಳನ್ನು ಕೊರಿಸುವುದಕ್ಕೆ, ಪಂಪ್‌ಸೆಟ್‌ಗಳನ್ನು ಕೊಳ್ಳುವುದಕ್ಕೆ ಒಂದು ಆರ್ಥಿಕ ಸಹಾಯವನ್ನು ಕೊಡಬೇಕಾಗಿತ್ತು, ಅದನ್ನು ಕಳೆದ ವರ್ಷದಿಂದ ನಿಲ್ಲಿಸಿದ್ದಾರೆ. ಜೊತೆಗೆ ಚಂದ್ರಿಕೆ ಮತ್ತು ತಟ್ಟೆಗಳನ್ನು, ಹುಳ ಸಾಕತಕ್ಕ ತಟ್ಟೆಗಳನ್ನು ಸರ್ಕಾರದ ವತಿಯಿಂದ ಕೊಡುತ್ತಿದ್ದ ತಟ್ಟೆಗಳ ಸವಲತ್ತುಗಳನ್ನು ಕೂಡ ಕಡಿಮೆ ಮಾಡಿದ್ದಾರೆ. ಇದೆಲ್ಲದರ ಜೊತೆಗೆ ಇವತ್ತೇನು ರೇಷ್ಮೆ ಬೆಳೆಯನ್ನು ಬೆಳೆಯುತ್ತಿದ್ದರು ಕಳೆದ ನಾಲ್ಕು ವರ್ಷದಿಂದ 2200 ಹೆಕ್ಟೇರ್ ಪ್ರದೇಶದಲ್ಲಿ ಏನು ರೇಷ್ಮೆ ಬೆಳೆಯನ್ನು ಬೆಳೆಯುತ್ತಿದ್ದರು, ಅದು ಇವತ್ತು ಕಡಿಮೆಯಾಗಿ 1600 ಹೆಕ್ಟೇರ್‌ಗೆ ಇಳಿದಿದೆ. ಅಂದರೆ ಸರ್ಕಾರದಿಂದ ಬರುತ್ತಿದ್ದ ಸೌಲತ್ತುಗಳು ಕಡಿಮೆಯಾದ ದಿಸೆಯಿಂದಾಗಿ ಇವತ್ತು ರೇಷ್ಮೆ ಬೆಳೆಯನ್ನು ಬೆಳೆಯುವ ರೈತ ರೇಷ್ಮೆ ಬೆಳೆಯನ್ನು ಬೆಳೆಯುವುದನ್ನು ಬಿಡತಕ್ಕಂಥ ಪರಿಸ್ಥಿತಿ ಇವತ್ತು ರಾಜ್ಯದಲ್ಲಿ ಅದರಲ್ಲೂ ಮೈಸೂರು ಬಿತ್ತನೆ ವಲಯದಲ್ಲಿ ಉದ್ಭವವಾಗಿದೆ. ಆದುದರಿಂದ ಇದೆಲ್ಲವನ್ನೂ ಸರಿಪಡಿಸುವ ನಿಟ್ಟಿನಲ್ಲಿ ಈ ಸರ್ಕಾರ ಆಯವ್ಯಯದಲ್ಲಿ ಆರ್ಥಿಕ ಸಹಾಯವನ್ನು ಮಾಡುವ ಒಂದು ಪ್ರಸ್ತಾವನೆಯನ್ನು ಇಟ್ಟಿದ್ದರೆ ರೈತರಿಗೆ ಬಹಳ ಅನುಕೂಲವಾಗುತ್ತಿತ್ತು ಎನ್ನುವ ಮಾತನ್ನು ಹೇಳುತ್ತೇನೆ. ಇವತ್ತು ಕೆಲವು ಮಾನ್ಯ ಗೌರವಾನ್ವಿತ ಸದಸ್ಯರು ಶಾಸಕರ ನಿಧಿಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ, ಇದು ಪಕ್ಷಾತೀತವಾಗಿ ಎಲ್ಲಾ ಶಾಸಕರಿಗೂ ಕೂಡ ಅನ್ವಯಿಸತಕ್ಕದ್ದು. ಏಕೆಂದರೆ ಇವತ್ತು ನಮಗೆ ಓಟು ಕೊಟ್ಟಂತಹ ಜನ ನಮ್ಮನ್ನು ಶಾಸಕರನ್ನಾಗಿ ಮಾಡಿದಂತಹವರು ಅವರು ಸಾಕಷ್ಟು ನಮ್ಮಿಂದ ನಿರೀಕ್ಷಣೆ ಮಾಡುತ್ತಿದ್ದಾರೆ ಆದರೆ ಇವತ್ತು ಹಳ್ಳಿಗಳಿಗೆ ಹೋದಾಗ ಕುಡಿಯುವ ನೀರನ್ನು ಸರಿಪಡಿಸುವುದಕ್ಕೆ ನಮ್ಮ ಕೈಯಲ್ಲಿ ಆಗುವುದಿಲ್ಲ ಏಕೆಂದರೆ ಆ ವ್ಯವಸ್ಥೆಯನ್ನು ಗ್ರಾಮಪಂಚಾಯಿತಿಗೆ ವಹಿಸಿದ್ದಾರೆ. ಇತ್ತೀಚೆಗೆ ನೂರು ಹೆಕ್ಟೇರ್‌ಗಿಂತ ಕಡಿಮೆ ಪ್ರದೇಶವಿರುವ ಕೆರೆಗಳನ್ನೂ ಕೂಡ ಗ್ರಾಮಪಂಚಾಯಿತಿಗೆ ವಹಿಸಿದ್ದಾರೆ; ಜೊತೆಗೆ ರಸ್ತೆಗಳು ಜಿಲ್ಲಾಪಂಚಾಯಿತಿಯ ವ್ಯಾಪ್ತಿಗೆ ಬರುತ್ತವೆ, ಶಾಸಕನಾಗಿ ಇವತ್ತು ಗ್ರಾಮೀಣಪ್ರದೇಶದಲ್ಲಿ ಏನಾದರೂ ಜನಗಳಿಗೆ ಅನುಕೂಲ ಮಾಡಬಹುದು ಎನ್ನುವ ಧೈರ್ಯ ಅಥವಾ ನೇರವಾಗಿ ಭರವಸೆಯನ್ನು ಕೊಡಬಹುದು ಎಂಬುದು ಇವತ್ತು ನಮಗಿಲ್ಲ. ಅದಕ್ಕೋಸ್ಕರ ಇವತ್ತು ಶಾಸಕರಿಗೆ ಕನಿಷ್ಠ 50 ಲಕ್ಷ ರೂ. ಆದರೂ ಕೂಡ ವರ್ಷಕ್ಕೆ ಈ ಶಾಸಕರ ಕ್ಷೇತ್ರಾಭಿವೃದ್ಧಿ ನಿದಿಗೆ

ಕೊಟ್ಟರೆ ಸೂಕ್ತವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ, ಏಕೆಂದರೆ ನಮ್ಮನ್ನು ಈ ಕೊನೆಯ ಸಾಲಿನಲ್ಲಿ ಕೂರಿಸಿಬಿಟ್ಟಿದ್ದೀರಿ. ನಾವು ಕಾಲೇಜಿಗೆ ಹೋಗಬೇಕಾದರೂ ಕೊನೆಯ ಸಾಲಿನಲ್ಲಿ ಕುಳಿತುಕೊಳ್ಳುತ್ತಿದ್ದೆವು, ಶಾಸಕರಾಗಿ ಬಂದ ಮೇಲೂ ಕೊನೆಯ ಸಾಲಿನಲ್ಲಿ ಅದೂ ವಿರೋಧಪಕ್ಷದ ಸಾಲಿಗೆ ಹಾಕಿದ್ದೀರಿ, ಯಡಿಯೂರಪ್ಪನವರು ಮಾತು ಮಾತಿಗೂ ನಮ್ಮ ಕಡೆಯವರು, ಈ ಕಡೆಯವರು ಎಂದು ಹೇಳುತ್ತಾರೆ, ನಾವು ಈ ಕಡೆಗೆ ಸೇರಿಕೊಂಡಿದ್ದೇವೆ. ಇವತ್ತು ಸಾಲಗಳ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿಯ ಬಗ್ಗೆ ಆಯವ್ಯಯದಲ್ಲಿ ಪ್ರಸ್ತಾಪವಾಗಿದೆ. ಕಳೆದ ಸಾಲಿನಲ್ಲಿ ಸರ್ಕಾರ ಸಾಲದ ಮೇಲಿನ ಬಡ್ಡಿಯನ್ನು ಮನ್ನಮಾಡುತ್ತೇವೆಂದೇನು ಆಶ್ವಾಸನೆ ಕೊಟ್ಟಿತ್ತು, ಅದಕ್ಕೆ 83 ಕೋಟಿ ರೂಪಾಯಿ ಕೊಡಲಾಗಿದೆ ಎಂದು ಇದರಲ್ಲಿ ಹೇಳಲಾಗಿದೆ.

ಅದಕ್ಕೆ 83 ಕೋಟಿ ರೂ.ಗಳನ್ನು ತೆಗೆದಿರಿಸಲಾಗಿದೆಯೆಂದು ಹೇಳಿದ್ದೀರಿ. ಆದರೆ ಅದಕ್ಕೆ ನಿರ್ದಿಷ್ಟವಾದ ಪದಗಳಲ್ಲಿ ಉಲ್ಲೇಖಿಸಿರುವುದಿಲ್ಲ. ಸಾಲಗಳ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಎಲ್ಲಿ ಮನ್ನಾ ಮಾಡಿದ್ದೇವೆ ಎಷ್ಟು ಮನ್ನಾ ಮಾಡಿದ್ದೇವೆ ಮತ್ತು ರೈತರು ಯಾವ ರೀತಿ ಪ್ರಯೋಜನವನ್ನು ಪಡೆದುಕೊಳ್ಳಬಹುದು ಎಂಬುದರ ಬಗ್ಗೆ ಸ್ಪಷ್ಟವಾದ ಉಲ್ಲೇಖ ಈ ಬಜೆಟ್‌ನಲ್ಲಿ ಇರುವುದಿಲ್ಲ ಎಂಬ ಮಾತನ್ನು ಅಧ್ಯಕ್ಷರ ಗಮನಕ್ಕೆ ತರುತ್ತಾ ಇವತ್ತು ಸ್ತ್ರೀಶಕ್ತಿ ಸಂಘಗಳನ್ನು ಬಲಪಡಿಸಬೇಕಾದ ಒಂದು ಅನಿವಾರ್ಯತೆ ಇದೆ. ಏಕೆಂದರೆ ನಾವು ಹಳ್ಳಿಗಳಿಗೆ ಹೋದಂತಹ ಸಂದರ್ಭಗಳಲ್ಲಿ ಸ್ತ್ರೀಶಕ್ತಿ ಸಂಘಗಳ ಸದಸ್ಯರು ಬಂದು ಕೇಳುತ್ತಾರೆ ನಮಗೆ ಒಂದು ಕಟ್ಟಡ ಮಾಡಿ ಕೊಡಿ ಅಂತ, ಈಗ ನಿಗದಿಪಡಿಸಿರುವ 16 ಕೋಟಿ ರೂ. ಹಣದಲ್ಲಿ ಅವರಿಗೂ ಶಿಸ್ತುನಿಧಿ ಕೊಡಬೇಕಾಗುತ್ತದೆ, ಕೆಲವೊಂದು ಸವಲತ್ತುಗಳು ಕೊಡಬೇಕಾಗುತ್ತದೆ, ಕೆಲವೊಂದು ಉಪಕರಣ ಸಲಕರಣೆಗಳನ್ನು ಕೊಡಿಸಬೇಕಾದ ಒಂದು ವ್ಯವಸ್ಥೆ ಇರುವುದರಿಂದ ಇವತ್ತು ನಿಗದಿಮಾಡಿರುವ 16 ಕೋಟಿ ರೂ. ಹಣ ಸ್ತ್ರೀಶಕ್ತಿ ಸಂಘಗಳನ್ನು ಬಲಪಡಿಸಲಿಕ್ಕೆ ಸಾಲದು ಎಂಬುದು ನನ್ನ ಭಾವನೆ. ಅದಕ್ಕೋಸ್ಕರ ಮಾನ್ಯ ಅಧ್ಯಕ್ಷರಲ್ಲಿ ನನ್ನ ವಿನಂತಿ ಇಷ್ಟೇನೇ ಈ ಸ್ತ್ರೀಶಕ್ತಿ ಸಂಘಗಳಿಗೆ ನಿಗದಿಮಾಡಿರುವ 16 ಕೋಟಿ ರೂಗಿಂತ ಅತಿ ಹೆಚ್ಚಿನ ಹಣವನ್ನು ಕಾದಿರಿಸಬೇಕು ಅಂತ ಕೇಳಿಕೊಂಡು ಇವತ್ತು ಅಂಗನವಾಡಿ ಕೇಂದ್ರಗಳಿಗೆ 6 ಕೋಟಿ ರೂಗಳನ್ನು ಆಯವ್ಯಯದಲ್ಲಿ ನಿಗದಿ ಮಾಡಲಾಗಿದೆ. 6 ಕೋಟಿ ರೂಗಳಲ್ಲಿ ಈ ರಾಜ್ಯದಲ್ಲಿ ಅಂಗನವಾಡಿ ಕಟ್ಟಡಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲವೆಂಬುದನ್ನು ತಮ್ಮ ಗಮನಕ್ಕೆ ತರುತ್ತಾ ಇವತ್ತೇನು ಕೆಲವೊಂದು ಬಾಬುಗಳಲ್ಲಿ ನಿಗದಿಮಾಡಿರುವಂತಹ ಹಣ ಸಾಲದು ಎಂಬುವನ್ನು ಸರ್ಕಾರದ ಗಮನಕ್ಕೆ ತರುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† **ಶ್ರೀ ನರಸಿಂಹ ನಾಯಕ್ (ಸುರಪುರ)** : ಅಧ್ಯಕ್ಷರೇ, ಈ ಆಯವ್ಯಯವನ್ನು ಮಾನ್ಯ ಸಿದ್ಧರಾಮಯ್ಯನವರು ಮಂಡಿಸಿದ್ದಾರೆ. ಅದರಲ್ಲಿ ನೇಕಾರರ ಪ್ಯಾಕೇಜಿಗೆ 20 ಕೋಟಿ ರೂಗಳನ್ನು ಅನುದಾನ ಇಟ್ಟಿದ್ದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅದರ ಜೊತೆಗೆ ಮಾನ್ಯ ಡಿಆರ್ ಪಾಟೀಲರು ಹೇಳಿದಂತೆ ನೇಕಾರರಿಂದ ಸರ್ಕಾರ ಶಾಲೆಗಳಿಗೆ ಮತ್ತು ಅಧಿಕಾರಿಗಳಿಗೆ ಒದಗಿಸುವ ಬಟ್ಟೆನೇಯಲು ವಹಿಸಿಕೊಡಬೇಕು, ಕೈಮಗ್ಗದ ನೇಕಾರರು ಈಗ ಬಹಳ ತೊಂದರೆಯಲ್ಲಿದ್ದಾರೆ, ಹಿಂದಿನಿಂದ ಬಂದ ಸಂಪ್ರದಾಯವನ್ನು ಅವರು ಬಿಡುವಂತಹ ಪರಿಸ್ಥಿತಿ ಬಂದಿದೆ. ದಯಮಾಡಿ ಅವರಿಗೆ ಹೆಚ್ಚಿನ ಅನುಕೂಲ ಮಾಡಿಕೊಡಬೇಕು ಅಂತ ನಾನು ಕೇಳುತ್ತಾ, ಮತ್ತು ಇವತ್ತು ರಾಜ್ಯದಲ್ಲಿ ಅನುದಾನಿತ ಪಾಲಿಟೆಕ್ನಿಕ್ ಸಿಬ್ಬಂದಿ ವೇತನ 12 ತಿಂಗಳಿಂದ 27 ಕಾಲೇಜಿಗೆ ಒದಗಿಸಿಲ್ಲ. ಅದು 12.7

ಕೋಟಿ ರೂ. ಆಗುತ್ತದೆ, ಆದರೆ ಈ ಬಜೆಟ್‌ನಲ್ಲಿ 5.3 ಕೋಟಿ ರೂ. ಮಾತ್ರ ಇಟ್ಟಿದ್ದಾರೆ. ಇದನ್ನು ಇನ್ನೂ ಹೆಚ್ಚಿಗೆ ಮಾಡಿ ರಾಜ್ಯದ 27 ಅನುದಾನಿತ ಪಾಲಿಟೆಕ್ನಿಕ್ ಸಿಬ್ಬಂದಿಗೆ ವೇತನ ಒದಗಿಸಬೇಕೆಂದು ಸರ್ಕಾರಕ್ಕೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಕರ್ನಾಟಕದಲ್ಲಿ ವಿದ್ಯುತ್ತಿನ ಕೊರತೆ ಬಹಳ ಇದೆ. ಈಗಾಗಲೇ ಬಜೆಟ್‌ನಲ್ಲಿ ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ ಸುಮಾರು 3 ಸಾವಿರ ಕೋಟಿ ರೂ. ನಷ್ಟವಾಗುತ್ತದೆ ಅಂತ. ಇವತ್ತು ನಮ್ಮ ರಾಜ್ಯಕ್ಕೆ ಬೇಕಾದ್ದು 310 ಮಿಲಿಯನ್ ಯೂನಿಟ್, ಇದರಲ್ಲಿ ನಾವು 22 ಯೂನಿಟನ್ನು ಹೊರರಾಜ್ಯಗಳಿಂದ ಖರೀದಿ ಮಾಡುತ್ತಿದ್ದೇವೆ. ಇದರಿಂದ ನಮಗೆ ಬಹಳ ನಷ್ಟದ ಪರಿಸ್ಥಿತಿ ಇದೆ. ರಾಯಚೂರು ಶಾಖೋತ್ಪನ್ನ ಕೇಂದ್ರದಿಂದ ಉತ್ಪನ್ನವಾಗುವ ಒಟ್ಟು ವಿದ್ಯುತ್ 1470 ಮಿಲಿಯನ್ ಯೂನಿಟ್, ಆದರೆ ನಮಗೆ ಬೇಕಾಗಿರುವುದು 3 ಸಾವಿರ ಮೆಗಾವ್ಯಾಟ್, ನಮಗೆ ಇದುವರೆಗೂ 1500 ಮೆಗಾವ್ಯಾಟ್ ವಿದುತ್ ಕೊರತೆ ಇದ್ದ ಕಾರಣ ಗ್ರಾಮಾಂತರ ಪ್ರದೇಶಗಳಿಗೆ ಸಾಕಷ್ಟು ವಿದ್ಯುತ್ ಪೂರೈಸಲು ಬಹಳ ತೊಂದರೆಯಾಗುತ್ತದೆ. ಅದಕ್ಕೋಸ್ಕರ ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುವುದಿಷ್ಟೆ: ಇವತ್ತು ರಾಯಚೂರಿನಲ್ಲಿ 6000 ಕೋಟಿ ರೂ. ವೆಚ್ಚದಲ್ಲಿ ವಿದ್ಯುತ್ ಉತ್ಪನ್ನ ನಡೆದಿದೆ, ಅದಕ್ಕೆ ಕಲ್ಲಿದ್ದಲು ಇನ್ನಿತರ ಕಚ್ಚಾವಸ್ತುಗಳೂ ಬೇಕು. ಕಲ್ಲಿದ್ದಲು ಮುಗಿಯುವ ಭಯವೂ ಇದೆ. ಆದ್ದರಿಂದ ಸರ್ಕಾರ ಹೆಚ್ಚಿನ ಆದ್ಯತೆಯನ್ನು ಸೋಲಾರ್ ಸಿಸ್ಟಂ ಮತ್ತು ವಾಯು ನಿಯಂತ್ರಣ ಘಟಕಗಳಿಂದ ಉತ್ಪಾದನೆ ಮಾಡುವುದಾದರೆ ವಿದ್ಯುತ್ ಉತ್ಪನ್ನದ ಪ್ರಮಾಣವೂ ಹೆಚ್ಚುವುದು, ಖರ್ಚೂ ಬಹಳ ಕಡಿಮೆ ಆಗುವುದು. ಚಿತ್ರದುರ್ಗ ಮತ್ತು ಅಲ್ಲಿಂದ ಮುಂದೆ ಹೋಗುತ್ತಾ ರಸ್ತೆಗಳನ್ನು ನೋಡಿದಾಗ ಅಲ್ಲೆಲ್ಲಾ ವಾಯು ಗಣಕ ಯಂತ್ರಗಳಿವೆ, ಆದರೆ ನಮ್ಮ ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳ ಕೆಲವೊಂದು ತಾಲ್ಲೂಕು ಪ್ರದೇಶಗಳಲ್ಲಿ ಸುರಪುರದಲ್ಲಿ ಇದನ್ನು ಅಳವಡಿಸಿದರೆ ವಿದ್ಯುತ್ ಉತ್ಪಾದನೆ ಹೆಚ್ಚಾಗುತ್ತದೆ. ಜೊತೆಗೆ ನಮ್ಮ ಖರ್ಚೂ ಸರ್ಕಾರಕ್ಕೆ ಕಡಿಮೆ ಆಗುತ್ತದೆ, ಇವತ್ತು ಆ ಒಂದು ಸಿಸ್ಟಂ ಮಾಡಬೇಕಾದರೆ ಸಮುದ್ರ ಮಟ್ಟಕ್ಕಿಂತ 600 ಮೀಟರ್ ಎತ್ತರದಲ್ಲಿರಬೇಕು ಆ ಪ್ರದೇಶ, 15 ಕಿಮೀಗಿಂತ ಹೆಚ್ಚು ಗಾಳಿ ಬೀಸುತ್ತಿರಬೇಕು. ಅಂಥ ಪ್ರದೇಶಗಳಲ್ಲಿ ಈ ಸಿಸ್ಟಂ ಮಾಡಿದರೆ ಅನುಕೂಲವಾಗುತ್ತದೆ. ಸುರಪುರ, ದೇವದುರ್ಗ ಮತ್ತು ಲಿಂಗಸುಗೂರು, ಹಾಗೂ ಶಹಪುರ ತಾಲ್ಲೂಕುಗಳು ಸಮುದ್ರ ಮಟ್ಟಕ್ಕಿಂತ 750 ಮೀಟರ್ ಎತ್ತರದಲ್ಲಿದ್ದು ಸಾಕಷ್ಟು ಉಷ್ಣಾಂಶ ಹೊಂದಿರುವ ಪ್ರದೇಶಗಳಾಗಿದ್ದು ಇಲ್ಲಿ ಅದಕ್ಕೆ ಆದ್ಯತೆ ಕೊಟ್ಟರೆ 1500 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಲು 6000 ಕೋಟಿ ರೂ. ಏನು ಖರ್ಚು ಮಾಡುತ್ತೇವೆ ಮತ್ತು ಕಚ್ಚಾವಸ್ತುಗಳಿಗೆ ಅದರಷ್ಟೇ ಖರ್ಚು ಮಾಡಬೇಕಾಗುತ್ತದೆ, ಅದರಲ್ಲಿ ಉಳಿತಾಯವಾಗುತ್ತದೆ. ಇಲ್ಲಿ ವಾಯು ಗಣಕ ಯಂತ್ರ ಒಂದು ಸಾರಿ ಹಾಕಲು ನಾವೇನು ಖರ್ಚು ಮಾಡುತ್ತೇವೆ, ಅಷ್ಟೇ ಖರ್ಚಾಗುವುದು. ಅದರ 10 ಪರ್ಸೆಂಟ್ ಮಾತ್ರ ನಿರ್ವಹಣಾ ಖರ್ಚು ಬರುವುದು, ನಮ್ಮ ತಾಲ್ಲೂಕಿಗೆ ಎಷ್ಟು ಕರೆಂಟ್ ಬೇಕು ಅಂತ ಹೇಳುತ್ತೇನೆ, ಸುರಪುರ ತಾಲ್ಲೂಕಿಗೆ ಒಂದು ತಿಂಗಳಿಗೆ 7 ಮಿಲಿಯನ್ ಯೂನಿಟ್ ಆಗುತ್ತದೆ, ಆದರೆ ನಮಗೆ ಬೇಕಾಗಿರುವುದು 12 ಮಿಲಿಯನ್ ಯೂನಿಟ್, ಒಂದು ವರ್ಷಕ್ಕೆ ಒಟ್ಟು 84 ಮಿಲಿಯನ್ ಯೂನಿಟ್ ವಿದ್ಯುತ್ ಕೊರತೆ ಇದೆ, ಒಂದು ವರ್ಷಕ್ಕೆ ಬೇಡಿಕೆ 124 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಗೆ ಸುಮಾರು 6.20 ಕೋಟಿ ರೂ. ಖರ್ಚಾಗುತ್ತದೆ, ಬದಲಿಗೆ ವಾಯು ಗಣಕ ಯಂತ್ರವನ್ನು ಸುರಪುರದಲ್ಲಿ ಅಳವಡಿಸಿದರೆ ಸುಮಾರು 6 ಕೋಟಿ ರೂನಲ್ಲೇ ನಮ್ಮ ತಾಲ್ಲೂಕಿಗೆ ವಿದ್ಯುತ್ ಒದಗಿಸಿದಂತಾಗುತ್ತದೆ, ಪ್ರತಿ ವರ್ಷ ಕಲ್ಲಿದ್ದಲಿನ ತೊಂದರೆ ಇರುವುದಿಲ್ಲ ಅಥವಾ ವಾಯು

ಕೆಡುತ್ತದೆಂಬ ತೊಂದರೆ ಇರುವುದಿಲ್ಲ, ಇದರಿಂದ ಸರ್ಕಾರಕ್ಕೂ ಇನ್ನಿತರ ಅನುದಾನಗಳನ್ನು ನೀಡಲು ಉಳಿಯುತ್ತದೆ, ನಮ್ಮ ಹಳ್ಳಿಗಾಡಿಗೆ ಹೆಚ್ಚಿನ ವಿದ್ಯುತ್ತು ಪೂರೈಕೆ ಆಗುವುದು, ಇವತ್ತು ಸರ್ಕಾರಗಳು 8 ತಾಸು 12 ತಾಸು ಕರೆಂಟ್ ಕೊಡುತ್ತೇವೆ ಎನ್ನುತ್ತವೆ. ನಿಜಸ್ಥಿತಿ ಬಗ್ಗೆ ಎಲ್ಲಾ ಶಾಸಕರೂ ತಮ್ಮ ಮನಮುಟ್ಟಿ ಹೇಳಬೇಕು, ನಮ್ಮ ರೈತರಿಗೆ ದಿನವೊಂದಕ್ಕೆ 4 ರಿಂದ 5 ಗಂಟೆ ತ್ರಿಫೇಸ್ ವಿದ್ಯುತ್ ಸಿಗುತ್ತಿಲ್ಲ. ಈ ತರಹ ಯಾವ್ಯಾವ ಪ್ರದೇಶಗಳಲ್ಲಿ ಅಳವಡಿಸಬಹುದಾದ ಪ್ರದೇಶಗಳಿವೆ ಎಲ್ಲೆಲ್ಲ ಇವು ನಡೆಯುತ್ತವೆ ಅಲ್ಲೆಲ್ಲ ಹಾಕಿದರೆ ಅಲ್ಲಿನ ರೈತರಿಗೆ ಅನುಕೂಲವಾಗುತ್ತದೆ. ಇವತ್ತು ನಾವು ಹೊರಗಿನಿಂದ ಖರೀದಿಸುವ ಪ್ರತಿ ಯೂನಿಟ್‌ಗೆ ಎರಡು ರೂ. ಚಾರ್ಜ್ ಬೀಳುತ್ತದೆ, ಆದರೆ ಸ್ವತಃ ನಾವೇ ವಾಯು ಗಣಕ ಯಂತ್ರದಿಂದ ತಯಾರಿಸಿದಲ್ಲಿ 90 ಪೈಸೆ ಅಥವಾ ಒಂದು ರೂ. ಖರ್ಚಿನಲ್ಲಿ ಆಗುತ್ತದೆ, ನಮ್ಮ ರೈತರಿಗೂ ಹೆಚ್ಚು ಕೊಟ್ಟರೆ ಅವರಿಂದಲೂ ಹೆಚ್ಚಿನ ಉತ್ಪಾದನೆ ಆಗುತ್ತದೆ, ಕೈಗಾರಿಕಾ ಕೇಂದ್ರಗಳಿಗೂ ವಿದ್ಯುತ್ತನ್ನು ಉಚಿತವಾಗಿ ಕೊಡಬಹುದು, ಸಣ್ಣ ಕೈಗಾರಿಕಾ ಕೇಂದ್ರಗಳೂ ಇದರಿಂದ ಮುಂದೆ ಬರುತ್ತವೆ, ಆದ್ದರಿಂದ ಸರ್ಕಾರ ಇದರ ಬಗ್ಗೆ ಹೆಚ್ಚಿನ ಗಮನ ಕೊಟ್ಟು ಇನ್ನಿತರ ಬಜೆಟ್ ಇಟ್ಟು ಈ ಕಾರ್ಯವನ್ನು ಬೇಗನೆ ಮಾಡಬೇಕು ಅಂತ ಸರ್ಕಾರವನ್ನು ಕೇಳುತ್ತಾ, ಇನ್ನು ಶಾಸಕರ ಅನುದಾನದ ಬಗ್ಗೆ ಸರ್ಕಾರ ಇದು ತೋರಿಸಬೇಕು, ಇವತ್ತು ಯಾವುದೇ ಒಂದು ಆಕ್ಸಿಡೆಂಟ್ ಆದ ಕಡೆ ಹೋದಾಗ ಅಥವಾ ಇನ್ನಿತರ ಏನೋ ದುರ್ಘಟನೆ ನಡೆದ ಕಡೆ ಹೋದಾಗ ನಾವು ಅವರಿಗೆ ಏನೂ ಘೋಷಿಸುವ ಅಧಿಕಾರ ನಮಗಿಲ್ಲ. ನಮ್ಮ ಕಡೆಯಿಂದ ಅವರಿಗೆ ಏನಾದರೂ ಸಹಾಯ ಮಾಡುವ ಅಧಿಕಾರ ನಮಗಿಲ್ಲ, ಅದಕ್ಕೋಸ್ಕರ ಯಾರಾದರೂ ಮೃತಪಟ್ಟಲ್ಲಿ ಅಥವಾ ಏನಾದರೂ ಅಹಿತಕರ ಘಟನೆ ನಡೆದಲ್ಲಿ ಸಂಕಷ್ಟ ಸ್ಥಿತಿ ಇದ್ದಲ್ಲಿ ಶಾಸಕರಿಗೆ ಒಂದು ಸೆಪರೇಟ್ ನಿಧಿ ಒದಗಿಸಿ ಶಾಸಕರ ಪರಿಹಾರ ನಿಧಿ ಅಂತ ಅದಕ್ಕೆ ಹೆಸರಿಟ್ಟು ಬಡವರಿಗೆ ಕೊಡಲು ಶಾಸಕರಿಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮನ್ನು ಕೇಳುತ್ತೇನೆ. ನಾರಾಯಣಪುರ ಹಾಗೂ ಬಸವಸಾಗರ ಇಡೀ ಪ್ರಸಿದ್ಧವಾದ ಪ್ರದೇಶಗಳು, ಅಲ್ಲಿಗೆ ಸಾಕಷ್ಟು ಪ್ರವಾಸಿಗಳು ಬಂದರೆ ಕೂರಲು ಸ್ಥಳವಿಲ್ಲ, 1992ನೇ ಇಸವಿಯಲ್ಲಿ ತೋಟಗಾರಿಕೆ ಇಲಾಖೆಯಿಂದ 6 ಕೋಟಿ ಅಲ್ಲಿಗೆ ಮಂಜೂರಾಗಿತ್ತು, ಆದರೆ ಇದುವರೆಗೂ ಅಲ್ಲಿ ಯಾವ ಗಾರೆಯೂ ಆಗಿಲ್ಲ, ಮತ್ತು ಮೊನ್ನೆ ಟಿವಿಯಲ್ಲಿ ಬಂದಿದೆ ಅಲ್ಲಿ ಕೆಲಸವೇ ನಡೆದಿಲ್ಲ, 6 ಕೋಟಿ ರೂಗೆ ಬೋಗಸ್ ಬಿಲ್ ಮಾಡಿರುವಂತಹ ದೊಡ್ಡ ಘಟನೆ ಬೆಳಕಿಗೆ ಬಂದಿದೆ. ತೋಟಗಾರಿಕೆ ಅಧಿಕಾರಿಯನ್ನು ಸಸ್ಪೆಂಡ್ ಮಾಡಿದರೆ ಅದರಿಂದ ಅವರಿಗೇನೂ ಆಗುವುದಿಲ್ಲ. ಅವರ ಮೇಲೆ ಇನ್ನೂ ಕಠಿಣವಾದ ಕ್ರಮ ತೆಗೆದುಕೊಂಡು, ಈಗಿನ ಬಜೆಟ್‌ನಲ್ಲಿ ನಾರಾಯಣಪುರ ಡ್ಯಾಮಿಗೆ ತೋಟಗಾರಿಕೋಸ್ಕರ ಹೆಚ್ಚಿನ ಅನುದಾನ ಕೊಡಬೇಕು. ಇವತ್ತು ಆಲಮಟ್ಟಿಯಲ್ಲಿ 100 ಕೋಟಿ ರೂಗಿಂತ ಹೆಚ್ಚಿಗೆ ಖರ್ಚು ಮಾಡಿದ್ದೀರಿ, ಆದರೆ ನಮ್ಮ ಬಸವಸಾಗರಕ್ಕೆ ಹಾಗೂ ನಾರಾಯಣಪುರಕ್ಕೆ ಏತಕ್ಕೆ ಮಾಡಲಿಲ್ಲ ಅಂತ ನಮಗೆ ಗೊತ್ತಾಗುತ್ತಿಲ್ಲ, ಅದಕ್ಕೂ ತಾವು ಅನುದಾನ ಒದಗಿಸಬೇಕು ಅಂತ ಕೇಳುತ್ತಾ, ನಮ್ಮ ಸುರಪುರ ತಾಲ್ಲೂಕಿನಲ್ಲಿ ಬೋನಾಳ್ ಕೆರೆಯೊಂದು 1700 ಎಕರೆ ಪ್ರದೇಶ ಹೊಂದಿರುವ ಕರ್ನಾಟಕದಲ್ಲೇ ಅತಿ ದೊಡ್ಡ ಕೆರೆ ಆಗಿದೆ, ಆ ಕೆರೆಗೆ ಸಾಕಷ್ಟು ಪಕ್ಷಿಗಳು ಹೊರರಾಜ್ಯದಿಂದ ಹಾಗೂ ಬೇರೆ ದೇಶಗಳಿಂದ ಮೊಟ್ಟೆ ಇಡುವುದು ಇನ್ನಿತರ ಘಟನೆಗಳು ಅಲ್ಲಿ ನಡೆಯುತ್ತಿರುತ್ತವೆ.

ಆ ಪಕ್ಷಿಧಾಮಕ್ಕೋಸ್ಕರ ಹೆಚ್ಚಿನ ಒಂದು ಅನುದಾನವನ್ನು ಇಡಬೇಕು, ಮತ್ತು ಅಲ್ಲಿ 350 ಕ್ಯೂಸೆಕ್ಸ್ ನೀರು ವೇಸ್ಟ್ ಆಗಿ ಹರಿದುಹೋಗುತ್ತಿದೆ. ಇವತ್ತಿನ ದಿವಸ ಯುಕೆಪಿ ಯಲ್ಲಿ ಕೆಲವೊಂದು ಅಧಿಕಾರಿಗಳು 9 ಕೋಟಿ 20 ಲಕ್ಷ ರೂಪಾಯಿಗಳ ಒಂದು ಲಿಫ್ಟ್ ಇರಿಗೇಷನನ್ನು ಮಾಡಬೇಕೆಂದು ಪ್ರಾಜೆಕ್ಟ್‌ನ್ನು ರೆಡಿ ಮಾಡಿದ್ದಾರೆ. ಆದರೆ ಅವರಿಗೆ ಯಾವುದೇ ಒಂದು ಅನುದಾನ ಇರಲಾರದ್ದಕ್ಕೋಸ್ಕರ ಅದು ಸ್ಥಗಿತಗೊಂಡಿದೆ. ಅದರಿಂದ ಸುಮಾರು ಏಳು ಸಾವಿರ ಹೆಕ್ಟೇರ್ ನೀರಾವರಿಯಾಗುತ್ತದೆ. ಅದಕ್ಕೋಸ್ಕರ ದಯಮಾಡಿ ನೀವು ಈ ಬೋನಾಳ್ ಲಿಫ್ಟ್ ಇರಿಗೇಷನನ್ನು ತೆಗೆದುಕೊಂಡು ಮತ್ತು ಅಲ್ಲಿ ಪಕ್ಷಿಧಾಮಕ್ಕೋಸ್ಕರ ಒಂದು ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಕೇಳುತ್ತೇನೆ. ಮತ್ತು ಪ್ರಾಥಮಿಕ ಶಿಕ್ಷಕರ ಕೊರತೆಯ ಬಗ್ಗೆ ಒಂದೆರಡು ಮಾತುಗಳನ್ನು ಸರ್ಕಾರದ ಮುಂದಿಡಲು ಬಯಸುತ್ತೇನೆ. ಇವತ್ತಿನ ದಿವಸ ನಾವೆಲ್ಲಾ ಮುಂದೆ ಬರಬೇಕಾದರೆ ನಮ್ಮ ದೇಶ, ನಮ್ಮ ರಾಜ್ಯ ಮುಂದೆ ಬರಬೇಕಾದರೆ ಶಿಕ್ಷಣದ ಗುಣಮಟ್ಟದ ಅವಶ್ಯಕತೆ ಬಹಳ ಇದೆ. ಆದರೆ ಇವತ್ತು ನಾವುಗಳು ಹಳ್ಳಿಗಾಡಿನಲ್ಲಿ ಹೋಗಿ ನೋಡಿದಾಗ ಅಲ್ಲಿ ಶಿಕ್ಷಕರ ಕೊರತೆ ಇರುತ್ತದೆ ಅಥವಾ ಕೊಠಡಿಗಳ ಕೊರತೆ ಇರುತ್ತದೆ. ನನ್ನದೊಂದು ಸರ್ಕಾರದ ಮುಂದೆ ವಿನಂತಿ ಇಷ್ಟೆ. ಇವತ್ತು ಕೆಲವೊಂದು ಗ್ರಾಮಗಳಿಗೆ ಕಾಲುದಾರಿ ಮೇಲೆ ಹೋಗಬೇಕಾಗುತ್ತದೆ. ಕೆಲವೊಂದು ಗ್ರಾಮಗಳಿಗೆ ರಸ್ತೆಯೇ ಇರುವುದಿಲ್ಲ. ಬಸ್‌ಗಳೂ ಕೂಡ ಹೋಗುತ್ತಿರುವುದಿಲ್ಲ. ಅಂಥ ಗ್ರಾಮಗಳಲ್ಲಿ ತಾವು ದಯಮಾಡಿ ಶಿಕ್ಷಕರಿಗೋಸ್ಕರ ಅವರಿಗೊಂದು ಕೊಠಡಿ, ಪಿಡಬ್ಲ್ಯೂಡಿ ಅಧಿಕಾರಿಗಳಿಗೆ ಕ್ವಾರ್ಟರ್ಸ್‌ನ್ನು ಮಾಡುತ್ತೀರಿ, ಪೋಲೀಸ್ ಅಧಿಕಾರಿಗಳಿಗೆ ಕ್ವಾರ್ಟರ್ಸ್‌ನ್ನು ಮಾಡುತ್ತೀರಿ, ಅದೇ ತರಹ ಶಿಕ್ಷಕರಿಗೋಸ್ಕರ ಒಂದು ಸೆಪರೇಟ್ ಕ್ವಾರ್ಟರ್ಸ್‌ನ್ನು ಮಾಡಿ ಅವರು ಆ ಊರಿನಲ್ಲಿಯೇ ಉಳಿಯುವಂತಾಗಲು ತಾವು ಅವಕಾಶ ಮಾಡಿಕೊಟ್ಟರೆ ಅವರು ಅದೇ ಊರಿನಲ್ಲಿದ್ದರೆ ಅಡ್ಡಾಡುವುದು ತಪ್ಪುತ್ತದೆ. ಆಗ ಕಾಲಾವಕಾಶ ಉಳಿದು ನಮ್ಮ ಮಕ್ಕಳಿಗೆ ಹೆಚ್ಚಿನ ಆದ್ಯತೆ ಸಿಗುತ್ತದೆಂದು ಹೇಳುತ್ತಾ ಇನ್ನು ಹಲವಾರು ವಿಷಯಗಳನ್ನು ನಮ್ಮ ಮಿತ್ರರುಗಳು ಹೇಳಿದ್ದಾರೆ. ದಯಮಾಡಿ ಇವತ್ತು ಬಡವರಿಗೆ ಹೆಚ್ಚಿನ ಒಂದು ಸಬ್ಸಿಡಿಯನ್ನು ಕೊಡಬೇಕು. ಈಗ ನಾವು ಬೀಜಕ್ಕಷ್ಟೇ ಸಬ್ಸಿಡಿಯನ್ನು ಕೊಡುತ್ತಿದ್ದೇವೆ, ನಮ್ಮ ಭಾಗದಲ್ಲಿ ಸುಮಾರು ಆರು ಕೋಟಿ ರೂಪಾಯಿ ಗುಲ್ಬರ್ಗ ಜಿಲ್ಲೆಗೆ ತಾವು ಸಬ್ಸಿಡಿಯನ್ನು ಒದಗಿಸಿದಿರಿ. ಆದರೆ ಅಲ್ಲಿ ಹಂಚಿದ್ದೇ ನಾಲ್ಕು ಕೋಟಿ. ಮತ್ತೆ ಎರಡು ಕೋಟಿ ವಾಪಸ್ ಬಂದಿದೆ, ಅದು ಏತಕ್ಕೆಂದು ಗೊತ್ತಾಗಲಿಲ್ಲ. ಅದೇ ರೀತಿ ಬೀಜದ ಜೊತೆಗೆ ರಾಸಾಯನಿಕ ಗೊಬ್ಬರಕ್ಕೆ ಮತ್ತು ಔಷಧಕ್ಕೆ ಸಬ್ಸಿಡಿಯನ್ನು ಒದಗಿಸಬೇಕೆಂದು ಹೇಳುತ್ತಾ ಇಷ್ಟೊಂದು ವಿಚಾರಗಳನ್ನು ಮಾತನಾಡಲು ನನಗೆ ಅವಕಾಶ ಮಾಡಿಕೊಟ್ಟ ಮಾನ್ಯ ಸಭಾಧ್ಯಕ್ಷರಿಗೆ ವಂದಿಸುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† **ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು (ಶಿವಾಜಿನಗರ)** : ಮಾನ್ಯ ಅಧ್ಯಕ್ಷರೇ, ಈ ಸಾಲಿನ ಈ ಬಜೆಟ್ ಕಾಂಗ್ರೆಸ್ ವಿರೋಧ ಬಜೆಟ್, ಇದು ಜನತಾ ದಳದ (ಎಸ್) ಬಜೆಟ್ ಎಂದು ಮಾನ್ಯ ಪೂಜಾರಿಯವರು ಹೇಳಿದ್ದಾರೆ. ನಾನು ಹೇಳಿದ್ದಲ್ಲ. ಅವರೇನು ಹೇಳಿದ್ದಾರೆಂದರೆ ನಾನು ಈಗ ರಾಜ್ಯದ ಸಂಕ್ಷಿಪ್ತ ಆರ್ಥಿಕ ನೋಟವನ್ನು ಕರ್ನಾಟಕದ ಜನತೆಯ ಮುಂದಿಡಲು ಇಚ್ಛಿಸುತ್ತಿದ್ದೇನೆ. 1998–99 ಮತ್ತು 2003–04ನೇ ಸಾಲಿನ ಅಂತ್ಯಕ್ಕೆ ಸಂಬಂಧಿಸಿದ ಕೆಲವು ಮೂಲ ವಿತ್ತೀಯ ಸೂಚಕಗಳ ಹೋಲಿಕೆಯನ್ನು ನೋಡಿದರೆ ರಾಜ್ಯದ ಆರ್ಥಿಕ ದೃಢತೆಗೆ ಧಕ್ಕೆಯಾಗಿರುವುದು ಕಂಡುಬರುತ್ತದೆ. ಅಂದರೆ ನಾಲ್ಕು ವರ್ಷದಲ್ಲಿ ಆರ್ಥಿಕ ದಿವಾಳಿಯಾಗಿದೆ ಕರ್ನಾಟಕ ರಾಜ್ಯ ಎನ್ನುವ ಮಾತನ್ನು ಇಲ್ಲಿ ಹೇಳಿದ್ದಾರೆ. ಇನ್ನೊಂದು ಏನು ಹೇಳಿದ್ದಾರೆ ಎಂದರೆ ಒಟ್ಟಾರೆ ಅಭಿವೃದ್ಧಿಗೆ ಧಕ್ಕೆ ಬಂದಿರುವ

ಅಂಶಗಳೆಂದರೆ ಆಯವ್ಯಯೇತರ ಎತ್ತುವಳಿಗಳು ನಿಯಂತ್ರಿಸುತ್ತಿರುವ ಆಡಳಿತ ಮತ್ತು ಸಿಬ್ಬಂದಿ ವೆಚ್ಚಗಳು, ಸೂಕ್ತ ಗುರಿಯಿಲ್ಲದ ಸಹಾಯಧನಗಳು, ಕಾಲಮಿತಿ ಮತ್ತು ಮಿತಿಮೀರಿದ ವೆಚ್ಚಗಳ ಕಾರಣದಿಂದ ಉಬ್ಬರಗೊಂಡ ಯೋಜನಾ ವೆಚ್ಚಗಳು, ಮತ್ತು ತೆರಿಗೆ ಹಾಗೆ ತೆರಿಗೆಯೇತರ ರಾಜಸ್ವ ಸಂಗ್ರಹದಲ್ಲಿ ಕುಸಿತ ಮತ್ತು ಬಳಕೆದಾರರ ಶುಲ್ಕ ವಸೂಲಿಯಲ್ಲಿ ಗಣನೀಯ ಸೋರಿಕೆ. 23 ಸಾವಿರ ಕೋಟಿ ರೂಪಾಯಿಗಳನ್ನು ನಾಲ್ಕು ವರ್ಷಗಳಲ್ಲಿ ಸಾಲ ಮಾಡಿದರು. ಆ ದುಡ್ಡು ಆ ರೀತಿ ಇದ್ದರೆ ಮಾನ್ಯ ಸಿದ್ಧರಾಮಯ್ಯನವರ ಪ್ರಕಾರ ಪೂರ್ತಿ ಹಣ ಈ ರೀತಿ ಸೋರಿ ಹೋಗಿದೆ. ಇವರ ಆಡಳಿತದ ವೈಫಲ್ಯದಿಂದ 23 ಸಾವಿರ ಕೋಟಿ ರೂಪಾಯಿಗಳು ಏನು ನಮ್ಮ ನಾಯಕರುಗಳು ಇಲ್ಲಿಯತನಕ ಫಸ್ಟ್‌ಕ್ಲಾಸ್ ಬಜೆಟ್ ಎಂದು ಹೇಳಿ ಎಲ್ಲರೂ ಶಹಭಾಷ್‌ಗಿರಿಯನ್ನು ಕೊಟ್ಟಿದ್ದಾರೆ ಹಿರಿಯರೆಲ್ಲ ತುಂಬಾ ಚೆನ್ನಾಗಿ ಮಾಡಿದ್ದೀರಿ ಎಂದು ಹೇಳಿ ಶಹಭಾಷ್‌ಗಿರಿಯನ್ನು ಕೊಟ್ಟಿದ್ದಾರೆ. ಆ ಹಣ ಎಲ್ಲಿಗೆ ಹೋಗಿದೆ ಎಂದು ಈಗ ಸಿದ್ಧರಾಮಯ್ಯನವರು ಕೇಳಿರುವಂಥ ಪ್ರಶ್ನೆಗೆ ಉತ್ತರವನ್ನು ಕೊಡಬೇಕಾಗಿದೆ. ರೈತರ ಪರವಾಗಿ ಸನ್ಮಾನ್ಯ ಎಸ್‌ಎಸ್ ಪಾಟೀಲರು ಆರು ಪರ್‌ಸೆಂಟ್ ಬಡ್ಡಿಯಲ್ಲಿ ನಮಗೆ ಸಿಕ್ಕಾಪಟ್ಟೆ ಹಣವನ್ನು ಕೊಟ್ಟಿದ್ದಾರೆ, ಒಳ್ಳೆಯ ಬಜೆಟ್ ಎಂದು ಹೇಳಿದರು. ಸಂತೋಷ. ಎಷ್ಟು ಕೊಟ್ಟಿದ್ದಾರೆ, ಇವರು ಹದಿಮೂರುವರೆ ಪರ್‌ಸೆಂಟ್ ಬಡ್ಡಿಯನ್ನು ಆರು ಪರ್‌ಸೆಂಟ್ ಬಡ್ಡಿಯಲ್ಲಿ ಅವರು ಕೊಡುತ್ತಿರುವುದು ಅರವತ್ತು ಕೋಟಿ ರೂಪಾಯಿಗಳು ಮಾತ್ರ ಹಾಗೆಂದರೆ ಇಡೀ ರಾಜ್ಯಕ್ಕೆ ಇವರು 900 ಕೋಟಿ ರೂಪಾಯಿಗಳಿಗೆ ಮಾತ್ರ ಸಬ್ಸಿಡಿಯನ್ನು ಕೊಡುತ್ತಿದ್ದಾರೆ. ಅಂದರೆ ಒಂದು ವಿಧಾನಸಭಾ ಕ್ಷೇತ್ರಕ್ಕೆ ಕೇವಲ ನಾಲ್ಕು ಕೋಟಿ ರೂಪಾಯಿಗಳು ಮಾತ್ರ ಅಂದರೆ 200 ಜನ 50–50 ಸಾವಿರ ರೂಪಾಯಿಗಳನ್ನು ತೆಗೆದುಕೊಂಡರೆ ಅವರಿಗೆ ಅಲ್ಲಿಗೆ ನಾಲ್ಕು ಕೋಟಿ ರೂಪಾಯಿಗಳು ಮುಗಿಯುತ್ತದೆ. ಮಾನ್ಯ ನಂಜುಂಡಪ್ಪನವರ ವರದಿ ಏನು ಹೇಳಿದೆ, 30 ಸಾವಿರ ಕೋಟಿ ರೂಪಾಯಿಗಳು ರೈತರಿಗೆ ಸಾಲ ಬೇಕಾಗಿದೆ ಎಂದು ಹೇಳಿದ್ದಾರೆ. ಆದರೆ ಇವರು ಕೊಟ್ಟಿರುವುದೆಷ್ಟು? ಎಸ್‌ಎಸ್ ಪಾಟೀಲರು, ಬಿ.ಆರ್. ಪಾಟೀಲರು, ಜಯಕುಮಾರ್‌ರವರು ಶಹಭಾಷ್, ಶಹಭಾಷ್ ಎಂದು ಹೇಳಿದರು. ಹೌದು ಶಹಭಾಷ್, ಎಷ್ಟು ಕೊಡುತ್ತಿದ್ದೀರಿ ನೀವು ಒಂದು ವಿಧಾನಸಭಾ ಕ್ಷೇತ್ರಕ್ಕೆ? ನೀವು ಕೊಡುತ್ತಿರುವುದು ಕೇವಲ ನಾಲ್ಕು ಕೋಟಿ ರೂಪಾಯಿಗಳು. ಎಷ್ಟು ಬಡ್ಡಿಯಲ್ಲಿ ಕೊಡುತ್ತಿದ್ದೀರಿ? ಆರು ಪರ್‌ಸೆಂಟ್ ಬಡ್ಡಿಗೆ ಕೊಡುತ್ತಿದ್ದೀರಿ. ಯಾವ ರೀತಿ ಶಹಭಾಷ್‌ಗಿರಿ ಬಜೆಟ್ ಇದು. ಯಾವ ರೀತಿ ಮೆಚ್ಚುಗೆಯನ್ನು ತಾವು ವ್ಯಕ್ತಪಡಿಸುತ್ತೀರಿ? ತಾವೇನಾದರೂ 450 ಕೋಟಿ ರೂಪಾಯಿ ಏನು ಸಣ್ಣ ಕೈಗಾರಿಕೆಗಳಿಗೆ ಸಬ್ಸಿಡಿಯನ್ನು ಕೊಡಬೇಕಾಗಿತ್ತು. ಆ ಹಣವನ್ನು ನಾವು ಪೂರ್ತಿ ಕೊಡುತ್ತೇವೆಂದು ನೀವು ಈ ಬಜೆಟ್‌ನಲ್ಲಿ ಹೇಳಿದ್ದರೆ ಇದು ಶಹಭಾಷ್‌ಗಿರಿ ಬಜೆಟ್. ನೀವು ಎಲ್ಲೂ ಪ್ರಸ್ತಾಪವನ್ನೇ ಮಾಡಲಿಲ್ಲ. ಇನ್ನೇನು ಹೇಳಿದಿರಿ? ಒಂದು ರೂಪಾಯಿಯಲ್ಲಿ 24 ಪೈಸೆ ಸಾಲವನ್ನು ತರುತ್ತೇನೆ ಎಂದು ಹೇಳಿದ್ದಾರೆ. 18 ಪೈಸೆಯನ್ನು ಸಾಲದ ಬಡ್ಡಿಗೆ ಕಟ್ಟುತ್ತೇನೆ. ನೀವು ಅಸಲನ್ನು ತೀರಿಸುವುದಿಲ್ಲ ಅಸಲು ಇರುವ 23 ಸಾವಿರ ಕೋಟಿ ರೂಪಾಯಿಗಳಿಗೆ ಏನು ಹೇಳಿದ್ದಾರೆ, ಒಟ್ಟು 32 ಸಾವಿರ ಕೋಟಿ ರೂಪಾಯಿಗಳು ಕರ್ನಾಟಕ ರಾಜ್ಯದ ಸಾಲ ಇದೆಯೆಂದು ಹೇಳಿದ್ದಾರೆ. ಆ ರೀತಿ ಇದ್ದರೆ ಯಾವಾಗ ಸಾಲವನ್ನು ತೀರಿಸುವುದು? ಈಗ ಇರುವುದು 30,188 ಕೋಟಿ ರೂಪಾಯಿಗಳಿಗೆ ಏರಿಕೆಯಾಗಿದೆ. ಅದಲ್ಲದೆ ವಿಶೇಷ ಉದ್ದೇಶವಾಹಿನಿಗಳಿಗೆ ಹೊಣೆಗಾರಿಕೆಗಳು ಇವತ್ತು 7082 ಕೋಟಿ ರೂಪಾಯಿಗಳ ಸಾಲ ಇದೆ. ಅಂದರೆ ಕರ್ನಾಟಕ ರಾಜ್ಯಕ್ಕೆ ಇವತ್ತು 37,262 ಕೋಟಿ ರೂಪಾಯಿಗಳ

ಸಾಲ ಇರುವಾಗ ಇದು surplus ಬಜೆಟ್ ಆಗಲಿಕ್ಕೆ ಹೇಗೆ ಸಾಧ್ಯ? ಗ್ರಾಮೀಣ ಪ್ರಾಂತ್ಯದಲ್ಲಿ ಶೌಚಾಲಯುಗಳಿಲ್ಲದ ಶೌಚಾಲಯುಗಳಿಗೆ ನೀವು ಎಷ್ಟು ಹಣವನ್ನು ಮೀಸಲಿಟ್ಟಿದ್ದೀರಿ? ಗ್ರಾಮೀಣಾಭಿವೃದ್ಧಿಗೆ ಶೇಕಡ ಎರಡಷ್ಟು ಹಣವನ್ನು ಇಟ್ಟಿದ್ದೀರಿ. ಹೇಗೆ ಸರ್‌ಪ್ಲಸ್ ಬಜೆಟ್? ಶೌಚಾಲಯಗಳನ್ನು ಕಟ್ಟಲಿಕ್ಕೆ ನಮ್ಮ ಕೈಯಲ್ಲಿ ಆಗುವುದಿಲ್ಲ. ರಸ್ತೆಗಳು ಇವತ್ತಿಗೂ ಕೂಡ ನಮ್ಮ ಕೈಯಲ್ಲಿ ಸರಿಯಾಗಿಲ್ಲ. ಆಸ್ಪತ್ರೆಗಳಿಲ್ಲ. ಸರಿಯಾಗಿ ಶಿಕ್ಷಣಕ್ಕೆ ಬೇಕಾಗಿರುವಂಥ ಶಾಲಾ ಕೊಠಡಿಗಳಿಲ್ಲ. ಈ ರೀತಿ ಇರುವ ಸಂದರ್ಭದಲ್ಲಿ ನಮ್ಮ ಬಜೆಟ್ ಶಹಭಾಷ್‌ಗಿರಿ ಬಜೆಟ್ ಯಾವ ರೀತಿ ಶಹಭಾಷ್‌ಗಿರಿ ಬಜೆಟ್? ನೀವೇನಾದರೂ ಬಜೆಟ್ ಸಾಲಲಿಲ್ಲ, 24 ಪೈಸೆ ಸಾಲವನ್ನು ತರುತ್ತಿದ್ದೇನೆ, ಈ 24 ಪೈಸೆಯನ್ನು ನಾನು ಗ್ರಾಮೀಣಾಭಿವೃದ್ಧಿಗೆ ವೆಚ್ಚ ಮಾಡುತ್ತಿದ್ದೇನೆ, ಇನ್ನು ಹಣ ನನಗೆ ಸಾಲಲಿಲ್ಲ ಎಂದರೆ ಇನ್ನೂ ಸ್ವಲ್ಪ ನಾನು ತೆರಿಗೆಯೇತರ ರಾಜಸ್ವದಿಂದ ನಾನು ಹಣವನ್ನು ತಂದು ಈ ಬಜೆಟ್‌ನ್ನು ಪೂರೈಸುತ್ತೇನೆಂದು ಹೇಳಿದ್ದರೆ ಇದು ಶಹಭಾಷ್‌ಗಿರಿ ಬಜೆಟ್. ಯಾವ ರೀತಿ ಶಹಭಾಷ್‌ಗಿರಿ ಬಜೆಟ್? ಸಾಲವನ್ನು ಇಟ್ಟುಕೊಂಡು ಇಲ್ಲಿ ಸಬ್ಸಿಡಿಯನ್ನು ಕೊಡದೇ ಮಾಡಿದ್ದೀರಿ. ಇವತ್ತು ಹಣ ಸೋರಿಕೆ ಬಗ್ಗೆ ಸನ್ಮಾನ್ಯ ವಿತ್ತಸಚಿವರು ಹೇಳಿದ್ದಾರೆ. ಹಣ ಸೋರಿಕೆ ಬಗ್ಗೆ ಹೇಳುವುದಾದರೆ ರಾಯಚೂರಿನಲ್ಲಿ 2001 ರಲ್ಲಿ ನಮ್ಮ ಮುನ್ಸಿಪಾಲಿಟಿಯಲ್ಲಿ ಅಲ್ಲಿಯ ಅಧ್ಯಕ್ಷರು 30 ಕೋಟಿ ರೂಪಾಯಿಗಳು ಪೋಲಾಗಲು ಕಾರಣರಾಗಿರುವ ನಗರಸಭಾ ಅಧ್ಯಕ್ಷರಾದ ಶ್ರೀ ಈರಣ್ಣ ಇವರ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲು ಸೂಚಿಸಬಹುದಾಗಿತ್ತು. ಅದಲ್ಲದೆ, ನಗರಸಭೆ ಆಯುಕ್ತರಾದ ಸೈಯದ್ ಫಜಲ್ ಇವರನ್ನು ಶಿಸ್ತುಕ್ರಮಕ್ಕೆ ಒಳಪಡಿಸಬಹುದಾಗಿತ್ತು. ಹಾಗೆಂದು ಹೇಳಿರುವವರು ಯಾರು? ಜಂಟಿ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ.

ಶ್ರೀ ಎ. ಪಾಪರೆಡ್ಡಿ (ರಾಯಚೂರು) : ಮಾನ್ಯ ಅಧ್ಯಕ್ಷರೇ, ರಾಯಚೂರು ಶಾಸಕರಾಗಿ ನಾನು ಮಾತನಾಡುತ್ತೇನೆ. ರಾಯಚೂರು ನಗರಸಭೆಯಲ್ಲಿ 35 ಕೋಟಿ ರೂಪಾಯಿಗಳು ಹಗರಣವಾಗಿ ಸರ್ಕಾರಕ್ಕೆ ನಾವು ಮನವಿಯನ್ನು ಸಲ್ಲಿಸಿದ್ದೇವೆ. 2001 ರಲ್ಲಿ ಜಂಟಿ ನಿರ್ದೇಶಕರು ಬಂದು ತಪಾಸಣೆಯನ್ನು ಮಾಡಿದರು. ತಪಾಸಣೆಯನ್ನು ಮಾಡಿ ಆ ಗುರುತರವಾದ ಆಪಾದನೆಗಳು ಸತ್ಯ ಇದೆ. ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಬೇಕು. ಅವರಿಂದ ಹಣವನ್ನು ವಸೂಲು ಮಾಡಬೇಕೆಂದು ಹೇಳಿ ಸರ್ಕಾರಕ್ಕೆ ವರದಿಯನ್ನು ಕೊಟ್ಟರೆ ಇಲ್ಲಿಯವರೆಗೆ ಸರ್ಕಾರ ಅದರ ಬಗ್ಗೆ ಕ್ರಮವನ್ನೇ ತೆಗೆದುಕೊಂಡಿಲ್ಲ. ಅವರು ಈಗ ಕಾಂಗ್ರೆಸ್‌ನ್ನು ಬಿಟ್ಟು ಜಾತ್ಯಾತೀತ ಜನತಾದಳವನ್ನು ಸೇರಿದರು. ಅಲ್ಲಿಯೇ ಅವರು 5–10 ವರ್ಷ ಅಧ್ಯಕ್ಷರಾಗಿದ್ದರು. ಈಗ ಅಧ್ಯಕ್ಷರಾಗಲಿಕ್ಕೆ ಅವರು ತಿರುಗಾಡುತ್ತಿದ್ದಾರೆ. ಇಲ್ಲಿ ಲಾಬಿಯನ್ನು ಮಾಡುತ್ತಿದ್ದಾರೆ. ರಿಸರ್ವೇಷನ್ ಅವರ ಪರವಾಗಿ ತೆಗೆದುಕೊಳ್ಳಲಿಕ್ಕೆ ಮಾಡುತ್ತಿದ್ದಾರೆ. ಅಂಥವರ ಮೇಲೆ ಸರ್ಕಾರ ಏನೂ ಕ್ರಮವನ್ನು ತೆಗೆದುಕೊಳ್ಳಲಿಲ್ಲ? ಅವರ ಮೆಂಬರ್‌ಷಿಫ್ ಕೂಡ ರದ್ದಾಗಬೇಕಾಗಿತ್ತು. ಅವರ ಸದಸ್ಯತ್ವ ಕೂಡ ರದ್ದಾಗಲಿಲ್ಲ. ಅವರ ಮೇಲೆ ಕ್ರಿಮಿನಲ್ ಕೇಸ್ ಕೂಡ ಆಗಲಿಲ್ಲ. ಅವರಿಂದ ಹಣ ಕೂಡ ವಸೂಲು ಮಾಡಲಿಲ್ಲ. ಈ ತರಹ ಸರ್ಕಾರ 35 ಕೋಟಿ ರೂಪಾಯಿಗಳನ್ನು ತೆರಿಗೆದಾರರ ಹಣವನ್ನು ಈ ರೀತಿ ಪೋಲಾಗಿದೆ. ಅವರು ಇನ್ನೂ ಅಧಿಕಾರದಲ್ಲಿದ್ದಾರೆ. ಅವರ ಬಗ್ಗೆ ಏನೂ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಆ ಕಾರಣದಿಂದ ಸರ್ಕಾರ ಈ ರೀತಿ ಅನ್ಯಾಯವಾಗಿ ತೆರಿಗೆದಾರರಿಂದ ಬಂದ ಹಣವನ್ನು ಲೂಟಿ ಮಾಡುತ್ತಿದ್ದರೆ ನೋಡಿಕೊಂಡು ಸುಮ್ಮನೆ ಕುಳಿತಿದೆ. ದಯಮಾಡಿ ಸರ್ಕಾರ ತಕ್ಷಣವೇ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು : ಮಾನ್ಯ ಅಧ್ಯಕ್ಷರೇ, ರಾಯಚೂರಿನ ನಮ್ಮ ಶಾಸಕರು ಯಾವ ರೀತಿ ಹಣ ಸೋರಿಕೆಯಾಗುತ್ತಿದೆ ಎಂದು ಹೇಳಿದರು. ಹಣ ಯಾವ ರೀತಿ ಸೋರಿಕೆಯಾಗುತ್ತಿದೆ. ಅದರ ಮೇಲೆ ನಾವು ಯಾವ ರೀತಿ ಕ್ರಮವನ್ನು ತೆಗೆದುಕೊಂಡಿಲ್ಲ. ನಮ್ಮ ನಿರ್ಲಕ್ಷ್ಯದಿಂದ ಸರ್ಕಾರಕ್ಕೆ ಬರುವಂಥ ರೆವಿನ್ಯೂ ಯಾವ ರೀತಿ ಲಾಸ್ ಆಗುತ್ತಿದೆ ಅನ್ನುವ ಉದ್ದೇಶವನ್ನು ಸೋರಿಕೆಯನ್ನು ತಡೆಗಟ್ಟುತ್ತೇನೆಂದು ಹೇಳಿ ಸನ್ಮಾನ್ಯ ಸಚಿವರು ಇಲ್ಲಿ mention ಮಾಡಿದ್ದಾರೆ.

3.10 ಪಿ.ಎಂ

ಆ ಕಾರಣದಿಂದಾಗಿ ಈ ಸೋರಿಕೆಯಾಗುತ್ತಿರುವುದು ಮಾತ್ರವಲ್ಲ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ, ನಾವೆಲ್ಲಾ ಪೇಪರ್‌ನಲ್ಲಿ ನೋಡಿದೆವು. 765 ಕೋಟಿ ರೂಪಾಯಿ ಕೇವಲ ಜಾಹೀರಾತಿನ ಫಲಕಗಳಿದ್ದಾವಲ್ಲಾ ಅದರಲ್ಲಿ ಕ್ರಮವಾಗಿ ತೆಗೆದುಕೊಳ್ಳದೆ, ಅಧಿಕಾರಿಗಳ ವರ್ತನೆಯಿಂದ 765 ಕೋಟಿ ರೂಪಾಯಿ ನಮಗೆ ಲಾಸ್ ಆಗಿದೆ, ಸೋರಿಹೋಗುತ್ತಿದೆ ಎಂದು ಹೇಳುತ್ತಿದ್ದಾರೆ, ಗ್ರಾಮೀಣ ಭಾಗದ ಜನರ ಬಗ್ಗೆ ಪ್ರತಿಯೊಬ್ಬರೂ ಮಾತನಾಡುತ್ತೇವೆ. ನೀರಿಲ್ಲ, ರೈತರಿಗೆ ಬೆಳೆವಿಮೆ ಇಲ್ಲ. ಇನ್ನೊಂದು ಕಷ್ಟಸುಖಕ್ಕೆ ಎಲ್ಲೂ ಕೂಡ ಸ್ಪಂದಿಸುತ್ತಿಲ್ಲವೆಂದು ಮಾತನಾಡುತ್ತೇವೆ. ನಿಜ ಅದನ್ನು ಮಾಡಬೇಕಾಗಿರುವುದು ನಮ್ಮ ಮತ್ತು ಸರ್ಕಾರದ ಕರ್ತವ್ಯ ಹಾಗಿದ್ದಮೇಲೆ ಈ ರೀತಿ 765 ಕೋಟಿ ರೂಪಾಯಿಗಳ ಸೋರಿಕೆಯಾಗಿದೆ. ಇಲ್ಲಿ ಹೇಳುತ್ತಾರೆ ಜಯನಗರದ ಆಫೀಸ್ ಕಾಂಪ್ಲೆಕ್ಸ್‌ನ ಒಂದು ಭಾಗದಲ್ಲಿ 25 ಸಾವಿರ ರೂಪಾಯಿಗಳನ್ನು ಕೊಡಬೇಕಾಗಿದ್ದರೆ ಆ ಅಧಿಕಾರಿಗೆ ಐದು ಸಾವಿರ ರೂಪಾಯಿಯನ್ನು ಕೊಟ್ಟು ರಶೀದಿ ತೆಗೆದುಕೊಳ್ಳದೆ ಅದನ್ನು ಗುಳುಂ ಮಾಡಿದ್ದಾರೆ ಎಂದು ಉದಾಹರಣೆಯನ್ನಿಲ್ಲಿ ಕೊಡುತ್ತಿದ್ದಾರೆ. ಇದೊಂದೆ ಅಲ್ಲ, ಇನ್ನೊಂದು ಭಾಗದಲ್ಲಿ ಹೇಳುತ್ತಾರೆ. ಕೋರಮಂಗಲದ ಒಂದು ಭಾಗದಲ್ಲಿ ಐದು ಸಾವಿರ ರೂಪಾಯಿ ಕೊಡಬೇಕಾಗಿದ್ದರೆ ಅವರು ಐದುನೂರು ರೂಪಾಯಿಗೆ ಬಿಲ್ಲನ್ನು ಹಾಕಿ ಕೊಟ್ಟಿದ್ದಾರೆ ಎಂದು, ಅದೊಂದೇ ಅಲ್ಲ, ಭಾರತಿ ನಗರ ಇನ್ನೊಂದು ಭಾಗದಲ್ಲಿ ಈ ರೀತಿ 25 ಸ್ಕ್ವೆರ್ ಮೀಟರ್ ಇದ್ದರೆ ಮೂರು ಸ್ಕ್ವೆರ್‌ಮೀಟರ್‌ಗೆ ಬಿಲ್ಲನ್ನು ಹಾಕಿದ್ದಾರೆ. ಈ ರೀತಿ 765 ಕೋಟಿ ರೂ. ಸೋರಿ ಹೋಗುತ್ತಿರುವ ಹಣವನ್ನು ಸರ್ಕಾರಕ್ಕೆ ನಾವು ತರಬಹುದಾಗಿತು. ಇದನ್ನು ನಾವು ತರಲಿಲ್ಲ, ಈ ರೀತಿ ಅನೇಕ ವಿಚಾರಗಳು, ಯಾವುದಕ್ಕೋಸ್ಕರ ಏನು ಕ್ರಮ ತೆಗೆದುಕೊಳ್ಳುತ್ತಿದ್ದೇವೆ? ಗುತ್ತಿಗೆದಾರರು ಕೆಲಸವನ್ನು ವಿಳಂಬ ಮಾಡುತ್ತಿದ್ದಾರೆ, ಸರಿಯಾಗಿ ಮಾಡುತ್ತಿಲ್ಲವೆಂದು. ನಮ್ಮ ಕಾನೂನಿನಲ್ಲಿ ತಿದ್ದುಪಡಿ ಮಾಡಬೇಕಲ್ಲಾ ನಾವೇನು ಕಾನೂನು ಮಾಡುತ್ತೇವೆ. ಅದು ಹೇಗಿದೆ ಎಂದರೆ ಇವತ್ತು ಗುತ್ತಿಗೆದಾರರು ಒಂದು ಸಲ ಕಾಂಟ್ರಾಕ್ಟ್‌ಗೆ ಸಹಿಯನ್ನು ಮಾಡಿದರೆ ಅವನನ್ನು ಮೂರು ವರ್ಷದವರೆಗೆ ನಾವು ಅಲುಗಾಡಿಸಲು ಆಗುವುದಿಲ್ಲ. ಮಾನ್ಯ ಕಂದಾಯ ಸಚಿವರು ತುಂಬಾ ತಿಳಿದಿರತಕ್ಕ ವ್ಯಕ್ತಿಗಳು. ಒಬ್ಬ ಗುತ್ತಿಗೆದಾರರಿಗೆ ಮಹಾನಗರ ಪಾಲಿಕೆಯಲ್ಲಿ 25 ಲಕ್ಷ ರೂಪಾಯಿಯ ಗುತ್ತಿಗೆಯನ್ನು ಕೊಟ್ಟರೆ ಅವರನ್ನು ತೆಗೆಯಲು ಮೂರು ವರ್ಷವಾಗುತ್ತದೆ. ಅಲ್ಲಿಯವರೆಗೆ ಅವರನ್ನು ಮುಟ್ಟಲು ಆಗುವುದಿಲ್ಲವೆಂದು ಹೇಳಿ ಆ 25 ಲಕ್ಷ ರೂ. ಕೆಲಸವನ್ನು ಇವತ್ತಿನವರೆಗೆ ಮಾಡಲಿಲ್ಲ. ಏತಕ್ಕಾಗಿ ಇದು ವಿಳಂಬವಾಗುವುದಿಲ್ಲ. ಏತಕ್ಕಾಗಿ ನಮ್ಮ ಹಣ ಹೆಚ್ಚಾಗುವುದಿಲ್ಲ. ನಮ್ಮಲ್ಲಿರುವಂಥ ಲೋಪಗಳನ್ನು ಕಾನೂನನ್ನು ಮಾಡುವಂಥ ನಾವುಗಳು ನಮ್ಮ ಕಾನೂನನ್ನು ಸುಧಾರಣೆ ಮಾಡಿಕೊಂಡರೆ ಒಳ್ಳೆಯದು. ತಾವೆಲ್ಲಾ ಅನುಭವಸ್ಥರು, ಹಿಂದೆ ಒಳ್ಳೆ

ಕೆಲಸಗಳನ್ನು ಮಾಡಿದ್ದೀರಿ. ತಮ್ಮ ಬಗ್ಗೆ ಟೀಕೆ ಮಾಡಬೇಕೆಂದು ನಾವು ಮಾತನಾಡುತ್ತಿಲ್ಲ. ಆದರೆ ಒಟ್ಟಾರೆ ವಿಚಾರಗಳನ್ನು ನೋಡಿದರೆ ನಿಜವಾಗಿಯೂ ಕೆಲವು ವಿಚಾರಗಳು ನಮ್ಮಲ್ಲಿ ಸರ್ಕಾರದಲ್ಲಿ ಕೆಲವು ಲೋಪಗಳು ಇದ್ದಾವೆ. ಇವತ್ತು ಗುತ್ತಿಗೆದಾರರಿಗೆ ನ್ಯಾಯವಾಗಿ ಹಣವನ್ನು ಕೊಡಬೇಕು, ಅವರಿಗೆ ಕೊಡೋಣ, ಅದರಲ್ಲಿ ಎರಡನೇ ಮಾತು ಇಲ್ಲ. ಆದರೆ ಇವತ್ತು ಆ 'ಗುತ್ತಿಗೆದಾರರು ಸಮಯಕ್ಕೆ ಸರಿಯಾಗಿ ಕೆಲಸ ಮಾಡದಿರುವ ಬಗ್ಗೆ ಕಠಿಣವಾದಂಥ ಕಾನೂನುಗಳು ನಮ್ಮಲ್ಲಿ ಇಲ್ಲ. ಆದ್ದರಿಂದ ನಾವು ಸುಧಾರಣೆಯನ್ನು ತರಬೇಕಾಗುತ್ತದೆ. ಆಗ ನಾವು ಏನಾದರೂ ಕೆಲಸಗಳನ್ನು ಮಾಡಿಸಲು, ವೈಜ್ಞಾನಿಕವಾಗಿ ಕೆಲಸಗಳನ್ನು ಮಾಡಲು ಸಾಧ್ಯವಾಗುತ್ತದೆ. ಇವತ್ತು ಎಲ್ಲಿ ನೋಡಿದರೂ ಅವೈಜ್ಞಾನಿಕವಾದಂಥ ಕೆಲಸಗಳು. 50 ಲಕ್ಷ ರೂ. ಕೆಲಸ ಮಾಡಿದರೆ ಪೂರ್ತಿ ಅವೈಜ್ಞಾನಿಕವಾದಂಥ ಕೆಲಸವೇ ಅದು. ಎಲ್ಲಿ ಹಳ್ಳ ಇರುತ್ತದೊ ಅದರ ಮೇಲೆ ದಿಣ್ಣೆ ಇದ್ದರೆ ಅದರ ಮೇಲೆ ಟಾರು. ಯಾರು ಲೆವೆಲ್ ಮಾಡಿ ಟಾರನ್ನು ಹಾಕುತ್ತಾರೆ? ನೀರು ಬಂದರೆ ಗುಂಡಿ ಬೀಳುತ್ತದೆ, ಮತ್ತೆ ನಾವು ಅದಕ್ಕೆ ಟಾರನ್ನು ಹಾಕಬೇಕು ಮರುವರ್ಷ. ನಾವು specification ಎಷ್ಟು ಕೊಡುತ್ತೇವೆ one fourth inch ಎಂದು ಕೊಡುತ್ತೇವೆ. ಆ one fourth inch specification ನ್ನು ನಾವು ಕೇಳಿ ಜೋರು ಮಾಡಲು ಹೋದರೆ ಅವನು ಅಸಹಾಯಕ, ಕೈ ಎತ್ತುತ್ತಾನೆ, ನನ್ನ ಕೈಯಲ್ಲಿರುವುದು ಇಷ್ಟೇ ಎಂದು ಹೇಳುತ್ತಾನೆ. ಎಲ್ಲೋ ಒಂದು ಕಡೆ ನಮ್ಮ ವ್ಯವಸ್ಥೆಯನ್ನೂ ಕೂಡ ಸರಿ ಮಾಡಿಕೊಳ್ಳದೆ ಇರುವುದರಿಂದ ಹೀಗೆಲ್ಲಾ ಆಗುತ್ತಿದೆ. ಬೇರೆಯವರ ಮೇಲೆ, ಜನರ ಹತ್ತಿರ ನಾವು ಟ್ಯಾಕ್ಸ್‌ನ್ನು ತೆಗೆದುಕೊಳ್ಳುತ್ತೇವೆ. ನಮ್ಮ ವ್ಯವಸ್ಥೆ ಹೇಗಿದೆ ಎಂಬ ಬಗ್ಗೆ ಕೂಡ ನಾವು ಪರಿಶೀಲನೆ ಮಾಡಬೇಕಾಗುತ್ತದೆ. ಉನ್ನತ ಮಟ್ಟದಲ್ಲಿರುವ ತಾವುಗಳು ಇದರ ಬಗ್ಗೆ ಪರಿಶೀಲನೆ ಮಾಡಿದರೆ ನಿಜವಾಗಿಯೂ ಏನು ಮಿತಿಮೀರಿದ ವೆಚ್ಚ ನಿರ್ಮಾಣದ ಮಂದಗತಿಯೆಂದು ಬಜೆಟ್‌ನಲ್ಲಿ ಮೆನ್‌ಷನ್ ಮಾಡಿದ್ದೇವೆ. ಅದು ಸಾರ್ಥಕತೆಯಾಗುತ್ತದೆ. ನಿಜವಾಗಿಯೂ ಅದರ ಬಗ್ಗೆ ಮಾನ್ಯ ಕಂದಾಯ ಸಚಿವರು ಒಂದು ಹೊಸ ಕಾನೂನನ್ನು ಮಾಡುವ ಬಗ್ಗೆ ಯೋಚನೆ ಮಾಡಬೇಕು. ಒಬ್ಬ ಕಾಂಟ್ರಾಕ್ಟರನ್ನು ಬ್ಲಾಕ್ ಲಿಸ್ಟ್‌ನಲ್ಲಿ ಮಾಡಿದ್ದರೆ ಮಾರನೆ ದಿವಸ ಅದರಲ್ಲಿ ಅವನ ಹೆಸರು ಇರುವುದಿಲ್ಲ, ಮತ್ತು ರಾಜಾರೋಷವಾಗಿ ಮಾರನೆ ದಿವಸ ಅವನು ಕಾಂಟ್ರಾಕ್ಟ್ ಆಗಿ ಮುಂದುವರೆಯುತ್ತಾನೆ, ಕಾರಣ ಯಾರು? ನಾವು ರಾಜಕಾರಣಿಗಳು, ಇವತ್ತು ನಾವು ಸಸ್‌ಪೆಂಡ್ ಮಾಡುತ್ತೇವೆಂದು ಹೇಳುತ್ತೇವೆ. ಮಾರನೆ ದಿವಸ ಅವನು ರಾಜಾರೋಷವಾಗಿ ಮತ್ತೆ ಅವನೇ ಕಾಂಟ್ರಾಕ್ಟ್ ಕೆಲಸ ಮಾಡುತ್ತಿರುತ್ತಾರೆ. ಇದಕ್ಕೆ ಯಾರು ಕಾರಣಕರ್ತರು? ಆದ್ದರಿಂದ ಈ ಬಜೆಟ್‌ನಲ್ಲಿ ಏನು ಮೆನ್‌ಷನ್ ಮಾಡಿದ್ದಾರೆ ಅದರಲ್ಲಿ ಅನೇಕ ವಿಚಾರಗಳಿಗೆ ನಾವೂ ಕೂಡ ಜವಾಬ್ದಾರರು ಎಂದು ಹೇಳಲು ಇಷ್ಟಪಡುತ್ತೇನೆ. ಇವತ್ತು 23 ಸಾವಿರ ಕೋಟಿ ರೂ. ಸಾಲವನ್ನು ತಂದು ಸೂಕ್ತ ಗುರಿ ಇಲ್ಲದ ಸಹಾಯಧನಗಳು, ಹಾಗಿದ್ದರೆ ಯಾವ್ಯಾವುದಕ್ಕೆ ಕೊಟ್ಟಿರಿ? ಅಭಿವೃದ್ಧಿ ಕೆಲಸಕ್ಕೆ ಮಾಡಿದ್ದಿರೋ ಇಲ್ಲದಿದ್ದರೆ ಯಾವುದಾದರೂ ಓಟು ಬೆಳೆಸುವುದಕ್ಕೋಸ್ಕರ ಈ ಹಣವನ್ನು ಖರ್ಚು ಮಾಡಿದ್ದಿರೋ ಎಂಬ ಬಗ್ಗೆ ಹೇಳಬೇಕಾಗುತ್ತದೆ. ಇವತ್ತು 12, 13 14 ಪರ್‌ಸೆಂಟ್ಗೆ ಹಣವನ್ನು ತರುತ್ತಿದ್ದೇವೆಂದು ಹೇಳುತ್ತಿದ್ದೀರಿ. ರಾಜ್ಯ ಸರ್ಕಾರ ಆ ರೀತಿ ಹೇಳುವುದಾದರೆ, ಕೇಂದ್ರ ಸರ್ಕಾರ ಇದರ ಬಗ್ಗೆ ಈಗಾಗಲೆ re-schedule ಮಾಡಿಕೊಂಡು ಅವರೆಲ್ಲಾ ಹಳೆಯ ಸಾಲಗಳನ್ನು, ಕಡಿಮೆ ಬಡ್ಡಿಯ ದರಕ್ಕೆ re-schedule ಮಾಡಿಕೊಂಡಿದ್ದಾರೆ. ಆದರೆ ನಾವು ರಾಜ್ಯ ಸರ್ಕಾರ, ಏಕೆ ಆ ರೀತಿ ಇನ್ನೂ ಮಾಡಿಕೊಂಡಿಲ್ಲ? ಇವತ್ತು 14,13,12 ಪರ್‌ಸೆಂಟ್ ಎಂದು

ನಾವೇನು ಹೇಳುತ್ತಿದ್ದೇವಲ್ಲಾ ಅದನ್ನು ರೀ ಶೆಡ್ಯೂಲ್ ಮಾಡಬಹುದಿತ್ತು. ಅದನ್ನು ನಾವು ಮಾಡಿಕೊಂಡಿಲ್ಲ. ಇವತ್ತು ನಾವು ಜನರಿಗೆ, ಯಾರು ನಮ್ಮ ಹತ್ತಿರ ಠೇವಣಿಯನ್ನು ಇಡುತ್ತಾರೋ ಅವರಿಗೆ ನಾವು ಕೊಡುತ್ತಿರುವುದು ಕೇವಲ ಐದೂವರೆ ಪರ್‌ಸೆಂಟ್ ಆದರೆ ನಾವು ಕಟ್ಟುತ್ತಿರುವುದು 12,13,14 ಪರ್‌ಸೆಂಟ್. ಆದ್ದರಿಂದ ಕೇಂದ್ರ ಸರ್ಕಾರ ಏನು ರೀ ಶೆಡ್ಯೂಲ್ ಮಾಡಿದೆ ಆ ರೀತಿ ತಾವೂ ಕೂಡ ಮಾಡಿದರೆ ಒಳ್ಳೆಯದು. ಕೇಂದ್ರ ಸರ್ಕಾರದ ಬಜೆಟ್‌ನ ಬಗ್ಗೆ ನಮ್ಮ ಸಚಿವರು ಆಶಾದಾಯಕವಾಗಿದೆ ಆದರೂ ನಿರಾಸೆಗೊಳಿಸಿಲ್ಲ ಎಂದು ಹೇಳುತ್ತಾರೆ. ಆದರೆ ಕೇಂದ್ರ ಸರ್ಕಾರ ನಮಗೆ ಮತ್ತಷ್ಟು ನೆರವನ್ನು ನೀಡಬಹುದಾಗಿತ್ತು. ಏಕೆ ಕೇಂದ್ರ ಸರ್ಕಾರ ನೀಡಲಿಲ್ಲ, ಬೇರೆ ಸರ್ಕಾರ ಇದ್ದಾಗ ಇಷ್ಟು ಟೀಕೆ ಮಾಡಿದಿರಲ್ಲಾ ಬೇರೆ ಸರ್ಕಾರ ಇದ್ದಾಗ ಮಾನ್ಯ ಎಸ್.ಎಸ್. ಪಾಟೀಲ್ ಸಾಹೇಬರಿಗೆ ಸುತಾರಾಂ ಹಿಡಿಸಲಿಲ್ಲ, ಇವತ್ತು ಏತಕ್ಕಾಗಿ ಕೇಂದ್ರ ಸರ್ಕಾರ ಹಣವನ್ನು ಕೊಡಲಿಲ್ಲ, ತಾವು ಏತಕ್ಕಾಗಿ ಕೇಳಲಿಲ್ಲ? ಇನ್ನೊಂದು ಕಡೆ ನಮ್ಮ ರಾಷ್ಟ್ರೀಯ ಜನತಾದಳದ ಅಧ್ಯಕ್ಷರು ಸ್ಪಷ್ಟವಾಗಿ ಹೇಳಿದ್ದಾರೆ, ಏನು ಹೇಳಿದ್ದಾರೆಂದರೆ ಕೇಂದ್ರದ ಬಜೆಟ್ ನಿರಾಶಾದಾಯಕ. ಆ ಬಜೆಟ್ ಸರಿಯಿಲ್ಲವೆಂದು ಮೊನ್ನೆ ಅವರು ಬಜೆಟ್ ಮೇಲೆ ಭಾಷಣ ಮಾಡತಕ್ಕ ಕಾಲದಲ್ಲಿ ಹೇಳಿದ್ದಾರೆ. ಅವರು ಒಳ್ಳೆಯ ಭಾಷಣವನ್ನು ಮಾಡಿದ್ದಾರೆ. ಅದಕ್ಕೆ ನಾವೂ ಸಂತೋಷ ಪಡುತ್ತೇವೆ. ಕೇಂದ್ರದ ಬಜೆಟ್ ಸರಿಯಿಲ್ಲವೆಂದು ಅವರು ಹೇಳಿದ್ದಾರೆ. ಆದ್ದರಿಂದ ತಾವು ಕೇಂದ್ರದ ಬಗ್ಗೆ ಸ್ವಲ್ಪ ಮೃದು ಧೋರಣೆಯನ್ನು ಬಿಟ್ಟು ಸ್ವಲ್ಪ ಗಟ್ಟಿಯಾಗಿ ನಮ್ಮ ರಾಜ್ಯದ ಕೆಲಸಗಳು ಆಗುವ ಕಡೆ ಗಮನಕೊಟ್ಟರೆ ಈ percentage of interest ಮಿಕ್ಕಿದ್ದೆಕ್ಕಲ್ಲಾ ಕಡಿಮೆಯಾಗಲು ಸಾಧ್ಯವಾಗುತ್ತದೆ. ಬೆಂಗಳೂರು ಮಹಾ ನಗರವನ್ನು ಮಾನ್ಯ ಕೆಂಪೇಗೌಡರು ನಿರ್ಮಾಣ ಮಾಡಿದರು. ಮಾನ್ಯ ಸಿಂಧ್ಯಾರವರು, you know each and every thing. ತಮ್ಮ ಬಗ್ಗೆ ಅಪಾರವಾದ ಅಭಿಮಾನ ಇರುವಂಥವರು ನಾವು. ಆದರೆ ಬೆಂಗಳೂರು ಮಹಾ ನಗರ ರಾಜ್ಯಕ್ಕೆ ಇಷ್ಟು ರೆವಿನ್ಯೂವನ್ನು ಕೊಡುತ್ತೇವೆ. ಬೆಂಗಳೂರು ಮಹಾ ನಗರದ ಬಗ್ಗೆ ಒಂದು ವಾಕ್ಯ ಇಷ್ಟನ್ನು ಮಾಡುತ್ತೇವೆ ಎಂದು ಹೇಳಬಹುದಾಗಿತ್ತಲ್ಲಾ? ಬೆಂಗಳೂರಿನ ಜನ ಪಾಪ ಮಾಡಿದ್ದರಾ? ನಾವೆಲ್ಲಾ ಅನಾಥರೇ? ಬೆಂಗಳೂರು ಮಹಾ ನಗರದಲ್ಲಿ 60 ಲಕ್ಷ ಜನರಿದ್ದಾರೆ. ನಾಳೆ 30 ಕ್ಷೇತ್ರಗಳಾಗುತ್ತದೆ. ಇಲ್ಲಿ ಯಾರು ಗೆಲ್ಲುತ್ತಾರೆ ಅವರೇ ಮುಖ್ಯ–ಮಂತ್ರಿಗಳಾಗುವುದು, ಅದೂ ಗೊತ್ತಿರಲಿ, ನಾಳೆ ಬೆಂಗಳೂರಿನ ಶಾಸಕರುಗಳ ಬೆಂಬಲವಿಲ್ಲದೆಯೇ ಯಾರೂ ಮುಖ್ಯಮಂತ್ರಿಯಾಗಲು ಸಾಧ್ಯವಿಲ್ಲ, ಅಂಥ ಸಂದರ್ಭದಲ್ಲಿ ತಾವು ಇವತ್ತು ನಮ್ಮನ್ನು ಕಡೆಗಣಿಸಿದ್ದೀರಿ, ಬೆಂಗಳೂರು ಮಹಾನಗರದ ಬಗ್ಗೆ ತುಟಿಕ್ ಪಿಟಿಕ್ ಎಂದು ಯಾವುದೇ ಒಂದು ಶಬ್ದವನ್ನೂ ಬಳಸಿಲ್ಲ. ಏತಕ್ಕಾಗಿ? ನಾವೆಲ್ಲಾ ದುಡ್ಡು ಕೊಡುತ್ತೇವೆ ಅದಕ್ಕಾಗಿಯೇ? ಬೆಂಗಳೂರು ಮಹಾ ನಗರದಲ್ಲಿ ಎಷ್ಟು ರೆವಿನ್ಯೂ ಬರುತ್ತದೆ? ಲೆಕ್ಕ ಹೇಳಿ, ನೂರಕ್ಕೆ ನಲವತ್ತೈದು ಭಾಗ ಹಣವನ್ನು ಬೆಂಗಳೂರು ಮಹಾ ನಗರ ಕೊಡುತ್ತಿದ್ದರೆ ಇವತ್ತು ಬೆಂಗಳೂರು ಮಹಾ ನಗರದ ಬಗ್ಗೆ ಏನೂ ಹೇಳಲಿಲ್ಲ, ಇವತ್ತು ಸಿಂಧ್ಯಾರವರು ಹಿಂದೆ ಮಂತ್ರಿಯಾಗಿದ್ದಾಗ ಕೆಲವು fly over ನ್ನು ಪ್ರಾರಂಭ ಮಾಡಿದರು. ಮತ್ತೆ ಇವತ್ತು ಎಲಧ್ಯ fly over ಅಲ್ಲಲ್ಲೇ ನಿಂತಿದೆ. ಯಾವ ಒಂದು fly over ಕೆಲಸವೂ ಆಗುತ್ತಿಲ್ಲ. ಇವತ್ತು ಬೆಂಗಳೂರು ಮಹಾನಗರ ವಿಶ್ವವಿಖ್ಯಾತ ಐ.ಟಿ.ಕ್ಯಾಪಿಟಲ್, ಅದರ ಮೇಲೆ ನಾವು ಸುಂಕವನ್ನು ಹಾಕುತ್ತಿದ್ದೇವೆ. ಯಾವುದರ ಮೇಲೆ I.T. capital. Silicon City of I.T. ಎಂದೇನು ನಾವು ಹೇಳುತ್ತೇವಲ್ಲಾ ಆದರೆ ಇಲ್ಲಿನ ಪರಿಸ್ಥಿತಿ ಏನು, ರಸ್ತೆಗಳೆಲ್ಲಾ ಗುಂಡಿ ಬಿದ್ದಿವೆ. ಬೆಂಗಳೂರಿನ ಯಾವ ಮೂಲೆಗೆ ಹೋದರೂ ರಸ್ತೆಗಳು ಗುಂಡಿ ಬಿದ್ದಿದ್ದಾವೆ, ಇದರ ಬಗ್ಗೆ

ಯೋಚನೆ ಮಾಡುವವರು, ಪ್ರಸ್ತಾವ ಮಾಡುವವರು ಇಲ್ಲವೆ? ಅದೊಂದೇ ಇಲ್ಲ ಬೆಂಗಳೂರು ಮಹಾ ನಗರದಲ್ಲಿ ಕುಡಿಯಲು ನೀರಿಲ್ಲ, ಎರಡು ದಿವಸಕ್ಕೊಮ್ಮೆ ನೀರು ಕೊಡುತ್ತಾರೆ, ಅದೂ ಕೆಲವು ಭಾಗಗಳಲ್ಲಿ ನಡುರಾತ್ರೆಯಲ್ಲಿ ಕೊಡುತ್ತಾರೆ, ಬೆಳಿಗ್ಗೆ ಕೊಡುತ್ತಾರೆ, ಸಾಯಂಕಾಲ ಕೊಡುತ್ತಾರೆ, ಕುಡಿಯುವುದಕ್ಕೋಸ್ಕರ ನಮಗೆ ನೀರು ಇಲ್ಲ, ಬೆಂಗಳೂರು ಮಹಾನಗರ 45 ಪರ್‌ಸೆಂಟ್ ಟ್ಯಾಕ್ಸ್‌ನ್ನು ಕಟ್ಟುತ್ತೇವೆ, ತಾವು surplus budget ಮಂಡಿಸಿದ್ದೀರಿ. Where is our Bangalore? What about Bangalore? What are you going to do for this City?

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಸುಬ್ರಮಣ್ಯನಾಯ್ಡು ರವರೆ, ಇಲ್ಲೇ ಮಾನ್ಯ ಜಗದೀಶ್ ಶೆಟ್ಟರ್‌ರವರೂ ಕುಳಿತಿದ್ದಾರೆ, ತಾವು ಹುಬ್ಬಳ್ಳಿಯ ಸ್ಥಿತಿಯನ್ನು ನಮ್ಮ ಗದಗಿನ ಸ್ಥಿತಿಯನ್ನು ಕೇಳಬೇಕು. 15–20 ದಿವಸಕ್ಕೆ ನೀರನ್ನು ಕೊಡುತ್ತಾರೆ. ಆದರೆ ನೀವು ದಿನಾ ನೀರನ್ನು ಕುಡಿಯುತ್ತೀರಿ. ಎಲ್ಲಾ ತಂದು ಇಲ್ಲೇ ಇಡಲಾಗಿದೆ. ಸುಮ್ಮನೆ ಏಕೆ ಮಾತನಾಡುತ್ತೀರಾ? ಹೇಳತಕ್ಕದ್ದನ್ನು ಹೇಳಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು : ನಮ್ಮಷ್ಟು ಟ್ಯಾಕ್ಸ್ ಕಟ್ಟಿ ನೀವು ದಿನಾ ನೀರನ್ನು ತೆಗೆದುಕೊಳ್ಳಿ.

ಶ್ರೀ ಎಸ್.ಎಸ್. ಪಾಟೀಲ್ : ಬೆಂಗಳೂರಿಗೆ ಎಷ್ಟು ಖರ್ಚಾಗುತ್ತದೆ? ಸುಮ್ಮನೆ ಮಾತನಾಡಬೇಡಿ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಪಾಟೀಲರೆ ಮಾನ್ಯ ಸುಬ್ರಮಣ್ಯ ನಾಯ್ಡುರವರು ಹಿಂದಿನ ಐದು ವರ್ಷದಲ್ಲೇ ಇದು ಸಿಂಗಪುರ್ ಆಗಿಹೋಗಿ ಬಿಟ್ಟಿದೆ ಎಂದು, ಹಿಂದಿನ ಐದು ವರ್ಷದಲ್ಲಿ ಸಿಂಗಪುರ್ ಆಗಿಬಿಟ್ಟಿದೆ, ಸಮಸ್ಯೆಗಳು ಹೇಗೆ ಉಳಿದುಕೊಂಡಿದೆ ಎಂದು ಚಿತ್ರಣವನ್ನು ಕೊಡುತ್ತಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ಇದು ಸಿಂಗಪುರ್ ಆಗುವುದಿಲ್ಲ. ಇನ್ನೂ ಸ್ವಲ್ಪ ವರ್ಷದಲ್ಲಿ ಚೆನ್ನೈಯಾಗುತ್ತದೆ. ಆ ಸ್ಥಿತಿ ಬಂದಿದೆ ಈಗ.

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು : ತಮ್ಮ ನೀತಿಯ ಪ್ರಕಾರ ಹಾಗೆಯೇ ಇರುತ್ತದೆ. ಆದರೆ ನಮ್ಮ ನೀತಿಯ ಪ್ರಕಾರ ಹಾಗೆ ಇರುವುದಿಲ್ಲ. ಆ ರೀತಿ ಇರಲು ಸಾಧ್ಯವಿಲ್ಲ. ತಮ್ಮ ನೀತಿ ಹಾಗೆಯೇ ಇರುತ್ತದೆ. ತಾವು ಆಂಧ್ರದ ಬಗ್ಗೆ ಮಾತನಾಡುತ್ತೀರಿ ಕನ್ನಡದ ಬಗ್ಗೆ ಮಾತನಾಡುತ್ತೀರಿ, ಏಕೆಂದರೆ ತಮ್ಮದು ದ್ವಂದ್ವ ನೀತಿಯಾಗಿರುವುದರಿಂದ ನಾವು ಏನೂ ಮಾಡಲು ಆಗುವುದಿಲ್ಲ.

ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದ ಎಸ್.ಎಸ್. ಪಾಟೀಲ್‌ರವರು ಬೆಂಗಳೂರನ್ನು ಚೆನ್ನೈ ಮಾಡಲು ಹೊರಟಿರುವುದು ನಿಜಕ್ಕೂ ಶೋಚನೀಯ. ಇದಕ್ಕೋಸ್ಕರವೇ ಕೂಡುವಳಿ ಮಾಡಿಕೊಂಡು ಸರ್ಕಾರವನ್ನು ರಚಿಸಬೇಕಾಗಿತ್ತೇ ಎಂಬ ಪ್ರಶ್ನೆ ಕೇಳುತ್ತಿದ್ದೇನೆ. ಇದಕ್ಕೋಸ್ಕರ ಇಲ್ಲಿದ್ದ ನೀವು ಅಲ್ಲಿಗೆ (ಆಡಳಿತ ಪಕ್ಷಕ್ಕೆ) ಹೋಗಬೇಕಾಗಿತ್ತೇ? ದಯವಿಟ್ಟು ಬೆಂಗಳೂರನ್ನು ಚೆನ್ನೈ ಮಾಡುತ್ತೇವೆಂಬ ಯೋಚನೆ ಏನು ಇಟ್ಟುಕೊಂಡಿದ್ದೀರಿ, ಆ ಕಲ್ಪನೆ ಇಟ್ಟುಕೊಳ್ಳಬೇಡಿ. ಬೆಂಗಳೂರು ಸುಭಿಕ್ಷವಾಗಿದ್ದು, ಇಲ್ಲಿ ನೀರಿನ ಕೊರತೆ ಇದ್ದು ಏನು ಸರಬರಾಜು ಮಾಡುತ್ತಿದ್ದಾರೆ, ಇದು ಖಂಡಿತವಾಗಿ ಹೀಗೇ ಮುಂದುವರೆಯಲಿ. ಚೆನ್ನೈ ಸಮಸ್ಯೆಯನ್ನು ಖಂಡಿತವಾಗಿಯೂ ನಿಮ್ಮ ಆಳ್ವಿಕೆಯಲ್ಲಿ ಬೆಂಗಳೂರಿಗೆ ತರುವಂತಹ ಪ್ರಯತ್ನ ಬೇಡ.

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು : ಚೆನ್ನೈ ಸಮಸ್ಯೆಯನ್ನು ಇಲ್ಲಿಗೆ ತರಬೇಡಿ. ಬಳ್ಳಾರಿ ಸಮಸ್ಯೆಯನ್ನು ಕಾಂಗ್ರೆಸ್‌ನವರು ತಂದಿದ್ದರು. ಆ ರೀತಿಯಲ್ಲಿ ಬೆಂಗಳೂರನ್ನು ನಾವು ಚೆನ್ನೈ ಮಾಡಲು ಬಿಡುವುದಿಲ್ಲ. ಬೆಂಗಳೂರು ಕರ್ನಾಟಕದ ಅವಿಭಾಜ್ಯ ಅಂಗ. ಬೆಂಗಳೂರು ಕರ್ನಾಟಕದ ರಾಜಧಾನಿ.

ಶ್ರೀ ವಾಟಾಳ್ ನಾಗರಾಜ್ : ನೀವು (ಕಟ್ಟಾ ಸುಬ್ರಹ್ಮಣ್ಯನಾಯ್ಡು) ಮಾತನಾಡುತ್ತಾ 'ಮಾಡುವುದಿಲ್ಲ ಮಾಡುವುದಕ್ಕೆ ಬಿಡುವುದಿಲ್ಲ' ಎಂದೆಲ್ಲಾ ಏನು ಹೇಳುತ್ತಿದ್ದೀರಿ. ಅದು ನಿಮ್ಮ ಅಭಿಮಾನ. ಅದನ್ನು ಒಪ್ಪುತ್ತೇನೆ. ಈಗಾಗಲೇ ಅದು ಆಗಿಹೋಗಿದೆ! ಬೆಂಗಳೂರಿನಲ್ಲಿರುವ 65 ಲಕ್ಷ ಜನಸಂಖ್ಯೆಯಲ್ಲಿ 40 ಲಕ್ಷ ಜನರು ಹೊರಗಡೆಯಿಂದ ಬಂದಿದ್ದಾರೆ! ಇನ್ನು ಬಿಡುವುದು ಎಲ್ಲಿಂದ ಬಂತು? ಮುಗಿದು ಹೋಯಿತು! ಈಗ ಮಾಡುವುದೇನೂ ಇಲ್ಲ. ಈಗ ಬೆಂಗಳೂರು ಚೆನ್ನೈ ಆಗಿದೆ! ಆಂಧ್ರ ಆಗಿದೆ! ಉತ್ತರ ಪ್ರದೇಶವಾಗಿದೆ! ಕೇರಳ ಆಗಿದೆ! ಬೆಂಗಳೂರು ನಗರದಲ್ಲಿ ಎಲ್ಲರೂ ಇದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ಬೆಳಗಾವಿ ಮಿತ್ರರು ಅಲ್ಲಿನ ಪರಿಸ್ಥಿತಿ ಹೇಳಿದರಲ್ಲಾ ನಮ್ಮ ಪರಿಸ್ಥಿತಿಯೂ ಅದೇ ರೀತಿಯಾಗಿದೆ.

ಶ್ರೀ ಅಲ್ಕೋಡ್ ಹನುಮಂತಪ್ಪ : ಬೆಂಗಳೂರು ಆಂಧ್ರವಾಗಿದೆ! ಕೇರಳ ಆಗಿದೆ! ಬೆಂಗಳೂರು ನಾಯ್ಡು ಆಗಿದೆ ಎಂದು ಹೇಳುತ್ತಿದ್ದಾರೆ!!

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು : ಇವೊತ್ತು ಬೆಂಗಳೂರು ಮಹಾನಗರದಲ್ಲಿನ ಸಾರಿಗೆ ವ್ಯವಸ್ಥೆ ಗಮನಿಸಿದರೆ, ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಹೋಗಬೇಕಾಗಿದ್ದರೆ, ಹೊಸೂರು ರಸ್ತೆಯಿಂದ ನಾವು ವಿಧಾನಸೌಧಕ್ಕೆ ಬರಬೇಕಾದರೆ ಸುಮಾರು 2–3 ಗಂಟೆಗಳಾಗುತ್ತದೆ. ಆ ಭಾಗದಲ್ಲಿ ಅಷ್ಟೊಂದು ಟ್ರಾಫಿಕ್ ಇದೆ. ಅದೇ ರೀತಿ ಮೈಸೂರು, ತುಮಕೂರು, ಬಳ್ಳಾರಿ ರಸ್ತೆಗಳಲ್ಲಿ ಟ್ರಾಫಿಕ್ ವಿಪರೀತ ಇರುವುದರಿಂದ ಉದ್ದಕ್ಕೂ ನಾವು fly overs ಮಾಡದಿದ್ದರೆ, ಬ್ಯಾಂಕಾಕ್‌ನಲ್ಲಿ 40–50 ಕಿಲೋಮೀಟರ್‌ಗಳನ್ನು ದೂರದುದ್ದಕ್ಕೂ ಯಾವ ರೀತಿ fly overs ಮಾಡಿದ್ದಾರೋ, ಅದೇ ರೀತಿ ಇಲ್ಲಿಯೂ ಬೆಂಗಳೂರು ಮಹಾನಗರ ಪಾಲಿಕೆ ಮಾಡಬೇಕಾಗಿರುವಂಥ ಅಗತ್ಯ ಖಂಡಿತವಾಗಿಯೂ ಇದೆ. ಇಲ್ಲಿ fly overs ಮಾಡದೆ ಹೋದರೆ ಜನರು ತಂತಮ್ಮ ಕೆಲಸ–ಕಾರ್ಯಗಳಿಗೆ ಹೊರಗಡೆ ಹೋಗಲು ಬೆಳಿಗ್ಗೆ ಆರು ಗಂಟೆಗೆ ಎದ್ದರೆ ಒಂಭತ್ತು ಗಂಟೆಗೆ ತಲುಪಬೇಕಾದ ಸ್ಥಳವನ್ನು ತಲುಪುವುದಕ್ಕಾಗುವುದಿಲ್ಲ. ಆದಕಾರಣ, ಎಲ್ಲಾ ಭಾಗಗಳಲ್ಲೂ fly overs ಮಾಡುವುದು ತುಂಬಾ ಅಗತ್ಯವಿದೆ. ಈಗಾಗಲೇ ಕೆಲವು ಕಡೆಗಳಲ್ಲಿ ನಿರ್ಮಾಣವಾಗಿರುವ fly overs ಕಾಮಗಾರಿ ಏನಾಗಿದೆಯೆಂದರೆ, ಉದಾಹರಣೆಗೆ, ನ್ಯಾಷನಲ್ ಕಾಲೇಜು ಹತ್ತಿರ fly overs ಕಾಮಗಾರಿ ಪ್ರಾರಂಭವಾಗಿ ಎರಡು ವರ್ಷಗಳಾದವು. ಅದೇ ರೀತಿ ರಾಜಾಜಿನಗರದಲ್ಲಿ underground passing ಕಾಮಗಾರಿ ಕೈಗೊಂಡು ಎರಡು ವರ್ಷಗಳಾದವು. ಡೈರಿ ಸರ್ಕಲ್ ಮತ್ತು ಜಯದೇವ ಹೃದ್ರೋಗ ಸಂಸ್ಥೆ ಬಳಿ ಕೈಗೊಂಡ fly overs ಕಾಮಗಾರಿಗಳೆಲ್ಲವೂ ಪ್ರಾರಂಭವಾಗಿ ಎರಡು ವರ್ಷಗಳಾಗುತ್ತಾ ಬಂದರೂ ಇನ್ನೂ ಮುಗಿದಿಲ್ಲ. ಇದಿಷ್ಟೇ ಅಲ್ಲದೆ, ಕಾಕ್ಸ್‌ಟೌನ್ ಮತ್ತು ಫ್ರೇಜರ್ ಟೌನ್‌ನಲ್ಲೂ ಕೂಡ Uttar Pradesh Building Construction Corporation ಅವರಿಗೆ ವಹಿಸಿದ್ದರೂ ಇನ್ನೂ ಮುಗಿದಿಲ್ಲ. ಇದೇ ಕಂಪನಿಯವರಿಗೆ ಮೂರ್ನಾಲ್ಕು ಕಡೆಗಳಲ್ಲಿ ವಹಿಸಿದ ಕಾಮಗಾರಿಗಳಲ್ಲಿ ಎಲ್ಲಿಯೂ

ಕೂಡ ಇನ್ನೂ ಕೆಲಸವೇ ಪ್ರಾರಂಭಿಸಿಲ್ಲ. ಹಾಗಾಗಿ, ಬೆಂಗಳೂರಿನಲ್ಲಿ ಇದೊಂದು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ.

ಇನ್ನು ಶೌಚಾಲಯಗಳ ಕುರಿತು ಹೇಳುವುದಾದರೆ, ಬೆಂಗಳೂರು ಮಹಾನಗರದ ಅನೇಕ ಭಾಗಗಳಲ್ಲಿ ಶೌಚಾಲಯದ ಕೊರತೆ ಇದೆ. ವಿಧಾನಸೌಧದ ಸುತ್ತಮುತ್ತಲೂ ಜನರು ಶೌಚಕ್ಕೆ ಯಾವ ರೀತಿ ಹೋಗುತ್ತಾರೆಂಬುದನ್ನು ನಾವು ನೋಡುತ್ತಿದ್ದೇವೆ. ಕಬ್ಬನ್ ಪಾರ್ಕ್‌ನ ಒಂದು ಭಾಗದಲ್ಲಿ ಶೌಚಾಲಯ ನಿರ್ಮಿಸಿದ್ದೇವೆ. ಆದರೆ ಬೆಂಗಳೂರಿನಲ್ಲಿ ಶೌಚಾಲಯಗಳ ವ್ಯವಸ್ಥೆ ಇಲ್ಲದೆ ತುಂಬಾ ಸಮಸ್ಯೆಯುಂಟಾಗಿದೆ.

ಇನ್ನು ಪಡಿತರ ಚೀಟಿ ಕುರಿತು ಹೇಳುವುದಾದರೆ, ರೇಷನ್ ಹಾಗೂ ಸೀಮೆಎಣ್ಣೆಗಾಗಿ ಬೆಳಿಗ್ಗೆ 5–6 ಗಂಟೆಗೆ ಎದ್ದು 8.00 ಗಂಟೆ ತನಕ ಲೈನ್‌ನಲ್ಲಿ ನಿಂತುಕೊಂಡರೆ, 11–12 ಗಂಟೆಗೆ ರೇಷನ್ ಕೊಡುತ್ತಾರೆ. ಬೆಂಗಳೂರಿನಲ್ಲಿ ಈ ರೀತಿಯ ಪಡಿತರ ವ್ಯವಸ್ಥೆ ಇದೆ. ಬೆಂಗಳೂರು ಮಹಾನಗರದಲ್ಲಿ ಸುಮಾರು 60 ಲಕ್ಷ ಜನಸಂಖ್ಯೆ ಇರುವುದರಿಂದ, ಕರ್ನಾಟಕ ರಾಜ್ಯದ ಹತ್ತನೇ ಒಂದು ಭಾಗದಷ್ಟು ಜನಸಂಖ್ಯೆ ಬೆಂಗಳೂರು ಮಹಾನಗರವೊಂದರಲ್ಲೇ ಕೇಂದ್ರೀಕೃತ–ಗೊಂಡಿರುವುದರಿಂದ ಪಡಿತರ ವ್ಯವಸ್ಥೆ ಕುರಿತು ತುರ್ತಾಗಿ ಗಮನಹರಿಸುವುದು ತುಂಬಾ ಅಗತ್ಯವಿದೆ. ಹಿಂದೆ BATF (Bangalore Agenda Task Force) ರಚನೆ ಮಾಡಿದರು. ಬಜೆಟ್‌ನಲ್ಲಿ ಅದರ ಬಗ್ಗೆ ಎಲ್ಲಿಯೂ ಪ್ರಸ್ತಾಪವಾಗಲಿಲ್ಲ. ಇನ್ನು ಮುಂದೆ BATF ಇರುತ್ತದೆಯೇ? ಹೋಗುತ್ತದೆಯೇ? ಕೆಲಸ ಮಾಡುತ್ತಿದೆಯೇ? ಇಲ್ಲವೇ ಎನ್ನುವುದರ ಬಗ್ಗೆ ಎಲ್ಲಿಯೂ ಕೂಡ ನಮಗೆ ತಿಳಿಸಿಲ್ಲ. ಅದರ ಬಗ್ಗೆ ತಾವು ನಮಗೆ ತಿಳಿಸಬೇಕೆಂದು ತಮ್ಮ ಮೂಲಕ ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ.

ಹಿಂದೆ ಬೆಂಗಳೂರು ಮಹಾನಗರದಲ್ಲಿ 'ವಿಜ್ಞಾನ ಪಾರ್ಕ್' ಸ್ಥಾಪಿಸಿದ್ದರು. ಅದೇನಾಯಿತೋ ಗೊತ್ತಿಲ್ಲ. ಕೋರಮಂಗಲದಲ್ಲಿ ಸದರಿ ಪಾರ್ಕನ್ನು ಸ್ಥಾಪಿಸುತ್ತೇವೆಂದಾಗ, ಅಲ್ಲಿ ಭೂ ಅವ್ಯವಹಾರವುಂಟಾಗಿ, ಆ ಜಮೀನು ಏನಾಯಿತೆಂಬುದು ಗೊತ್ತಿಲ್ಲ. ಮತ್ತೆ ಆ ಜಮೀನು ಬಿಟ್ಟರು. ಇವೊತ್ತು ಬನ್ನೇರುಘಟ್ಟದ ಕಡೆ ನೂರು ಎಕರೆಗಳಷ್ಟು ಜಾಗದಲ್ಲಿ ವಿಜ್ಞಾನ ಪಾರ್ಕ್ ಸ್ಥಾಪಿಸುವುದಾಗಿ ಹೇಳಿದ್ದಾರೆ. ವಿಜ್ಞಾನ ಪಾರ್ಕ್ ಸ್ಥಾಪಿಸುವ ವಿಚಾರ ಯಾವ ಸ್ಥಿತಿಯಲ್ಲಿದೆ? ಯಾವತ್ತು ಮಾಡುತ್ತೀರಿ? ಇದಕ್ಕೆ ಬಜೆಟ್‌ನಲ್ಲಿ ಹಣವೇನಾದರೂ ಮೀಸಲಿಟ್ಟಿದ್ದೀರಾ ಎನ್ನುವುದನ್ನು ತಾವು ತಿಳಿಸಿದರೆ ತುಂಬಾ ಸಂತೋಷವಾಗುತ್ತದೆ. ಇನ್ನು ಪಾರ್ಕಿಂಗ್ ವ್ಯವಸ್ಥೆ ಹೇಳುವುದಾದರೆ, ಎಲ್ಲಿಯೇ ಪಾರ್ಕಿಂಗ್ ಮಾಡಿದರೂ ಒಂದೂವರೆ ರೂಪಾಯಿ ಕೊಡುವ ವ್ಯವಸ್ಥೆಯಲ್ಲಿ ಎಲ್ಲಾ ಕಡೆಗಳಲ್ಲೂ ಮಾಡಿದ್ದಾರೆ. ಆದರೆ, ಇಲ್ಲಿ ಪ್ರೆಸ್‌ನವರು ಹೋಗುತ್ತಾರೆ. ಕೆಲವು ಕಡೆಗಳಲ್ಲಿ ಎರಡು ರೂಪಾಯಿಗಳನ್ನು ಕೊಟ್ಟರೂ ಐವತ್ತು ಪೈಸೆಯನ್ನು ವಾಪಸ್ಸು ಕೊಡುವುದಿಲ್ಲ. ಪಾರ್ಕಿಂಗ್ ವ್ಯವಸ್ಥೆ ಮೂಲಕ ಬೆಂಗಳೂರು ನಗರದಲ್ಲಿ ಒಂದು ರೀತಿಯಲ್ಲಿ ಸುಲಿಗೆ ನಡೆಯುತ್ತಿದೆ. ಪಾರ್ಕಿಗ್ ಶುಲ್ಕವಿಲ್ಲದ ಕೆಲವು ಜಾಗಗಳಲ್ಲಿ ಪಾರ್ಕಿಂಗ್ ಫೀ ವಸೂಲು ಮಾಡುವ ಕಾರ್ಯ ನಡೆಯುತ್ತಿದೆ! ಇದರ ಬಗ್ಗೆ ಸರ್ಕಾರ ಸ್ಪಷ್ಟ ನಿಲುವು ತಾಳಬೇಕು. ಇದನ್ನು ಯಾವ ರೀತಿ ಪರಿಷ್ಕರಿಸುತ್ತಾರೆಂಬುದನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಲು ಇಷ್ಟಪಡುತ್ತೇನೆ.

ಬೆಂಗಳೂರು ಮೆಟ್ರೋ ಟ್ರೇನ್ ಕುರಿತು ಪ್ರಸ್ತಾಪಿಸುವುದಾದರೆ, 'ಮೆಟ್ರೋ ಟ್ರೇನ್ ಬರುತ್ತದೆ, ಮೆಟ್ರೊ ಟ್ರೇನ್ ಬರುತ್ತದೆ' ಎಂದು ಹಲವಾರು ವರ್ಷಗಳಿಂದ ಬೆಂಗಳೂರಿನ ಜನರೆಲ್ಲರೂ ಕನಸು

ಕಾಣುತ್ತಿದ್ದಾರೆ. ಆದರೆ, ಇಲ್ಲಿಯ ತನಕ ಬೆಂಗಳೂರಿನಲ್ಲಿ ಮೆಟ್ರೋ ಟ್ರೇನ್ ಕಾಮಗಾರಿ ಎಲ್ಲಿಯೂ ಕಂಡಿಲ್ಲ. ಎಲ್ಲಿ ಹೋಗಿದೆಯೋ ಗೊತ್ತಿಲ್ಲ. ಬಜೆಟ್‌ನಲ್ಲಿ ಅದರ ಬಗ್ಗೆ ಪ್ರಸ್ತಾಪಿಸಿಲ್ಲ. ಮೆಟ್ರೋ ಟ್ರೇನ್ ಬರುತ್ತದೆಯೇ. ಇಲ್ಲವೇ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಉತ್ತರ ನೀಡಬೇಕೆಂದು ತಮ್ಮ ಮೂಲಕ ನಾನು ಕೇಳುತ್ತಿದ್ದೇನೆ. ಇದರ ಜೊತೆಗೆ ಪ್ಲಾನಿಟೋರಿಯಂ ಕುರಿತು ಹೇಳುವುದಾದರೆ, ಇದು ವಿಧಾನಸೌಧದ ಪಕ್ಕದಲ್ಲಿಯೇ ಇದೆ. ಅಲ್ಲಿನ ವ್ಯವಸ್ಥೆ ಗಮನಿಸಿದರೆ, ಅಲ್ಲಿ ಕುಡಿಯಲು ನೀರಿನ ವ್ಯವಸ್ಥೆ ಇಲ್ಲ. ಅಲ್ಲಿಗೆ ಬಹಳಷ್ಟು ಮಕ್ಕಳು ಬರುತ್ತಾರೆ. ಪ್ಲಾನಿಟೋರಿಯಂ ಬಳಿ ಕುಡಿಯಲು ಒಂದು ಲೋಟ ಚಹಾ ಸಹ ಸಿಗುವುದಿಲ್ಲ, ನೀರೂ ಸಿಗುವುದಿಲ್ಲ. ತುಂಬಾ ದೂರದ ಊರುಗಳಿಂದ ಮಕ್ಕಳು ಪ್ಲಾನಿಟೋರಿಯಂ ವೀಕ್ಷಿಸಲು ಬರುವುದರಿಂದ ಅಗತ್ಯ ವ್ಯವಸ್ಥೆಯನ್ನು ಒಂದು ಚೂರೂ ಮಾಡಿಲ್ಲ. ಅಲ್ಲಿ ಏನೂ ಕೊಡದೆ ಹೋದರೂ ಕನಿಷ್ಠ ಕುಡಿಯುವ ನೀರಿನ ಚಿಕ್ಕ ವ್ಯವಸ್ಥೆಯನ್ನಾದರೂ ಕಲ್ಪಿಸಿಕೊಟ್ಟರೆ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಇನ್ನು ಆಶ್ರಯ ಮನೆಗಳ ಕುರಿತಾಗಿ ಹೇಳುವುದಾದರೆ, ಇವೊತ್ತು ಇಡೀ ರಾಜ್ಯಾದ್ಯಂತ ಆಶ್ರಯ ಮನೆಗಳಿದ್ದರೆ, ಬೆಂಗಳೂರಿನಲ್ಲಿ ನಾಲ್ಕು ನೂರು ಕೊಳೆಗೇರಿ ಪ್ರದೇಶಗಳಿದ್ದು, ಒಂದೊಂದು ರೂಮಿನಲ್ಲಿ 10–20 ಜನರು ಒಟ್ಟಿಗೆ ವಾಸಿಸುವುದನ್ನು ನಾವು ನೋಡುತ್ತಿದ್ದೇವೆ. ಅವರಿಗೆಲ್ಲಾ ಮನೆಗಳಿಲ್ಲ; ಮಾನ್ಯ ಸಿಂಧ್ಯಾ ಸಾಹೇಬರನ್ನು ನಮ್ಮ ಕ್ಷೇತ್ರಕ್ಕೆ ಕರೆದುಕೊಂಡು ಹೋಗಿ ತೋರಿಸುತ್ತೇನೆ. ಕಳೆದ ವರ್ಷ ಕೂಡ ಬೆಂಗಳೂರಿಗೆ ಆಶ್ರಯ ಮನೆಗಳನ್ನು ಒದಗಿಸಿಕೊಡಬೇಕೆಂದು ಕೇಳಿದರೂ ಒಂದು ಮನೆಯನ್ನೂ ಕೊಡಲಿಲ್ಲ. ಈ ಬಾರಿಯಾದರೂ ತಮ್ಮ ಮುಖಂಡತ್ವದಲ್ಲಿ ಮಾನ್ಯ ಪ್ರಕಾಶ್‌ರವರು ಕಂದಾಯ ಸಚಿವರಾಗಿದ್ದು ತಾವು ವಿಚಾರವನ್ನು ಚೆನ್ನಾಗಿ ಅರ್ಥ ಮಾಡಿಕೊಂಡವರಾಗಿದ್ದು ಎಲ್ಲಾ ಕಷ್ಟಗಳಿಗೂ ಸ್ಪಂದಿಸುವವರಾದ್ದರಿಂದ ಆಶ್ರಯ ಮನೆಗಳನ್ನು ಬೆಂಗಳೂರು ಮಹಾನಗರಕ್ಕೆ ಒದಗಿಸಿಕೊಡಬೇಕೆಂದು ತಮ್ಮಲ್ಲಿ ನಾನು ಸವಿನಯ ಪ್ರಾರ್ಥನೆ ಮಾಡುತ್ತೇನೆ. ಕಾರಣವೇನೆಂದರೆ, ಬೆಂಗಳೂರಿನಲ್ಲಿ ಸಾಕಷ್ಟು ಮಂದಿ ಬಡವರಿದ್ದಾರೆ. ಇವೊತ್ತು ರೆವಿನ್ಯೂ ನೋಂದಣಿ ಕಚೇರಿಗಳ ಕುರಿತು ಪ್ರಸ್ತಾಪಿಸುವುದಾದರೆ, ನೋಂದಣಿಗೆಂದು ಬೆಳಿಗ್ಗೆ 10.00 ಗಂಟೆಗೆ ಹೋದರೆ ಒಂದೊಂದು ಸಬ್ ರಿಜಿಸ್ಟರ್ ಕಛೇರಿಯಲ್ಲಿ ನಾಲ್ಕು ಸಬ್ ರಿಜಿಸ್ಟ್ರಾರ್‌ಗಳನ್ನು ತಾವು ಇಟ್ಟಿದ್ದೀರಿ. ಆದರೆ, ರಿಜಿಸ್ಟ್ರೇಷನ್‌ಗೆಂದು ಬೆಳಿಗ್ಗೆ ಹೋದರೆ ರಾತ್ರಿ ಹತ್ತು ಗಂಟೆ ತನಕ ಕ್ಯೂ ನಿಲ್ಲಬೇಕು. ಅಲ್ಲಿ ನೋಂದಣಿಗಾಗಿ ಕ್ಯೂ ನಿಲ್ಲುವುದಷ್ಟೇ ಅಲ್ಲ, ಅಲ್ಲಿ ಏನೇನು ಅವ್ಯವಹಾರಗಳು ನಡೆಯುತ್ತಿದೆಯೆಂದರೆ, ಯಾರದಾದರೂ ಮೊದಲು ರಿಜಿಸ್ಟ್ರೇಷನ್ ಆಗಬೇಕಾದರೆ ಅಲ್ಲಿರುವವರಿಗೆ ಹೆಚ್ಚು ಲಂಚ ಕೊಡಬೇಕು. ಇಲ್ಲದೆ ಹೋದರೆ ರಿಜಿಸ್ಟ್ರೇಷನ್ ನಡೆಯುವುದಿಲ್ಲ. ಒಂದು ಸಬ್ ರಿಜಿಸ್ಟ್ರೇಷನ್ ಆಫೀಸ್ ಕೆಂಗೇರಿಯಲ್ಲಿದ್ದರೆ ಮತ್ತೊಂದು ಕೋರಮಂಗಲದಲ್ಲಿದೆ. ಅಲ್ಲಿಂದಿಲ್ಲಿಗೆ 25 ಕಿಲೋಮೀಟರ್‌ಗಳಷ್ಟು ದೂರವಿದೆ. ಇಷ್ಟು ದೂರವಿರುವಾಗ ಮಧ್ಯದಲ್ಲೊಂದು ನೋಂದಣಿ ಕಛೇರಿಯನ್ನು ನೀವೇಕೆ ಪ್ರಾರಂಭಿಸಬಾರದು? ಇದರಿಂದ ತಮಗಾಗುವಂಥ ಸಮಸ್ಯೆಯಾದರೂ ಏನು? ಅಲ್ಲಿ ಎಷ್ಟೊಂದು ಅವ್ಯವಹಾರಗಳು ಜರುಗುತ್ತಿದೆಯೆಂದು ತಮಗೆ ಗೊತ್ತಿದೆ. ತಾವು ರಿಪೋರ್ಟ್ ತರಿಸಿಕೊಂಡಿದ್ದೀರಿ. ತಮಗೆ ರೆವಿನ್ಯೂ ರಿಸೀಟ್ಸ್ ಬರುತ್ತಿದೆ. ಇವೊತ್ತು revenue receipts, you are getting huge amount from Bangalore ಎಂದು ಎಲ್ಲರೂ ಮಾತನಾಡುತ್ತಾರೆ. ಆದರೆ, ಬೆಂಗಳೂರಿನಿಂದ ಎಷ್ಟು amount ವಾಪಸ್ಸು ಬರುತ್ತದೆಂಬುದನ್ನೂ ಯೋಚನೆ ಮಾಡಬೇಕಲ್ಲಾ, ಇಷ್ಟು amount ಬರುವಂಥ

ಸಂದರ್ಭದಲ್ಲಿ ಕಂದಾಯ ನೋಂದಣಿ ಕಛೇರಿಗಳನ್ನು ಬೆಂಗಳೂರಿನ ಎಲ್ಲಾ ಭಾಗಗಳಲ್ಲಿ ಈಗಿರುವ ನೋಂದಣಿ ಕಛೇರಿಗಳು ನಾಲ್ಕು ಪಟ್ಟು ಆದಾಗ ಮಾತ್ರ ಜನರಿಗೆ ತೊಂದರೆ ಕಡಿಮೆಯಾಗುತ್ತದೆ. ನಿಜವಾಗಿಯೂ ಜನರು ಕಷ್ಟ ಪಡುತ್ತಿದ್ದಾರೆ. ಎಷ್ಟು ತೊಂದರೆಯಾಗುತ್ತದೆಂದು ತಾವೇ ಒಂದು ಸಲ ಎಲ್ಲಿಯಾದರೂ ಅಕಸ್ಮಾತ್ ಭೇಟಿ ನೀಡಿದರೆ ತಮಗೆ ಗೊತ್ತಾಗುತ್ತದೆ. ನೋಂದಣಿ ಕಛೇರಿಗಳಲ್ಲಿ ರಿಜಿಸ್ಟ್ರೇಷನ್ ಮಾಡಿಸಿಕೊಳ್ಳಬೇಕಾದರೆ ಜನರಿಗೆ ಯಾವ ರೀತಿಯ ತೊಂದರೆ ಇದೆಯೆಂದು ನಿಮಗೆ ಗೊತ್ತಾಗುತ್ತದೆ. ತಾವು ಮಂತ್ರಿಗಳಾಗಿರುವುದರಿಂದ ವಿವಿಧ ವಲಯ ಕಛೇರಿಗಳನ್ನು ಎಲ್ಲಾ ಭಾಗಗಳಲ್ಲೂ ಪ್ರಾರಂಭಿಸಬೇಕು. ತನ್ಮೂಲಕ ಜನರ ಕಷ್ಟಗಳಿಗೆ ಸ್ಪಂದಿಸಬೇಕು. ಹಾಗಾಗಿ, ಇವೊತ್ತು ತಾವು ಇದನ್ನು ಗಂಭೀರವಾಗಿ ತೆಗೆದುಕೊಂಡು ಆ ವಿಷಯದಲ್ಲಿ ಕಾರ್ಯಪ್ರವೃತ್ತರಾಗಬೇಕಾಗಿದೆ.

ಇದೆಲ್ಲಕ್ಕಿಂತಲೂ ಮುಖ್ಯವಾಗಿರುವುದೇನೆಂದರೆ, ಕಸ (debris) ಹಾಕಲು ಜಾಗವಿಲ್ಲದಿರುವುದು. ಬೆಂಗಳೂರು ಮಹಾನಗರದ ಗಲೀಜು ಎಲ್ಲವನ್ನೂ ತೆಗೆದುಕೊಂಡು ಹೊರಗಡೆ ಹಾಕುವುದಕ್ಕೆ ಜಾಗವಿಲ್ಲ. ಇದಕ್ಕೆಂದು ಕೇವಲ ನೂರು ಎಕರೆಗಳಷ್ಟು ಜಾಗ ಇಟ್ಟುಕೊಂಡಿದ್ದಾರೆ. ಆದರೆ, ಇವೊತ್ತು ಬೆಂಗಳೂರಿನ ನಾಲ್ಕು ಮೂಲೆಗಳಲ್ಲಿ ಉತ್ಪಾದನೆಯಾಗುವ ಕಸವನ್ನು ತೆಗೆದುಕೊಂಡು ಹೋಗಿ dump ಮಾಡಲು ಸುಮಾರು 500 ರಿಂದ 1000 ಎಕರೆಗಳಷ್ಟು ಜಾಗವನ್ನು ರೆವಿನ್ಯೂ ಇಲಾಖೆಯಿಂದ ಬೆಂಗಳೂರು ಮಹಾನಗರ ಪಾಲಿಕೆಗೆ ಕಲ್ಪಿಸಿಕೊಡಬೇಕು.

ಈ ಡೆಬ್ರೀಸನ್ನು ಮುಂಬರುವ ಜನಸಂಖ್ಯೆ ಹೆಚ್ಚಳ ನೋಡಿಕೊಂಡು, ಏನು ಜನಸಂಖ್ಯೆ ಹೆಚ್ಚಳ ಆಗುತ್ತಿದೆ 2.5 ಪರ್ಸೆಂಟ್ ಇಂಡಿಯನ್ ಪಾಪ್ಯುಲೇಷನ್ ಗ್ರೋತ್, ಫಾರೀನ್ ಕಂಟ್ರೀಸ್ ಗ್ರೋತ್ ರೇಟ್–1. ಪರ್ಸೆಂಟ್ ಇದೆ. ನಮ್ಮ ಗ್ರೋತ್ ಪರ್ಸೆಂಟ್ 2 ರಿಂದ 2.5 ಪರ್ಸೆಂಟ್ ಇದೆ. ಹಾಗೆಂದ ಮೇಲೆ ಇನ್ನು 40 ವರ್ಷಕ್ಕೆ ಬೆಂಗಳೂರು ಮಹಾನಗರ ಇಟ್ ವಿಲ್ ಬಿಕಂ ಡಬಲ್. ಒಂದೂವರೆ ಕೋಟಿ ಜನಸಂಖ್ಯೆ ಆಗುತ್ತದೆ. ಒಂದೂವರೆ ಕೋಟಿ ಆದಾಗ ಇಲ್ಲಿ ಬರುವಂತಹ ಸಮಸ್ಯೆಗಳ ಬಗ್ಗೆ ನಾನು ತಮ್ಮ ಗಮನಕ್ಕೆ ತರುವಂತಹ ಪ್ರಯತ್ನವನ್ನು ಮಾಡಿದ್ದೇನೆ ಅಧ್ಯಕ್ಷರೆ, ಇವತ್ತು ಹೆಚ್ಚಿಗೆ ನಮ್ಮ ಮಾನ್ಯ ಸದಸ್ಯರುಗಳು ಮಾತನಾಡುವವರು ಇದ್ದಾರೆ. ಆದ್ದರಿಂದ ತಾವು ನನಗೆ ಮಾತನಾಡಲು ಕಾಲಾವಕಾಶ ಕೊಟ್ಟು ಈ ಸಂದರ್ಭದಲ್ಲಿ ಈ ಸಾಲಿನ ಆಯವ್ಯಯದಲ್ಲಿ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ, ನಮಸ್ಕಾರ.

† **ಶ್ರೀ ಸಿ.ಎಸ್. ಪುಟ್ಟೇಗೌಡ (ಶ್ರವಣಬೆಳಗೊಳ) :** ಮಾನ್ಯ ಅಧ್ಯಕ್ಷರೆ, ಮಾನ್ಯ ಹಣಕಾಸಿನ ಸಚಿವರಾದಂತಹ ಶ್ರೀಮಾನ್ ಸಿದ್ಧರಾಮಯ್ಯನವರು ಏನು ಈ ಒಂದು ಬಜೆಟನ್ನು ಮಂಡಿಸಿದ್ದಾರೆ, ಇದು ಇಂತಹ ಕೆಟ್ಟ ಪರಿಸ್ಥಿತಿಯಲ್ಲಿ ಮಂಡಿಸಿದ್ದಾರೆ. ಇದು ಜನ ಸಾಮಾನ್ಯರಿಗೂ ಕೂಡ ಗೊತ್ತಿದೆ. ರಾಜ್ಯದ ಪರಿಸ್ಥಿತಿ, ದೇಶದ ಪರಿಸ್ಥಿತಿ ಗೊತ್ತಿದೆ. ಯಾವುದೇ ಸರ್ಕಾರ ನಡೆಸುವುದು ನಾವು ಭಾಷಣ ಮಾಡುವಷ್ಟು ಸುಲಭ ಅಲ್ಲ ಎನ್ನತಕ್ಕದ್ದು ಎಲ್ಲರ ಅರಿವಿಗೆ ಇದೆ. ಅಂತಹ ಕೆಟ್ಟ ಪರಿಸ್ಥಿತಿಯಲ್ಲಿ ಕೂಡ ಮಾನ್ಯ ಸಿದ್ಧರಾಮಯ್ಯನವರ ಸರ್ಕಸ್ ಏನು ಇದೆ, ಮಾನ್ಯ ಧರ್ಮಸಿಂಗ್ ಅವರ ನೇತೃತ್ವದಲ್ಲಿ ನಿಜವಾಗಲೂ ಹಳ್ಳಿಯ ಜನರು ಸ್ವಲ್ಪ ಆಸೆ ಇಟ್ಟುಕೊಂಡಿದ್ದಾರೆ, ಈ ಸರ್ಕಾರದಲ್ಲಿ ನಮಗೇನಾದರೂ ಕೊಡುತ್ತಾರೆ ನಮ್ಮನ್ನು, ಬಡವರನ್ನು ನೋಡುತ್ತಾರೆ. ಈ ಸರ್ಕಾರಕ್ಕೆ ಕಣ್ಣು ತೆರೆದಿದೆ, ಕಿವಿ ಕೇಳುತ್ತಿದೆ ಎನ್ನತಕ್ಕ ಆಶಾಭಾವನೆ ಇಟ್ಟುಕೊಂಡಿದ್ದಾರೆ. ಆದರೂ ಇವತ್ತು ಹಳ್ಳಿಗಾಡಿನ ಜನ ಏನು ಇದ್ದಾರೆ,

ಈಗೊಂದು 25 ವರ್ಷದಲ್ಲಿ ಸರ್ಕಾರ ಎಂದರೆ ಕಲ್ಲು ಭಾವಿಯಲ್ಲಿ ಕುಡಿಯುವುದಕ್ಕೆ ನೀರು ತರುವವರು. ಕೆರೆಕಟ್ಟೆಗಳಲ್ಲಿ ದನಕರು ಕುಡಿಯುವುದಕ್ಕೆ ನೀರು ಇರುತ್ತಿತ್ತು. ಅವತ್ತು ಯಾರೂ ಕೂಡ ಸರ್ಕಾರದ ಕಡೆಗೆ ಗಮನ ಹರಿಸುತ್ತಿರಲಿಲ್ಲ. ನಮ್ಮ ಊರಿನ ಛೇರ್ಮನ್ ಹೋದ ಸಲ ಸೋತವರೇ ಈ ಸಲ ಛೇರ್ಮನ್‌ರವರಿಗೆ ಓಟು ಹಾಕಬೇಕು. ಹೋದ ಸಲ ಆ ಶಾಸಕರು ಸೋತವರೇ ಈ ಸಲ ಈ ಶಾಸಕರಿಗೆ ಓಟು ಹಾಕಬೇಕು ಎಂದು ಓಟು ಹಾಕುತ್ತಿದ್ದ ಕಾಲ. ಈಗ ನಿಜವಾಗಲೂ ಕಷ್ಟದ ಪರಿಸ್ಥಿತಿ ಇದೆ. ನಾನು ಹತ್ತು ವರ್ಷವಾದ ಮೇಲೆ ಇಲ್ಲಿ ಶಾಸಕನಾಗಿ ಬಂದ ಮೇಲೆ ಅವತ್ತು ಇದ್ದಂತಹ ಸ್ಥಿತಿ ಇಲ್ಲ. ನಾನು ಹಳ್ಳಿಗಾಡಿನಲ್ಲಿ ತಿರುಗಾಡಲು ಕಷ್ಟ ಆಗಿದೆ. ಯಾವುದೇ ವಿಚಾರ ಇರಲಿ, ಎಲ್ಲವನ್ನೂ ಸರ್ಕಾರದ ಕಡೆಗೆ ನೋಡುವಂತಹ ಸ್ಥಿತಿ ಇವತ್ತು ಬಂದಿದೆ. ರೈತರಿಂದ ಹಿಡಿದು ಕೂಲಿ ಕಾರ್ಮಿಕರು ಎಲ್ಲರೂ ಕೂಡ ಸರ್ಕಾರದ ಕಡೆಗೆ ನೋಡುವ ಸ್ಥಿತಿ ಇದೆ. ಸ್ವಲ್ಪ ಏನಾದರೂ ಅಚ್ಚುಕಟ್ಟಾಗಿ ಸುಭಿಕ್ಷವಾಗಿ ಇರುವವರು ಎಂದರೆ ಈ ಬೆಂಗಳೂರಿನವರು ಪುಣ್ಯಾತ್ಮರು ಅಷ್ಟೇ. ಬಾಂಬೆಗೋ, ಬೆಂಗಳೂರೋ, ಮಂಗಳೂರೋ, ಹುಬ್ಬಳ್ಳಿಯವರೋ, ಚೆನ್ನಾಗಿ ಇರಬಹುದು. ನಿಜವಾಗಲೂ ಹಳ್ಳಿಗಳಲ್ಲಿ ವಾಸವಾಗಿರುವವರ ಸ್ಥಿತಿ ಎಷ್ಟು ಕೆಟ್ಟಿದೆ ಎಂದರೆ ಅದರೊಳಗೂ ವ್ಯವಸಾಯವನ್ನು ನಂಬಿಕೊಂಡಿರುವವರ ಸ್ಥಿತಿ ಅತ್ಯಂತ ಧಾರುಣ್ಯ ಸ್ಥಿತಿಗೆ ತಲುಪಿದೆ. ಇವತ್ತು 25 ವರ್ಷದಲ್ಲಿ ಅವತ್ತು ಒಂದು ಸಲ ನಮ್ಮ ಮಾವ ನನ್ನನ್ನು ಎಂಎಗೆ ಕಳುಹಿಸುವುದಕ್ಕೆ ರಾತ್ರಿ ಬಸ್‌ಗೆ ಹತ್ತಿಸುವುದಕ್ಕೆ ಬಂದಿದ್ದರು. ಅವರು ಹೇಳಿದರು. ಮಗಾ ಈ ಹಳ್ಳಿ ಕಡೆಗೆ ಬರಬೇಡ ಕಣೋ. ಎಲ್ಲಾದರೂ ಯಾವುದಾದರೂ ಒಬ್ಬನ ಹತ್ತಿರ ಜವಾನಿಕೆಗೆ ಸೇರಿಕೋ, ಈ ವ್ಯವಸಾಯ ನಂಬಿಕೊಂಡು ಜೀವನ ಮಾಡುವುದು ಕಷ್ಟ ಎಂದಿದ್ದರು. ಅದು ನಿಜವಾಗಿಯೂ ಈಗ 25–30 ವರ್ಷವಾದ ಮೇಲೆ ಗೊತ್ತಾಗಿದೆ. ನಿಜವಾಗಲೂ ವ್ಯವಸಾಯ ಮಾಡುವವನ ಪರಿಸ್ಥಿತಿ ಈ ದೇಶದಲ್ಲಿ, ಈ ರಾಜ್ಯದಲ್ಲಿ ಅತ್ಯಂತ ಕನಿಷ್ಠ ಪರಿಸ್ಥಿತಿ. ನಾನೇನಾದರೂ ಇವತ್ತು. ಇಲ್ಲಿಗೆ ಬಂದಿದ್ದರೆ ಪಾಪ ಅವರೆಲ್ಲಾ ಅವತ್ತು ಹೊಡೆದಾಡಿ ಓಟು ಹಾಕಿದ್ದಾರೆ, ಇಲ್ಲಿ ನಿಂತಿರತಕ್ಕ 224 ಜನ. ಗೆದ್ದು ಓಟು ಹಾಕಿಸಿಕೊಂಡವರು ಇಲ್ಲಿದ್ದಾರೆ. ಓಟು ಹಾಕಿದ ಪುಣ್ಯಾತ್ಮರೆಲ್ಲಾ ಹೊಲದ ಕಡೆಗೆ ಕಳೆ ಕೀಳಲು ಹೋಗಿದ್ದಾರೆ. ನಮ್ಮನ್ನು ವಿಧಾನಸೌಧಕ್ಕೆ ಹತ್ತಿಸಿದರೂ ದಳ್ಳಾಳಿಗಳು ಇಲ್ಲಿ ಒಳಗೆ ಬರಲು ಬಿಡುವುದಿಲ್ಲ. ಇಲ್ಲಿಂದ ಹೊರಗಡೆ ಊಟ ಮಾಡುವುದಕ್ಕೆ ಹೋದರೂ ಆ ಗೇಟಲ್ಲಿ ಅವರೇ ನಿಂತಿರುತ್ತಾರೆ. ಇದಕ್ಕೆ ಸೈನ್ ಹಾಕಿ ಸಾರ್, ಅದಕ್ಕೆ ಸೈನ್ ಹಾಕಿ ಸಾರ್ ಎಂದು ನಿಂತಿರುತ್ತಾರೆ. ರೈತ ಎಷ್ಟು ದಿನ ತಡೆಯಬಹುದು? ಒಂದು ಆರು ತಿಂಗಳು ಸುಮ್ಮನೆ ಇರುತ್ತಾನೆ ಈ ಪುಟ್ಟೇಗೌಡರು ಏನೋ ಮಾಡಬಹುದು ಎಂದು ಹೇಳಿ. ಆರು ತಿಂಗಳಾದ ಮೇಲೆ ನಿಜವಾಗಿಯೂ ನಾವು ಉತ್ತರ ಹೇಳಬೇಕಾದರೆ ಎದೆ ನೀವಿಕೊಂಡು ಹೇಳುವುದು ಬಹಳ ಕಷ್ಟ ಇದೆ. ಏಕೆಂದರೆ ಒಂದೊಂದಾಗಿ ಹೇಳುವುದಾದರೆ ಕೆಪಿಟಿಸಿಎಲ್, ಕೆಇಬಿ ವಿಚಾರ. ಹಳ್ಳಿಗೆ ಹೋದರೆ ಜನ ಹೇಳುತ್ತಾರೆ, ಈ ಕೆಇಬಿಯನ್ನು ಏನಾದರೂ ಸರಿಪಡಿಸಿ ಬಿಟ್ಟರೆ ನಿಮ್ಮ ಸರ್ಕಾರವನ್ನು ಯುನಾನಿಮಸ್ ಆಗಿ ಇನ್ನೂ ಐದು ವರ್ಷ 224 ಜನ ಶಾಸಕರಿಗೂ ಪ್ರಮೋಷನ್ ಕೊಡಿಸಿ ಬಿಡುತ್ತೇವೆ ಎನ್ನುತ್ತಾರೆ. ಇದನ್ನು ಸರಿ ಮಾಡುವುದಕ್ಕೆ ಆಗುವುದಿಲ್ಲ ಎಂದು ಅವರಿಗೆ ಖಚಿತವಾಗಿದೆ. ನಾವು ಮಾತ್ರ ಇಲ್ಲಿ ಕುಳಿತುಕೊಂಡು ಸರಿಪಡಿಸುತ್ತೇವೆ, ಸರಿ ಪಡಿಸುತ್ತೇವೆಂದು ಭಾಷಣ ಮಾಡುವುದನ್ನು ಬಿಟ್ಟಿಲ್ಲ. ಅದು ಸರಿ ಹೋಗಿಲ್ಲ. ಟಿಸಿ ವಿಚಾರ ಯಾರೋ ಕೇಳುತ್ತಿದ್ದರು. ನಮ್ಮ ಹುಕ್ಕೇರಿ ಶಾಸಕರು ಹೇಳುತ್ತಿದ್ದರು. 25 ದಿವಸಕ್ಕೆ ಹೋಗುತ್ತದೆ ಅದು ಏನಾಗುತ್ತದೋ? ಏಕೆ ಅಂದರೆ

ಲೋಡ್ ಜಾಸ್ತಿ ಆಗಿದೆ, ಹೋಗುತ್ತದೆ. 25 ಸಾವಿರವೋ 26 ಸಾವಿರವೋ ನಮ್ಮ ಊರು ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ರೈತರು ಬೋರ್‌ವೆಲ್ ಕೊರೆದಿದ್ದಾರೆ. 10 ಸಾವಿರವೋ, 11 ಸಾವಿರವೋ ಅದರಲ್ಲಿ ಅನಧಿಕೃತ ಬೋರ್‌ವೆಲ್‌ಗಳಿವೆ. ಅದಕ್ಕೆ ಇನ್ನೂ ಸರ್ವೀಸ್ ಆಗಿಲ್ಲ. ಅದಕ್ಕೆ ಇಲ್ಲದ ಹೊರೆ ಹಾಕಿರುವುದರಿಂದ ಅವರೂ ಕೇಳಲಿಕ್ಕೆ ಬಂದಿಲ್ಲ, ಸರ್ಕಾರವೂ ಅವರನ್ನು ಟಚ್ ಮಾಡಿಲ್ಲ. ಇದು ಒಳ್ಳೆಯ ವ್ಯವಸ್ಥೆ ಅಲ್ಲ. ಇದಕ್ಕೆ ಮಿನಿಮಮ್ ಆಗಿ ಒಂದು ಐದು ಸಾವಿರ ರೂ. ಕೊಡಬೇಕು. ಐದು ಸಾವಿರ ರೂ. ಕಟ್ಟುವುದಕ್ಕೆ ರೈತರು ಸಿದ್ಧರಿದ್ದಾರೆ. ಅದನ್ನು ಅಧಿಕೃತ ಮಾಡಿಸಬೇಕು. ಒಂದು ಗುಣಮಟ್ಟದ ವಿದ್ಯುಚ್ಛಕ್ತಿಯನ್ನು ಕೊಡವುಂತಹವರು ಆಗಬೇಕು. ಕನಿಷ್ಠ ನಾವು 20 ಗಂಟೆ ಕೊಡುತ್ತೇವೆ ಎಂದು ಹೇಳುವುದು ಅಲ್ಲ. ಕೊಡುವುದು ಇನ್ನೂ 5 ಗಂಟೆ ಕಡಿಮೆ ಆಗಲಿ. ಕೊಡುವಂತಹ ಕರೆಂಟನ್ನು ಖಂಡಿತ ಗುಣಮಟ್ಟದ ಕರೆಂಟನ್ನು ಕೊಡಬೇಕು. ಇಂತಹ ಟೈಮಿಗೆ ಕೊಡುತ್ತೇವೆಂದು ಹೇಳಬೇಕು. ಅದು ಬಿಟ್ಟು ಯಾವಾಗಲೋ ಬಂದಾಗ ಕೊಟ್ಟು ಕರೆಂಟ್ ಬಿಲ್ ಕೊಡಿ ಎಂದರೆ ರೈತರಿಗೂ ಕಷ್ಟ. ರಾತ್ರಿ ಹೊತ್ತು ಎಲ್ಲಾ ಕಾಯಬೇಕು ಎಂದರೆ ಕಾಯುವುದಕ್ಕೆ ಆಗುತ್ತದಾ? ಎಷ್ಟು ಹೊತ್ತು ರೈತ ಕಾಯುತ್ತಾನೆ? ಬಹಳ ಅತ್ಯಂತ ಕೆಟ್ಟ ಪರಿಸ್ಥಿತಿ ಇದೆ. ಏನಾಗಿದೆ? ಎಲ್ಲಾ ಸರ್ಕಾರಗಳೂ ಬಂದಾಗ, ಸರ್ಕಾರವು ಅವರದೇ ಆದಂತಹ ಜನಪ್ರಿಯವಾದಂತಹ ಎರಡು ಮೂರು, ನಾಲ್ಕು ವಿಶೇಷ ಕಾರ್ಯಕ್ರಮಗಳನ್ನು ಮಾಡಿದ್ದಾರೆ. ಈ ರಾಜ್ಯದಲ್ಲಿ, ಈ ದೇಶದಲ್ಲಿ ಕಾರ್ಯಕ್ರಮದ ಸಂಖ್ಯೆ ಶಾಸಕರಿಗೇ ಎಷ್ಟು ಕರೆಕ್ಟಾಗಿ ಇದೆ ಎಂದು ಗೊತ್ತಿಲ್ಲ. ಎಲ್ಲದಕ್ಕೂ ಅಲ್ಲಿಇಲ್ಲಿ ಹಂಚುವುದರೊಳಗೆ ಈ ಮನೆಯಲ್ಲಿ ಅಕ್ಕಿ ಇಲ್ಲದಾಗ ನೆಂಟರು ಬಂದಾಗ, ಒಳಗಡೆ ಇಕ್ಕೆ ಇಕ್ಕೆ ಎಂದು ನಮ್ಮ ಹೆಂಗಸರಿಗೆ ಹೇಳುತ್ತೇವಲ್ಲಾ, ಹಾಗಾದರೆ ಈ ಸರ್ಕಾರದ ಸ್ಥಿತಿ. ಯಾವುದೇ ಒಂದು ಕಾರ್ಯಕ್ರಮ ತೆಗೆದುಕೊಂಡರೂ ಕೂಡ ಯಶಸ್ವಿಯಾಗಿ ನಡೆಯುತ್ತಿಲ್ಲ. ಮಕ್ಕಳಿಗೆ ಅನ್ನ ದಾಸೋಹ ಮಾಡುತ್ತೇವೆಂದು ಹೇಳಿ ಈ ಕಡೆ ಉಣ್ಣುವುದಕ್ಕೆ ಇಕ್ಕುತ್ತೇವೆಂದು ಹೇಳುತ್ತೇವೆ. ಅಲ್ಲಿ ನಮ್ಮ ಊರಿನಲ್ಲಿ ಅನ್ನ ಇರಲಿ ಅಣ್ಣ, ಕುಳಿತುಕೊಳ್ಳುವುದಕ್ಕೆ ಜಾಗ ಇಲ್ಲ ಎಂದು ಹೆಣ್ಣು ಮಕ್ಕಳೆಲ್ಲಾ ನಮ್ಮನ್ನು ಹಿಡಿದುಕೊಂಡಿದ್ದರು. ಕುಳಿತುಕೊಳ್ಳುವುದಕ್ಕೆ ಜಾಗ ಇಲ್ಲ ತೋರಿಸಿ ಹೋಗಿ ಶಾಸಕರೇ ಎಂದರು. ಈ ತರಹದ ಪರಿಸ್ಥಿತಿ ಆಗಬಾರದು. ಕೆಲವು ಕಾರ್ಯಕ್ರಮ ಇರಲಿ. ನಾನು ಯಾವುದನ್ನೂ ಬಿಡಿ ಎಂದು ಹೇಳುವಷ್ಟು ರಾಜಕೀಯ ವಿವೇಚನೆ ಇರುವಂತಹವನು ಅಲ್ಲ. ನಾನು ಹಳ್ಳಿಗಾಡಿನಿಂದ ಬಂದವನು. ಕೆಲವು ದಿನನಿತ್ಯ ಬೇಕಾದಂತಹ ಕಾರ್ಯಕ್ರಮಗಳು ಹಳ್ಳಿಯಲ್ಲಿ ಇರುತ್ತವೆ. ಅವರ ಮಕ್ಕಳಿಗೆ ಸ್ಕೂಲು ಬೇಕು. ಒಳ್ಳೆಯ ವಿದ್ಯಾಭ್ಯಾಸ ಬೇಕು. ಆಸ್ಪತ್ರೆ ಬೇಕು. ಅವರು ಓಡಾಡುವುದಕ್ಕೆ ಸಾರಿಗೆ ಸಂಪರ್ಕ ಬೇಕು. ಕೆಇಬಿ ಬೇಕು. ನೀರಾವರಿ ಬೇಕು. ಇಂತಹವಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಮೂಲಭೂತವಾದ ಸೌಕರ್ಯಗಳನ್ನು ಕೊಡುವುದಕ್ಕೆ ಸರ್ಕಾರ ಕಂಕಣ ಬದ್ಧವಾಗಿರಬೇಕು. ಇದು ಇಲ್ಲದೇ ಇದ್ದರೆ ಏನಾಗುತ್ತದೆ? ಎಲ್ಲವನ್ನೂ ಮಾಡುತ್ತೇವೆಂದರೆ ಯಾವುದನ್ನೂ ಪರಿಪೂರ್ಣವಾಗಿ ಮಾಡುವುದಕ್ಕೆ ಆಗುವುದಿಲ್ಲ. ಯಾವುದೂ ಚೆನ್ನಾಗಿ ಆಗುವುದಿಲ್ಲ. ಉದಾಹರಣೆಗೆ, ನೀರಾವರಿ ಇಲಾಖೆ ವಿಚಾರ. ನಮ್ಮಲ್ಲಿ ಹೇಮಾವತಿ ಜಲಾಶಯದಿಂದ ನೀರು ಹರಿಯುತ್ತದೆ. ಆ ಕಾಲಕ್ಕೆ ಕೇಂದ್ರ ಸರ್ಕಾರದ ಅನುಮತಿ ಇಲ್ಲದಿದ್ದರೂ ಪಾಪ ಶ್ರೀಮಾನ್ ವೀರೇಂದ್ರ ಪಾಟೀಲರು ಪ್ರಾರಂಭ ಮಾಡಿದರು. ಆವತ್ತು ಸನ್ಮಾನ್ಯ ದೇವೇಗೌಡರು ಶಾಸಕರಾಗಿದ್ದರು. ಆ ಕಾಲದಲ್ಲಿ ಅದಕ್ಕೆ ಲಾಟರಿ ನಡೆಸಿ ಧರ್ಮವೀರ ಅವರು ಈ ಪ್ರಾಜೆಕ್ಟನ್ನು ಶೂರು ಮಾಡಿದರು. ಪ್ರಾಜೆಕ್ಟ್ ಬಗ್ಗೆ ಇನ್ನೂ ಹೇಳುತ್ತಲೇ ಇದ್ದಾರೆ. ಬೆಳ್ಳಾವಿಗೂ

ನೀರು ಕೊಡುತ್ತೇವೆ ಎಂದು ಅಲ್ಲೂ ಫೌಂಡೇಶನ್ ಹಾಕುತ್ತಾರೆ. ಇಲ್ಲೂ ನಮ್ಮ ಊರನ್ನೂ ಅಲ್ಲಿ ಯಾವ್ಯಾವ ಊರಿಗೆ ನೀರು ಹತ್ತುವುದಿಲ್ಲವೋ ಅಲ್ಲೆಲ್ಲಾ ಫೌಂಡೇಶನ್. ಇರುವ ಕೆರೆಗೇ ನೀರು ಹರಿಯುತ್ತಿಲ್ಲ. ಫೌಂಡೇಶನ್ ಮಾತ್ರ ದಿನವೂ ಆಗುತ್ತಿದೆ. ಅಲ್ಲಿ ಜನ ಬಂದು ಏನು ಹೇಳುತ್ತಾರೆ ಅವರು ಅಲ್ಲಿ ಫೌಂಡೇಶನ್ ಮಾಡಿದ್ದಾರೆ, ನೀವೂ ಇಲ್ಲಿನ ಕೆಲವು ಕೆರೆಕಡೆಗೆ ಫೌಂಡೇಶನ್ ಮಾಡಿರಿ ಎನ್ನುತ್ತಾರೆ. ಪುಟ್ಟೇಗೌಡರೇ, ನಿಮಗೆ ಹೇಗೆ ಆಗುವುದಿಲ್ಲ, ಅವರಿಗೆ ಹೇಗೆ ಆಗುತ್ತದೆ ಎನ್ನುತ್ತಾರೆ. ಈ ತರಹ ಸಮಸ್ಯೆ ಶುರುವಾಗಿದೆ. ನೀರಾವರಿ ನಿಗಮದಲ್ಲಿ ಇವತ್ತು ಹೇಗಾಗಿದೆ ಪರಿಸ್ಥಿತಿ ಎಂದರೆ ಮಾನ್ಯ ಖರ್ಗೆಯವರು ಅನುಭವಿಗಳು, ಮಂತ್ರಿಗಳಾಗಿದ್ದಾರೆ. ಆ ನಿಗಮವನ್ನು ಮುಚ್ಚಿ ಬಿಡುವುದು ಒಳ್ಳೆಯದು ಪಾಪ ಕಾವೇರಿ ನಿಗಮದ ಶಾಸಕರು ಕೆಲವರು ಇಲ್ಲಿ ಇರಬೇಕು. ನೀರಾವರಿ ನಿಗಮದಲ್ಲಿ 10 ರೂಪಾಯಿ ದುಡ್ಡು ಇಲ್ಲ. ಅವರೇನು ಹೇಳುತ್ತಾರೆ? 177 ಕೋಟಿ ರುಪಾಯಿ ಪೆಂಡಿಂಗ್ ಬಿಲ್ ಇಟ್ಟು ನೀರಾವರಿ ನಿಗಮಕ್ಕೆ ಹಸ್ತಾಂತರವಾಯಿತು. ನೀರಾವರಿ ನಿಗಮದಲ್ಲಿ 250 ಕೋಟಿ ರೂಪಾಯಿ ದುಡ್ಡನ್ನು ಸಾಲವಾಗಿ ತೆಗೆದುಕೊಂಡು ಆ ನಿಗಮವನ್ನು ಸ್ಟಾರ್ಟ್ ಮಾಡಿದ ಮೇಲೆ ಅಲ್ಲೊಂದು 80 ಕೋಟಿ ರೂಪಾಯಿ ಸಾಲ ತೀರಿಸಿ, ಇನ್ನೂ 100 ಕೋಟಿ ರೂ. ಸಾಲ ಹಾಗೆಯೇ ಇದೆ. 2001, 2002, 2003 ರದ್ದು ಕಂಟ್ರಾಕ್ಟರ್ ಬಿಲ್ ಹಾಗೆಯೇ ಇದೆ. ಇನ್ನು ನಿಗಮದಲ್ಲಿ ದಿನಾ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಬೇಕಾದ್ದು ಟೆಂಡರ್ ಕರೆಯುತ್ತಿರುತ್ತಾರೆ. ಚೀಫ್ ಇಂಜಿನಿಯರ್ ಅವರು ನಮ್ಮಂತಹವರು ಯಾರಾದರೂ ಲೆಟರ್ ಕೊಟ್ಟರೆ ಅವನ್ನೂ ಕರೆಯುತ್ತಿರುತ್ತಾರೆ. ಅಲ್ಲಿರತಕ್ಕವರಿಗೆ ಯಾರ್‍ಯಾರಿಗೆ ಹೇಗೆ ಹೇಗೆ ಇಂಟರೆಸ್ಟ್ ಬರುತ್ತದೋ ಅದಕ್ಕೆ ಬರೆಯುತ್ತಾರೆ. ಎಷ್ಟು ದಿನಕ್ಕೆ ಈ ಪ್ರಾಜೆಕ್ಟ್ ಮುಗಿಯುತ್ತದೆ? ಆಮೇಲೆ ಯಾರೋ ಪಾಪದವನು ನ್ಯಾಯವಾಗಿ ವರ್ಕ್ ಮಾಡಿದವನು, ಪಾಪ ಅವನು ಬಿಲ್ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ, ಆತ 2001–02ರಲ್ಲಿ ವರ್ಕ್ ಮಾಡಿದವನು. ಮೊನ್ನೆ ನಿನ್ನೆ ಯಾರೋ ನನ್ನಂತಹವರ ಹತ್ತಿರ ಲೆಟರ್ ತೆಗೆದುಕೊಂಡು, ಕೆನಾಲ್‌ನಲ್ಲಿ ಧೂಳು ಎಸೆದವರು, ಶಿಫಾರಸ್ಸು ಇದ್ದವರು, ಲೆಟರ್ ತೆಗೆದುಕೊಂಡು ದುಡ್ಡೂ ಮಾಡಿಕೊಂಡು ಪರ್ಸೆಂಟೇಜನ್ನೂ ಕೊಟ್ಟು ಮನೆಗೆ ಹೋಗುತ್ತಾರೆ. ಒಂದು ಶಿಸ್ತು ಇರಬೇಕು. ಒಂದು ಇಲಾಖೆ ಎಂದರೆ ಅದರ ಬಗ್ಗೆ ಹಿಡಿತ ಇರಬೇಕು. ನಿಜ ಒಂದು ಕಾಲ ಇತ್ತು. ಸರ್ಕಾರ ಇದೆ ಎನ್ನುವ ಭಯ ಇತ್ತು. ಇವತ್ತು ಯಾರಿಗೂ ಭಯ ಇಲ್ಲ. ಯಾವ ನೌಕರರಿಗೂ ಭಯ ಇಲ್ಲ. ಜನಕ್ಕೂ ಏನು ಗೊತ್ತಾ? ಯಾರು ಭಂಡಾರವನ್ನು ನುಗ್ಗಿ ತೆಗೆದುಕೊಂಡು ಹೋಗುತ್ತಾನೆ ಅವನೇ ಬುದ್ಧಿವಂತ ಎನ್ನುವಂತಹ ಒಂದು ಭಾವನೆ ಬಂದು ಬಿಟ್ಟಿದೆ–ಇಡೀ ರಾಜ್ಯದ ಉದ್ದಗಲಕ್ಕೂ. ದಯಮಾಡಿ ಈ ಇರಿಗೇಷನ್ ಇಲಾಖೆಗೆ ಖಂಡಿತ ಕಾಯಕಲ್ಪ ಮಾಡಬೇಕು. ಇವತ್ತು ನಮ್ಮಕಡೆ ಎಲ್ಲಾ ನೀರು ಬಿಟ್ಟಿದ್ದಾರೆ. ಅಲ್ಲಿ ಗುಬ್ಬಿಯವರು ಹೊಡೆದಾಟಕ್ಕೆ ಬರುತ್ತಾರೆ. ರೀ, ನಿಮ್ಮ ಚನ್ನರಾಯಪಟ್ಟಣದಿಂದ ನೀರು ಬಂದಿಲ್ಲ ಎಂದು, ಅಲ್ಲೆಲ್ಲೋ ತೂಬಿನಲ್ಲಿ ನೀರು ಬರದೇ ಇದ್ದರೆ, ಆ ತೂಬು ರಿಪೇರಿ ಮಾಡುವುದಕ್ಕೆ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ದುಡ್ಡು ಕೇಳಿದರೆ ನನಗೇನೂ ಅವಕಾಶಇಲ್ಲ ಸಾರ್ ಮಾಡುವುದಕ್ಕೆ ಎಂಡಿಯವರು ಹೇಳಬೇಕು ಎನ್ನುತ್ತಾರೆ. ಎಂಡಿಯವರನ್ನು ಕೇಳಿದರೆ ಸಾರ್ ಸಾಲ ಎತ್ತಿಕೊಳ್ಳುವುದಕ್ಕೆ ಸರ್ಕಾರ ಪರ್ಮಿಷನ್ ಕೊಟ್ಟಿಲ್ಲ ಎನ್ನುತ್ತಾರೆ. ಏಕೆ ಬೇಕು ಇದು? ಇದಕ್ಕೆಲ್ಲಾ ಒಂದು ನಿಖರವಾದಂತಹ ಒಂದು ಬೈಂಡಿಂಗ್ ಹಾಕಿಕೊಂಡು ಇಷ್ಟೇ ದುಡ್ಡನ್ನು ಇಷ್ಟು ದಿನಕ್ಕೆ ನೀರು ಕೊಡುತ್ತೇವೆ. ಇಷ್ಟು ಮಾಡುತ್ತೇವೆ ಎನ್ನತಕ್ಕ ಒಂದು ತೀರ್ಮಾನವನ್ನು ಈ ಇರಿಗೇಷನ್

ಇಲಾಖೆ ತೆಗೆದುಕೊಳ್ಳಬೇಕು. ಇದು ಬಹಳ ದೊಡ್ಡ ಇಲಾಖೆ. 15–20 ತಾಲ್ಲೂಕಿಗೆ ಇದರ ಒಂದು ಅವಶ್ಯಕತೆ ಇದೆ. ಆ ಎಂಡಿಯವರು ಪಾಪ ಅವರೂ ಆಫೀಸಿನಲ್ಲಿ ಕುಳಿತುಕೊಳ್ಳಲಾರದೇ, ಕಂಟ್ರಾಕ್ಟರ್‌ಗೆ ಉತ್ತರ ಹೇಳಲಾರದೇ ಅವರೂ ಎಲ್ಲೋ ಹೋಗುತ್ತಾರೆ. ಆ ಎಕ್ಸಿಕ್ಯೂಟಿವ್ ಇಂಜಿನಿಯರ್ ಅಂತೂ ಬೆಳಿಗ್ಗೆ ಬಂದು ಅಟೆಂಡೆನ್ಸ್ ಹಾಕಿ ಸಾರ್ ಕಂಟ್ರಾಕ್ಟರ್ ಬಂದು ನಮ್ಮ ಕೊರಳು ಪಟ್ಟಿ ಹಿಡಿಯುವುದು ಬಾಕಿ ಎಂದು ಅವರೂ ಹೇಳುತ್ತಾರೆ. ಇನ್ನು ನಮ್ಮ ರೈತರು ಇನ್ನೇನು ಕೊರಳು ಪಟ್ಟಿ ಹಿಡಿಯುವ ಕಾಲ ಹತ್ತಿರ ಇದೆ. ಏಕೆಂದರೆ ಅವರ ಹೊಲಕ್ಕೆ ನೀರು ಹರಿಯದೇ ಇದ್ದಾಗ ಅಲ್ಲೊಂದು ಸಿಟ್ಟೋ ತೂಬನ್ನೋ ಸರಿ ಮಾಡಲಿಲ್ಲ ಎಂದರೆ ಅವರು ಯಾರ ಹತ್ತಿರ ಹೋಗಬೇಕು? ಅದರಿಂದ ದಯಮಾಡಿ ಈ ಇರಿಗೇಷನ್ ಇಲಾಖೆಗೆ, ಈ ಹೇಮಾವತಿ ಪ್ರಾಜೆಕ್ಟ್ ಏನು ಇದೆ ಇದಕ್ಕೆ ಒಂದು ವಿಶೇಷವಾದಂತಹ ಆರ್ಥಿಕ ಶಕ್ತಿಯನ್ನು ಹೆಚ್ಚು ಕೊಟ್ಟು ಒಂದು ಶಿಸ್ತಾಗಿ ಕಾರ್ಯಕ್ರಮ ಆಗಬೇಕು. ಎಲ್ಲಿಂದ ಎಲ್ಲಿಗೆ ಯಾವ ಕೆಲಸ ತೆಗೆದುಕೊಳ್ಳುತ್ತೇವೆ? ಯಾವ ಕೆಲಸ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ನೀರು ಎಲ್ಲಿಗೆ ಬಿಡುತ್ತೇವೆ ಎನ್ನತಕ್ಕ ಒಂದು ನಿಯಮವನ್ನು ಈ ಸರ್ಕಾರ ಅಳವಡಿಸಬೇಕು. ಎನ್ನುವ ಮಾತನ್ನು ಹೇಳುತ್ತೇನೆ. ಇನ್ನು ಎಜ್ಯುಕೇಶನ್ ಬಗ್ಗೆ ವಿಚಾರ. ನಮ್ಮ ಕಡೆಯಲ್ಲಾ ಮಕ್ಕಳಿಗೆ ಅಡ್ಮಿಷನ್ ವಿಚಾರ ಇದೆ. ಈ ಸರ್ಕಾರದಿಂದ ನಾವ್ಯಾರಿಗೂ ಮೆಡಿಕಲ್, ಇಂಜಿನಿಯರಿಂಗ್ ಕಾಲೇಜನ್ನು ಕೊಡಲಿಕ್ಕೆ ಸಾಧ್ಯ ಇಲ್ಲ ಎಂದು ಮಾತನಾಡಿಕೊಳ್ಳುತ್ತಿದ್ದಾರೆ. ಈ ಸರ್ಕಾರದ ನಿಯಮ ಈ ರಾಜ್ಯ ಹೋಗುತ್ತಿರುವಂತಹ, ಈ ದಾರಿ, ಈ ಪ್ರೈವೇಟ್ ಕಾಲೇಜು, ಖಾಸಗಿಯವರು ಇವರೆಲ್ಲಾ ಮರೆತು ಬಿಟ್ಟಿದ್ದಾರೆ. ಪಾಪ ಆ ಬಡವರು ಯಾರೂ ಆ ಕಡೆ ವಿಚಾರ ಮಾತನಾಡುವ ಹಾಗೆ ಇಲ್ಲ. ಆ ಕಡೆ ಆ ಬಾಗಿಲೂ ನೋಡುವುದು ಕಷ್ಟವಾಗಿದೆ.

3.40 ಪಿ.ಎಂ

ಕನಿಷ್ಠ ಅವರ ಊರಿನಲ್ಲಿ ಓದುವಂತಹ ಹೈಸ್ಕೂಲ್‌ಗೋ, ಪ್ರೈಮರಿ ಸ್ಕೂಲ್‌ಗೋ ಹೋಗಿ ನನ್ನ ಮಗ ಸೈನ್ ಹಾಕುವುದನ್ನು ಕಲಿತುಕೊಳ್ಳಲಿ, ಒಂದು ಪತ್ರವನ್ನು ಇನ್ನೊಬ್ಬರ ಮನೆ ಬಾಗಿಲಿಗೆ ಹೋಗಿ ಓದಿಸುವುದು ಬೇಡ, ನಮ್ಮ ಮನೆ ಬಾಗಿಲಲ್ಲಾದರೂ ಓದುವುದನ್ನು ಕಲಿತುಕೊಳ್ಳಲಿ ಅನ್ನತಕ್ಕಂಥ ಹೈಸ್ಕೂಲ್, ಪಿ.ಯು.ಸಿ., ಡಿಗ್ರಿ ಇಂತಹ ಕಾಲೇಜುಗಳಿಗೆ ಹೋಗುವ ಮಕ್ಕಳಿಗೂ ಕೂಡ ಇವತ್ತು ಅಡ್ಮಿಷನ್ ಕೊಡಿಸಲಿಕ್ಕೆ ನಮಗೆ ಶಕ್ತಿ ಇಲ್ಲ. ಆದ್ದರಿಂದ ಆ ಕಡೆಗೆ ಸರ್ಕಾರ ಮತ್ತು ಎಜುಕೇಷನ್ ಇಲಾಖೆ ಗಮನ ಹರಿಸಬೇಕು. ಏಕೆಂದರೆ ಒಂದು ಕಡೆ ನಾವು ನಮ್ಮ ಹತ್ತಿರ ದುಡ್ಡಿಲ್ಲದಿದರೂ ಏಳನೇ ಕ್ಲಾಸ್ ಮಕ್ಕಳಿಗೂ ಊಟ ಹಾಕುತ್ತೇವೆ, ಹತ್ತನೇ ಕ್ಲಾಸ್ ಮಕ್ಕಳಿಗೂ ಕೂಡ ಊಟ ಹಾಕುತ್ತೇವೆ ಎಂದು ಹೇಳುತ್ತೇವೆ. ಅಲ್ಲಿ ಕೆಲವರು ಹೇಳುತ್ತಾರೆ. ಮಗಾ ಅಲ್ಲಿ ಬರಿ ಚರ್ ಅನ್ನಿಸಿಕೊಂಡು, ಅಲ್ಲಿ ಕರೆಕ್ಟಾಗಿ ಆ ಊಟನ್ನೂ ನಡೆಯುತ್ತಿಲ್ಲ, ಈ ಕಡೆಗೆ ಪಾಠವೂ ನಡೆಯುತ್ತಿಲ್ಲ, ಯಾವುದಾದರೂ ಒಂದು ಕಾರ್ಯಕ್ರಮವನ್ನು ಮಾಡಿಸಿರಿ, ಇದಕ್ಕೊಂದು ಶಿಸ್ತಿನ ಕಾರ್ಯಕ್ರಮವನ್ನು ತನ್ನಿ ಎನ್ನತಕ್ಕಂಥ ಮಾತನ್ನು ಹೇಳುತ್ತಾರೆ. ಏನಾಗಿದೆ ಎಂದರೆ, ಒಂದು ರೀತಿಯ ಭಯ, ಈ ಸಮಾಜದಲ್ಲಿ ಅಥವಾ ಈ ವಿಧಾನಸೌಧದಲ್ಲಿ ಕೂಡ ಕಟು ಸತ್ಯ ಹೇಳುವುದೇ ಬಹಳ ಕಷ್ಟವಾಗಿದೆ. ನಮ್ಮ ಆರ್ಥಿಕ ಶಕ್ತಿ ಎಷ್ಟಿದೆಯೋ ಅಷ್ಟನ್ನೇ ನೀಟಾಗಿ, ಮಾಡಲಿ. ಸರ್ಕಾರದಿಂದ ಎಷ್ಟು ನಡೆಸಲಿಕ್ಕೆ ಆಗುತ್ತದೋ ಅಷ್ಟನ್ನು ಮಾತ್ರ ಮಾಡಲಿ. ಸರ್ಕಾರದಿಂದ ನಡೆಸಲಿಕ್ಕೆ ಆಗದಿದ್ದರೆ ಖಾಸಗಿಯವರು ನಡೆಸುತ್ತಾರೆ. ಅವರಿಗೆ ಎಲ್ಲಾ ತರಹದ ಕಟ್ಟುಪಾಡನ್ನು ಇಟ್ಟು. ಅವರಿಗೆಲ್ಲಾ ದನದ ಕೊಟ್ಟಿಗೆಗೆಲ್ಲಾ

ಬೋರ್ಡ್ ಹಾಕಲಿಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಬೇಡಿ, ಅವರಿಗೂ ಇಷ್ಟು ಎಕರೆ ಇರಬೇಕು. ಈ ತರಹ ಶಾಲಾ ಕಾಲೇಜು ನಡೆಸಲಿಕ್ಕೆ ಏನು ನಿಯಮ ಇರಬೇಕೋ ಅಂತಹ ನಿಯಮವನ್ನು ಮಾಡಿಕೊಡಬೇಕು. ಎಜ್ಯುಕೇಷನ್ ಇಲಾಖೆಗೆ ಕೂಡ ಒಂದು ದೊಡ್ಡ ಕಾಯಕಲ್ಲ ಆಗಬೇಕು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ನಮ್ಮ ಹಾಸನ ಜಿಲ್ಲೆಯಲ್ಲಿ ವಿಶೇಷವಾಗಿ ಏನೋ ಅಕ್ಕಿ ಹಗರಣ ಅನ್ನುವುದು ಆಗಿಬಿಟ್ಟು ಯಾವ ಇಂಜಿನಿಯರ್ ಕೂಡ ಸಿಗುತ್ತಿಲ್ಲ. ನಾವು ಕಟ್ಟ ಕಡೆಗೆ ತೋರಿಸಲಿಕ್ಕಾದರೂ ಒಬ್ಬರಾದರೂ ಬೇಕಲ್ಲಾ ಏಯ್ ಬಾರಯ್ಯ ಆ ಇಂಜಿನಿಯರ್ ಕರೆಯಯ್ಯಾ, ಅಲ್ಲಿ ಒಂದು ಕಡೆ ನಲ್ಲಿಯಲ್ಲಿ ನೀರು ಬರುತ್ತಿಲ್ಲ ಎಂದು ಹೇಳೋಣವೆಂದರೆ ಅಲ್ಲಿ ಒಬ್ಬರೂ ಇಲ್ಲ ಪುಣ್ಯಾತ್ಮರು. ಸರ್ಕಾರ ಇದರ ಕಡೆಗೆ ವಿಶೇಷವಾದ ಗಮನ ಕೊಡುತ್ತೇವೆಂದು ಹೇಳಿದೆ. ಆ ಕೆಲಸವನ್ನು ಕೂಡಲೇ ಮಾಡಲಿ. ಇಡೀ ಜಿಲ್ಲೆಯಲ್ಲಿ 19 ಜನ ಜೈಲಿನಲ್ಲಿ ಇರುವುದರಿಂದ, ಇಲ್ಲಿ ಒಬ್ಬರೂ ಕೂಡ ನಮ್ಮ ಕೈಗೆ ಸಿಗುತ್ತಿಲ್ಲ. ಅಲ್ಲಿ ಇರುವವರೂ ಕೂಡ, ಸ್ವಾಮಿ ನಮ್ಮನ್ನೂ ಕೂಡ ಎಲ್ಲಿಯಾದರೂ ತೆಗೆದುಕೊಂಡು ಹೋಗಿ ದೂರ ಹಾಕಿಸಿಬಿಡಿ, ನಾವು ಇಲ್ಲಿ ಇರುವುದಕ್ಕಾಗುವುದಿಲ್ಲ ಎಂದು ಹೇಳುವಂತಹ ಪರಿಸ್ಥಿತಿ ಇದೆ. ಅದರ ಕಡೆಗೆ ಸರ್ಕಾರ ಗಮನಹರಿಸಬೇಕು. ನಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಒಂದು ಬಾಗೂರು ನವಿಲೆ ಸುರಂಗ ಅಂತೇಳಿ, ಪಾಪ ನಾನು ಏನೋ ಮಾಡಬಾರದ್ದು ಪಾಪ ಮಾಡಿದ್ದೇವೆ ನಾನು ಶಾಸಕ ಅನ್ನುವಂತೆ, ಹಳೆಯ ಸರ್ಕಾರವಲ್ಲ, ಅದರ ಹಿಂದಿನ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಮಾನ್ಯ ದೇವೇಗೌಡರು ಈ ರಾಜ್ಯದ ಮುಖ್ಯಮಂತ್ರಿ ಸ್ಥಾನ ಬಿಟ್ಟು ಪಾರ್ಲಿಮೆಂಟ್ ಸದಸ್ಯರಾಗಿ ಈ ದೇಶದ ಪ್ರಧಾನ ಮಂತ್ರಿ ಆದಾಗ, ಒಂದು ದೊಡ್ಡ ಸುದ್ದಿಯನ್ನೇ ಎಳಿಸಿದರು. ಇಡೀ ರಾಜ್ಯದಲ್ಲಿ ಅದು ಪಾಪ ಏನೂ ಆಗಲಿಲ್ಲ ಕಳೆದ ಸರ್ಕಾರದಲ್ಲಿ ಕೇಳಿದ್ದೆಲ್ಲಾ ಸರ್ಕಾರ ಕೊಡುವುದಕ್ಕಾಗುವುದಿಲ್ಲ. ಆದರೂ ಆ ಭಾಗದ ರೈತನಿಗೆ, ಏಕೆಂದರೆ ಮಂಡ್ಯ, ತುಮಕೂರಿಗೆಲ್ಲಾ ನೀರು ಊಟ ಮಾಡಿಸುತ್ತಿರುವ ಜನ ಮಧ್ಯದಲ್ಲಿ ತಮ್ಮ ರಕ್ತವನ್ನು ನಾಳದ ಮೂಲಕ ಇನ್ನೊಬ್ಬರಿಗೆ ಕೊಡುತ್ತಾರಲ್ಲ. ಆ ರೀತಿಯಲ್ಲಿ ಸುಮಾರು ಆಳದಲ್ಲಿ 9 ಕಿ.ಮೀ. ಸುರಂಗ ಹೋಗಿದೆ, ತುಮಕೂರು ಮತ್ತು ಮಂಡ್ಯಕ್ಕೆ ನೀರು ಉಣಿಸುವುದಕ್ಕೆ ಆ ಭಾಗದ ಜನಕ್ಕೆ ನೀವು ವಿದ್ಯುಚ್ಛಕ್ತಿಯನ್ನು ಕೊಡತಕ್ಕಂಥ ಸಂದರ್ಭದಲ್ಲಿ ವಿಶೇಷವಾದಂತಹ ರಿಯಾಯಿತಿಯನ್ನು ತೋರಿಸಬೇಕು. ನೀವು ಹಸಿರು ಕಾರ್ಡ್ ಅನ್ನು ಕೊಡುವಂತಹ ಸಂದರ್ಭದಲ್ಲಿ ವಿಶೇಷ ರಿಯಾಯಿತಿಯನ್ನು ತೋರಿಸಬೇಕು. ಆ ಭಾಗದ ಜನರಿಗೆ ಇನ್ನೂ ವಿಶೇಷವಾದ ಕೆಲವೊಂದು ಸವಲತ್ತುಗಳನ್ನು ಮಾಡಿಕೊಡಬೇಕು. ಅದು ಸರ್ಕಾರದ ಗಮನದಲ್ಲಿ ಇರಬೇಕು ಅನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಮಾನ್ಯ ಸಿದ್ಧರಾಮಯ್ಯ ಸಾಹೇಬರಿಗೆ ಹೇಳುತ್ತೇನೆ. ನಮ್ಮ ಕ್ಷೇತ್ರದಲ್ಲಿ ಒಂದು ಗೋಮಟೇಶ್ವರ ಸ್ವಾಮಿಯ ಮಹಾ ಮೂರ್ತಿ ಇದೆ. 2006ನೇ ಇಸವಿಯ ಮೊದಲ ಅಥವಾ ಎರಡನೇ ತಿಂಗಳಿನಲ್ಲಿ ಅಲ್ಲಿ ಮಸ್ತಕಾಭಿಷೇಕ ಮಾಡಬೇಕೆಂದು ಅದಕ್ಕೆ ಸಂಬಂಧಿಸಿದ ಕಮಿಟಿಯವರು, ಜಿಲ್ಲಾ ಉಸ್ತುವಾರಿ ಸಚಿವರು, ನಮ್ಮ ಪಾರ್ಲಿಮೆಂಟರಿ ಸದಸ್ಯರಾದಂತಹ ಮಾನ್ಯ ದೇವೇಗೌಡರು ಮುಂತಾದವರೆಲ್ಲರೂ ಕೂಡ ಸೇರಿ ಈಗಾಗಲೇ ಒಂದು ತೀರ್ಮಾನ ಮಾಡಿದ್ದಾರೆ. ಅದಕ್ಕೆ ವಿಶೇಷವಾಗಿ ಗಮನ ಹರಿಸಬೇಕು. ಆ ಮಹಾಮೂರ್ತಿಯ ಮಸ್ತಕಾಭಿಷೇಕ ಇಡೀ ರಾಜ್ಯ, ರಾಷ್ಟ್ರದ, ಜಗತ್ತಿನ ಗಮನ ಸೆಳೆಯುವಂತಾದ್ದು ಆಗಿದೆ. ಅಲ್ಲಿಗೆ ವಿಶೇಷವಾದಂತಹ ಆರ್ಥಿಕ ಶಕ್ತಿಯನ್ನು ಈಗಿನಿಂದಲೇ ಕೊಡಬೇಕು. ಏಕೆಂದರೆ ನಂತರ ಅರ್ಜೆಂಟಾಗಿ ಕೊಟ್ಟು, ಆಗ ಟೆಂಟ್ ಹಾಕಿ, ಯಾರೋ

ಕಾಂಟ್ರಾಕ್ಟರ್ ದುಡ್ಡನ್ನು ಹೊತ್ತುಕೊಂಡು ಹೋಗುವಂತಾಗಬಾರದು. ಆ ಭಾಗದಲ್ಲಿ ಆ ಮೂರ್ತಿಯ ಹೆಸರಿನಲ್ಲಿ ನಡೆಯತಕ್ಕಂಥ ಕಾರ್ಯಕ್ರಮಗಳು ಶಾಶ್ವತವಾಗಿ ಇರಬೇಕು, ಇಂತಹ ಕಾರ್ಯಕ್ರಮಗಳನ್ನು ನಡೆಸುವುದಕ್ಕೆ ಆರ್ಥಿಕ ಶಕ್ತಿಯನ್ನು ಮಾನ್ಯ ಸಿದ್ಧರಾಮಯ್ಯನವರು ತುಂಬಿ ಕೊಡುತ್ತಾರೆ ಅನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಇಂತಹ ಕನಿಷ್ಠ ಪರಿಸ್ಥಿತಿಯಲ್ಲಿ ಒಂದು ಭಾವನೆ ಇದೆ ಇಡೀ ರಾಜ್ಯದ ಜನಕ್ಕೆ, ಅಥವಾ ಇಲ್ಲಿರತಕ್ಕಂಥ ವಿರೋಧಪಕ್ಷದವರು ಕೂಡ ಹೇಳುತ್ತಾರೆ. ಸಿದ್ಧರಾಮಯ್ಯ ಮತ್ತು ಧರ್ಮಸಿಂಗ್‌ರವರದು ಒಂದು ಅಪವಿತ್ರ ಮೈತ್ರಿ ಎಂದು. ಖಂಡಿತ ನನಗಾದರೂ ವಿಶ್ವಾಸ ಇದೆ. ಈ ರೀತಿಯಾಗಿ ಎರಡೂ ಪಕ್ಷದವರು ಸೇರಿ ಒಂದು ಸರ್ಕಾರವನ್ನು ನಡೆಸುವಂತಹ ಸಂದರ್ಭದಲ್ಲಿ ಒಂದೇ ಗುಂಪಿನವರು ಸರ್ಕಾರ ನಡೆಸುವಂತಹ ಸಂದರ್ಭದಲ್ಲಿ ಆಗುವಂತಹ ರೀತಿಯಲ್ಲಿ ಆಗಬಾರದ ಸ್ಕ್ಯಾಂಡಲ್‌ಗಳು ಆಗುವುದಿಲ್ಲ. ಏಕೆಂದರೆ, ನಮ್ಮನ್ನು ಅವರು ಎಚ್ಚರಿಕೆಯಿಂದ ನೋಡುತ್ತಾರೆ. ನಾವು ಅವರನ್ನು ಎಚ್ಚರಿಕೆಯಿಂದ ನೋಡುತ್ತೇವೆ. ನಮ್ಮ ಕೆಲಸಗಳು ಆಗದಿದ್ದರೂ, ಅವರು ನಮ್ಮನ್ನು ವಾಚ್ ಮಾಡಿಕೊಂಡು ಈ ರಾಜ್ಯದ ಹಿತವನ್ನು ಕಾಪಾಡುವಂತಹ ಕಾರ್ಯಕ್ರಮ ಮಾಡಬೇಕು ಎನ್ನುವಂತಹ ನಿಮ್ಮಾಸೆ ಏನಿದೆ, ಅದು ಮಾಡುವಂತಹ ಸಂದರ್ಭದಲ್ಲಿ ಯಾವುದೇ ಪಕ್ಷದ ಶಾಸಕರಾಗಿರಲಿ, ಕನಿಷ್ಠ ನಾನು ಅತ್ಯಂತ ಕಳಕಳಿಯಿಂದ ನಿಮಗೆ ಕೇಳುವುದು, ಯಾರೇ ಈ ರಾಜ್ಯದ ಹಿರಿಯ ಅಧಿಕಾರಿಗಳಾಗಲಿ, ಮಂತ್ರಿವರ್ಯರಾಗಲಿ ಅಥವಾ ಸರ್ಕಾರ ನಡೆಸತಕ್ಕಂಥ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಗಳಾಗಿರಲಿ, ಕನಿಷ್ಟ ಯಾರೇ ಒಬ್ಬ ಶಾಸಕ ತಮ್ಮ ಎದುರುಗಡೆ ನಿಂತಾಗ, ಒಬ್ಬ ಜನ ಪ್ರತಿನಿಧಿ ಅವನದೇ ಆದಂತಹ ಸಮಸ್ಯೆ ಇಟ್ಟುಕೊಂಡು ಬಂದಾಗ, ಅದನ್ನು ಕೇಳಬೇಕು ಅನ್ನತಕ್ಕಂಥ ಹೃದಯ, ಕಣ್ಣು, ಕಿವಿ ನಿಮಗೆ ಇರಬೇಕು ಅನ್ನತಕ್ಕಂಥ ಮಾತನ್ನು ನಾನು ಈ ಸರ್ಕಾರಕ್ಕೆ ಹೇಳುತ್ತೇನೆ. ಏಕೆಂದರೆ ನಮಗೆ ಬಹಳ ನಾಚಿಕೆಯಾಗುತ್ತದೆ, ನಾನೂ ಕೂಡ ಹತ್ತು ವರ್ಷಗಳ ಕಾಲ ಶಾಸಕನಾದವನು, ಎಷ್ಟೋ ಸಲ ಹೋದರೆ, ಕನಿಷ್ಟ ಏನೋ ನಮ್ಮ ಹಾಗೆ ಗೆದ್ದು ಬಂದಿರುತ್ತಾರೆ. ಮಂತ್ರಿಗಳಾಗಿರುತ್ತಾರೆ, ವಿರೋಧ ಪಕ್ಷದ ಮುಖಂಡರಾಗಿರುತ್ತಾರೆ, ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ತಕ್ಷಣಕ್ಕೆ ಯಾರೂ ಮೇಲುಗಡೆಯಿಂದ ಬಂದಿಲ್ಲ ದಯಮಾಡಿ, ಎಲ್ಲಾ ಶಾಸಕರಿಗೂ ಕೂಡ ಅವರದೇ ಆದಂತಹ ಜನರ ಒತ್ತಡಗಳು ಇರುತ್ತವೆ, ಜನರ ಆಶೀರ್ವಾದದ ಬಲದಿಂದ ಗೆದ್ದು ಬಂದು ಇಲ್ಲಿ ಸರ್ಕಾರ ನಡೆಯುತ್ತದೆ, ಆ ರೀತಿ ಸರ್ಕಾರ ನಡೆಸುವಂತಹ ಸಂದರ್ಭದಲ್ಲಿ ಕನಿಷ್ಠ ಏತಕ್ಕೆ ಬಂದ್ರಿ? ನಿಮ್ಮ ಕೆಲಸವೇನು? ಏನು ನಮ್ಮ ಕೈಯ್ಯಲ್ಲಿ ಮಾಡಲಿಕ್ಕೆ ಸಾಧ್ಯ ಅನ್ನತಕ್ಕಂಥ ಗಂಭೀರವಾದಂತಹ ಪರಿಗಣನೆ ಮಾಡಬೇಕು ಎಂದು ಅಧಿಕಾರಿಗಳಲ್ಲಿ, ಎಲ್ಲಾ ನಮ್ಮ ಮಂತ್ರಿವರ್ಯರಲ್ಲಿ, ವಿರೋಧ ಪಕ್ಷದ ಮುಖಂಡರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ದಯಮಾಡಿ ನಾನು ಇಲ್ಲಿ ನೆನಸುತ್ತೇನೆ. ನಾನೇನಾದರೂ ಇವತ್ತು ಇಲ್ಲಿ ಶಾಸಕ ಆಗಿದ್ದರೆ, ಹತ್ತು ವರ್ಷದ ಹಿಂದೆ ಶಾಸಕನಾದ ಸಂದರ್ಭದಲ್ಲಿ ಇದೇ ಸಿದ್ಧರಾಮಯ್ಯನವರು ಬಜೆಟ್ ಅನ್ನು ಮಂಡನೆ ಮಾಡಿದರು. ಬೆಳಕು ಹರಿಯುವುದರೊಳಗೆ ತುಮಕೂರಿನ ಬುಗುಡನಹಳ್ಳಿ ಕೆರೆಗೆ ನೀರು ಹೋಗಿತ್ತು. ಹಲವಾರು ಜನಪರವಾದಂತಹ ಕೆಲಸಗಳನ್ನು ಅವತ್ತು ಮಾಡಿದ್ದೇ ನಾವು ಇವತ್ತು ಇಲ್ಲಿಗೆ ಶಾಸಕರಾಗಿ ಆರಿಸಿ ಬರುವುದಕ್ಕೆ ಕಾರಣವಾಗಿದೆ. ಜನ ಅದನ್ನು ನೆನಸಿಕೊಳ್ಳುತ್ತಾರೆ. ಆ ತರಹದ ಒಂದು awareness ಆ ಸರ್ಕಾರಕ್ಕೆ ಇತ್ತು. ದಯಮಾಡಿ ಇವತ್ತೂ ಕೂಡ ನಿಮ್ಮ ಕೈಯಲ್ಲಿ ಎಷ್ಟು ಕೊಡಲಿಕ್ಕೆ ಸಾಧ್ಯ, ಏನು

ಮಾಡಲಿಕ್ಕೆ ಸಾಧ್ಯ. ವಿರೋಧ ಪಕ್ಷದವರ ಸಮಸ್ಯೆಯನ್ನು ಎಷ್ಟು ಗಂಭೀರವಾಗಿ ನಿಮಗೆ ಕೇಳಲಿಕ್ಕೆ ಸಾಧ್ಯ. ರೂಲಿಂಗ್ ಪಾರ್ಟಿಯಲ್ಲಿ ಇವತ್ತು ನಾವು ಎರಡು ಪಕ್ಷದವರು ಕೂಡಿರಬಹುದು. ನಮ್ಮ ಗೌರವವನ್ನು ಉಳಿಸಿಕೊಳ್ಳುವುದಕ್ಕೆ, ಜನರ ಹತ್ತಿರ ಹೋಗುವುದಕ್ಕೆ ಯಾವುದೇ ತರಹದ ಹಿಂದು–ಮುಂದು ಆಗಬಾರದು. ಎಲ್ಲರಿಗೂ ಕೂಡ ಅವರವರದೇ ಆದಂತಹ ತಗಾದೆ, ಅವರ ಜನರ ಜವಾಬ್ದಾರಿ ಒತ್ತಡ ಇರುತ್ತದೆ. ಅದನ್ನು ನಿಭಾಯಿಸಲಿಕ್ಕೆ ಈ ರಾಜ್ಯದ ಜನರ ಮನಸ್ಸನ್ನು ತಮ್ಮ ಕಡೆಗೆ ಎಳೆದುಕೊಂಡು, ತಮ್ಮ ಕೈಲಾದಂತಹ ಕೆಲಸವನ್ನು ಈ ಸರ್ಕಾರದವರು ಮಾಡಿದರು ಎಂದು ಹೇಳತಕ್ಕಂಥ ಒಂದು ಗೌರವಾನ್ವಿತವಾದ ಮಾತು ಜನ ಸಾಮಾನ್ಯರಿಂದ ಬರಲಿಕ್ಕೆ ಏನು ಬೇಕೋ ಅದನ್ನು ಈ ಸರ್ಕಾರ ಮಾಡಲಿಕ್ಕೆ ಅಣಿಯಾಗಿರಬೇಕು ಅನ್ನತಕ್ಕಂಥ ಮಾತನ್ನು ಹೇಳಿ, ಹೆಚ್ಚು ಅವಕಾಶವನ್ನು ತೆಗೆದುಕೊಳ್ಳದೆ ನಾನು ಹಳ್ಳಿಯಿಂದ ಬಂದವನು, ಏನಾದರೂ ನನ್ನ ಮಾತಿನಲ್ಲಿ ಸಣ್ಣ ಪುಟ್ಟ ವ್ಯತ್ಯಾಸ ಇದ್ದರೆ, ದಯಮಾಡಿ ತಾವೆಲ್ಲಾ ಮನ್ನಿಸಬೇಕು ಎಂದು ಹೇಳಿ ತಮ್ಮೆಲ್ಲರಿಗೂ ಕೈ ಜೋಡಿಸಿ ವಿನಂತಿ ಮಾಡಿ, ಸಭಾಧ್ಯಕ್ಷರಿಗೆ, ಸರ್ಕಾರ ನಡೆಸುವವರಿಗೆ, ವಿರೋಧ ಪಕ್ಷದವರಿಗೆ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಅಧ್ಯಕ್ಷರು : ಮಾನ್ಯ ರೆಡ್ಡಿಯವರೇ, ಇನ್ನೂ ಬಹಳ ಜನ ಮಾತನಾಡುವವರಿದ್ದಾರೆ. ದಯವಿಟ್ಟು 10 ನಿಮಿಷಗಳಲ್ಲಿ ತಮ್ಮ ಮಾತುಗಳನ್ನು ಮುಗಿಸಿ.

† **ಶ್ರೀ ಎ.ಪಾಪರೆಡ್ಡಿ (ರಾಯಚೂರು)** : ಆಯಿತು. ಮಾನ್ಯ ಅಧ್ಯಕ್ಷರೇ, ನಾನು ಬಜೆಟ್ಟಿನ ಬಗ್ಗೆ ನಮ್ಮ ರಾಯಚೂರು ಜಿಲ್ಲೆಗೆ ಆದಂತಹ ಅನ್ಯಾಯದ ಬಗ್ಗೆ ಮಾತನಾಡಲಿಕ್ಕೆ ಇಚ್ಛೆ ಪಡುತ್ತಿದ್ದೇನೆ. ಇಡೀ ರಾಯಚೂರು ಜಿಲ್ಲೆ ಮತ್ತು ಕೊಪ್ಪಳ ಜಿಲ್ಲೆಗೆ ವರದಾನವಾದಂತಹ ತುಂಗಭದ್ರಾ ಎಡದಂಡೆ ಕಾಲುವೆಯ ಶಾಶ್ವತವಾದಂತಹ ರಿಪೇರಿಯನ್ನು ಮಾಡುತ್ತೇವೆ ಎಂದು ಹಿಂದೆ ಜನತಾ ದಳ ಸರ್ಕಾರ ಇದ್ದಾಗಲೂ ಹೇಳಿದರು. ಕಾಂಗ್ರೆಸ್ ಸರ್ಕಾರವಿದ್ದಾಗಲೂ ಸಹ ಹೇಳಿದರು. 100 ಕೋಟಿ ರೂ.ಗಳನ್ನು ಕೊಡುತ್ತೇವೆ, 200 ಕೋಟಿ ರೂ.ಗಳನ್ನು ಕೊಡುತ್ತೇವೆ ಎಂದು ಹೇಳಿದರು. 6 ಲಕ್ಷ ಎಕರೆಗೆ ನೀರು ಉಣಿಸುವಂತಹ ಒಂದು ದೊಡ್ಡ ಯೋಜನೆ ಇದಾಗಿದೆ. ಎರಡು ಜಿಲ್ಲೆಯ ರೈತರು ಅದರ ಮೇಲೆ ಡಿಪೆಂಡ್ ಆಗಿದ್ದಾರೆ. ಅಲ್ಲಿಯ ರೈತರು 10 ವರ್ಷಗಳಿಂದ ಹೋರಾಟ ಮಾಡುತ್ತಿದ್ದಾರೆ. ಆದರೆ ಶಾಶ್ವತವಾದಂತಹ ಕಾಲುವೆಯ ರಿಪೇರಿ ಇಲ್ಲಿಯವರೆಗೂ ಆಗಲಿಲ್ಲ. ಕಾಂಗ್ರೆಸ್ ಮತ್ತು ಜನತಾ ದಳ ಎರಡೂ ಕೂಡಿ ರಚಿಸಿರುವಂತಹ ಸಮ್ಮಿಶ್ರ ಸರ್ಕಾರವೂ ಕೂಡ ಈ ಬಜೆಟಿನಲ್ಲಿ ಆ ಒಂದು ಕಾಲುವೆಯ ಶಾಶ್ವತವಾದ ರಿಪೇರಿಗೆ ಹಣ ಇಟ್ಟಿರುವ ಬಗ್ಗೆ ಏನೂ ತೋರಿಸಿಲ್ಲ. ದಯಮಾಡಿ ಮಾನ್ಯ ಸಿದ್ಧರಾಮಯ್ಯನವರು ಆ ಒಂದು ಕಾಲುವೆಯ ರಿಪೇರಿಗೆ, 6 ಲಕ್ಷ ಎಕರೆ ಜಮೀನಿಗೆ ನೀರು ಉಣಿಸುವಂತಹ ಕಾಲುವೆಗೆ, ಇಡೀ ಕರ್ನಾಟಕ ರಾಜ್ಯದಲ್ಲೇ ದೊಡ್ಡ ಯೋಜನೆಯಾಗಿರುವಂತಹ ಕಾಲುವೆಯು ಶಾಶ್ವತವಾದಂತಹ ರಿಪೇರಿಗೆ ಹಣ ಮೀಸಲಿಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ. ಇನ್ನೊಂದು ಕೃಷ್ಣಾ ಬಲದಂಡೆ ಕಾಲುವೆ. ಆ ಕಾಲುವೆ 95 ನೇ ಕಿ.ಮೀ.ವರೆಗೆ ಹೋಗಿದೆ. ಜನತಾ ದಳ ಮ್ಯಾನಿಫೆಸ್ಟೋನಲ್ಲಿ ನಾವು ಆರಿಸಿ ಬಂದರೆ, 95ನೇ ಕಿ.ಮೀ.ನಿಂದ 157 ಕಿ.ಮೀ.ವರೆಗೆ, upto Raichur last border, ಬೂದಿಗನಾಳ್ ತನಕ ಕಾಲುವೆಯನ್ನು ವಿಸ್ತರಣೆ ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದರು. ಆದರೆ ಅದರ ಬಗ್ಗೆಯೂ ಕೂಡ ಈ ಒಂದು ಬಜೆಟ್‌ನಲ್ಲಿ ಯಾವುದೇ ಒಂದು ವಿಚಾರ ಇಲ್ಲ. ಆ ಕಾರಣದಿಂದ ನಾನು ಮಾನ್ಯ ಫೈನಾನ್ಸ್

ಮಿನಿಸ್ಟರ್‌ರವರು ಅದರ ಬಗ್ಗೆಯೂ ಕೂಡ ವಿಚಾರ ಮಾಡಬೇಕೆಂದು ಮನವಿ ಮಾಡುತ್ತಿದ್ದೇನೆ. ನಮ್ಮ ಹೈದರಾಬಾದ್ ಕರ್ನಾಟಕದಲ್ಲಿ ಏಕೈಕ ಸ್ಪಿನ್ನಿಂಗ್ ಮಿಲ್ ರಾಯಚೂರಿನಲ್ಲಿ ನನ್ನ ಕ್ಷೇತ್ರದಲ್ಲಿದೆ. ಸತತ ಏಳು ವರ್ಷವಾಯಿತು. ಅದು ಬಂದ್ ಆಗಿದೆ. ಆ ಬಂದ್ ಆದಂತಹ ಸ್ಪಿನ್ನಿಂಗ್ ಮಿಲ್ ಪುನರಾರಂಭ ಆಗಲಿಲ್ಲ. ಈಗಾಗಲೇ ಎರಡೂ ಸರ್ಕಾರಗಳು ಬಂದು ಹೋದವು. ಅಲ್ಲಿದ್ದಂತಹ ಸಾವಿರಾರು ಕೂಲಿ ಕಾರ್ಮಿಕರು ರೋಡಿಗೆ ಬಿದ್ದಿದ್ದಾರೆ. ಅಲ್ಲಿದ್ದಂತಹ, ಅದರ ಮೇಲೆ ಡಿಪೆಂಡ್ ಇದ್ದಂತಹ ವಾಣಿಜ್ಯೋದ್ಯಮಗಳು ಇವತ್ತು ಬಂದ್ ಆಗಿದೆ. ರೈತರಿಗೆ ವರದಾನವಾಗಿದ್ದಂತಹ ಸ್ಪಿನ್ನಿಂಗ್ ಮಿಲ್ ಆದಾಗಿತ್ತು. ಅಲ್ಲಿ ಬೆಳೆದಂತಹ ಕಾಟನ್ ಮಾರ್ಕೆಟ್ಟಿಗೇ ಇವತ್ತು ಬರುತ್ತಿಲ್ಲ. ಏಕೆಂದರೆ ಅಲ್ಲಿಯ ಸ್ಪಿನ್ನಿಂಗ್ ಮಿಲ್ ಬಂದ್ ಆಗಿದೆ. ಇಡೀ ಹೈದರಾಬಾದ್–ಕರ್ನಾಟಕದಲ್ಲಿ ಇದು ಏಕೈಕ ಸ್ಪಿನ್ನಿಂಗ್ ಮಿಲ್. ಅದರ ಬಗ್ಗೆ ಸರ್ಕಾರ ಗಮನ ಹರಿಸಬೇಕು. ಅದನ್ನು ಬಂದ್ ಮಾಡಬೇಕಾ ಅಥವಾ ಲೀಸ್ ಕೊಡಬೇಕಾ; ಅದರಲ್ಲಿದ್ದಂತಹ ಕೂಲಿ ಕಾರ್ಮಿಕರಿಗೆ ಒನ್‌ಟೈಮ್ ಸೆಟ್ಲ್‌ಮೆಂಟ್ ಮಾಡಬೇಕಾ; ಎಂಬುದನ್ನು ನಿರ್ಧರಿಸಬೇಕು. ಸರ್ಕಾರ ಅದರ ಬಗ್ಗೆ ವಿಚಾರ ಮಾಡಬೇಕು. ಇನ್ನೊಂದು ರಾಯಚೂರು ಕ್ಷೇತ್ರದಲ್ಲಿ ಗ್ರೋತ್ ಸೆಂಟರ್ ಎಂದು ಬಂದಿದೆ. ಅದಕ್ಕಾಗಿ ಸರ್ಕಾರ ಒಂದು ಸಾವಿರ ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದೆ. ರೈತರಿಗೆ ಹಣ ಕೊಟ್ಟಿದ್ದೂ ಆಯಿತು. ಅದರ ಅಭಿವೃದ್ಧಿಯೂ ಆಯಿತು. ನಾಲ್ಕು ವರ್ಷವಾದರೂ 500 ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಿದಂತಹ ಸರ್ಕಾರ ಒಂದು ಸಾವಿರ ಎಕರೆ ಜಮೀನು ತೆಗೆದುಕೊಂಡು ಒಂದು ಇಂಡಸ್ಟ್ರೀಯೂ ಬರಲಿಲ್ಲ. ಯಾವುದೇ ಇಂಡಸ್ಟ್ರೀ ಸಹ ಅಲ್ಲಿ ಚಾಲು ಆಗಲಿಲ್ಲ. ಅಲ್ಲಿದ್ದಂತಹ ರೈತರು ಹೊಲ ಕಳೆದುಕೊಂಡು ಬೀದಿ ಪಾಲಾದರು. ಅಲ್ಲಿ ಇಂಡಸ್ಟ್ರೀ ಬಂದಿದ್ದರೆ ಅವರ ಮಕ್ಕಳು ಅಲ್ಲಿ ಕೂಲಿ ಕೆಲಸ ಮಾಡಿಕೊಂಡು ಅಥವಾ ಬೇರೆ ಯಾವುದಾದರೂ ಉದ್ಯೋಗ ಮಾಡಿಕೊಂಡು ಉಪ ಜೀವನ ಮಾಡುತ್ತಿದ್ದರು. ಅದೂ ಮಾಡಲಿಲ್ಲ, ಇದೂ ಆಗಲಿಲ್ಲ. ಅದರ ಬಗ್ಗೆ ಸರ್ಕಾರ ಏನೂ ಪ್ರಸ್ತಾಪ ಮಾಡಲಿಲ್ಲ. ಇನ್ನೊಂದು ನಮ್ಮ ರಾಯಚೂರು ಜಿಲ್ಲೆಯಲ್ಲಿ ಕರ್ನಾಟಕ ವಿದ್ಯುತ್ ಪವರ್ ಕಾರ್ಪೊರೇಷನ್ ಎಂದಿದೆ ಅಲ್ಲಿ 1470 ಮೆ.ವ್ಯಾ ವಿದ್ಯುತ್ ಉತ್ಪತ್ತಿ ಮಾಡುತ್ತಿದೆ. ಇದನ್ನು ಈ ಪ್ರಮಾಣದಲ್ಲಿ ಉತ್ಪತ್ತಿ ಮಾಡುತ್ತಿರುವುದರಿಂದ ಅಲ್ಲಿದ್ದಂತಹ ಸೆಕೆ 41 ಸೆಂಟಿಗ್ರೇಡ್ ಇದ್ದುದ್ದು ಇವತ್ತು 45 ಸೆಂಟಿಗ್ರೇಡ್‌ವರೆಗೆ ಬಂದಿದೆ. ಅಲ್ಲಿರುವಂತಹ ರೈತರಿಗೆ ಇವತ್ತು ಕರೆಂಟ್ ಇಲ್ಲ. ಇಡೀ ರಾಜ್ಯಕ್ಕೆ ಕೊಡುವಷ್ಟು ಕರೆಂಟ್ ನಮ್ಮ ರಾಯಚೂರು ಜಿಲ್ಲೆಯಲ್ಲಿ ಉತ್ಪತ್ತಿಯಾದರೆ ನಮ್ಮ ರಾಯಚೂರು ಜಿಲ್ಲೆಯಲ್ಲಿರುವಂತಹ ರೈತರಿಗೆ ಕರೆಂಟ್ ದೊರಕಿಸಿ ಕೊಡುವ ವ್ಯವಸ್ಥೆ ಮಾಡಲಿಲ್ಲ. ಇನ್ನೊಂದು ಜುರಾಲ ಪ್ರಾಜೆಕ್ಟ್‌ನಿಂದ ನಮ್ಮ ಕ್ಷೇತ್ರದಲ್ಲಿ ಐದು ಹಳ್ಳಿಗಳು ಮುಳುಗಡೆ ಆಗಿವೆ. ಎರಡು ದೇವಸ್ಥಾನಗಳು ಮುಳುಗಡೆ ಆಗಿವೆ. ಆ ದೇವಸ್ಥಾನಗಳಿಗೆ ಪ್ರೊಟೆಕ್ಷನ್ ವಾಲ್ ಕಟ್ಟಿ, ಎರಡೂ ದೇವಸ್ಥಾನಗಳಿಗೆ ಸೇತುವೆಗಳನ್ನು ಕಟ್ಟುತ್ತೇವೆ ಎಂದು ಅಗ್ರಿಮೆಂಟ್ ಆಯಿತು. ಆ ಐದು ಹಳ್ಳಿಗಳ ಪುನರ್ವಸತಿ ಕೂಡ ಆಗಲಿಲ್ಲ. ಆ ದೇವಸ್ಥಾನಗಳಿಗೆ ಹೋಗಲಿಕ್ಕೆ ದಾರಿ ಮಾಡಿ ಕೊಡಲಿಲ್ಲ. ಇದು ಯಾವುದೂ ಬಜೆಟ್ ಭಾಷಣದಲ್ಲಿ ಇಲ್ಲ. ನನ್ನ ಕ್ಷೇತ್ರದಲ್ಲಿ 62 ಹಳ್ಳಿಗಳು ಬರುತ್ತವೆ. ಅವು ಗಡಿ ಭಾಗದ ಹಳ್ಳಿಗಳು. ಎಲ್ಲವೂ ಆಂಧ್ರಪ್ರದೇಶಕ್ಕೆ ಹೊಂದಿಕೊಂಡಂತಹ ಹಳ್ಳಿಗಳು. ಇಲ್ಲಿಯವರೆಗೂ ಅಲ್ಲಿ ಸುಧಾರಣೆಯಾಗಲಿಲ್ಲ. ಅಲ್ಲಿ ನಕ್ಸಲ್‌ವಾದಿಗಳು ಹೆಚ್ಚಾಗಿದ್ದಾರೆ. ಆ ನಕ್ಸಲ್‌ವಾದಿಗಳ ಸಲುವಾಗಿ ಆರು ಕೋಟಿ ರೂಪಾಯಿಯ ಒಂದು ಯೋಜನೆಯನ್ನು ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಕೊಟ್ಟಿದ್ದಾರೆ.

ಆ ಹಳ್ಳಿಗಳ ಸುಧಾರಣೆಯಾಗಬೇಕು. ರಸ್ತೆಗಳು ಆಗಬೇಕು, ಅಲ್ಲಿ ಶಾಲೆಗಳ ಉದ್ಧಾರವಾಗಬೇಕು, ಎಲ್ಲಾ ಮೂಲಭೂತ ಸೌಲಭ್ಯಗಳು ದೊರಕಿಸಿಕೊಟ್ಟರೆ ಈ ನಕ್ಸಲ್‌ವಾದಿಗಳು ಕಡಿಮೆ ಆಗುತ್ತಾರೆ ಎನ್ನುವ ಯೋಜನೆ ಸರ್ಕಾರದ ಮುಂದೆ ಇದೆ. ಇಲ್ಲಿಯವರೆಗೆ ಸರ್ಕಾರ ಆ ಯೋಜನೆಗಳ ಬಗ್ಗೆ ಗಮನಹರಿಸಿಲ್ಲ. ಅಲ್ಲಿದ್ದಂತಹ ಏತ ನೀರಾವರಿಗಳು ಈಗ ಕೆಲಸ ಮಾಡುತ್ತಿಲ್ಲ. ಹಿನ್ನೀರಿನಿಂದ ಮುಳುಗಡೆಯಾದಂತಹ ನೀರು ಬಹಳಷ್ಟು ಇದೆ. ಆ ಹಿನ್ನೀರಿನಿಂದ ಇಲ್ಲಿ ಎಲ್ಲಾ ಹಳ್ಳಿಗಳಿಗೆ ಏತ ನೀರಾವರಿ ಯೋಜನೆ ಮಾಡಬೇಕೆಂದು ಒಂದು ಯೋಜನೆ ಸರ್ಕಾರದ ಮುಂದೆ ಇದೆ. ಬೋಳ ಮಾನ ದೊಡ್ಡಿ ಲಿಫ್ಟ್ ಇರಿಗೇಷನ್ ಎಂಬ ಒಂದು ಯೋಜನೆ ಸರ್ಕಾರದ ಮುಂದೆ ಇದೆ. ಒಂದು ಲಕ್ಷ ಎಕರೆ ಜಮೀನಿಗೆ ನೀರಾವರಿಯಾಗುತ್ತದೆ. 62 ಹಳ್ಳಿಗಳಿಗೆ ನೀರು ಬಿಡುವಂತಹ ಒಂದು ಯೋಜನೆ, ಆ ಯೋಜನೆ ಬಗ್ಗೆ ಸರ್ಕಾರ ಬಜೆಟ್‌ನಲ್ಲಿ ಏನೂ ಪ್ರಸ್ತಾವವನ್ನೇ ಮಾಡಲಿಲ್ಲ. ಈ ಹಳ್ಳಿಗಳು ಯಾವಾಗಲೂ ಬರಗಾಲದಿಂದ ಸಾಯುತ್ತಿವೆ. ಮಳೆ ಬಂದರೆ ಆ ಜನರಿಗೆ ಉದ್ಯೋಗ, ಇಲ್ಲದಿದ್ದರೆ ಉದ್ಯೋಗವೇ ಇಲ್ಲ. ಅಂತಹ ಪರಿಸ್ಥಿತಿಯಲ್ಲಿ 62 ಹಳ್ಳಿಗಳ ಜನ ಇವತ್ತು ಕಡುಬಡವರಾಗಿದ್ದಾರೆ. ಅವರಿಗೆ ಮನೆಗಳು ಇಲ್ಲ, ಜೋಪಡಿಗಳಲ್ಲಿ ವಾಸ ಮಾಡುತ್ತಿದ್ದಾರೆ. ಅಂತಹ ಜನರಿಗೆ ಯಾವುದೇ ಒಂದು ಯೋಜನೆ ನಮ್ಮ ರಾಯಚೂರು ಕ್ಷೇತ್ರಕ್ಕೆ ಬರಲಿಲ್ಲ. ಜಿಲ್ಲಾ ಕೇಂದ್ರವಾದ ರಾಯಚೂರು ನಗರದಲ್ಲಿ ರೋಡುಗಳ ವ್ಯವಸ್ಥೆ ಹದಗೆಟ್ಟು ಹೋಗಿದೆ. ನಮ್ಮ ಮಾನ್ಯ ಕಟ್ಟಾಸುಬ್ರಹ್ಮಣ್ಯ ನಾಯ್ಡುರವರು ಹೇಳಿದ ಪ್ರಕಾರ ಅಲ್ಲಿಯ ನಗರಸಭೆ ಹಾಳಾಗಿ ಹೋಗಿದೆ. ಅಲ್ಲಿ ಕೆಲವೇ ಜನರ ಕಪಿ ಮುಷ್ಟಿಯಲ್ಲಿ 15 ವರ್ಷಗಳಿಂದ ನಗರಸಭೆ ನರಳುತ್ತಿದೆ. ನಗರಸಭೆಗೆ ಬಂದಂತಹ ಹಣವನ್ನು ಲೂಟಿ ಮಾಡುತ್ತಿದ್ದಾರೆ. ಅದರ ಬಗ್ಗೆ ಕಂಪ್ಲೇಂಟ್ ಕೊಟ್ಟರೂ ಸರ್ಕಾರಗಳೂ ಏನೂ ಮಾಡಲಿಲ್ಲ, ಅಲ್ಲಿರುವಂತಹ ಅಧಿಕಾರಿಗಳೂ ಏನೂ ಮಾಡುತ್ತಿಲ್ಲ. ಅಲ್ಲಿರುವಂತಹ ಅಧ್ಯಕ್ಷರು 15 ವರ್ಷಗಳಿಂದ ಜನರ ಹಣವನ್ನು ಲೂಟಿ ಮಾಡುತ್ತಿದ್ದಾರೆ. ಆ ಅಧ್ಯಕ್ಷರ ಬಗ್ಗೆ ಸರ್ಕಾರ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಇವರ ಮೇಲೆ ಇರುವಂತಹ ಆಪಾದನೆಗಳು ಸರಿ ಇವೆ ಎಂದು 2001ರಲ್ಲಿ ವರದಿ ಬಂದಿದೆ. ಮೂರು ವರ್ಷಗಳು ಕಳೆದರೂ ಸರ್ಕಾರ ಅವರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಅದರ ಬಗ್ಗೆ ಕ್ರಿಮಿನಲ್ ಕೇಸ್ ಕೂಡ ಆಗಲಿಲ್ಲ. ಅವರ ಮೆಂಬರ್ ಶಿಫ್ ರದ್ದಾಗಲಿಲ್ಲ. ಈಗ ಅವ್ರು ಕಾಂಗ್ರೆಸ್ ಬಿಟ್ಟು ಜಾತ್ಯಾತೀತ ಜನತಾದಳ ಸೇರಿದ್ದಾರೆ. ರಿಸರ್ವೇಷನ್ ಬಗ್ಗೆ ಇಲ್ಲಿ ಹೋರಾಟ ಮಾಡುತ್ತಿದ್ದಾರೆ. ಅವರು ರಿಸರ್ವೇಷನ್ ತೆಗೆದುಕೊಂಡು ಮುಂದೆ ಬಂದು ಮತ್ತೆ ಅವರೇ ಅಧಿಕಾರ ವಹಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅವರು ಮೊದಲು ಅಧ್ಯಕ್ಷರಾಗಿದ್ದರು, ಈಗ ಉಪಾಧ್ಯಕ್ಷರಾಗಿದ್ದಾರೆ, ಮತ್ತೆ ಅಧ್ಯಕ್ಷರಾಗುವುದಕ್ಕೆ ಹೊರಟಿದ್ದಾರೆ. ಆ ನಗರಸಭೆ ಬಗ್ಗೆ ಅವರಿಗೆ ಅಷ್ಟೊಂದು ಕಾಳಜಿ ಇದೆ. ನಗರಸಭೆ ಬಿಡುವುದಕ್ಕೆ ತಯಾರಿಲ್ಲ. ಅಂತಹ ಒಬ್ಬ ವ್ಯಕ್ತಿ ಬಗ್ಗೆ ಆಪಾದನೆಗಳು ರುಜುವಾತಾಗಿದೆ, ಕೇಸ್ ಮಾಡಬೇಕು, ಅವರ ಬಳಿ ಇರುವ ಹಣವನ್ನು ವಾಪಸ್ ತೆಗೆದುಕೊಳ್ಳ-ಬೇಕೆಂದು ವರದಿ ಕೊಟ್ಟಿದ್ದಾರೆ. ಇವತ್ತು ಆ ವರದಿ ಮೂಲೆಗುಂಪಾಗಿದೆ. ರಾಜ್ಯದಲ್ಲಿದ್ದಂತಹ ಸರ್ಕಾರಗಳು ಕಾಂಗ್ರೆಸ್ ಸರ್ಕಾರವೂ ಮಾಡಲಿಲ್ಲ, ಜನತಾದಳ ಸರ್ಕಾರವೂ ಮಾಡಲಿಲ್ಲ. ಈಗ ಸಮ್ಮಿಶ್ರ ಸರ್ಕಾರ ಇದೆ. ಅವರ ಬಗ್ಗೆ ಏಕೆ ಇದುವರೆಗೂ ಕ್ರಮ ತೆಗೆದುಕೊಂಡಿಲ್ಲ. ಅವರ ಮೆಂಬರ್ ಶಿಫ್ ಏಕೆ ರದ್ದು ಮಾಡಲಿಲ್ಲ? ಇದೆಲ್ಲದರ ಬಗ್ಗೆ ಸರ್ಕಾರ ಸವಿಸ್ತಾರವಾಗಿ ನೋಡಿ, ಆ ಒಂದು ವಿಚಾರದ ಬಗ್ಗೆ ಸನ್ಮಾನ್ಯ ಉಪ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ಧರಾಮಯ್ಯನವರು, ಮಾನ್ಯ

ಸಿಂಧ್ಯರವರು, ಹಾಗೂ ಮಾನ್ಯ ಎಂ.ಪಿ. ಪ್ರಕಾಶ್‌ರವರು, ಗಮನಹರಿಸಬೇಕು. ರಾಯಚೂರಿನಲ್ಲಿ ಆದ ಅವ್ಯವಹಾರದ ಬಗ್ಗೆ ಎತ್ತಿ ಹಿಡಿಯಬೇಕು. ಮತ್ತೆ ಅವರು ರಿಸರ್ವೇಷನ್ ಕೋಟಾದಲ್ಲಿ ಅಧ್ಯಕ್ಷರಾಗುವುದಕ್ಕೆ ಅನುಕೂಲ ಮಾಡಿಕೊಡಬಾರದು ಎಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† **ಶ್ರೀ ಹೆಚ್. ಆಂಜನೇಯ (ಭರಮಸಾಗರ)** : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಉಪ ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯನವರು ಮಂಡಿಸಿರುವಂತಹ ಈ ಬಜೆಟ್‌ನಲ್ಲಿ ಬಡವರಿಗೆ ಮೂರು ರೂಪಾಯಿಗೆ ಕೆಜಿ ಅಕ್ಕಿಯನ್ನು ಕೊಡತಕ್ಕಂಥದ್ದು ಇರಬಹುದು, ರೈತರು ಸಹಕಾರ ಸಂಘಗಳಿಂದ ಪಡೆಯುವಂತಹ ಸಾಲದ ಬಡ್ಡಿಯನ್ನು ಆರು ಪರ್ಸೆಂಟ್ ಎಂದು ನಿಗದಿ ಮಾಡುವುದರ ಮೂಲಕ ಮುಂದೆ ಅವರು ಪಡೆದಿರತಕ್ಕಂತಹ ಸಾಲಕ್ಕೆ ಬಡ್ಡಿ, ಚಕ್ರ ಬಡ್ಡಿ ಇಲ್ಲವೆಂದು ಹೇಳಿರತಕ್ಕಂಥದ್ದು ನಿಜಕ್ಕೂ ಕೂಡ ಸ್ವಾಗತಾರ್ಹ. ಈ ವಿಷಯದಲ್ಲಿ ನಾನು ಮಾನ್ಯ ಹಣಕಾಸಿನ ಸಚಿವರಿಗೆ ಅಭಿನಂದಿಸುತ್ತೇನೆ. ಈ ಬಜೆಟ್‌ನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಬರಬೇಕಾದ ಒಂದು ನ್ಯಾಯವಾಗಿ ಸಲ್ಲಬೇಕಾದ ಕೆಲವು ಅಂಶಗಳು ಬಿಟ್ಟು ಹೋಗಿವೆ. ಅದರ ಬಗ್ಗೆ ನಾನು ಅವರ ಗಮನ ಸೆಳೆಯುವುದಕ್ಕೆ ಪ್ರಯತ್ನ ಮಾಡುತ್ತೇನೆ. ಹಿಂದುಳಿದ ವರ್ಗಗಳಿಗೆ ಒಂದು ಶ್ರಮ ಶಕ್ತಿಯ ಕಾರ್ಯಕ್ರಮವನ್ನು ಕೊಟ್ಟು ಅದಕ್ಕೆ 20 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದಾರೆ. ಹಿಂದುಳಿದ ವರ್ಗದವರೂ ಕೂಡ ಇವತ್ತು ಆರ್ಥಿಕವಾಗಿ ಸಮಾಜದಲ್ಲಿ ಮೇಲೆ ಬರಬೇಕೆಂದು ನಮ್ಮದೂ ಕೂಡ ಆಶ್ರಯ ಇದೆ. ಅದರ ಜೊತೆಗೆ ಸಾವಿರಾರು ವರ್ಷಗಳಿಂದ ತುಳಿತಕ್ಕೆ ಒಳಗಾಗಿರತಕ್ಕಂತಹ ಸಸ್ಪೃಶ್ಯರು, ಈ ನೆಲದ ಮಕ್ಕಳು ಕಡೆಗಣಿಸಲ್ಪಟ್ಟ ಜನರಿಗೂ ಕೂಡ ತಾವು ಇಂತಹ ಯೋಜನೆಯನ್ನು ಅಳವಡಿಸಿಕೊಳ್ಳುವ ಅಗತ್ಯ ಇದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇವೆ. ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ನಿಗಮ ಏನಿದೆ, ಆ ನಿಗಮಕ್ಕೆ ಕೊಡಬೇಕಾದ ಹಣಕಾಸನ್ನು ಹೆಚ್ಚಿನ ಪ್ರಮಾಣದಲ್ಲಿ ಕೊಟ್ಟಿಲ್ಲ. ಕಳೆದ ವರ್ಷ ಐದು ಸಾವಿರ ಬೋರ್‌ವೆಲ್‌ಗಳನ್ನು ಕೊರೆಸುತ್ತೇವೆಂದು ಸರ್ಕಾರ ಆಶ್ವಾಸನೆ ಕೊಟ್ಟಿತ್ತು. 50 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡತಕ್ಕಂತಹ ಯೋಜನೆ ಇದು. ಅದಕ್ಕೆ ಕಳೆದ ವರ್ಷ ಸುಮಾರು 20 ಕೋಟಿ ರೂಪಾಯಿಗಳು ಮಾತ್ರ ಕೊಡಲಾಯಿತು. ಇನ್ನು ಉಳಿದ ಹಣ ಇನ್ನೂ ಕೊಡಬೇಕಾಗಿದೆ. ತಾವು ಈ ಮಂಡಳಿಯನ್ನು ಬಲಪಡಿಸಲಿಕ್ಕೆ ಅಲ್ಲಿರತಕ್ಕಂತಹ ಹರಿಜನ ಗಿರಿಜನರಿಗೆ ಆರ್ಥಿಕವಾಗಿ ಮೇಲೆ ತರಲಿಕ್ಕೆ ಯಾವುದೇ ರೀತಿಯ ಪ್ರಸ್ತಾವನೆ ಈ ಬಜೆಟ್‌ನಲ್ಲಿ ಇಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ತಾವು ಹಿಂದುಳಿದ ವರ್ಗಗಳ ಜನರ ಸಮೀಕ್ಷೆ ಮಾಡಲಿಕ್ಕಾಗಿ, ಎರಡು ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದೀರಿ. ಜಾತಿವಾರು ಸಮೀಕ್ಷೆ ಆಗಬೇಕು. ಹಿಂದುಳಿದ ವರ್ಗಗಳಲ್ಲಿ ಬರತಕ್ಕಂತಹ ಜಾತಿಗಳ ಸಮೀಕ್ಷೆಯನ್ನು ಮಾಡಲಿಕ್ಕೋಸ್ಕರ ನೀವು ಎರಡು ಕೋಟಿ ರೂಪಾಯಿಗಳನ್ನು ಈ ಬಜೆಟ್‌ನಲ್ಲಿ ಅವಕಾಶ ಕಲ್ಪಿಸಿ ಕೊಟ್ಟಿದ್ದಿರಿ. ಪರಿಶಿಷ್ಟ ಜಾತಿ ಜನರ ಒಳ ಮೀಸಲಾತಿ ಬಗ್ಗೆ ಒಂದು ದೊಡ್ಡ ಕೂಗು ಆಗುತ್ತಿದೆ. ಅದರ ಸಮೀಕ್ಷೆ ಮಾಡಲಿಕ್ಕೆ ಇಲ್ಲಿ ಯಾವುದೇ ರೀತಿಯ ಪ್ರಸ್ತಾವನೆ ಇಲ್ಲ. ಆ ಆಯೋಗಕ್ಕೆ ಪ್ರತ್ಯೇಕವಾಗಿ ಹಣ ಮೀಸಲಿಟ್ಟಿದ್ದೇವೆಂಬ ಬಗ್ಗೆ ಪ್ರಸ್ತಾವನೆ ಕೂಡ ಇಲ್ಲ. ನಾನು ಈ ಸಂದರ್ಭದಲ್ಲಿ ಮನವರಿಕೆ ಮಾಡಿಕೊಳ್ಳುತ್ತೇನೆ, ಐದಾರು ವರ್ಷಗಳಿಂದ ಈ ರಾಜ್ಯದ ಮಾದಿಗರು, ಅದೂ ಪರಿಶಿಷ್ಟ ಜಾತಿ ಜನರಲ್ಲಿ ಸಿಂಹಪಾಲು ಇರತಕ್ಕಂತಹ ಜನ, ಅವರಿಗೆ ಮೀಸಲಾತಿಯಲ್ಲಿ ಸಾಕಷ್ಟು ಅನ್ಯಾಯವಾಗಿದೆ. ನಮಗೆ ಸಿಗಬೇಕಾದ ಮೀಸಲಾತಿ ನಮಗೆ ಸಿಕ್ಕಿಲ್ಲವೆಂದು

ತಮ್ಮ ಅಳಲನ್ನು ತೋಡಿಕೊಳ್ಳುತ್ತಿದ್ದಾರೆ. ಅಂತಹ ಮಾದಿಗರ ಹೊಟ್ಟೆಯಲ್ಲಿ ಹುಟ್ಟಿರತಕ್ಕಂತಹ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಇವತ್ತಿಗೂ ಕೂಡ ನಮ್ಮ ಜನಾಂಗದವರು ಒಂದು ಟಿಸಿಹೆಚ್ ಸೀಟ್ ಪಡೆಯಬೇಕಾದರೂ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ನಮಗೆ ಒಂದು ಎಎನ್‌ಎಮ್ ಸೀಟ್ ಸಿಗುತ್ತಿಲ್ಲ. ಇಂಜಿನಿಯರಿಂಗ್, ಎಂಬಿಬಿಎಸ್ ಇವೆಲ್ಲಾ ಈ ಜನಾಂಗಕ್ಕೆ ಗಗನಕುಸುಮವಾಗಿದೆ. ಇಲ್ಲಿ ಏನಾಗಿದೆ ಎಂದರೆ, ಪರಿಶಿಷ್ಟ ಜಾತಿಗಳಲ್ಲಿ ನೂರಾರು ಜಾತಿಗಳನ್ನು ನೀವು ಸೇರಿಸಿದ್ದೀರಿ. ಅಸ್ಪೃಶ್ಯರು ಅಲ್ಲದೆ ಇರತಕ್ಕಂತಹವರು, ನಮ್ಮನ್ನು ಯಾರೂ ಮುಟ್ಟುತ್ತಿರಲಿಲ್ಲ. ನಾವು ಊರ ಹೊರಗೆ ಇದ್ದೇವೆ. ನಾಯಿ ನರಿಗಳು ಕೂಡ ವಾಸ ಮಾಡಲಿಕ್ಕೆ ಯೋಗ್ಯವಲ್ಲದ ಸ್ಥಳದಲ್ಲಿ ನಾವು ಇವತ್ತು ಹೊಲೆಯರು ಹಾಗೂ ಮಾದಿಗರು ವಾಸ ಮಾಡುತ್ತಿದ್ದೇವೆ. ಆ ಜನ ನಿಜವಾದ ಅಸ್ಪೃಶ್ಯರು. ಆದರೆ ರಾಜಕೀಯ ಲಾಭಕ್ಕಾಗಿ ನಮ್ಮ ಪಕ್ಷಗಳ ನಾಯಕರು ಯಾರ್‍ಯಾರಿಗೋ ಅನ್ ಟಚಬಲ್ ಅಲ್ಲದೆ ಇರುವವರನ್ನೂ ಈ ಪಟ್ಟಿಯಲ್ಲಿ ಸೇರಿಸಿದ್ದಾರೆ. ಅವರನ್ನೆಲ್ಲಾ ತೆಗೆದು ಹಾಕಿ ಎಂದು ನಾನು ಹೇಳುವುದಿಲ್ಲ. ನಮಗೆ ಇಲ್ಲಿ ಸಾಮಾಜಿಕ ನ್ಯಾಯ ಬೇಕು. ಮಾನ್ಯ ಸಿದ್ಧರಾಮಯ್ಯನವರ ಬಗ್ಗೆ ನಾವೆಲ್ಲಾ ಹೊರಗೆ ಏನು ಕೇಳುತ್ತೇವೆಂದರೆ, ಇವರು ಸಾಮಾಜಿಕ ನ್ಯಾಯದ ಹರಿಕಾರರು. ಮುಂದಿನ ನಮ್ಮ ಭವಿಷ್ಯದ ನಾಯಕರು, ಎಲ್ಲಾ ವರ್ಗದ ಜನರಿಗೆ ಸಾಮಾಜಿಕ ನ್ಯಾಯವನ್ನು ಕಲ್ಪಿಸಿಕೊಡತಕ್ಕಂಥ ಭರವಸೆಯ ನಾಯಕರು ಎಂದು ನಾವು ನಿಮ್ಮನ್ನು ನಂಬಿದ್ದೇವೆ. ಒಂದಲ್ಲ ಒಂದು ದಿನ ನೀವೂ ಕೂಡ ನಿಮ್ಮ ಪಕ್ಷದ ಮಂತ್ರಿಯ ಆಸನದಲ್ಲಿ ಕುಳಿತುಕೊಳ್ಳಬೇಕೆಂಬ ಆಸೆ ನಮಗಿದೆ. ಇದೇ ಸಂದರ್ಭದಲ್ಲಿಯೇ ನಿಮಗೆ ಅದು ಬರಬೇಕಾಗಿತ್ತು. ಏಕೆಂದರೆ ಕಳೆದ ಚುನಾವಣೆಯ ಪ್ರಚಾರದ ಸಮಯದಲ್ಲಿ ತಾವೇ ಮುಖ್ಯಮಂತ್ರಿಯಾಗುವುದು ಎಂದು ಸಾಕಷ್ಟು ಪ್ರಚಾರವಾಯಿತು. ಮಾನ್ಯ ಸಿದ್ಧರಾಮಯ್ಯನವರು ಮತ್ತು ಮಾನ್ಯ ಪ್ರಕಾಶ್‌ರವರು ಈ ಕಡೆ ಗಮನ ಕೊಡಬೇಕು. ಕಳೆದ 56 ವರ್ಷಗಳಿಂದ ನಮ್ಮ ಜನರು ಒಂದೇ ಒಂದು ಪಕ್ಷದ ವೋಟ್ ಬ್ಯಾಂಕ್ ಆಗಿದ್ದರು. ಆದರೆ ಈ ಬಾರಿ ಮಾದಿಗರು ತಮ್ಮ ಸ್ವಾಭಿಮಾನ, ಆತ್ಮಗೌರವವನ್ನು ಪ್ರದರ್ಶನ ಮಾಡಿದ್ದಾರೆ. ನೀವೆಲ್ಲರೂ ವಿರೋಧ ಪಕ್ಷದಲ್ಲಿದ್ದಾಗ ಮಾದಿಗ ಜನಾಂಗದ ಬಗ್ಗೆ ಮಾತನಾಡುತ್ತಾ 'ಹೌದು ಈ ಜನಾಂಗಕ್ಕೆ ಅನ್ಯಾಯವಾಗಿದೆ, ಈ ಜನಾಂಗಕ್ಕೆ ಸಾಮಾಜಿಕ ನ್ಯಾಯವನ್ನು ಕಲ್ಪಿಸಿಕೊಡುತ್ತೇವೆ' ಎಂದು ಹೇಳಿದ್ದಿರಿ. ಇದನ್ನು ನಂಬಿ ನೀವು ಸಾಮಾಜಿಕ ನ್ಯಾಯುವನ್ನು ಕಲ್ಪಿಸಿಕೊಟ್ಟೇ ಬಿಡುತ್ತೀರಿ ಎಂದು ನಮ್ಮ ಜನಾಂಗದವರು ನಿಮಗೆ ಮತವನ್ನು ಹಾಕಿದ್ದಾರೆ. ಆದಕಾರಣ ಇಷ್ಟು ಸಂಖ್ಯೆಯಲ್ಲಿ ನೀವುಗಳೆಲ್ಲರೂ ಗೆದ್ದು ಬರುವುದಕ್ಕೆ ನಮ್ಮ ಜನಾಂಗದವರ ಪಾಲು ಇದೆ ಎನ್ನುವುದನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಬಯಸುತ್ತೇನೆ. ತಾವೂ ಕೂಡ ಅದನ್ನು ಒಪ್ಪಿಕೊಳ್ಳುತ್ತೀರಿ ಎನ್ನುವ ನಂಬಿಕೆ ನನಗಿದೆ. ನಮ್ಮ ಬೆಂಗಳೂರು ಪಕ್ಕದಲ್ಲಿರುವ ತುಮಕೂರು ಜಿಲ್ಲೆಯಿಂದ ಗೆದ್ದು ಬಂದಿರುವ ಸದಸ್ಯರುಗಳು ಕೇಳಿರಬಹುದು, ಸಾಮೂಹಿಕವಾಗಿ ಇವೊತ್ತು ನಮ್ಮ ಜನಾಂಗದವರು ಜನತಾದಳ (ಎಸ್) ಪಕ್ಷವನ್ನು ಬೆಂಬಲಿಸಿದ್ದಾರೆ. ಎಲ್ಲಾ ಜಿಲ್ಲೆಗಳಲ್ಲೂ ಕೂಡ ಒಟ್ಟಾಗಿ ಹೇಳಬೇಕೆಂದರೆ ಒಂದು ಪಕ್ಷದ ವಿರುದ್ಧವಾಗಿ ಅವರು ಮತವನ್ನು ಹಾಕಿದ್ದಾರೆ. ಕಾರಣ ಏನು ಗೊತ್ತೇ? ಆ ಪಕ್ಷದವರೂ ಕೂಡ ಅನ್ಯಾಯ ಏನೂ ಮಾಡಲಿಲ್ಲ. ಎಸ್.ಎಂ. ಕೃಷ್ಣರವರ ಸರ್ಕಾರ ಕೂಡ ಈ ಒಂದು ವಿಷಯದ ಪರವಾಗಿದ್ದರು. ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಎಸ್.ಎಂ. ಕೃಷ್ಣರವರು ಮಾದಿಗರಿಗೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅನ್ಯಾಯವಾಗಿದೆ, ಇವರು ತುಳಿತಕ್ಕೆ ಒಳಗಾಗಿದ್ದಾರೆ, ಈ ಜನರಿಗೆ ನ್ಯಾಯವನ್ನು ಕಲ್ಪಿಸಿಕೊಡಬೇಕು

ಎನ್ನುವ ಸದುದ್ದೇಶದಿಂದಲೇ ನ್ಯಾಯಮೂರ್ತಿ ಹನುಮಂತಪ್ಪನವರ ಏಕ ಸದಸ್ಯ ಆಯೋಗವನ್ನು ರಚನೆ ಮಾಡಿದ್ದರು. ಕಛೇರಿಯನ್ನು ಮಾಡಿದರು. ಅವರಿಗೆ ಮೂರು ತಿಂಗಳ ಕಾಲಾವಕಾಶವನ್ನು ಕೊಟ್ಟರು. ಆದರೆ ನಮಗೂ, ನಿಮಗೂ ಇಷ್ಟು ಬೇಗ ಚುನಾವಣೆ ಆಗುತ್ತದೆ ಎಂದು ಯಾರಿಗೂ ಗೊತ್ತಿರಲಿಲ್ಲ. ನಮಗೆಲ್ಲರಿಗೂ ಸೆಪ್ಟೆಂಬರ್‌ನಲ್ಲಿ ಚುನಾವಣೆ ಆಗುತ್ತದೆ ಎಂದು ಗೊತ್ತಿತ್ತು. ಆ ಒಂದು ದೃಷ್ಟಿಯಿಂದ ಅವರು ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಆಯೋಗವನ್ನು ರಚನೆ ಮಾಡಿ ಆರು ತಿಂಗಳಲ್ಲಿ ವರದಿ ಕೊಡಿ ಎಂದು ಹೇಳಿದ್ದರು. ನಮಗೆ ನ್ಯಾಯವಾಗಿ ಬರಬೇಕಾಗಿರುವಂಥ ಮೀಸಲಾತಿ ವರ್ಗೀಕರಣವನ್ನು ಮಾಡಿ ನಂತರ ಚುನಾವಣೆಗೆ ಹೋಗಬೇಕು ಎನ್ನುವ ಉದ್ದೇಶ ಮಾನ್ಯ ಎಸ್.ಎಂ. ಕೃಷ್ಣಾರವರಲ್ಲಿ ಇತ್ತು. ದುರಾದೃಷ್ಟ ಕೇಂದ್ರದಲ್ಲಿ ಮಧ್ಯಂತರ ಚುನಾವಣೆ ಘೋಷಣೆಯನ್ನು ಮಾಡಿದ್ದರಿಂದ ಆ ಆಯೋಗ ಅಲ್ಲಿಗೇ ಸ್ತಬ್ಧವಾಯಿತು. ಮಾನ್ಯ ಹನುಮಂತಪ್ಪನವರೂ ಕೂಡ ನಾನು ಲೋಕಸಭಾ ಚುನಾವಣೆಗೆ ಹೋಗುತ್ತೇನೆ ಎಂದು ಹೇಳಿದ್ದರು. ಅದಕ್ಕೆ ಲೋಕಸಭಾ ಚುನಾವಣೆ ಇನ್ನೂ ಒಂದು ವರ್ಷವಿದೆಯಾದ ಕಾರಣ ಅಷ್ಟರೊಳಗೆ ನೀವು ಒಂದು ವರದಿಯನ್ನು ತಯಾರು ಮಾಡಿಕೊಡಿ ಎಂದು ಎಸ್.ಎಂ. ಕೃಷ್ಣಾರವರು ಹೇಳಿದ್ದರು. ಅವರು ತಯಾರು ಮಾಡಿಕೊಡು-ವುದರೊಳಗಾಗಿ ಚುನಾವಣೆ ಬಂದಿದ್ದರಿಂದ ಆ ಆಯೋಗದ ವರದಿ ಬರುವುದಕ್ಕೆ ಆಗಲಿಲ್ಲ. ಈಗ ತಾವು ಆ ಆಯೋಗಕ್ಕೆ ಒಬ್ಬ ನ್ಯಾಯಮೂರ್ತಿಯನ್ನು ನೇಮಿಸಬೇಕು. ಜಾತೀವಾರು ಸಮೀಕ್ಷೆಯನ್ನೂ ಕೂಡ ನೀವು ಹೇಗೆ ಬ್ಯಾಕ್‌ವರ್ಡ್ ಕ್ಲಾಸ್‌ನಲ್ಲಿ ಮಾಡುವುದಕ್ಕೆ ಹೊರಟಿದ್ದೀರೋ ಅದೇ ರೀತಿಯಾಗಿ ತಾವು ದಯವಿಟ್ಟು ಮಾಡಿಸಬೇಕೆಂದು ನಿಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಸಿದ್ಧರಾಮಯ್ಯ : ಮಾಡಿಸೋಣ, ಮಾಡಿಸೋಣ.

ಶ್ರೀ ಹೆಚ್. ಆಂಜನೇಯ : ಇನ್ನು ಪೌರ ಕಾರ್ಮಿಕರ ಬಗ್ಗೆ ಹೇಳಬೇಕೆಂದ್ರರೆ ಇಂದು ಪೌರ ಕಾರ್ಮಿಕರು ತಮ್ಮ ಆರೋಗ್ಯವನ್ನು ಬಲಿಕೊಟ್ಟು ಸಮಾಜದ ಆರೋಗ್ಯವನ್ನು ಕಾಪಾಡತಕ್ಕಂಥ ಬಹಳ ಪವಿತ್ರವಾದ ಕೆಲಸವನ್ನು ಮಾಡುತ್ತಿದ್ದಾರೆ. ನಗರಸಭೆಯನ್ನು ಸ್ವೀಪರ್ ಕೆಲಸ ಮಾಡುವ ಎಲ್ಲರೂ ಕೂಡ ಮಾದಿಗರೇ ಆಗಿದ್ದಾರೆ. ಇಡೀ ರಾಜ್ಯದಲ್ಲಿ ಈ ಕೆಲಸ ಮಾಡುವ ಎಲ್ಲರೂ ಮಾದಿಗರೇ ಆಗಿದ್ದಾರೆ.

ಶ್ರೀ ಸಿದ್ಧರಾಮಯ್ಯ : ಮೈಸೂರಿನಲ್ಲಿ ಆ ಜನಾಂಗದವರನ್ನೇ ಮೇಯರ್ ಮಾಡಿದ್ದೆವಲ್ಲಾ.

ಶ್ರೀ ಹೆಚ್. ಆಂಜನೇಯ : ಮೈಸೂರಿನಲ್ಲಿ ನಾರಾಯಣರವರನ್ನು ಮೇಯರ್ ಮಾಡಿದ್ದಿರಿ. ನನಗೆ ಗೊತ್ತು ಸಾರ್. ಸಾಲಪ್ಪ, ವಿಜಯಕುಮಾರ್, ಸಿಂಹ, ಹೀಗೆ ಇವರೆಲ್ಲರೂ ಕೂಡ ಆ ವರ್ಗದಿಂದಲೇ ಬಂದಿರತಕ್ಕಂಥವರು. ನಾನೂ ಕೂಡ ಒಬ್ಬ ಮುನಿಸಿಪಲ್ ಸ್ವೀಪರ್ ಕುಟುಂಬದಿಂದ ಬಂದಿರತಕ್ಕಂಥವನು ಎಂದು ಹೇಳಿಕೊಳ್ಳುವುದಕ್ಕೆ ನನಗೆ ಹೆಮ್ಮೆಯಾಗುತ್ತಿದೆ.

ಅಧ್ಯಕ್ಷರು : ಮಾನ್ಯ ಆಂಜನೇಯರವರೆ, ಬೇಗ ಮುಗಿಸಿ.

ಶ್ರೀ ಹೆಚ್. ಆಂಜನೇಯ : ಮಾನ್ಯ ಅಧ್ಯಕ್ಷರೆ, ನೊಂದವರ ಬಗ್ಗೆ ಮಾತನಾಡಬೇಕಾಗಿದೆ. ನಾನು ರಿಸರ್ವ್ ಕಾನ್‌ಸ್ಟಿಟ್ಯುಯೆನ್ಸಿಯಿಂದ ಬಂದಿರತಕ್ಕಂಥವನು. ಆ ವರ್ಗದವರ ಬಗ್ಗೆ ಯಾರೂ ಮಾತನಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ನಾವು ಮಾತನಾಡುತ್ತೇವೆ. ನನಗೆ ಸ್ವಲ್ಪ ಸಮಯ ಕೊಡಿ ಸಾರ್. ದಯವಿಟ್ಟು ನಿಮಗೆ ಪುಣ್ಯ ಬರುತ್ತದೆ.

ಅಧ್ಯಕ್ಷರು : ಇನ್ನು ಐದು ನಿಮಿಷದಲ್ಲಿ ನಿಮ್ಮ ಭಾಷಣ ಮುಗಿಸಿ.

ಶ್ರೀ ಹೆಚ್. ಆಂಜನೇಯ : ಮುಗಿಸುತ್ತೇನೆ ಸಾರ್. ಮಾನ್ಯ ಪ್ರಕಾಶ್‌ರವರ ಜಿಲ್ಲೆಯಾದ ಬಳ್ಳಾರಿಯಲ್ಲಿ ನಡೆದಿರುವ ಘಟನೆಯನ್ನು ಹೇಳಬಯಸುತ್ತೇನೆ. ಏನು ನಾವು ನಿಮ್ಮೆಲ್ಲರ ಮಲ ಮತ್ತು ಕಕ್ಕಸ್ಸು ಎಂದು ಏನು ಹೇಳುತ್ತೇವೋ ಅದನ್ನು ತಲೆಯ ಮೇಲೆ ಹೊತ್ತು ಸಾಗಿಸತಕ್ಕಂಥ ಈ ಒಂದು ಪೌರ ಕಾರ್ಮಿಕರು ಒಳಚರಂಡಿ ವ್ಯವಸ್ಥೆಯಲ್ಲಿ ಕಟ್ಟಿಕೊಂಡಿದ್ದನ್ನು ತೆಗೆದು ಕ್ಲೀನ್ ಮಾಡುವುದಕ್ಕೋಸ್ಕರ ಅಂಡರ್‌ಗ್ರೌಂಡ್‌ನಲ್ಲಿ ಮೂವರು ಇಳಿದು ಅಲ್ಲಿ ನಿರಂತರ ಸಂಪರ್ಕವನ್ನು ಕಲ್ಪಿಸಿಕೊಡಬೇಕೆನ್ನುವ ಕಾರಣಕ್ಕಾಗಿ ಅಂಡರ್‌ಗ್ರೌಂಡ್‌ನಲ್ಲಿ ಇದ್ದ ಕಕ್ಕಸ್ಸಿನಲ್ಲಿ ಮುಳುಗಿದರು. ಅಲ್ಲಿ ಕ್ಲೀನ್ ಮಾಡುವಾಗ ಆ ಮೂವರೂ ಸ್ಥಳದಲ್ಲಿಯೇ ಸತ್ತುಹೋದರು. ಇದು ಹಾಡುಹಗಲಿನಲ್ಲಿಯೇ ನಡೆದುಹೋಯಿತು. ಈ ಸಮಾಜದ ರಕ್ಷಣೆ ಮಾಡುವ ಕೆಲಸದಲ್ಲಿ ಬಳ್ಳಾರಿಯಲ್ಲಿ ಹಾಡುಹಗಲೇ ಮೂರು ಜನರು ಅಸುನೀಗಿದರು. ನಿಮ್ಮೆಲ್ಲರ ಆರೋಗ್ಯವನ್ನು ಕಾಪಾಡುವುದಕ್ಕೋಸ್ಕರ ಅವರು ಬಲಿಯಾದರು. ಈ ಮೂರು ಜನರ ಕುಟುಂಬದವರಿಗೆ ಅನುಕಂಪದ ಆಧಾರದಲ್ಲಿ ಯಾವುದೇ ರೀತಿಯ ಕೆಲಸವನ್ನು ಕೊಟ್ಟಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ನೀವು ಬಜೆಟ್ ಮೇಲೆ ಮಾತನಾಡುತ್ತಿದ್ದೀರಿ ತಾನೇ?

ಶ್ರೀ ಹೆಚ್. ಆಂಜನೇಯ : ಎಲ್ಲರೂ ಅದೊಂದರ ಮೇಲೆಯೇ ಮಾತನಾಡಬೇಕು ಎಂದರೆ ಹೇಗೆ?

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಬಸವರಾಜ ರಾಯರೆಡ್ಡಿಯವರು ಈ ರೀತಿ ಕೇಳುವುದನ್ನು ನಾನು ಎಲ್ಲೂ ಕೇಳಿರಲಿಲ್ಲ. ಏಕೆಂದರೆ ಮಾನ್ಯ ಸದಸ್ಯರು ಯಾವ ವಿಚಾರವನ್ನು ಮಾತನಾಡುತ್ತಿದ್ದಾರೆ ಎಂಬುದನ್ನು ಮಾನ್ಯ ರಾಯರೆಡ್ಡಿಯವರು ಗಮನಿಸಬೇಕು. ಅವರು ಪ್ರಸ್ತಾಪ ಮಾಡುತ್ತಿರುವ ವಿಚಾರ ಬಹಳ ಗಂಭೀರವಾದುದಾಗಿದೆ. ಸಫಾಯಿಕರ್ಮಚಾರಿ ವಿಚಾರ ಎಂದರೆ ಅಷ್ಟು ಲಘುವಾಗಿ ತೆಗೆದುಕೊಳ್ಳತಕ್ಕಂಥದ್ದಲ್ಲ. ತಾವು ಈ ವಿಚಾರವನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು.

ಮಾನ್ಯ ಸದಸ್ಯರು : ಬಹಳ ಗಂಭೀರವಾದ ವಿಚಾರವನ್ನು ಹೇಳುತ್ತಿದ್ದರೆ ಬಜೆಟ್ ಮೇಲೆ ಮಾತ್ರ ಮಾತನಾಡಿ ಎಂದರೆ ಹೇಗೆ? ಬೇರೆಯವರು ಇತರೆ ವಿಷಯಗಳನ್ನು ಮಾತನಾಡುವುದಿಲ್ಲವೆ? ಬೇರೆಯವರು ಕೇವಲ ಬಜೆಟ್ ಮೇಲೆ ಮಾತ್ರ ಮಾತನಾಡುತ್ತಾರೆಯೇ?

ಶ್ರೀ ಹೆಚ್. ಆಂಜನೇಯ : ಇರಲಿ, ಇರಲಿ, ಈಗ ಮಾನ್ಯ ಅಧ್ಯಕ್ಷರು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಏನೂ ಚಿಂತೆ ಮಾಡಬೇಡಿ. ನಮಗೆ ವಿರೋಧ ಪಕ್ಷದಲ್ಲಿರುವ ನಾಯಕರು ಮತ್ತು ಆಡಳಿತ ಪಕ್ಷದಲ್ಲಿರುವ ನಾಯಕರೂ ಕೂಡ ಬಹಳ ನಮ್ಮ ವರ್ಗದ ಮೇಲೆ ಸಿಂಪಥಿ ಇಟ್ಟುಕೊಂಡಿರತಕ್ಕಂಥ, ಕರುಣೆ ತೋರತಕ್ಕಂಥ ನಾಯಕರುಗಳೇ ಆಗಿದ್ದಾರೆ. ಈ ಸಮಾಜದ ವರ್ಗದ ಬಗ್ಗೆ ಎಲ್ಲರಿಗೂ ಕಳಕಳಿ ಇದೆ. ಈಗಾಗಲೇ ಹಾಡುಹಗಲಲ್ಲಿಯೇ ಮೂವರು ಒಳಚರಂಡಿ ವ್ಯವಸ್ಥೆಯಲ್ಲಿ ಕ್ಲೀನ್ ಮಾಡಲು ಅಂಡರ್‌ಗ್ರೌಂಡ್‌ನಲ್ಲಿ ಮುಳುಗಿ ಅಸು ನೀಡಿದ್ದಾರೆ. ಅವರ ಕುಟುಂಬದಲ್ಲಿ ಒಬ್ಬರಿಗೆ ನೌಕರಿಯನ್ನು ಅನುಕಂಪದ ಆಧಾರದಲ್ಲಿ ಕೊಡಬೇಕು. ನೌಕರಿಯನ್ನು ಕೊಡತಕ್ಕಂಥ ಸಂದರ್ಭದಲ್ಲಿ ಇತ್ತೀಚೆಗೆ ಒಂದು ಸರ್ಕಾರಿ ಆದೇಶ ಬಂದಿದೆ. ಅದರಲ್ಲಿ ಏನು ಹೇಳಿದ್ದಾರೆ ನಿಮಗೆ ಗೊತ್ತೆ? ಇಂದು ಫ್ಯಾನ್ ಕೆಳಗಡೆ ಕಸ ಹೊಡೆಯುವವನಿಗೆ ಎಲ್ಲಾ ರೀತಿಯ ಆರೋಗ್ಯ ರಕ್ಷಣೆ ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ. ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ವೈದ್ಯಕೀಯ ಸೌಲಭ್ಯವನ್ನು ಪಡೆಯಬಹುದು.

ಈ ಪೌರ ಕಾರ್ಮಿಕರು ವೈದ್ಯಕೀಯ ಸೌಲಭ್ಯವನ್ನು ಪಡೆಯುವುದಕ್ಕೆ ಯಾವುದೇ ರೀತಿಯ ಆದೇಶವಿಲ್ಲ. ಇ.ಎಸ್.ಐ. ಸೌಲಭ್ಯವಿಲ್ಲ. ಇವೊತ್ತು ನಮ್ಮನ್ನು ಜೀತದಾಳುಗಳಂತೆ ನಗರಸಭೆಗಳಲ್ಲಿ ದುಡಿಸಿಕೊಳ್ಳುತ್ತಿದ್ದಾರೆ. ಸರ್ಕಾರದಲ್ಲಿ ಇದರ ಬಗ್ಗೆ ನಾವು ಬಹಳಷ್ಟು ಹೋರಾಟ ಮಾಡಿ ಈ ಹಿಂದೆ ಸಾಲಪ್ಪನವರು, ನಾವು, ದೇವರಾಜು ಅರಸುರವರ ಕಾಲದಲ್ಲಿ, ಡಿ.ಕೆ. ನಾಯ್ಕರ್ ಕಾಲದಲ್ಲಿ ಕೆ.ಸಿ.ಎಸ್. ರೂಲ್‌ನ್ನು ಅಳವಡಿಸಿ ಇವೊತ್ತು ಅವರಿಗೆ ಒಂದು ಸ್ವಲ್ಪ ಸೌಲಭ್ಯವನ್ನು ಕೊಡುತ್ತಿದ್ದೇವೆ. ಯಾವುದೇ ರೀತಿಯ ವೈದ್ಯಕೀಯ ಸವಲತ್ತುಗಳು ಇವರಿಗೆ ಇಲ್ಲವಾಗಿದೆ. ಈಗೇನು ಮೂವರು ಅಸುನೀಗಿದ್ದಾರೆ ಅವರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಕೆಲಸ ಕೊಡಬೇಕು. ಆದರೆ ಮೊನ್ನೆ ಒಂದು ಈ ಸರ್ಕಾರದಲ್ಲಿ ಆಜ್ಞೆಯಾಗಿದೆ. ಅದೇನೆಂದರೆ ಅನುಕಂಪದ ಆಧಾರದ ಮೇಲೆ ಇನ್ನುಮೇಲೆ ನಾವು ಕೆಲಸ ಕೊಡುವುದಿಲ್ಲವೆಂದಿದ್ದಾರೆ. 1000 ಜನರಿಗೆ ಒಬ್ಬ ಪೌರ ಕಾರ್ಮಿಕರಿಗೆ ನೇಮಕ ಮಾಡಬೇಕೆಂದು ಆದೇಶ ಮಾಡಿದ್ದಾರೆ. ಈ ಹಿಂದೆ ಐ.ಪಿ.ಡಿ. ಸಾಲಪ್ಪನವರ ವರದಿಯಲ್ಲಿ 750 ಜನರಿಗೆ ಒಬ್ಬ ಪೌರ ಕಾರ್ಮಿಕರನ್ನು ನೇಮಕ ಮಾಡಬೇಕೆಂದು ಆಯೋಗ ಹೇಳಿದ್ದನ್ನು ಸರ್ಕಾರವೇ ಒಪ್ಪಿಕೊಂಡಿದೆ. ಇಂದು ಆರ್ಥಿಕ ಇಲಾಖೆಯವರು, ಪೌರಾಡಳಿತ ಇಲಾಖೆಯವರು ಏನಿದ್ದಾರೋ ಇವರೆಲ್ಲರೂ ದಲಿತ ವಿರೋಧಿಗಳಾಗಿದ್ದಾರೆ. ನಮಗೆ ಶತ್ರುಗಳು ಯಾರು ಎಂದರೆ ಈ ನಿಮ್ಮ ಆರ್ಥಿಕ ಇಲಾಖೆಯುವರು. ಇವೊತ್ತು ಅವರಿಗೆ ಪೆನ್‌ಶನ್ ಕೊಡಿ ಎಂದರೆ ಪೆನ್‌ಶನ್ ಕೊಡುವುದಿಲ್ಲವೆಂದು ಹೇಳಿದ್ದಾರೆ ಸಾರ್. ಈಗ ಹೊಸದಾಗಿ ನೇಮಕ ಆಗಲಿ ಎಂದರೆ ಮುಂದೆ ಇವರಿಗೆ ಪೆನ್‌ಶನ್ ಕೊಡಬಾರದು ಎಂದು ಹೇಳಿದ್ದಾರೆ. ಈ ರೀತಿಯಾಗಿ ಇವೊತ್ತು ಹರಿಜನರ ವಿರೋಧಿ ಆದೇಶಗಳು ಬರುತ್ತಿದೆ. ಇದನ್ನು ಕಣ್ಣುಮುಚ್ಚಿಕೊಂಡು ನೋಡುವುದಕ್ಕೆ ನಮಗೆ ಇನ್ನು ಮುಂದೆ ಸಾಧ್ಯವಿಲ್ಲ. ನಿಮ್ಮ ನೇತೃತ್ವದಲ್ಲಿ ಈ ರೀತಿಯಾಗಬಾರದು. ಪೌರ ಕಾರ್ಮಿಕರ ಸಮಸ್ಯೆ ಬಗ್ಗೆ ಮಾತನಾಡುವುದಕ್ಕಾಗಿ ತಾವು ಪೌರ ಕಾರ್ಮಿಕರ ನಾಯಕರ ಜೊತೆ ಕುಳಿತು ಮಾತನಾಡುವುದಕ್ಕಾಗಿ ಸಭೆಯನ್ನು ಕರೆಯಲು ದಿನಾಂಕವನ್ನು ಸಮಯವನ್ನು ನಿಗದಿಮಾಡಿಕೊಡಬೇಕು. ಏಕೆಂದರೆ ಬಹಳ ಸಮಸ್ಯೆಗಳು ಹೇಳುವಂಥವುಗಳು ಇವೆ. ಇಲ್ಲಿಯೇ ಅವುಗಳ ಬಗ್ಗೆ ಮಾತನಾಡೋಣವೆಂದರೆ ಮಾನ್ಯ ಅಧ್ಯಕ್ಷರು ಬೇಗ ಮುಗಿಸಿ ಎಂದು ಹೇಳುತ್ತಿದ್ದಾರೆ. ಇನ್ನು ಕಡೆಯದಾಗಿ ನನ್ನ ಜಿಲ್ಲೆಯ ಬಗ್ಗೆ ಹೇಳಿ ಬಿಡುತ್ತೇನೆ. ನಮ್ಮ ಚಿತ್ರದುರ್ಗ ಜಿಲ್ಲೆ ಏನಿದೆ ಇದು ಗಂಡುಮಟ್ಟಿನ ನಾಡು, ರಾಷ್ಟ್ರ ನಾಯಕರಾದಂಥ ಸನ್ಮಾನ್ಯ ನಿಜಲಿಂಗಪ್ಪನವರನ್ನು ಕೊಟ್ಟಂಥ ಜಿಲ್ಲೆ, ವೀರ ಮದಕರಿನಾಯಕರು ಆಳಿದಂಥ ನಾಡು, ಸಿದ್ಧವೀರಪ್ಪನವರು, ಹೀಗೆ ಬಹಳ ದೊಡ್ಡ ದೊಡ್ಡ ನಾಯಕರುಗಳು ಈ ಜಿಲ್ಲೆಯಿಂದ ಬಂದಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋದಪಕ್ಷದ ನಾಯಕರು) : ಒಂದ್ನಿಮಿಷ ಆಂಜನೇಯರವರೇ. ಈಗ ಸದನದಲ್ಲಿ ಉಪ ಮುಖ್ಯಮಂತ್ರಿಗಳು ಇದ್ದಾರೆ. ಮಾನ್ಯ ಸದಸ್ಯರಾದ ಆಂಜನೇಯರವರು ಮಾತನಾಡುವಾಗ ಬಳ್ಳಾರಿಯಲ್ಲಿ ಒಳಚರಂಡಿ ವ್ಯವಸ್ಥೆಯಲ್ಲಿ ಸ್ವಚ್ಛತೆ ಮಾಡುತ್ತಿದ್ದಾಗ ಮೂವರು ಅಸು ನೀಗಿರುವ ವಿಚಾರವನ್ನು ಹೇಳಿದಾಗ ಮಾನ್ಯ ಉಪ ಮುಖ್ಯಮಂತ್ರಿಗಳು ಎದ್ದು ನಿಂತುಕೊಂಡು ಏನಾದರೂ ಹೇಳುತ್ತಾರೆ ಎಂದು ನಾವು ನಿರೀಕ್ಷೆ ಮಾಡಿದ್ದೆವು. ಈ ಕಾನೂನುಗಳು ಏತಕ್ಕಾಗಿ ಮಾಡಿಕೊಂಡಿದ್ದೇವೆ? ಇರುವುದು, ಜನಗಳ ಉಪಯೋಗಕ್ಕಾಗಿ. ಈ ರೀತಿಯಾಗಿ ಬಳ್ಳಾರಿಯಲ್ಲಿ ಮೂವರು ಧಾರುಣವಾಗಿ ಮರಣವನ್ನು

ಹೊಂದಿರಬೇಕಾದರೆ, ಕುಟುಂಬದವರಿಗೆ ಮಾನವೀಯತೆ ದೃಷ್ಟಿಯಿಂದ ಪರಿಹಾರ ಕೊಡಬೇಕು ಎಂದು ನಮ್ಮ ಅಧಿಕಾರಿಗಳಿಗೆ ಅನ್ನಿಸುವುದಿಲ್ಲವೆ? ಸರ್ಕಾರ ಅದಕ್ಕೆ ಏನೋ ಬೇಕೋ ಆ ರೀತಿಯ ಅಗತ್ಯ ಭದ್ರತೆಯನ್ನು ಮಾಡಿಕೊಂಡಿಲ್ಲವೆಂದರೆ ಅದಕ್ಕೆ ಅರ್ಥವಿದೆಯೇ? ತಾವು ಯಾವುದೇ ರೀತಿಯಲ್ಲಿ ಅವರ ಮಕ್ಕಳಿಗೆ ಉದ್ಯೋಗವನ್ನು ವಿಶೇಷ ಪ್ರಕರಣ ಎಂದು ಹೇಳಿ ಅವರಿಗೆ ಉದ್ಯೋಗವನ್ನು ಒದಗಿಸಿಕೊಡಬೇಕು ಮತ್ತು ಅವರಿಗೆ ಪರಿಹಾರ ಕೊಡಿಸುತ್ತೇವೆಂದು ತಾವು ಉತ್ತರ ಕೊಡುವಂಥ ಸಂದರ್ಭದಲ್ಲಿ ಹೇಳಬೇಕು ಎಂದು ಒತ್ತಾಯ ಮಾಡುತ್ತೇನೆ.

ಶ್ರೀ ಸಿದ್ಧರಾಮಯ್ಯ : ಉತ್ತರ ಹೇಳುವಾಗ ಹೇಳುತ್ತೇವೆ.

4.10 ಪಿ.ಎಂ

ಶ್ರೀ ಹೆಚ್. ಆಂಜನೇಯ : ಮಾನ್ಯ ಅಧ್ಯಕ್ಷರೆ, ಮಾನ್ಯ ನಿಜಲಿಂಗಪ್ಪನವರ ಕೊನೆಯ ಕನಸು. ಅವರು ಬದುಕಿದ್ದ ಸಂದರ್ಭದಲ್ಲಿ ಭದ್ರ ಮೇಲ್ದಂಡೆ ಯೋಜನೆ ಆಗಬೇಕಾಗಿತ್ತು. ಅದು ಆಗಲಿಲ್ಲ, ಅದು ಆಗಬೇಕು. ಕಾರಣ ಏನು ಗೊತ್ತಾ, ಇವತ್ತು ನಮ್ಮ ಜಿಲ್ಲೆಗೆ ನಮ್ಮ ಕ್ಷೇತ್ರಕ್ಕೆ ಹೋಗುವುದಕ್ಕೆ ಹೆದರಿಕೆಯಾಗುತ್ತದೆ. ಅಂತರ್ಜಲ ಎಲ್ಲಾ ಭತ್ತಿ ಹೋಗಿದೆ. ಕುಡಿಯುವುದಕ್ಕೆ ನೀರು ಸಿಗುತ್ತಿಲ್ಲ. ಇನ್ನೊಂದು ಕಡೆ ಕರೆಂಟ್ ಇಲ್ಲ. ಅಲ್ಲಿ ಮೂರು ತಿಂಗಳಿನಿಂದ ಟ್ರಾನ್ಸ್‌ಫರ್ಮರ್ ಸುಟ್ಟು ಹೋಗಿದೆ. ಅದನ್ನು ಈ ಸರ್ಕಾರದಲ್ಲಿ ಬದಲಿಸುವುದಕ್ಕೆ ಆಗುತ್ತಿಲ್ಲ. ಇದೇನು? ನಾವು ಕ್ಷೇತ್ರದಲ್ಲಿ ಎಲ್ಲಿ ಹೋದರೂ ಕೂಡ ಕುಡಿಯುವ ನೀರು ಇಲ್ಲವೆಂದು ಹೇಳುತ್ತಾರೆ. ನನ್ನ ಕ್ಷೇತ್ರದಲ್ಲಿ ಇರುವಂತಹ 20 ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಅಲ್ಲಿ ಟ್ಯಾಂಕರ್ ಮೂಲಕ ನೀರನ್ನು ಇವತ್ತು ಸರಬರಾಜು ಮಾಡುತ್ತಿದ್ದೇವೆ. ನೀರಿನ ಸರಬರಾಜು ಹೊಣೆಯನ್ನು ಗ್ರಾಮ ಪಂಚಾಯತ್‌ಗೆ ಕೊಟ್ಟಿದ್ದೇವೆಂದು ಹೇಳುತ್ತೀರಿ. ಬೇಲೂರಿನ ವಿಚಾರದ ಒಂದು ಘೋಷಣೆಯ ಹಿನ್ನೆಲೆಯಲ್ಲಿ ತಾಲ್ಲೂಕು ಪಂಚಾಯತ್‌ಗೆ ಕೊಟ್ಟಿದ್ದೇವೆಂದು ಹೇಳುತ್ತಾರೆ. ಇನ್ನು ಇಂಜಿನಿಯರಿಂಗ್ ವಿಭಾಗದಲ್ಲಿ ಕೇಳಿದರೆ, ಇಲ್ಲ ನಮಗೆ ಏನೂ ಆದೇಶ ಬಂದಿಲ್ಲವೆಂದು, ಈ ರೀತಿಯಾಗಿದೆ ಎಂದು ಹೇಳುತ್ತಾರೆ. ಅಲ್ಲಿ ನಾವು ಹೋಗಿ ಕಾಲಿಡಲು ಕಷ್ಟವಾಗಿದೆ. ದಯಮಾಡಿ ಈ ಭದ್ರ ಮೇಲ್ದಂಡೆ ಯೋಜನೆ ಏನಾಗಿದೆ ಎಂದರೆ ಚಿತ್ರದುರ್ಗ, ತುಮಕೂರು ಮತ್ತು ಬಳ್ಳಾರಿ ಈ ಬಾರ್ಡರ್‌ನಲ್ಲಿ ಬರತಕ್ಕಂಥ ಜನರೆಲ್ಲರೂ ಯಾರು ಗೊತ್ತಾ ನಾಯಕರು, ಬೇಡರು, ಮಾದಿಗರು, ಬೋವಿಗಳು, ಹೊಲೆಯರು, ಗೊಲ್ಲರು ಹಾಗೂ ಕುರುಬರು. ಈ ಕೆಳವರ್ಗದ ಜನರೇ ನಮ್ಮ ಜಿಲ್ಲೆಯಲ್ಲಿ ಜಾಸ್ತಿ ಜನ ವಾಸ ಮಾಡುತ್ತಿರುವುದು. ಆ ಭದ್ರ ಮೇಲ್ದಂಡೆ ಯೋಜನೆ ತಂದರೆ ಅವರೆಲ್ಲಾ ಶಕ್ತಿವಂತರಾಗುತ್ತಾರೆ ಎನ್ನುವ ಕಾರಣದಿಂದ ಈ ಸರ್ಕಾರಗಳು ಅದನ್ನು ಮಾಡುತ್ತಿಲ್ಲವೆಂಬ ಶಂಕೆ ನನಗೆ ಬರುತ್ತಿದೆ. ಇನ್ನು ಎಲ್ಲೆಲ್ಲಿ ಬೇರೆ ಜನಾಂಗ ಇದೆ ಅಲ್ಲಿ ದೊಡ್ಡ ದೊಡ್ಡ ಡ್ಯಾಂಗಳನ್ನು ಕಟ್ಟಿಕೊಂಡು ಸುಖವಾಗಿದ್ದಾರೆ. ಕೆಳವರ್ಗದ ಜನರು ವಾಸವಾಗಿರತಕ್ಕಂಥ ಸುಮಾರು 20 ತಾಲ್ಲೂಕುಗಳಲ್ಲಿ ಇವತ್ತು ಕುಡಿಯುವ ನೀರು ಇಲ್ಲ. ಹೊಲಗಳಿಗೆ ನೀರು ಉಣಿಸಬೇಡಿರಿ; ಆದರೆ ಕುಡಿಯುವ ನೀರನ್ನಾದರೂ ಒದಗಿಸಿಕೊಡಿ. ಭದ್ರ ಮೇಲ್ದಂಡೆಯಲ್ಲಿ ಇವತ್ತು ನೀರು ವೇಸ್ಟ್ ಆಗಿ ಹರಿದು ಹೋಗುತ್ತಿರುವಂತಹ ನೀರನ್ನು ತೆಗೆದುಕೊಂಡು ಬನ್ನಿ. ಅದಕ್ಕೆ ಒಂದು ಸಮೀಕ್ಷೆ ನಡೆದಿದೆ. ಅದರ ಬಗ್ಗೆ ಆಡಳಿತಾತ್ಮವಾಗಿ ಕೂಡ ಕಳೆದ ಸರ್ಕಾರ ಒಪ್ಪಿಕೊಂಡಿದೆ. ಅದಕ್ಕೆ ಕೂಡ ಈ ಬಜೆಟ್‌ನಲ್ಲಿ ನಯಾಪೈಸೆ ಒದಗಿಸಿಲ್ಲ. ಆದರೆ ಮಾನ್ಯ ಮುಖ್ಯಮಂತ್ರಿಗಳ ಜಿಲ್ಲೆಯಾದ ಜೀವರ್ಗಿಗೆ ಭೀಮಾ ನದಿ ನೀರು ಹರಿಯುತ್ತಿದೆಯಲ್ಲಾ. ಅಲ್ಲಿಗೆ ನೀವು ಹಣವನ್ನು ಒದಗಿಸಿದ್ದೀರಿ,

ಅಲ್ಲಿ ಬೇಡ ಎಂದು ಹೇಳುವುದಿಲ್ಲ, ಕೊಡಿ. ನಮ್ಮ ಜಿಲ್ಲೆಗೆ ಬೇಕಾದರೆ ನೀವು ಬಂದು ನೋಡಬಹುದು. ಕುಡಿಯುವ ನೀರು ಬೇಕೆಂದರೆ ಇವತ್ತು ನೀರು ಅಂತರ್ಜಲ ಸಂಪೂರ್ಣವಾಗಿ ಭತ್ತಿ ಹೋಗಿದೆ. ಭೂಮಿಯೆಲ್ಲಾ ಒಣಗಿ ಹೋಗುತ್ತಿದೆ. ಎಂದು ಐದು ಹತ್ತು ವರ್ಷಗಳಿಂದ ಬರಗಾಲ ಬಂದು ಜನರು ತತ್ತರಿಸಿ ಹೋಗಿದ್ದಾರೆ. ಕಾಫಿ ಬೆಳೆಯುವಂತಹ ಜನರು ಮೈಸೂರಿನ ಕಡೆ ವಲಸೆ ಹೋಗುತ್ತಿದ್ದಾರೆ. 30–40 ಎಕರೆ ಜಮೀನು ಇರತಕ್ಕಂಥ ನಮ್ಮವರು ಏನೂ ಬೆಳೆಯುತ್ತಿಲ್ಲ. ಮಳೆ ಇಲ್ಲ ಬೆಳೆ ಇಲ್ಲ. ಬೆಳೆ ವಿಮೆ ಕೂಡ ಇಲ್ಲ ಹಾಗೂ ಏನೂ ಪರಿಹಾರವೂ ಕೊಡುವುದಿಲ್ಲ. ಎಲ್ಲಾ ಬಡವರು, ಆದುದರಿಂದ ತಾವು ದಯಮಾಡಿ ಆ ಜನರ ಕಲ್ಯಾಣಕ್ಕಾಗಿ ಏನಾದರೂ ಶಾಶ್ವತವಾದದಂತಹ ಅನುಕೂಲ ಮಾಡಬೇಕೆನ್ನುವ ಉದ್ದೇಶ ನಿಮಗೆ ಇದ್ದರೆ ದಯಮಾಡಿ ಭದ್ರಾ ಮೇಲ್ದಂಡೆ ಯೋಜನೆಯನ್ನು ಅನುಷ್ಠಾನಕ್ಕೆ ತರಬೇಕೆಂದು ವಿನಂತಿಯನ್ನು ಮಾಡುತ್ತಾ ವಿಶೇಷ ಘಟಕ ಯೋಜನೆ ಒಂದು ಪ್ರಾಧಿಕಾರವನ್ನು ನೇಮಕ ಮಾಡುತ್ತೇವೆಂದು ಹೇಳಿದ್ದೀರಿ.

ಅಧ್ಯಕ್ಷರು : ದಯಮಾಡಿ ನಿಲ್ಲಿಸಿ ತಾವು.

ಶ್ರೀ ಹೆಚ್. ಆಂಜನೇಯ : ವಿಶೇಷವಾಗಿ ಮತ್ತೊಂದು ನಿಮಗೆ ಪ್ರಾರ್ಥನೆ, ತಾವು ಎಸ್‌ಸಿ:ಎಸ್‌ಟಿ ಶಾಸಕರುಗಳನ್ನು ಸೇರಿದಂತೆ ನಮ್ಮೆಲ್ಲರನ್ನೂ ಕುಡ ಕರೆದು ಈ ಬಜೆಟ್‌ನಲ್ಲಿ ಏನು ಸೇರ್ಪಡೆಯಾಗಬೇಕು ಏನು ನ್ಯೂನ್ಯತೆ ಆಗಿದೆ ಎಂದು ನಮ್ಮ ನೋವನ್ನು ಕೇಳುವುದಕ್ಕೆ ತಾವು ಶೀಘ್ರದಲ್ಲಿ ಒಂದು ಸಭೆಯನ್ನು ಕರೆದು ಉಪಕಾರ ಮಾಡಬೇಕೆಂದು ಹೇಳಿ, ಇನ್ನು ವಿಶೇಷ ಘಟಕ ಯೋಜನೆಗೆ ಒಂದು ಪ್ರಾಧಿಕಾರ ರಚನೆ ಮಾಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ವಿನಂತಿ ಮಾಡುತ್ತಾ, ಈಗ ಇಲ್ಲಿಗೆ ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾರೆ, ಈಗ ನಾನು ಮಾತನಾಡತಕ್ಕಂಥ ಸಂದರ್ಭದಲ್ಲಿ, ನಾನು ಆಗಲೇ ಹೇಳಿದಂತೆ ಹರಿಜನರಿಗೋಸ್ಕರ ಪರಿಶಿಷ್ಟರಿಗೋಸ್ಕರ ಇಟ್ಟಿರತಕ್ಕಂಥ ಹಣ ಬಹಳ ಕಡಿಮೆ ಇದೆ, ಅದನ್ನು ಹೆಚ್ಚಿಗೆ ಮಾಡಿಕೊಡಬೇಕು. ಮಾನ್ಯ ಮುಖ್ಯಮಂತ್ರಿಗಳು ಗಮನ ಈ ಕಡೆ ಕೊಡುತ್ತಿಲ್ಲ.

ಅಧ್ಯಕ್ಷರು : ಮಾನ್ಯ ಆಂಜನೇಯ ಅವರೇ, ದಯಮಾಡಿ ಅವರು ಗಮನ ಕೊಡುವುದಿರಲಿ, ನಮ್ಮ ಮಾತಿಗೆ ನೀವು ಗಮನ ಕೊಡುತ್ತಿಲ್ಲವಲ್ಲಾ. ಹತ್ತು ನಿಮಿಷ ಎಂದು ಮಾತನಾಡುವುದಕ್ಕೆ ಅವಕಾಶ ಕೊಟ್ಟೆ. ನೀವು ಇಷ್ಟು ಸಮಯ ತೆಗೆದುಕೊಂಡಿರಿ. ಈ ತರಹವಾದರೆ ಸದನ ನಡೆಸುವುದಕ್ಕೆ ಆಗುವುದಿಲ್ಲ. ಸಭೆಯನ್ನು ಇಷ್ಟು ಕಾಲಕ್ಕೆ ಗುತ್ತಿಗೆ ತೆಗೆದುಕೊಂಡ ಹಾಗೆ ಮಾಡುತ್ತೀರಲ್ಲಾ, ನೀವು ದಯಮಾಡಿ ಈ ತರಹ ಮಾಡಬಾರದು. ಎರಡು ನಿಮಿಷದೊಳಗೆ ಮುಗಿಸಿ.

ಶ್ರೀ ಹೆಚ್. ಆಂಜನೇಯ : ಇಲ್ಲ ದಯವಿಟ್ಟು ಕ್ಷಮಿಸಿ, ನಾನು ಮುಗಿಸುತ್ತಿದ್ದೇನೆ. ಈ ಬಜೆಟ್‌ನಲ್ಲಿ ಒಂದು ಅಂಶ ಅಡಕವಾಗಿದೆ. ಶೇಕಡ 50 ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳು ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳಿಗೆ, ಸರ್ಕಾರಿ ಖರೀದಿ ಪ್ರಕ್ರಿಯೆಯಲ್ಲಿ ಆದ್ಯತೆ ಕೊಡುತ್ತೇವೆಂದು ಹೇಳಿದ್ದೀರಿ. ಅದು ಸ್ವಾಗತಾರ್ಹ. ಮತ್ತೊಂದು ನಿಮ್ಮ ಗಮನಕ್ಕೆ ತರುವುದೇನೆಂದರೆ ಪಿಡಬ್ಲ್ಯೂಡಿ ಗುತ್ತಿಗೆ ವಿಚಾರವನ್ನು ಪ್ರಸ್ತಾಪ ಮಾಡಬೇಕಾಗಿತ್ತು. ಅದನ್ನು ಹೇಳಲಿಲ್ಲ. ಏಕೆಂದರೆ ಇದು ಬಹಳ ಮುಖ್ಯ. ನಮ್ಮವರು ಹಾರ್ಡ್‌ವೇರ್ ಶಾಪ್, ಸಿಮೆಂಟ್ ಅಂಗಡಿ ಇಟ್ಟುಕೊಂಡಿಲ್ಲ. ನಾವೆಲ್ಲೂ ಖರೀದಿ ಅಂಗಡಿ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ನಮ್ಮವರ ಕೈಲಿ ಇನ್‌ಕಂ ಟ್ಯಾಕ್ಸ್

ಕಮರ್ಷಿಯಲ್ ಟ್ಯಾಕ್ಸ್ ಕಟ್ಟುವುದಕ್ಕಾಗಲಿಲ್ಲ. ನಮ್ಮಲ್ಲಿ ಇಂಜಿನಿಯರ್ ಓದಿರುವವರಿಗೆ ಕೆಲಸ ಇಲ್ಲವೇ ಇಲ್ಲ. ಮುಂದೆ ಪಿಡಬ್ಲ್ಯುಡಿ ಮತ್ತು ಸರ್ಕಾರದ ಕಾಮಗಾರಿಗಳು ಏನೇನಾಗುತ್ತದೆ ಆ ಟೆಂಡರ್‌ನಲ್ಲಿ ಕಡ್ಡಾಯವಾಗಿ 50 ಪರ್ಸೆಂಟ್ ಹಿಂದುಳಿದ ವರ್ಗದವರಿಗೆ, ಅಲ್ಪಸಂಖ್ಯಾತರಿಗೆ, ಪರಿಶಿಷ್ಟ ಜಾತಿ ವರ್ಗದವರಿಗೆ ಈಗ ಏನು ಖರೀದಿಯಲ್ಲಿ ಅವಕಾಶ ಮಾಡಿಕೊಟ್ಟಿದ್ದೀರಿ ಇದರಲ್ಲಿ ಕೂಡ ಮಾಡಿಕೊಡಬೇಕು. ಹಿಂದಿನ ಸರ್ಕಾರದಲ್ಲಿ ಮಾನ್ಯ ಕೃಷ್ಣಪ್ಪನವರು ಸಮಾಜಕಲ್ಯಾಣ ಸಚಿವರಾಗಿದ್ದಾಗ ಪ್ರಕಟ ಮಾಡಿದ್ದರು.

ಶ್ರೀ ಸಿದ್ಧರಾಮಯ್ಯ : ಟ್ರಾನ್ಸ್‌ಫರೆನ್ಸಿ ಆ್ಯಕ್ಟ್ ಇರುವುದರಿಂದ ಇದರಲ್ಲಿ ರಿಸರ್ವೇಷನ್ ಮಾಡುವುದಕ್ಕೆ ಆಗುವುದಿಲ್ಲ. ಟ್ರಾನ್ಸ್‌ಫರೆನ್ಸಿ ಆ್ಯಕ್ಟ್ ಅಪ್ಲೈ ಆಗದೆ ಇರುವುದಕ್ಕೆ 50 ಪರ್ಸೆಂಟ್ ಮಾಡಬೇಕೆಂದು ಹೇಳಿರುವುದು ಅದರ ಒಳಗೆ ಇರುವಂತದ್ದಕ್ಕೆ.

ಶ್ರೀ ಹೆಚ್. ಆಂಜನೇಯ : ಗುತ್ತಿಗೆ ಕೊಡಬಹುದು. ಈಗಾಗಲೇ ಪಂಜಾಬ್‌ನಲ್ಲಿ ಹಾಗೂ ಹರಿಯಾಣದಲ್ಲೆಲ್ಲಾ ಮಾಡಿದ್ದಾರೆ. ಯುಪಿಯಲ್ಲಿ ಕೂಡ ಸರ್ಕಾರ ಮಾಡಿದೆ. ಅದನ್ನು ತಿದ್ದುಪಡಿ ತಂದು ಮತ್ತೆ ಒಂದು ಕ್ರಾಂತಿಯನ್ನು ಮಾಡಿ.

ಅಧ್ಯಕ್ಷರು : ಮಾನ್ಯ ಆಂಜನೇಯ ಅವರೇ, ತಾವು ದಯಮಾಡಿ ಮುಗಿಸಿಬಿಟ್ಟರೆ ಅದೇ ಒಂದು ದೊಡ್ಡ ಕ್ರಾಂತಿ.

ಶ್ರೀ ಹೆಚ್. ಆಂಜನೇಯ : ನಂತರ ದೊಡ್ಡ ದೊಡ್ಡ ಮೈನ್ಸ್ ಲೂಟ್ ಮಾಡುತ್ತಿದ್ದಾರೆ. ನಮ್ಮ ಮೈನ್ಸ್ ಎಲ್ಲಾ ಕೂಡ ಲೂಟಿ ಮಾಡುತ್ತಿದ್ದಾರೆ. ಇವತ್ತು ನನ್ನಂತಹ ಸಾಮಾನ್ಯ ಕುಟುಂಬದಿಂದ ಬಂದಿರುವವರು 10x10 ಆರ್‌ಸಿಸಿ ಹಾಕಿಸುವುದಕ್ಕೆ ಆಗುವುದಿಲ್ಲ. ಇವತ್ತು ಒಂದು ಟನ್ ಕಬ್ಬಿಣ 30 ಸಾವಿರ ರೂ ಇದೆ. 15 ರಿಂದ 16 ಸಾವಿರ ರೂ. ಟನ್ ಇದ್ದಂತಹ ಕಬ್ಬಿಣ ಆರು ತಿಂಗಳಲ್ಲಿ 30 ಸಾವಿರ ರೂಪಾಯಿ ಒಂದು ಟನ್ ಆಗಿದೆ. ಇವತ್ತು ಆ ಮೈನ್ಸ್ ನಮ್ಮ ಸಂಪತ್ತು. ಅದನ್ನು ಲೂಟಿ ಹೊಡೆಯುತ್ತಿರುವವರು ಯಾರು? ಯುಪಿಯಿಂದ ಬಂದಿರುವವರು. ವಿದೇಶಿ ಕಂಪನಿಗಳಿಗೆಲ್ಲಾ ಕೊಡುತ್ತಿದ್ದೀರಿ, ಅದರಲ್ಲಿ ಕೂಡ ಮೀಸಲಾತಿ ಕೊಡಿ. ನಮ್ಮಲ್ಲಿಯೂ ಕೂಡ ಒಬ್ಬ ಮೈನ್ಸಿನ ಮಾಲೀಕನಾಗಲಿ. ಎಸ್‌ಸಿ: ಎಸ್‌ಟಿ, ಬ್ಯಾಕ್‌ವರ್ಡ್‌ನವರು ಎಲ್ಲರಿಗೂ ಕೊಡಿ. ಇದನ್ನು ಹೇಗೆ ತಂದಿದ್ದೀರಿ ಅದನ್ನೂ ಕೂಡ ತಾವು ತರಬೇಕು. ಅದನ್ನು ನಿಯಂತ್ರಣ ಮಾಡಬೇಕು. ಎಷ್ಟು ಪ್ರದೇಶ ಇದೆ ಎಂದು ಯಾರೂ ಕೂಡ ಅಳತೆ ಮಾಡಿ ನೋಡಿಲ್ಲ. ಸುಮ್ಮನೆ ಹೊಡೆಯುತ್ತಲೇ ಇದ್ದಾರೆ. ಗುಡ್ಡವನ್ನು ಕೆದಕುತ್ತಲೇ ಇದ್ದಾರೆ.

ಅಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಿ. ಹತ್ತು ನಿಮಿಷ ಎಂದು ಮೂವತ್ತು ನಿಮಿಷ ತೆಗೆದುಕೊಂಡಿರಿ. ಈ ತರಹ ಡಿಸ್ ಓಬೆ ಮಾಡುವುದು I don't like. ಇನ್ನೂ ಬೇಕಾದಷ್ಟು ಮಾತನಾಡುವವರು ಇದ್ದಾರೆ. ಅವರಿಗೂ ಕೂಡ ಮಾತನಾಡುವುದಕ್ಕೆ ಅವಕಾಶ ಕೊಡಿ. ಮಾನ್ಯ ಜೀವಿಜಯ ಅವರೆ ಮಾತನಾಡಿ.

ಶ್ರೀ ಹೆಚ್. ಆಂಜನೇಯ : ತಾವು ನೊಂದವರ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ತಮಗೆ ಧನ್ಯವಾದಗಳು.

† **ಶ್ರೀ ಬಿ.ಎ. ಜೀವಿಜಯ (ಸೋಮವಾರ ಪೇಟೆ) :** ಸನ್ಮಾನ್ಯ ಅಧ್ಯಕ್ಷರೆ, ನಾನೇನು ಮಾತನಾಡುವುದಕ್ಕೆ ಅಪೇಕ್ಷೆ ಪಟ್ಟಿರಲಿಲ್ಲ. ಆದರೆ ಮಾತನಾಡುವಂತಹ ಪರಿಸ್ಥಿತಿ ಉದ್ಭವವಾಗಿದ್ದರಿಂದ

ನಾನು ಈ ದಿವಸ ಮಾತನಾಡುವುದಕ್ಕೆ ನಿಮ್ಮ ಅನುಮತಿಯಿಂದ ಎದ್ದಿದ್ದೇನೆ. ಈಗ ನಮ್ಮ ಅರ್ಥ ಮಂತ್ರಿಗಳು ಏನು ಬಜೆಟ್ ಮಂಡಿಸಿದ್ದಾರೆ. ಅದು ಬಹಳ ಅರ್ಥಪೂರ್ಣವಾಗಿದೆ ಹಾಗೂ ನಾನು ಇಷ್ಟೇ ಹೇಳುವುದೇನೆಂದರೆ ಅವರನ್ನು ಶ್ಲಾಘಿಸುತ್ತೇನೆ. ಬಜೆಟ್ ಪುಸ್ತಕದ ಪುಟ 13 ಸೀರಿಯಲ್ ನಂಬರ್ 39 ರಲ್ಲಿ 'ಸಹಕಾರಿ ಸಾಲ ಸಂಸ್ಥೆಗಳು ಇನ್ನು ಮುಂದೆ ಕೃಷಿ ಸಾಲದ ಮೇಲೆ ಸರಳ ಬಡ್ಡಿಯನ್ನಲ್ಲದೆ ಚಕ್ರಬಡ್ಡಿ ಮತ್ತು ಸುಸ್ಥಿಬಡ್ಡಿಯನ್ನು ವಿಧಿಸಬಾರದೆಂದು ನಮ್ಮ ಸರ್ಕಾರವು ನಿರ್ಧರಿಸಿ ಈ ನಿಟ್ಟಿನಲ್ಲಿ ಸಂಬಂಧಿಸಿದವರಿಗೆ ಸೂಕ್ತ ನಿರ್ದೇಶನ ನೀಡಿದೆ' ಎಂದು ಹೇಳಿದ್ದಾರೆ. ಹಾಗೂ ಸೀರಿಯಲ್ ನಂಬರ್ 42 ರಲ್ಲಿ 'ಕೇಂದ್ರ ಹಣಕಾಸು ಸಚಿವರು ತಮ್ಮ ಇತ್ತೀಚಿನ ಮುಂಗಡ ಪತ್ರದಲ್ಲಿ ಕೃಷಿ ಸಾಲಗಳನ್ನು ಎರಡು ಪಟ್ಟು ಹೆಚ್ಚಿಸಲು ಬ್ಯಾಂಕುಗಳ ಮೂಲಕ ಕ್ರಮ ಕೈಗೊಳ್ಳುವುದಾಗಿ ಘೋಷಣೆ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಸಹಕಾರಿ ಬ್ಯಾಂಕ್ ವ್ಯವಸ್ಥೆಗೆ ಅಗತ್ಯವಿರುವ ಸುಧಾರಣೆಗಳ ಪರಿಶೀಲನೆಗಾಗಿ ಕಾರ್ಯಪಡೆಯೊಂದನ್ನು ರಚಿಸಲಾಗಿದೆ. ನಾವು ಈ ಕಾರ್ಯಪಡೆಯ ಶಿಫಾರಸ್ಸುಗಳನ್ನು ಮತ್ತು ಈ ಸಂಬಂಧ ಕೇಂದ್ರ ಸರ್ಕಾರವು ಕೈಗೊಳ್ಳಲಿರುವ ಕ್ರಮಗಳನ್ನು ನಿರೀಕ್ಷಿಸುತ್ತಿದ್ದೇವೆ. ಅನಂತರ, ಮೂರು ವರ್ಷಗಳ ಸತತ ಬರಗಾಲದಿಂದಾಗಿ ಸಾಲದ ಹೊರೆಯಿಂದ ಬಳಲುತ್ತಿರುವ ರೈತರ ಸಹಕಾರಿ ಬ್ಯಾಂಕುಗಳ ಕೃಷಿ ಸಾಲಗಳ ಮೇಲಿನ ಬಡ್ಡಿ ಮತ್ತು ಸುಸ್ಥಿಬಡ್ಡಿಯನ್ನು ಮನ್ನಾ ಮಾಡಲು ಪರಿಗಣಿಸಲಿದ್ದೇವೆ.' ಎಂದು ಹೇಳಿದ್ದೀರಿ.

ಅಂದರೆ, ಕೇಂದ್ರ ಸರ್ಕಾರ ತಮ್ಮ ಮುಂಗಡ ಪತ್ರದಲ್ಲಿ, ಕೃಷಿ ಸಾಲಗಳನ್ನು ಎರಡು ಪಟ್ಟು ಹೆಚ್ಚಿಸಲು ಬ್ಯಾಂಕುಗಳ ಮೂಲಕ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರಲ್ಲಾ, ಅದು ಕಾರ್ಯಗತವಾದ ಮೇಲೆ ಈ ಸುಸ್ತಿ ಬಡ್ಡಿಯನ್ನು ಕೊಡುತ್ತೀರೋ ಅಥವಾ ಅವರು ಈಗ ಘೋಷಣೆ ಮಾಡಿರುವ ಪ್ರಕಾರ ಮುಂದಿನ ವರ್ಷದಿಂದ ಸುಸ್ತಿ ಮತ್ತು ಚಕ್ರಬಡ್ಡಿ ಇಲ್ಲದ ಹಾಗೆ ನಿರ್ದೇಶನ ಕೊಡುತ್ತಾರೆಯೇ ಎನ್ನುವುದನ್ನು ತಿಳಿದುಕೊಳ್ಳಲು ನಾನು ಅಪೇಕ್ಷೆ ಪಡುತ್ತಿದ್ದೇನೆ. ಮತ್ತು ಕೃಷಿಯನ್ನು ಉದ್ಯಮವಾಗಿ ಪರಿವರ್ತಿಸುವ ಅಗತ್ಯವಿದೆ ಎಂದು ಹೇಳುತ್ತಾರೆ. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಹೇಳಲು ಇಷ್ಟಪಡುತ್ತೇವೆ. ಮಲೆನಾಡಿನವರಾದ ನಾವುಗಳು ಅಂದರೆ ಅದು ಚಿಕ್ಕಮಗಳೂರು ಇರಬಹುದು, ಪಾರ್ಟ್ ಆಫ್ ಹಾಸನ್ ಇರಬಹುದು ಮತ್ತು ಸಂಪೂರ್ಣ ಕೊಡಗಿನಲ್ಲಿ ಇರುವಂಥ ನಾವು ಕಾಫಿಯನ್ನು ಬೆಳೆಯತಕ್ಕಂಥ ರೈತರು. ನಮ್ಮನ್ನು ಪ್ಲಾಂಟರ್ಸ್‌ಗಳು ಎಂದು ಕರೆದು ಬಿಟ್ಟರು. ಅಧಿಕಾರಿಗಳು ಎಲ್ಲರೂ ಕೂಡ ನಮ್ಮನ್ನು ಪ್ಲಾಂಟರ್ಸ್ ಎಂದು ಕರೆಯುತ್ತಾರೆ. ಆದರೆ ನಾವು ಪ್ಲಾಂಟರ್ಸ್‌ಗಳಲ್ಲ, ನಾವು ಕಾಫಿಯನ್ನು ಬೆಳೆಯತಕ್ಕಂಥ ರೈತರು. 1998ನೇ ಇಸವಿಯಿಂದ ಅಂದರೆ ಕಳೆದ ಆರು ವರ್ಷಗಳಿಂದ ಕಾಫಿ ಬೆಲೆ ದಿವಸದಿಂದ ದಿವಸಕ್ಕೆ ಇಳಿಯುತ್ತಲೇ ಇದೆ. ನಾನೂ ಕೂಡ ಒಬ್ಬ ಕಾಫಿ ಬೆಳೆಗಾರ. ಈ ಸಂಕಷ್ಟದ ಪರಿಸ್ಥಿತಿಯಲ್ಲಿ ಕಾಫಿ ಬೆಳೆಗಾರರಾದ ನಾವುಗಳು ನಮಗೆ ಸಹಾಯ ಮಾಡಬೇಕೆಂದು ಕೇಂದ್ರ ಸರ್ಕಾರವನ್ನು ಕೇಳಿದೆವು. ನಾವು ಒಟ್ಟು ಎರಡು ಲಕ್ಷ ರೈತರು ಕಾಫಿ ಬೆಳೆಯನ್ನು ಬೆಳೆಯುತ್ತಿದ್ದೇವೆ. ಅದರಲ್ಲಿ ಶೇಕಡಾ 98ರಷ್ಟು ಸಣ್ಣ ಮತ್ತು ಅತಿಸಣ್ಣ ರೈತರುಗಳಿದ್ದೇವೆ. ಶೇಕಡಾ 70ರಷ್ಟು ಉತ್ಪಾದನಾ ವೆಚ್ಚ ಸಂಬಳದ ರೂಪದಲ್ಲಿ ಹೋಗುತ್ತದೆ. ತಮಗೆ ಗೊತ್ತಿದೆಯೋ, ಇಲ್ಲವೋ, ಕಾಫಿ ಬೆಳೆಯನ್ನು ಅವಲಂಬಿಸಿಕೊಂಡು 10 ಲಕ್ಷ ಕುಟುಂಬಗಳು ಕೆಲಸ ಮಾಡುತ್ತಿವೆ. ಇದು ಪರ್ಮನೆಂಟ್ ಮತ್ತು ನಾನ್-ಪರ್ಮನೆಂಟ್ ವರ್ಕರ್ಸ್ ಸೇರಿದಂತೆ. ಮಾನ್ಯ ಆಂಜನೇಯರವರು ಹೇಳಿದ ಹಾಗೆ ಇಲ್ಲಿ ಕೆಲಸ ಮಾಡಲು ಚಿತ್ರದುರ್ಗದಿಂದ ಬರುತ್ತಾರೆ,

ಬಳ್ಳಾರಿಯಿಂದ ಬರುತ್ತಾರೆ, ರಾಣಿಬೆನ್ನೂರಿನಿಂದ ಬರುತ್ತಾರೆ, ಧಾರವಾಡ ಜಿಲ್ಲೆಯಿಂದಲೂ ಕೂಡ ಬರುತ್ತಾರೆ. ಇದರಲ್ಲಿ ನಾಲ್ಕು ತಿಂಗಳು ಕೆಲಸ ಮಾಡತಕ್ಕಂಥ ಚಿಕ್ಕಮಗಳೂರಿನವರೂ ಇದ್ದಾರೆ, ಕೊಡಗಿನಲ್ಲಿ ಯಾವಾಗಲೂ ಕೂಡ ಪರ್ಮನೆಂಟ್ಆಗಿ ಕೆಲಸ ಮಾಡತಕ್ಕಂಥವರು ಇದ್ದಾರೆ. ಕೇಂದ್ರ ಸರ್ಕಾರವಾಗಲೀ, ರಾಜ್ಯ ಸರ್ಕಾರವಾಗಲೀ, ಕಾಫಿ ಬೆಳೆ ಸಮಸ್ಯೆಯನ್ನು ಇವರೆಲ್ಲರ ಸಮಸ್ಯೆ ಎಂದು ಪರಿಗಣಿಸುವುದಿಲ್ಲ, ಸಮಸ್ಯೆ ಇರತಕ್ಕಂಥಾದ್ದು ಬರೀ ಕಾಫಿ ರೈತರಿಗೆ ಸಂಬಂಧಪಟ್ಟಂತೆ ಎಂದು ಹೇಳುತ್ತಾರೆ. ಆದರೆ ಇದು ಕಾಫಿಯನ್ನು ಅವಲಂಬಿಸಿಕೊಂಡಿರತಕ್ಕಂಥ ಸಹಸ್ರಾರು ಕಾರ್ಮಿಕರು, ಅದರ ಸಂಸ್ಕರಣಾ ಕೇಂದ್ರದಲ್ಲಿ ಕೆಲಸ ಮಾಡತಕ್ಕಂಥ ಕಾರ್ಮಿಕರು ಮತ್ತು ಇದರ ವ್ಯಾಪಾರದಲ್ಲಿ ತೊಡಗಿರುವವರೆಲ್ಲರ ಜೀವನವನ್ನು ಮತ್ತು ಮಲೆನಾಡಿನ ಅರ್ಥ ವ್ಯವಸ್ಥೆಯನ್ನು ಅವಲಂಬಿಸಿದೆ. ತಮಗ್ಯಾರಿಗೂ ಗೊತ್ತಿಲ್ಲ, ಒಂದು ಟನ್ ಅರವಿಂದ ಅರೆಬಿಕಾ ಕಾಫಿಯನ್ನು ಉತ್ಪಾದನೆ ಮಾಡಲು 63 ಸಾವಿರ ರೂಪಾಯಿ ಖರ್ಚಾಗುತ್ತದೆ. ಆದರೆ ಅದನ್ನು ಮಾರಾಟ ಮಾಡಿದಾಗ ಬರತಕ್ಕಂಥಾದ್ದು ಕೇವಲ 43 ಸಾವಿರ ರೂಪಾಯಿ. ಅಂದರೆ, ಒಂದು ಟನ್ನಿಗೆ ಒಬ್ಬ ಕಾಫಿ ಬೆಳೆಗಾರನಿಗೆ 20 ಸಾವಿರ ರೂಪಾಯಿ ನಷ್ಟವಾಗುತ್ತದೆ. ರೋಬಸ್ಟೋಗೆ 31 ಸಾವಿರ ರೂಪಾಯಿ ಖರ್ಚಾಗುತ್ತದೆ, ಮಾರಾಟ ಮಾಡಿದಾಗ 14 ಸಾವಿರ ರೂಪಾಯಿ ಮಾತ್ರ ಅವರಿಗೆ ಸಿಗುತ್ತದೆ. ಇದರಲ್ಲಿ 15 ಸಾವಿರ ರೂಪಾಯಿ ನಷ್ಟವಾಗುತ್ತದೆ. ಇದೆಲ್ಲವನ್ನೂ ನಾನು ಪೂರ್ತಿ ಹೇಳಲು ಇಚ್ಛೆಪಡುವುದಿಲ್ಲ. ಈ ಕಾಫಿ ಬೆಳೆಗೆ ಬೆಲೆಯನ್ನು ನಿಗದಿ ಮಾಡತಕ್ಕಂಥವರು ನಾವ್ಯಾರೂ ಅಲ್ಲ. ಕಾಫಿ ಬೆಲೆಯನ್ನು ನಿಗದಿ ಮಾಡತಕ್ಕಂಥವರು market forces in Newyork and London. ನ್ಯೂಯಾರ್ಕ್ ಮತ್ತು ಲಂಡನ್ ಮಾರುಕಟ್ಟೆಯಲ್ಲಿ ಏನು ವ್ಯವಹಾರ ಆಗುತ್ತದೆ, ಅದರ ಆಧಾರದ ಮೇಲೆ ಬೆಲೆ ನಿಗದಿಯಾಗುತ್ತದೆ. ಕೇಂದ್ರ ಸರ್ಕಾರವನ್ನು ನಾವು ಅನೇಕ ಸಾರಿ ಹೇಳಿಕೊಂಡೆವು. ಅಲ್ಲಿ ಏನಾಗಿದೆ ಎಂದರೆ, ಕೇಂದ್ರ ಸರ್ಕಾರ, ವರ್ಲ್ಡ್ ಬ್ಯಾಂಕ್, ಇಂಟರ್‌ನ್ಯಾಷನಲ್ ಮಾನಿಟರಿ ಫಂಡ್ ಮತ್ತು ಇತರ ಹಣಕಾಸಿನ ವ್ಯವಸ್ಥೆಯನ್ನು ಅವಲಂಬಿಸಿಕೊಂಡಿದೆ. ದೆಹಲಿಯಲ್ಲಿ ಇರತಕ್ಕಂಥವರು ಹಾರ್ವರ್ಡ್ ಯೂನಿವರ್ಸಿಟಿಯಲ್ಲೋ ಅಥವಾ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲೋ ಓದಿದವರು. ಆದರೆ ನಮ್ಮ ಅದೃಷ್ಟ ಎಂದರೆ, ಮಾನ್ಯ ಸಿದ್ಧರಾಮಯ್ಯನವರು ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ಗೂ ಹೋಗಿಲ್ಲ, ಹಾರ್ವರ್ಡ್‌ಗೂ ಹೋಗಿಲ್ಲ. ಅವರು ತಮ್ಮ ಜೀವನಚರಿತ್ರೆಯಲ್ಲಿ ಹೇಳುತ್ತಿದ್ದರು, ಅವರು ಮೈಸೂರಿನಲ್ಲಿ ಮರಳಿನಲ್ಲಿ ಅಕ್ಷರಮಾಲೆಯನ್ನು ಕಲಿತು, ಈ ದಿವಸ ಗ್ರಾಮೀಣ ಕರ್ನಾಟಕಕ್ಕೆ ಸಹಾಯವಾಗುವಂಥ ಒಂದು ಬಜೆಟ್ಟನ್ನು ಮಂಡಿಸಿದ್ದಾರೆ. ನಾನು ನಾಲ್ಕು ದಿವಸಗಳಿಂದ ನೋಡುತ್ತಿದ್ದೇನೆ, ಮಾತನಾಡಿದಂಥ ಪ್ರತಿಯೊಬ್ಬರೂ ಇದನ್ನು ಹೇಳಿದ್ದಾರೆ. ಆದರೆ ನಮ್ಮ ದೌರ್ಭಾಗ್ಯವೆಂದರೆ, ಅವರು ಆ ಬಜೆಟ್‌ನಲ್ಲಿ ನಮ್ಮ ಕಾಫಿಯ ಬಗ್ಗೆ ಏನನ್ನೂ ಕಾಣಿಸಿಲ್ಲ. ಮೊನ್ನೆ ನಾವು ಅವರನ್ನು ಮತ್ತು ಮುಖ್ಯಮಂತ್ರಿಯವರನ್ನು ಭೇಟಿ ಮಾಡಿದಾಗ, ಅವರು ಅದನ್ನು ಸಹಾನುಭೂತಿಯಿಂದ ಪರಿಶೀಲಿಸುತ್ತೇವೆ ಎಂದು ಹೇಳಿದರು. ನಾವು ವಿಶ್ವ ಮಾರುಕಟ್ಟೆಯ ವ್ಯವಸ್ಥೆಯನ್ನು ಒಪ್ಪಿಕೊಂಡಿದ್ದೇವೆ. ಗ್ಲೋಬಲೈಸೇಷನ್, ಫ್ರೀ ಎಕಾನಮಿ, ಓಪನ್ ಮಾರ್ಕೆಟ್ ಅಥವಾ ಪಾಟೀಲರು ಹೇಳಿದ ಹಾಗೆ ಗ್ಯಾಟ್ ಅಥವಾ ಡಬ್ಲ್ಯು ಟಿ ಓ, ಈ ಒಪ್ಪಂದಗಳಿಂದ ನಮ್ಮ ರೈತರು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಉತ್ಪನ್ನದ ಜೊತೆ ನಮಗೆ ಸ್ಪರ್ಧೆ ಮಾಡಲು ಸಾಧ್ಯವಿಲ್ಲ. ನಾವು ನಮಗೆ ಸಹಾಯಧನ ಕೊಡಿ ಎಂದು ಕೇಳಿದರೂ, ಕೇಂದ್ರ ಸರ್ಕಾರ ಈ ದಿವಸ ಅದನ್ನು ಕಡಿಮೆ ಮಾಡುತ್ತಿದೆ. ಏಕೆಂದರೆ, ವರ್ಲ್ಡ್ ಬ್ಯಾಂಕ್ ಮತ್ತು ಇತರ ಫೈನ್ಯಾನ್ಸ್

ಏಜೆನ್ಸಿಗಳು ಫಿಸ್ಕಲ್ ಡಿಫಿಸಿಟ್ಟನ್ನು ಹತೋಟಿಯಲ್ಲಿಡಿ ಎಂದು ಹೇಳುತ್ತಾರೆ. ಈ ದಿವಸ ಏನಾಗಿದೆ ಎಂದರೆ, the magnitude of subsidies extended by the developed countries to farmers often outweigh the returns using the justification their subsidies are essential to prevent agriculture from becoming vulnerable to global supply. Japan, U.S. and other European countries provide close to 500 billion annually as support, six times the total amount of aid given to developed countries. An average cow in United States and European countries is given two dollars and seventy cents a day as subsidy. While World Bank estimates so, that goes to 1.2 billion people in developing countries survive on less than one dollar relief and 800 million people across the globe go without a meal every day. ನಾನು ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ಪ್ರತಿಯೊಂದು ಸಾರಿ ಕೇಂದ್ರ ಸರ್ಕಾರದಲ್ಲಿ ಬಜೆಟ್ಟನ್ನು ಮಂಡಿಸುವ ಸಂದರ್ಭದಲ್ಲಿ ಸಬ್ಸಿಡಿಯನ್ನು ತೆಗೆದು ಹಾಕಬೇಕು ಎನ್ನುವಂಥ ಇಲ್ಲೂ ಕೂಡ ಅದೇ ರೀತಿ ಸಬ್ಸಿಡಿಯನ್ನು ತೆಗೆಯಬೇಕು ಎಂದು ಹೇಳುವಂಥ ಸಂದರ್ಭದಲ್ಲಿ, in World market, U.S. subsidies have caused greatest damage, demand for its commodity causing false perception of straight surplus. Developing countries have encountered considerable loss due to the glut in prices. From a development perspective, liberalization of trade and erruption of subsidies may not solve the poverty issues in poorer countries.

ಇದು ಕಾಫಿಗೆ ಅನ್ವಯವಾಗುತ್ತದೆ. ಅದಕ್ಕೋಸ್ಕರವಾಗಿ ಇದನ್ನು ನಾನು ಇಲ್ಲಿ ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ನಾನು ಇನ್ನೊಂದು ವಿಷಯವನ್ನು ಹೇಳಲು ಇಚ್ಛೆಪಡುತ್ತಿದ್ದೇನೆ, ಇತ್ತೀಚೆಗೆ ನಡೆದ ಚುನಾವಣೆಯ ಪೂರ್ವದಲ್ಲಿ, ಹಿಂದಿನ ಕೇಂದ್ರ ಸರ್ಕಾರದ ಜೊತೆ ಎಲ್ಲಾ ಕಾಫಿ ಸಂಘ ಸಂಸ್ಥೆಗಳು ಕಾಡಿದೆವು, ಬೇಡಿದೆವು, ನಾವು ಬಹಳ ಕಷ್ಟ ಪರಿಸ್ಥಿತಿಯಲ್ಲಿ ಸಿಕ್ಕಿಹಾಕಿಕೊಂಡಿದ್ದೇವೆ, ಸಾಲದ ಚಕ್ರವ್ಯೂಹದಲ್ಲಿ ಸಿಕ್ಕಿಹಾಕಿಕೊಂಡಿದ್ದೇವೆ, ನಮ್ಮ ಸಾಲವನ್ನು ಮನ್ನಾ ಮಾಡಿ, ಬಡ್ಡಿಯನ್ನು ಮನ್ನಾ ಮಾಡಿ ಎಂದು ಕೇಳಿದ್ದೆವು. ಕೇಂದ್ರದ ಅರ್ಥಸಚಿವರೇ ಚಿಕ್ಕಮಗಳೂರಿಗೆ, ಕೊಡಗಿಗೆ, ಮಡಿಕೇರಿಗೆ ಬಂದಿದ್ದರು. ಅವರ ಜೊತೆ ಆಗಿನ ಡಿಫೆನ್ಸ್ ಮಿನಿಸ್ಟರ್ ಜಾರ್ಜ್ ಫರ್ನಾಂಡಿಸ್ ಮತ್ತು ಇನ್ನೊಬ್ಬರು ಕರ್ನಾಟಕದ ಪ್ರಸಿದ್ಧ ಮಂತ್ರಿಗಳೂ ಕೂಡ ಬಂದಿದ್ದರು. ನಾವು ಅವರಲ್ಲಿ ನಿವೇದನೆ ಮಾಡಿದಾಗ, ಅವರೆಲ್ಲಾ ನಿಮ್ಮ ಬಡ್ಡಿಯನ್ನು ಮನ್ನಾ ಮಾಡುತ್ತೇವೆ ಎಂದು ಹೇಳಿದರು. ಕೇಂದ್ರದ ಅರ್ಥಸಚಿವರು ಮಡಿಕೇರಿಯಲ್ಲಿ ಹೇಳಿದರು. I am also Rajasthan Coorgi ಎಂದು ಇವರು ನುಡಿದಂತೆ ನಡೆಯುತ್ತಾರೆ ಎನ್ನುವ ಮಾತನ್ನು ಅಂದಿನ ಡಿಫೆನ್ಸ್ ಮಿನಿಸ್ಟರ್ ನಮಗೆ ಹೇಳಿದರು. ಆದರೆ ಅವರು ಭರವಸೆಯನ್ನು ನೆರವೇರಿಸಿ ಕೊಡಲು ಆಗಲಿಲ್ಲ. ಅದು ಏಕೆ ಎಂದು ನನಗೆ ಕೂಡ ಗೊತ್ತಾಗಲಿಲ್ಲ. ಈ ಸಾರಿ ಕೂಡ, ದೆಹಲಿಯಲ್ಲಿರುವ ಅರ್ಥ ಸಚಿವರ ಬಳಿಗೆ ಕಾಫಿ ಬೆಳೆಗಾರರ ಡೆಲಿಗೇಷನ್ ಹೋದಂಥ ಸಂದರ್ಭದಲ್ಲಿ ಅವರು, ಸಾಲವನ್ನು ಮನ್ನಾ ಮಾಡಲು ಸಾಧ್ಯವಿಲ್ಲ,

ಬಡ್ಡಿಯನ್ನು ಮನ್ನಾ ಮಾಡುತ್ತೇವೆ ಎಂದು ಹೇಳಿದರು. ಅವರೂ ಕೂಡ ಅವರ ಬಜೆಟ್‌ನಲ್ಲಿ ಇದರ ಬಗ್ಗೆ ಏನನ್ನೂ ಕೂಡ ಹೇಳಿಲ್ಲ. ಆದರೆ industriesಗೆ ಪುನರ್ಶ್ಚೇತನ ಕೊಡಲಿಕ್ಕೆ ರೂ. 16500 ಕೋಟಿ ರೂಯನ್ನು ಕೊಡಲಿಕ್ಕೆ ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಮೀಸಲಿಟ್ಟಿದ್ದಾರೆ. ಅದರಿಂದ ನನಗಂತೂ ಕೂಡ ಅರ್ಥವಾಗುವುದಿಲ್ಲ. ಯಾವ ರೀತಿಯಲ್ಲಿ ಕೇಂದ್ರ ಸರ್ಕಾರದಲ್ಲಿ ಈ Coffee Industryಯನ್ನು ಈ ಕಾಫಿ ಬೆಳೆಯನ್ನು distort ಮಾಡಿದೆ ಎಂದು ಹೇಳತಕ್ಕಂಥದ್ದು. ಮಾನ್ಯ ಅಧ್ಯಕ್ಷರೆ, ಈ ವಿಷಯದಲ್ಲಿ ನಿಮ್ಮ ಗಮನಕ್ಕೆ ತರಲಿಕ್ಕೆ ಇಚ್ಛೆಪಡುವುದೇನೆಂದರೆ, ಹಿಂದಿನ Union Minister for Agriculture ಅವರು ಗುಂಟೂರಿನಲ್ಲಿ ಒಂದು ಭಾಷಣ ಮಾಡಿದ್ದರು. ಅದನ್ನು ನಾನು ಇಲ್ಲಿ ಓದಲಿಕ್ಕೆ ಇಚ್ಛೆಪಡುತ್ತಿದ್ದೇನೆ. ನಮ್ಮ ಅರ್ಥವ್ಯವಸ್ಥೆಯನ್ನು ಈ World Bank ನ IMF ನವರು infact Americans, U.S. Government, how it is controlling our economy ಎಂದು ಹೇಳತಕ್ಕಂಥದ್ದು ಇದರಲ್ಲಿ ಅರ್ಥವಾಗುತ್ತದೆ. ಇದರಲ್ಲಿ Mr. Singh said: Successive Governments since Independence favoured industrialists and employees at the cost of farmers. ಮೊದಲು ಹೇಳುತ್ತಾರೆ: He said his cabinet colleagues were reluctant to come to the rescue to farmers and bureaucrats were indifferent to their plight. The cabinet discussed for more than three hours this proposals to waive a year's interest on crop loans to provide relief to farmers badly hit by drought even after the cabinet passed to the prime minister who later announced a 20% waiver. In another instance, Mr. Singh said his proposal to increase wheat procurement price by Rs. 50 a quintal was discussed by the cabinet for two and half hours. Finally, it was decided to increase it by rupees ten a quintal with financial burden of only Rs. 200 crores. But, the very cabinet which was very reluctant, Mr. Singh said, the same cabinet approved DA hike which would cost the exchequer Rs. 1,800 crores. ರೈತರಿಗೆ price increase ಮಾಡಲಿಕ್ಕೆ ಎರಡೂವರೆ ಗಂಟೆ discuss ಮಾಡುತ್ತಾರೆ. ಅವರಿಗೆ 200 ಕೋಟಿ ರೂಪಾಯಿ ಹೆಚ್ಚಿಗೆ ಕೊಡುವುದಕ್ಕೆ ಒಪ್ಪಿಗೆ ಕೊಡುತ್ತಾರೆ. 3000 ಕೋಟಿ. ರೂ. ನಲ್ಲಿ ಬರೀ ರೂ. 200 ಕೋಟಿ ರೂ. ಅಷ್ಟೆ. ಆದರೆ ಸರ್ಕಾರಿ ನೌಕರರಿಗೆ D.A. hike ಮಾಡಲಿಕ್ಕೆ ರೂ. 1800 ಕೋಟಿ ರೂ. ಗೆ ಒಪ್ಪಿಗೆ ಕೊಡುತ್ತಾರೆ. In the worst ever drought since Independence, the Centre released Rs. 3,000 crores for drought relief. Funny arguments... ಮಾನ್ಯ ಅಧ್ಯಕ್ಷರೆ, ದಯಮಾಡಿ ಇದನ್ನು ಕೇಳಬೇಕು. Funny arguments were put forward to reduce the relief to farmers. Rs. 13,500 crores were sanctioned to bail out investors in the UTI schemes without hesitation. ಹದಿಮೂರುವರೆ ಸಾವಿರ ಕೋಟಿ ರೂಪಾಯಿಗಳು UTI ನಲ್ಲಿ ಏನು ಅವ್ಯವಹಾರವಾಯಿತು, ಅದಷ್ಟನ್ನೂ to bail out them ಕೇಂದ್ರ ಸರ್ಕಾರ ಹದಿಮೂರುವರೆ

ಸಾವಿರ ಕೋಟಿ ರೂಪಾಯಿಗಳನ್ನು ಕೊಡುತ್ತದೆ. ಇಂಥ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. He was not finding fault with anyone, Finance Minister, in particular. But, this has been the situation since Independence. In 1990 the Centre wanted to waive Bank loans to farmers to the extent of Rs. 10,000 crores, the aggregate of Rs. 13,500 crores. The Centre wanted to stagger, it was fine so that the annual burden would be only Rs. 2,500 crores. There was a hue and cry from economists, bankers, academicians, who said that economy would go to the dogs. ರೈತರಿಗೆ ಏನಾದರೂ ಸಹಾಯ ಮಾಡುವ ಸಂದರ್ಭದಲ್ಲಿ ಈ ದೇಶದಲ್ಲಿ ಅರ್ಥವ್ಯವಸ್ಥೆ ಎಲ್ಲಾ ನಾಯಿಗಳಿಗೆ ಹೋಗುತ್ತವೆ ಎಂದು ಅವರು ಹೇಳುತ್ತಾರೆ. ಆದರೆ ಅವರಿಗೆ ಏನಾದರೂ ಲಾಭ ಬರುವ ಸಂದರ್ಭದಲ್ಲಿ ಏಕಾಏಕಿ ಎಲ್ಲರೂ ಕೂಡ ಬೇರೆ ತೀರ್ಮಾನ ತೆಗೆದುಕೊಳ್ಳುತ್ತಾರೆ. ನಾನು ಹೆಚ್ಚಿಗೆ ಸಮಯವನ್ನು ಮಾತನಾಡುವುದಕ್ಕೆ ತೆಗೆದುಕೊಳ್ಳುವುದಿಲ್ಲ. ಕಳೆದ ಅಧಿವೇಶನದಲ್ಲಿ ಹಿಂದಿನ ಸರ್ಕಾರ ಏನಿತ್ತು ಆ ಸರ್ಕಾರ ಈಗಿಲ್ಲ. ಆ ವರ್ಷ ಅವರು vote on account ತೆಗೆದುಕೊಂಡರು. Vote on Account ತೆಗೆದುಕೊಂಡಿರುವುದರಲ್ಲಿ ಹಿಂದಿನ ಸರ್ಕಾರ ಮತ್ತು ಮುಖ್ಯಮಂತ್ರಿಗಳು 32 ಕೋಟಿ ರೂಪಾಯಿಗಳ ಪರಿಹಾರವನ್ನು ಬಡ್ಡಿ ಮನ್ನಾ ಮಾಡಲಿಕ್ಕೆ ತೀರ್ಮಾನವನ್ನು ಇಲ್ಲಿ ತೆಗೆದುಕೊಂಡರು. ಅದಾದಮೇಲೆ ಅದು ವಿಧಾನಪರಿಷತ್ತಿಗೆ ಹೋದಾಗ ರೂ. 32 ಕೋಟಿ ರೂ. ಅಲ್ಲ, ಇದು ರೂ. 39 ಕೋಟಿ 25 ಲಕ್ಷ ರೂ. ಎಂದು ಆಯಿತು. ಅದನ್ನು ತಿದ್ದುಪಡಿ ಮಾಡಿ ಅಲ್ಲಿ ಮಂಜೂರಾಯಿತು. ವಿಧಾನಸಭೆಯಲ್ಲಿ ಮತ್ತು ವಿಧಾನಪರಿಷತ್ತಿನಲ್ಲಿ ಅಂದಿನ ಸರ್ಕಾರ ಏನು ತೀರ್ಮಾನವನ್ನು ಕೈಗೊಂಡಿತು. ಆ ತೀರ್ಮಾನವನ್ನು Finance Department ನವರು ಸರ್ಕಾರಿ ಆಜ್ಞೆಯನ್ನು ಹೊರಡಿಸಲಿಲ್ಲ. Both the Houses of legislature, ವಿಧಾನಸಭೆ ಮತ್ತು ವಿಧಾನಪರಿಷತ್ತು ಏನು ಒಂದು ತೀರ್ಮಾನವನ್ನು ಕೈಗೊಂಡರು ಅದಕ್ಕೆ Finance Department ನ ಒಬ್ಬರು ಅಥವಾ ಇಬ್ಬರು ಅಧಿಕಾರಿಗಳು ಆ ಸರ್ಕಾರಿ ಆಜ್ಞೆಯನ್ನು ಹೊರಡಿಸದೆ ಈ ವಿಧಾನಸಭೆ ಮತ್ತು ವಿಧಾನಪರಿಷತ್ತಿಗೆ ಅವಮಾನ ಮಾಡಿದ್ದಾರೆ. Is it not an act of defying the two Houses of legislature? Have they got the powers to over ride the decision taken by both the Houses? ದಯವಿಟ್ಟು ಇದನ್ನು ತಾವು ಬಹಳ serious ಆಗಿ ನೋಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತಿದ್ದೇನೆ. ಇನ್ನು ಕೆಲವು ವಿಷಯಗಳನ್ನು ಮಾತನಾಡಬೇಕೆಂದಿದ್ದೆ. ಸಮಯದ ಅಭಾವ ಇರುವುದರಿಂದ ಆದಷ್ಟು ಬೇಗನೆ ಮುಗಿಸುತ್ತೇನೆ. ಆದ್ದರಿಂದ ಈ ದಿವಸ ನಮ್ಮ ಕಾಫಿ ಬೆಳೆಯತಕ್ಕಂಥ ರೈತರು ಏನು ಸಂಕಷ್ಟದ ಸುಳಿಯಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ ಅವರ ಸಹಾಯಕ್ಕೆ ಮಾನ್ಯ ಅರ್ಥಸಚಿವರು ಬರಬೇಕು. ಈ ವರ್ಷ ಕೂಡ ಚೆನ್ನಾಗಿ ಮಳೆಯಾಗಿಲ್ಲ. ಮೃಗಶಿರ ಮಳೆ ಚೆನ್ನಾಗಿ ಬಂತು. ಆದರೆ ಆರಿದ್ರ ಪುನರ್ವಸು ಮಳೆ ಚೆನ್ನಾಗಿ ಬರಲಿಲ್ಲ. ಈ ಮಳೆಯಿಲ್ಲದೆ ಎಲ್ಲಾ ಕಾಫಿ ತೋಟಗಳು ಹಾಳಾಗಿವೆ. ಅಲ್ಲಿ borer ಎಂದು ಹೇಳತಕ್ಕಂಥ ಒಂದು pest ಒಂದು ಲಕ್ಷಾಂತರ, ಕೋಟ್ಯಾಂತರ ಗಿಡಗಳು ಹಾಳಾಗಿವೆ. ನಮ್ಮ ಕೊಡಗಿನಲ್ಲಿ ಕೇವಲ 42 ಇಂಚು ಮಳೆ ಬಂದಿದೆ. ಇಷ್ಟೊತ್ತಿಗೆ ನಮ್ಮಲ್ಲಿ ಹೆಚ್ಚುಕಡಿಮೆ 80–90 ಇಂಚು ಮಳೆ ಆಗಬೇಕಾಗಿತ್ತು. ಇಂಥ ಕಷ್ಟದ

ಪರಿಸ್ಥಿತಿಯಲ್ಲಿ ಮುಂದಿನ ವರ್ಷವೂ ಕೂಡ ಕಾಫಿ ಬೆಳೆ ಕಡಿಮೆಯಾಗುತ್ತದೆ. ಬೆಲೆಯೂ ಕಡಿಮೆ ಹಾಗೆಯೇ ಬೆಳೆಯೂ ಕಡಿಮೆ. ಆದ್ದರಿಂದ ನಮ್ಮ ಅರ್ಥ ಮಂತ್ರಿಗಳು ರಿಲೀಫ್ ಏನು ಕೊಡಬೇಕೆನ್ನುವುದರ ಬಗ್ಗೆ ನಾನು ಪತ್ರದ ಮುಖಾಂತರ ಅವರಿಗೆ ನಿವೇದನೆ ಮಾಡಿದ್ದೇನೆ. ದಯಮಾಡಿ ಈ ರಿಲೀಫನ್ನು ಕಾಫಿ ಬೆಳೆಯುವ ರೈತರಿಗೆ ಕೊಡಬೇಕೆಂದು ಪ್ರಾರ್ಥನೆ ಮಾಡಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು .: ಈಗ ಶ್ರೀ ಕಾರಜೋಳರವರು ಮಾತನಾಡಬೇಕು. ಈಗ 4-50 ಗಂಟೆಗೆ Governor ರವರು ಎಲ್ಲಾ ಶಾಸಕರ್ನು ಟೀಗೆ ಕರೆದಿದ್ದಾರೆ. 4-50 ಗಂಟೆಗೆ ನಾವು adjourn ಮಾಡಬೇಕು. ಆದ್ದರಿಂದ ದಯಮಾಡಿ ತಾವು 10 ನಿಮಿಷದೊಳಗೆ ಮುಗಿಸಬೇಕು.

† **ಶ್ರೀ ಕಾರಜೋಳ ಗೋವಿಂದ ಮಕಟಪ್ಪ (ಮುಧೋಳ)** : ಸನ್ಮಾನ್ಯ ಅಧ್ಯಕ್ಷರೆ, ಈ ರಾಜ್ಯದ 12ನೇ ವಿಧಾನಸಭೆಯ ಮೊಟ್ಟಮೊದಲನೆಯ ಅಧಿವೇಶನಕ್ಕೆ ನಮ್ಮ ಊರಿನಿಂದ ನಾನು ರಸ್ತೆಯ ಮೂಲಕ ಬೆಂಗಳೂರಿಗೆ ಬಂದೆ. ಬೆಂಗಳೂರಿಗೆ ಬರುವಷ್ಟೊತ್ತಿಗೆ ಈ ಹಾಳಾದ ರಸ್ತೆಯಲ್ಲಿ ನನಗೆ ಬಹಳ ಸುಸ್ತಾಗಿತ್ತು, ದಣಿವಾಗಿತ್ತು, ಬೆಂಗಳೂರಿಗೆ ಬಂದ ಕ್ಷಣ "ಅಂದು ದೇವರಾಜ ಅರಸುರವರು ಇಂದು ಧರ್ಮಸಿಂಗ್‌ರವರು" ಎನ್ನತಕ್ಕಂಥ ಕೆಲವು ಪೋಸ್ಟರುಗಳು ಬ್ಯಾನರ್‌ಗಳು ನನ್ನ ಕಣ್ಣಿಗೆ ಕಂಡವು. ಉತ್ತರ ಕರ್ನಾಟಕದ ಒಬ್ಬ ಹಿಂದುಳಿದ ಮನುಷ್ಯ ಈ ರಾಜ್ಯದಲ್ಲಿ ಅತ್ಯುತ್ತಮ ಮುಖ್ಯಮಂತ್ರಿಯಾಗಿ ಹೋದಂಥ ದೇವರಾಜ ಅರಸರ ಮಟ್ಟಕ್ಕೆ ಬೆಳೆದರಲ್ಲಾ ಎಂದು ನಾನು ಬಹಳ ಸಂತೋಷಪಟ್ಟೆ. ಈ ಬಜೆಟ್ ಮಂಡನೆ ಆದಮೇಲೆ ನನಗೇಕೋ ಬಹಳ ನಿರಾಶೆಯಾಯಿತು. ಈ ರಾಜ್ಯಕ್ಕೆ ಹಿಂದುಳಿದ ವರ್ಗದ ಒಬ್ಬ ನಾಯಕರು ದೇವರಾಜ ಅರಸರ ಸರಿಸಮಾನವಾಗಿ ಈ ಸಾಮಾಜಿಕ ನ್ಯಾಯಕ್ಕೆ ಬದ್ಧರಾಗಿ ಬಜೆಟ್ ಮಂಡಿಸುತ್ತಾರೆಂದು ನಾನು ನಂಬಿಕೊಂಡಿದ್ದೆ. ಆದರೆ ಈ ಬಜೆಟ್‌ನಲ್ಲಿ ಏನೂ ಅರ್ಥವಿಲ್ಲವೆಂದು ಬಜೆಟ್ ನೋಡಿದ ಮೇಲೆ ನನಗನ್ನಿಸಿತು. ನಾನು ಪರಿಶಿಷ್ಟ ಜಾತಿ ಜನಾಂಗದ ಮೀಸಲು ಕ್ಷೇತ್ರವನ್ನು ಪ್ರತಿನಿಧಿಸಿದಂಥ ವ್ಯಕ್ತಿ. ಈ ರಾಜ್ಯದಲ್ಲಿ 1 ಕೋಟಿ 8 ಲಕ್ಷ ಪರಿಶಿಷ್ಟ ಜಾತಿ ಜನಾಂಗದವರು ಇದ್ದಾರೆ. 1 ಕೋಟಿ 8 ಲಕ್ಷ ಜನರಲ್ಲಿ ಹಳ್ಳಿಯೊಳಗೆ ಕುಳಿತು ಚಪ್ಪಲಿ ಹೊಲಿಯುವ ಚಮ್ಮಾರನಿಂದ ಹಿಡಿದು ಚಾಪೆ ಎಣಿಯುವವರ ವರೆಗೆ ಮತ್ತು ಈ ರಾಜ್ಯದಲ್ಲಿರತಕ್ಕಂಥ ದೊಡ್ಡ ದೊಡ್ಡ ಹುದ್ದೆಗಳಲ್ಲಿರತಕ್ಕಂಥ IAS, IFS ಮತ್ತು IPS ಎಲ್ಲಾ ಹಿರಿಯ ಶ್ರೇಣಿಯ ಅಧಿಕಾರಿಗಳು ಸೇರಿ ಒಟ್ಟು 4 ಲಕ್ಷ ಜನ ಬಡತನ ರೇಖೆಗಿಂತಲೂ ಮೇಲಿದ್ದಾರೆ.

4.40 ಪಿ.ಎಂ

ಹಾಗಾದರೆ, 1 ಕೋಟಿ 4 ಲಕ್ಷ ಜನರ ಸ್ಥಿತಿಗತಿ ಏನು? ಅವರಿಗಾಗಿ ಬಡ್ಜೆಟ್‌ನಲ್ಲಿ ಏನು ಮಾಡಿದ್ದೀರಿ? ಮೊನ್ನೆ ನಡೆದ ಚುನಾವಣೆಯಲ್ಲಿ ಏನು 1 ಕೋಟಿ 8 ಲಕ್ಷ ಜನ ಪರಿಶಿಷ್ಟ ಜಾತಿ, ಜನಾಂಗದವರಿದ್ದಾರೆ.....

ಶ್ರೀ ಡಿ.ಆರ್. ಪಾಟೀಲ್ : ಎಲ್ಲಾ ಪ್ಲಾನ್‌ಫಂಡ್‌ನೊಳಗೆ 20 percent is reserved for SCs and STs.

ಶ್ರೀ ಗೋವಿಂದ ಎಂ. ಕಾರಜೋಳ : ನಾನು ಅಲ್ಲಿಗೇ ಬರುತ್ತೇನೆ. ನಿಮಗೆ ಅಂಕಿ-ಸಂಖ್ಯೆ ಕೊಡುತ್ತೇನೆ. ಮೊನ್ನೆ ನಡೆದ ಚುನಾವಣೆಯಲ್ಲಿ ಈ ರಾಜ್ಯದ ಪ್ರಬುದ್ಧ ಮತದಾರ ಪರಿಶಿಷ್ಟ ಜಾತಿ, ಜನಾಂಗದವರು ಈ ಮನೆಯಲ್ಲಿರುವ 224 ಜನರಿಗೆ ಮತ ನೀಡಿ ಆಶೀರ್ವದಿಸಿ ಆರಿಸಿ ಕಳುಹಿಸಿದ್ದಾರೆ. ಅದರ ಬಗ್ಗೆ ಚಿಂತನೆ ನಡೆಯಬೇಕಲ್ಲವೇ? ಇಷ್ಟೇ ಅಲ್ಲ, ಈ ರಾಜ್ಯದಲ್ಲಿ 52 ಲಕ್ಷ ಮುಸಲ್ಮಾನರಿದ್ದಾರೆ. ಮುಸಲ್ಮಾನರ ಮತ ಪಡೆದ ಜೆಡಿ(ಎಸ್), ಕಾಂಗ್ರೆಸ್‌ನವರು...

ಶ್ರೀ ಡಿ.ಟಿ. ಜಯಕುಮಾರ್ : 3 ರೂಪಾಯಿಗೇನು ಕೆ.ಜಿ. ಅಕ್ಕಿ ಕೊಡುತ್ತಿದ್ದಾರೆ, ಅದನ್ನು ಅವರು ಯಾರೂ ತೆಗೆದುಕೊಳ್ಳುವುದಿಲ್ಲವೇ? ಎಸ್‌ಸಿ:ಎಸ್‌ಟಿ ಯವರು ತೆಗೆದು-ಕೊಳ್ಳುವುದಿಲ್ಲವೇ?

ಅಧ್ಯಕ್ಷರು : ಅದೆಲ್ಲಾ ಬೇಡಿ. ಬಜೆಟ್ ಬಗ್ಗೆ ಮಾತನಾಡಿ.

ಶ್ರೀ ಗೋವಿಂದ ಎಂ. ಕಾರಜೋಳ : ಇವರಲ್ಲದೆ, ರಾಜ್ಯದಲ್ಲಿ ದೇವದಾಸಿಯರಿದ್ದಾರೆ. ಸರ್ಕಾರದ ಬಳಿ ಮಾಹಿತಿ ಇದ್ದರೆ ಹೇಳಲಿ. ಈ ರಾಜ್ಯದಲ್ಲಿ 4 ಲಕ್ಷ 82 ಸಾವಿರದ 16 ಜನ ದೇವದಾಸಿಯರಿದ್ದಾರೆ. ಯಾರು ನಿಮ್ಮ ಉದ್ಯೋಗವೇನು ಎಂದು ಕೇಳುತ್ತಾರೆ, ಅವರಿಗೆ ಇವರು ವೇಶ್ಯಾವೃತ್ತಿ ಮಾಡಿ ಬದುಕುತ್ತಿದ್ದೇವೆಂದು ಬಾಯಿ ಬಿಟ್ಟು ಏನು ಹೇಳುತ್ತಾರೆ, ಅಂಥ ಜನ 4 ಲಕ್ಷದ 82 ಸಾವಿರದ 16 ಇದ್ದಾರೆ. ಅವರಿಗೇನಾದರೂ ಬಜೆಟ್‌ನಲ್ಲಿ ಮಾಡಬೇಕಲ್ಲವೇ? ಅವರಿಗಾಗಿ ಚಿಂತನೆ ಮಾಡಬೇಕಲ್ಲವೇ? ಈ ದೇಶದಲ್ಲಿ ಸಾವಿರಾರು ವರ್ಷಗಳಿಂದ ವೇಶ್ಯಾವಾಟಿಕೆ ನಡೆದಂಥಾದ್ದು, ದೇವದಾಸಿ ಪದ್ಧತಿ ಬಂದಂಥಾದ್ದು. ಇನ್ನೂ ಎಷ್ಟು ವರ್ಷ ಇದು ಮುಂದುವರಿಯಬೇಕು? ದೇಶಕ್ಕೆ ಸ್ವಾತಂತ್ರ್ಯ ಬಂದು 56 ವರ್ಷಗಳ ಮೇಲೆ ಕೂಡ, ಇವತ್ತು 4 ಲಕ್ಷ 82 ಸಾವಿರ ಜನ ನಾವು ಹೊಟ್ಟೆಗಾಗಿ, ಹಿಡಿ ಅನ್ನಕ್ಕಾಗಿ ದೇವದಾಸಿಯರಾಗಿದ್ದೇವೆಂದು ಹೇಳುತ್ತಾರೆಂದರೆ, ಇದು ನಾಚಿಕೆ ಪಟ್ಟುಕೊಳ್ಳುವುದಲ್ಲವೇ? ಅವರ ಬಗ್ಗೆ ಸರ್ಕಾರವೇನಾದರೂ ಈ ಬಜೆಟ್‌ನಲ್ಲಿ ಮಾಡಬೇಕಲ್ಲವೇ? ಅವರಿಗಾಗಿ ವಿಶೇಷ ಯೋಜನೆಗಳನ್ನು ಮಾಡಬೇಕಲ್ಲವೇ? ಅವರ ಮಕ್ಕಳಿಗೆ ವಿಶೇಷ ವಸತಿ ಶಾಲೆಗಳನ್ನು ಮಾಡಬೇಕಲ್ಲವೇ? ಇವತ್ತು ಈ ರಾಜ್ಯದಲ್ಲಿ ಪರಿಶಿಷ್ಟ ಜಾತಿ, ಜನಾಂಗದವರಿಗೆ ಎಷ್ಟು ಹಣವಿಟ್ಟಿದ್ದಾರೆನ್ನುವುದನ್ನು ಬಹಳ ಸ್ಪಷ್ಟವಾಗಿ ತಮ್ಮ ಮುಂದೆ ಹೇಳಬಯಸುತ್ತೇನೆ. ಈ ರಾಜ್ಯದ ಬಜೆಟ್ 12,322.92 ಕೋಟಿ ರೂ. ಇದು ಪ್ಲಾನ್ಡ್ ಬಜೆಟ್. ಈ ರಾಜ್ಯದಲ್ಲಿ ಶೇ. 22.7 ಪರ್ಸೆಂಟ್ ಜನ ಎಸ್‌ಸಿ:ಎಸ್‌ಟಿ ಇದ್ದಾರೆ. ಅದರ ಪ್ರಕಾರ, ಜನಸಂಖ್ಯೆ ಇವತ್ತು ನಮ್ಮ ದೇಶದಲ್ಲಿ ಬಜೆಟ್ ಅಲೋಕೇಷನ್ ಸಹ ಜನಸಂಖ್ಯೆಯ ಆಧಾರದ ಮೇಲೆ ಆಗುತ್ತದೆ. ಅದರ ಪ್ರಕಾರ ಆಗಬೇಕಿದ್ದರೆ ಪರಿಶಿಷ್ಟ ಜಾತಿ, ಜನಾಂಗದವರಿಗೆ 2,907 ಕೋಟಿ ರೂ. ಗಳನ್ನು ಸರ್ಕಾರ ಇಡಬೇಕಾಗುತ್ತದೆ. ಆದರೆ, ಇಟ್ಟಿದ್ದೆಷ್ಟು? 563.60 ಕೋಟಿ ರೂ.ಗಳನ್ನು ಮಾತ್ರ ಇಟ್ಟಿದ್ದಾರೆ. ಯಾವ ಜನಾಂಗಕ್ಕೆ 18 ಪರ್ಸೆಂಟ್ ನಷ್ಟು ಬಜೆಟ್‌ನಲ್ಲಿ ಮೀಸಲಿಡಬೇಕಾಗಿತ್ತು. ಅವರಿಗೆ ಕೇವಲ 5 ಪರ್ಸೆಂಟ್‌ನಷ್ಟು ಮೀಸಲಿಟ್ಟಿದ್ದಾರೆ. ಅದಕ್ಕಿಂತಲೂ ಕಡಿಮೆಯಿದೆ. ಕಳೆದ 2003-04ನೇ ಸಾಲಿನಲ್ಲಿ 83 ಕೋಟಿ ರೂ.ಗಳನ್ನು ಎಸ್‌ಸಿಪಿಯಲ್ಲಿ ಇಟ್ಟಿದ್ದರು. ಇವತ್ತು 2004-05ನೇ ಸಾಲಿಗೆ ರಾಜ್ಯದಲ್ಲಿ ಕೇವಲ 37.01 ಕೋಟಿ ರೂ.ಗಳನ್ನು ಅವರಿಗಾಗಿ ಇಟ್ಟಿದ್ದಾರೆ. ಇದರಿಂದೇನು ನಾವು ಆಶ್ರಯ ಮನೆಗಳನ್ನು .....

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) : ಪೂಲ್ ಮಾಡಿದ ಹಣದ ಬಗ್ಗೆ ಹೇಳಲಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ : ಪೂಲ್ ಮಾಡಿದ್ದನ್ನು ಹೆಚ್ಚು ಮಾಡಿದ್ದರೆ, ಬಹಳ ಥ್ಯಾಂಕ್ಸ್. ಇದೇ ಸದನದಲ್ಲಿ ಹೇಳುತ್ತೇನೆ. ಏಕೆಂದರೆ, ಉಪ ಮುಖ್ಯಮಂತ್ರಿಗಳೆ, ರಾಜ್ಯದಲ್ಲಿನ ಶೋಷಿತ ವರ್ಗ ನಿಮ್ಮ ಕಡೆ ನೋಡುತ್ತಿದೆ. ನಿಮ್ಮ ಮೇಲೆ ಬಹಳ ನಿರೀಕ್ಷೆ ಇಟ್ಟುಕೊಂಡಿದ್ದಾರೆ, ಆಶೆ ಇಟ್ಟಿದ್ದಾರೆ. ತಾವು ಅದಕ್ಕೆ ಸ್ಪಂದಿಸುತ್ತೇನೆ ಎಂದು ಹೇಳಿದರೆ, ಈ ಸದನದಲ್ಲಿ ನಾನು ಖುಷಿಪಡುತ್ತೇನೆ. ಪ್ರಾದೇಶಿಕ ಅಸಮಾನತೆ ಬಗ್ಗೆ ಹೇಳಿದೆ, ಅದರ ಬಗ್ಗೆ ಸರ್ಕಾರ ಬಹಳಷ್ಟು ಕಾಳಜಿ ವಹಿಸಿದೆ. ಯಾವ ರೀತಿ ಕಾಳಜಿ ವಹಿಸಿದೆ ಎನ್ನುವುದನ್ನು ತಮ್ಮ ಮುಂದೆ ಹೇಳುತ್ತೇನೆ. ವಿಧಾನಸೌಧದಲ್ಲಿ ಕೆಲಸ ಮಾಡುವವರು 4,500 ಜನರಿದ್ದಾರೆ. ಇವರಲ್ಲಿ ಉತ್ತರ ಕರ್ನಾಟಕದಿಂದ ಬಂದವರು ಕೇವಲ 361 ಮಂದಿ. 108 ಜನ ಶಾಸಕರು ಏನು ಆರಿಸಿ ಬರುತ್ತೀರಿ, ಆ ಕ್ಷೇತ್ರದಿಂದ ಬಂದವರು ಕೇವಲ 361 ಮಂದಿ. ಹಾಗಾದರೆ, ಯಾವ ರೀತಿ ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಕಾಳಜಿ ವಹಿಸುತ್ತೀರಿ? ಈ ರಾಜ್ಯದಲ್ಲಿ ಮುಖ್ಯ ಕಾರ್ಯದರ್ಶಿಗಳಿಂದ ಹಿಡಿದು ಕಸ ಗುಡಿಸುವವನವರೆಗೆ 4 ಲಕ್ಷದ 98 ಸಾವಿರ ನೌಕರರು ಕೆಲಸ ಮಾಡುತ್ತಿದ್ದಾರೆ. ಅವರಲ್ಲಿ ಉತ್ತರ ಕರ್ನಾಟಕದಿಂದ ಬಂದಂಥವರು 1 ಲಕ್ಷದ 50 ಸಾವಿರ ಜನ ನೌಕರರು. ಉತ್ತರ ಕರ್ನಾಟಕ ಎಂದರೆ 108 ಕ್ಷೇತ್ರಗಳಿಂದ ಬಂದಂಥವರು. ಬೀದರ್, ಬಳ್ಳಾರಿ, ರಾಯಚೂರು, ಕೊಪ್ಪಳ, ಗುಲಬರ್ಗಾ, ವಿಜಾಪುರ, ಬಾಗಲಕೋಟೆ, ಬೆಳಗಾವಿ, ಕಾರವಾರ, ಧಾರವಾಡ, ಗದಗ, ಎಲ್ಲಾ ಸೇರಿ 1 ಲಕ್ಷದ 50 ಸಾವಿರ ಜನ ನೌಕರರಿದ್ದಾರೆ. ಹಾಗಾದರೆ, ಉತ್ತರ ಕರ್ನಾಟಕಕ್ಕೆ ಯಾವ ರೀತಿಯಾಗಿ ಕಾಂಪನ್‌ಸೇಟ್ ಮಾಡುತ್ತೀರಿ ಎನ್ನುವುದನ್ನು ಈ ಸದನದಲ್ಲಿ ಹೇಳಬೇಕಾಗುತ್ತದೆ. ಇಂಡಸ್ಟ್ರೀ ಬಗ್ಗೆ ತಮಗೆ ಹೇಳಬಯಸುತ್ತೇನೆ. ತಾವು ನನಗೆ ಹೆಚ್ಚು ಟೈಂ ಕೊಟ್ಟಿಲ್ಲ. ಈ ರಾಜ್ಯದಲ್ಲಿ ಯೂನಿಟ್‌ಗಳಿಗೆ ಸುಮಾರು 3 ಸಾವಿರ ಕೋಟಿ ರೂ.ಗಳ ಬಂಡವಾಳವನ್ನು ರಾಜ್ಯ ಸರ್ಕಾರ ಕೊಟ್ಟಿದೆ. ನಾರ್ತ್ ಕರ್ನಾಟಕದಲ್ಲಿರುವ ರಿಜಿಸ್ಟರ್ಡ್ ಎಸ್‌ಎಸ್‌ಐ ಯೂನಿಟ್ಸ್ 57 ಸಾವಿರದ 569. ಎಂಪ್ಲಾಯ್‌ಮೆಂಟ್ 3 ಲಕ್ಷದ 60 ಸಾವಿರದ 417. ಇನ್‌ವೆಸ್ಟ್‌ಮೆಂಟ್ 56 ಸಾವಿರದ 325 ಲಕ್ಷ ರೂ.ಗಳು. ಸೌತ್ ಕರ್ನಾಟಕದಲ್ಲಿ, 1 ಲಕ್ಷದ 06 ಸಾವಿರದ 961 ಯೂನಿಟ್ಸ್ ಇದ್ದು, ಎಂಪ್ಲಾಯ್‌ಮೆಂಟ್ 7 ಲಕ್ಷದ 16 ಸಾವಿರದ 98 ಇದ್ದರೆ, ಹೂಡಿರುವ ಬಂಡವಾಳ 1 ಲಕ್ಷದ 36 ಸಾವಿರದ 891 ರೂ. ಇದೆ. ಇದನ್ನು ಯಾವ ರೀತಿಯಾಗಿ ಸರ್ಕಾರ ಸರಿದೂಗಿಸುತ್ತದೆ ಎಂಬುದನ್ನು ದಯವಿಟ್ಟು ಹೇಳಬೇಕು. ಈ ದೇಶದಲ್ಲಿ ಟೋಟಲ್ ನಂಬರ್ ಆಫ್ ಯೂನಿಟ್ಸ್ 2 ಲಕ್ಷದ 35 ಸಾವಿರ ಇವೆ. 12 ಲಕ್ಷದ 75 ಸಾವಿರ ಜನರಿಗೆ ಉದ್ಯೋಗ ಕೊಟ್ಟಂಥಾಗಿದೆ. ಇದಲ್ಲದೆ, ಇವತ್ತು ಪ್ರಾದೇಶಿಕ ಅಸಮಾನತೆಯಲ್ಲಿ ವಿಶ್ವವಿದ್ಯಾನಿಲಯಗಳಲ್ಲಿ ಯಾದಿಯನ್ನು ಕೊಡಲು ಪ್ರಯತ್ನಿಸುತ್ತೇನೆ. ಸುಮಾರು 14 ವಿಶ್ವವಿದ್ಯಾನಿಲಯಗಳಲ್ಲಿ 5 ವಿಶ್ವವಿದ್ಯಾನಿಲಯಗಳು ಉತ್ತರ ಕರ್ನಾಟಕದಲ್ಲಿ ಬರುತ್ತವೆ. ಅದರಲ್ಲಿ 7 ವಿಶ್ವವಿದ್ಯಾನಿಲಯಗಳು ಬೆಂಗಳೂರಿನಲ್ಲೇ ಬರುತ್ತವೆ. ಇಂಥ ಒಂದು ಪರಿಸ್ಥಿತಿ ಇದ್ದಾಗ, ಇಲ್ಲಿ ಪ್ರಾದೇಶಿಕ ಅಸಮಾನತೆಯನ್ನು ಯಾವ ರೀತಿಯಾಗಿ ಸರ್ಕಾರ ನೀಗಿಸುತ್ತದೆ ಎಂದು

ಹೇಳಬೇಕಾಗುತ್ತದೆ. ಈ ರಾಜ್ಯದಲ್ಲಿ ತಲಾದಾಯ 1971 ರಲ್ಲಿ 685 ರೂಪಾಯಿ ಇತ್ತು. 2002ರಲ್ಲಿ 19,981 ತಲಾದಾಯವಾಯಿತು. ಬೆಂಗಳೂರಿನಲ್ಲಿ 2002ರಲ್ಲಿ 33 ಸಾವಿರದ 146 ರೂಪಾಯಿ ತಲಾದಾಯವಿತ್ತು. ಈ ಬೆಂಗಳೂರನ್ನು ಯಾವ ರೀತಿಯಾಗಿ ಬೆಳೆಸುತ್ತಿದ್ದೀರೆನ್ನುವುದಕ್ಕೆ ಇದು ಉತ್ತಮವಾದ ಉದಾಹರಣೆ.

ಅಧ್ಯಕ್ಷರು : ಮಾನ್ಯ ಕಾರಜೋಳರವರೆ, ಗೌರ್‍ನರ್‌ರವರು ಟೀ ಗೆ ಕರೆದಿದ್ದಾರೆ.

ಶ್ರೀ ಗೋವಿಂದ ಎಂ. ಕಾರಜೋಳ : ಬೇಗ ಮುಗಿಸುತ್ತೇನೆ.

ಶ್ರೀ ಬಸವರಾಜ್ ರಾಯರೆಡ್ಡಿ : ಗೌರ್‍ನರ್‌ರವರು 5 ಗಂಟೆಗೆ ಟೀ ಗೆ ಕರೆದಿದ್ದಾರೆ.

ಅಧ್ಯಕ್ಷರು : ನಾಳೆ ಮುಂದುವರಿಸಿ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ಕಳೆದ ಐದು ದಿವಸಗಳಿಂದ ಬಜೆಟ್ ಮೇಲೆ ಮಾತನಾಡಬೇಕೆಂದು ನಾವು ನಿಂತಿದ್ದೇವೆ. ಪರೀಕ್ಷೆಗೆ ತಯಾರಾಗುವ ವಿದ್ಯಾರ್ಥಿಗಳ ರೀತಿಯಲ್ಲಿ ನಾವು ಓದುಕೊಂಡು ಮಾತನಾಡುವುದಕ್ಕೆ ತಯಾರಾಗಿ ಬಂದಿದ್ದೇವೆ. ಆದರೆ, ಪರೀಕ್ಷೆಗೆ ನಮ್ಮನ್ನು ಕೂರಿಸುವುದಿಲ್ಲವೆಂದು ಹೇಳುತ್ತಿದ್ದೀರಿ.

ಅಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಿ. ನಿಮಗೇನೂ ಅರಿವು ಇಲ್ಲದ ರೀತಿಯಲ್ಲಿ ಮಾತನಾಡುತ್ತೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಾವು ನಿಮಗೆ ಎಲ್ಲಾ ರೀತಿಯಲ್ಲೂ ಕೂಡ ಸಹಕಾರವನ್ನು ಕೊಡುತ್ತಾ ಬಂದಿದ್ದೇವೆ. ನಮ್ಮ ಪ್ರಶ್ನೆ ಏನೆಂದರೆ ನಮ್ಮ ಕಡೆಯಿಂದ ಇನ್ನೂ ಏಳೆಂಟು ಜನ ಮಾತನಾಡಬೇಕಾಗಿದೆ.

ಅಧ್ಯಕ್ಷರು : ನಾಳೆ ಬೆಳಿಗ್ಗೆ ಒಂದು ಗಂಟೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ನಿಮಿಷ ನನಗೆ ಮಾತನಾಡುವುದಕ್ಕೆ ದಯವಿಟ್ಟು ಅವಕಾಶ ಕೊಡಿ. ನಾಳೆದಿವಸ ಸುಮಾರು ಎರಡು–ಮೂರು ಗಂಟೆ ಅವಕಾಶ ಕೊಡಿ. ಏಕೆಂದರೆ ಸುಮಾರು 15 ಜನ ಹೊಸ ಸದಸ್ಯರು ಮಾತನಾಡಬೇಕಾಗಿದೆ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) : ನಾಳೆಯೊಳಗೆ ಬಜೆಟ್ ಇಲ್ಲಿ ಮತ್ತು ಮಧ್ಯಾಹ್ನದ ನಂತರ ವಿಧಾನ ಪರಿಷತ್‌ನಲ್ಲಿಯೂ ಕೂಡ ಪಾಸ್ ಆಗಬೇಕು. ಇವತ್ತೇ ಉತ್ತರ ಕೊಡಬೇಕೆಂದು ಮೊದಲು ನಿರ್ಧಾರ ಮಾಡಿಕೊಳ್ಳಲಾಗಿತ್ತು. ಆದರೆ ಹೊಸದಾಗಿ ಬಂದಿರತಕ್ಕಂಥ ಸದಸ್ಯರೆಲ್ಲರೂ 5.00 ಗಂಟೆಯವರಿಗೆ ಮಾತನಾಡಲೆಂದು ಅವಕಾಶ ಕೊಟ್ಟಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮ ಬಜೆಟ್‌ನ್ನು ಪಾಸ್ ಮಾಡಿಕೊಡತಕ್ಕಂಥ ಜವಾಬ್ದಾರಿ ನಮ್ಮದು. ನಾಳೆ ರಾತ್ರಿ 9 ಅಥವಾ 10 ಗಂಟೆಯಾದರೂ ಕೂಡ ನಿಮ್ಮ ಬಜೆಟ್‌ನ್ನು ಪಾಸ್ ಮಾಡಿಕೊಡುತ್ತೇವೆ. ಇದರ ಬಗ್ಗೆ ನಾವು ಜವಾಬ್ದಾರಿ ತೆಗೆದುಕೊಂಡಿದ್ದೇವೆ. ಆದ್ದರಿಂದ ಹಾಗೆ ಅಥವಾ ಹೀಗೆ ಆಗಬೇಕೆಂದು ದಯವಿಟ್ಟು ತಾವು ಹೇಳಬಾರದು. ನಾಳೆ ನಿಮ್ಮ ಬಜೆಟ್‌ನ್ನು ಪಾಸ್ ಮಾಡಿಕೊಡುವಂಥ ಜವಾಬ್ದಾರಿ ನಮ್ಮ ಪ್ರತಿಪಕ್ಷದವರಿಗೆ ಬಿಡಿ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಯಡಿಯೂರಪ್ಪನವರೆ, ಆ ರೀತಿಯಾಗುವುದಿಲ್ಲ. ವಿರೋಧಪಕ್ಷದ ನಾಯಕರಾಗಿರತಕ್ಕಂಥ ತಮಗೆ ಇಷ್ಟೊಂದು ಅನುಭವವಿದ್ದು ಕೂಡ ಈ ರೀತಿ ಹೇಳಿದರೆ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವೂ ಕೂಡ ಸಹಕಾರ ಕೊಡುತ್ತಾ ಬಂದಿದ್ದೇವೆ. ನಾವು ಬೇರೆ ಯಾವುದೇ ವಿಷಯಕ್ಕೂ ಕೂಡ ಅಡ್ಡಿ ಮಾಡಿಲ್ಲ. ಬಜೆಟ್ ಮೇಲಿನ ಚರ್ಚೆಗೆ ನಾವು ಆದ್ಯತೆ ಕೊಟ್ಟಿದ್ದೇವೆ. ನಾಳೆ ದಿವಸ ಬೆಳಿಗ್ಗೆ 2 ರಿಂದ 3 ಗಂಟೆಯವರೆಗೆ ಚರ್ಚೆಯಾಗಲಿ. ನಾಳೆ ಸಂಜೆ ಆರು ಅಥವಾ ಏಳು ಗಂಟೆಯೊಳಗೆ ಇಲ್ಲಿ ಮತ್ತು ಆ ಮನೆಯಲ್ಲಿ ಪಾಸ್ ಮಾಡಿಕೊಟ್ಟರೆ ಸಾಕಲ್ಲವೇ?

ಶ್ರೀ ಸಿದ್ಧರಾಮಯ್ಯ : ಮಾನ್ಯ ಯಡಿಯೂರಪ್ಪನವರೆ, ಇಲ್ಲಿ ಪಾಸ್ ಆದ ನಂತರ ವಿಧಾನ ಪರಿಷತ್‌ಗೂ ಕೂಡ ಹೋಗಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಎರಡು ಮನೆಗಳಲ್ಲಿಯೂ ಕೂಡ ಸಾಯಂಕಾಲದೊಳಗೆ ಪಾಸ್ ಮಾಡಿಸಿಕೊಡುತ್ತೇವೆ. ಬಜೆಟ್ ಮೇಲೆ ನೀವು ಕೊಡತಕ್ಕಂಥ ಉತ್ತರದಲ್ಲಿ ನಾವು ನಿರೀಕ್ಷೆ ಮಾಡುತ್ತೇವೆಂದರೆ, ಇಂಥಿಂಥ ಕನ್ಸೆಷನ್ ಕೊಟ್ಟಿದ್ದೇನೆಂದು ತಾವು ಹೇಳಿಬಿಟ್ಟರೆ ನಾವು ಬೆನ್ನು ತಟ್ಟಿ ವಿಧಾನಪರಿಷತ್‌ಗೆ ಕಳುಹಿಸಿಕೊಡುತ್ತೇವೆ. ಒಂದು ವೇಳೆ ನೀವು ಕನ್ಸೆಷನ್ ಕೊಡದಿದ್ದರೆ ನಿಮ್ಮ ಹಣೆಬರಹ ಎಂದು ತಿಳಿದುಕೊಳ್ಳುತ್ತೇವೆ. ಆದ್ದರಿಂದ, ಇದರಲ್ಲಿ ಉತ್ತರ ಕೊಡತಕ್ಕಂಥದ್ದು ಏನಿದೆ?

ಶ್ರೀ ಸಿದ್ಧರಾಮಯ್ಯ : ಸರ್ಕಾರ ಏನು ಉತ್ತರ ಹೇಳಬೇಕಾಗಿದೆಯೋ ಅದನ್ನು ಹೇಳುತ್ತದೆ.

ಅಧ್ಯಕ್ಷರು : ಈಗ ಸದನವನ್ನು ನಾಳೆ ಬೆಳಿಗ್ಗೆ 10–00 ಗಂಟೆ ವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 4 ಗಂಟೆ 53 ನಿಮಿಷಕ್ಕೆ ಮುಂದೂಡಲ್ಪಟ್ಟು,
ಪುನಃ ದಿನಾಂಕ 30ನೇ ಜುಲೈ ಮಾಹೆ 2004ರ ಶುಕ್ರವಾರ
ಬೆಳಿಗ್ಗೆ 10–00 ಗಂಟೆಗೆ ಸೇರಲು ನಿಶ್ಚಯಿಸಿತು)

ಮುದ್ರಕರು: ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು,
ಸಜೆಮುತು. ಕಾಸೂ. 16[illegible], 350 ಪುಸ್ತಕಗಳು, ದಿನಾಂಕ: 24–0[illegible]–2005

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)